www.KannadaPrabha.in ಶುಕ್ರವಾರ 8.05.2026 • ಬೆಂಗಳೂರು • ಬೆಳಗಾವಿ • ಶಿವಮೊಗ್ಗ • ಹುಬ್ಬಳ್ಳಿ • ಮಂಗಳೂರು • ಕಲಬುರಗಿ Kannada Prabha • Daily • Friday • 08.05.2026 • Volume 60 • Issue 127 • Pages 14 • Price ₹7 Kalaburagi

ಕನ್ನಡಪ್ರಭ

ನೇರ.ದಿಟ್ಟ.ನಿರಂತರ



ಚಿತ್ರಪ್ರಭ ಪುಟದಲ್ಲಿಂದು

ಹಾಲಿವುಡ್‌ನ ಮ್ಯಾಗಜಿನ್ ಮುಖಪುಟದಲ್ಲಿ ನಟ ಯಶ್!

‘ವೆರೈಟಿ’ ಎಂಬ ಹಾಲಿವುಡ್ ಮ್ಯಾಗಜಿನ್‌ನಲ್ಲಿ ರಾಕಿಂಗ್ ಸ್ಟಾರ್ ಸಿನಿ ಜರ್ನಿಯ ಕತೆ. ‘ದಿ ಯಶ್ ಎಫೆಕ್ಟ್’ ಎಂಬ ಶೀರ್ಷಿಕೆಯಡಿ ಪ್ರಕಟ. ಕನ್ನಡ ನಟನೊಬ್ಬನ ಬಗ್ಗೆ ಹಾಲಿವುಡ್ ಮ್ಯಾಗಜಿನ್‌ನಲ್ಲಿ ಸಚಿತ್ರ ಲೇಖನ ಇದೇ ಮೊದಲು. 12

www.KannadaPrabha.in | ಶುಕ್ರವಾರ 8.05.2026 | • ಬೆಂಗಳೂರು • ಬೆಳಗಾವಿ • ಶಿವಮೊಗ್ಗ • ಹುಬ್ಬಳ್ಳಿ • ಮಂಗಳೂರು • ಕಲಬುರಗಿ | Kannada Prabha • Daily • Friday • 08.05.2026 • Volume 60 • Issue 127 • Pages 14 | • Price ₹7 | Kalaburagi

ಕನ್ನಡಪ್ರಭ

ನೇರ.ದಿಟ್ಟ.ನಿರಂತರ



ಜೋಗಿ ಪ್ರೇಮ್ ಕೆಡಿ ಹಾಡಿಗೆ ಈಗ ನೋರಾ ಫತೇಹಿ ಕ್ಷಮೆ

ಜೋಗಿ ಪ್ರೇಮ್ ನಿರ್ದೇಶನದ 'ಕೆಡಿ' ಸಿನಿಮಾದ ವಿವಾದಿತ ಹಾಡಿನ ಹಿಂದಿ ಅವತರಣಿಕೆ ಬಗ್ಗೆ ಈಗ ನಟಿ ನೋರಾ ಫತೇಹಿ ಕ್ಷಮೆ ಯಾಚನೆ. 'ಸರ್ಕೆ ಚುನಾರ್' ಹಾಡಿಗೆ ನರ್ತಿಸಿದ್ದ ನೋರಾ. ಮಹಿಳಾ ಆಯೋಗದ ಎದುರು ವಿಚಾರಣೆಗೆ ಹಾಜರಾಗಿ ಕ್ಷಮಿಸಿ ಎಂದ ನಟಿ. 9



12ಕ್ಕೆ ಅಸ್ಸಾಂ ಬಿಜೆಪಿ 3.0 ಸರ್ಕಾರದ ಪ್ರಮಾಣ: ಪಿಎಂ ಮೋದಿ ಭಾಗಿ ↘ 9



ದಿಲ್ಜೀತ್ ಅಮೆರಿಕದಲ್ಲಿ ಕಾರ್ಯಕ್ರಮ ನಡೆಸಿದರೆ ಅಡ್ಡಿ: ಖಲಿಸ್ತಾನಿ ಸಂಘ ↘ 9

OPERATION SINDOOR

ಪ್ರೊಫೈಲ್‌ಗೆ ಸಿಂದೂರ ಲೋಗೋ ಬಳಸಿದ ಮೋದಿ, ಅಮಿತ್ ಶಾ ↘ 9



5 ರಾಜ್ಯ ಚುನಾವಣೆ ವೇಳೆ ಹೆಚ್ಚು ಹಣ ಜಪ್ತಿಯಾಗಿದ್ದು ತ.ನಾಡಿನಲ್ಲಿ ↘ 9

ದಣಿವು ಅರಿಯದ ವಿಶ್ರಾಂತ ಚೇತನ ಬಿಎಸ್‌ವೈ: ಜೋಶಿ



ಬಿಎಸ್‌ವೈ ಅಭಿಮಾನೋತ್ಸವ ನಿಮಿತ್ತ

ವಿಶೇಷ ಲೇಖನ ಪುಟ 8

ಪಶ್ಚಿಮ ಬಂಗಾಳದ ಸಿಎಂ ಇಂದು ಆಯ್ಕೆ: ನಾಳೆಯೇ ಪ್ರಮಾಣ

ಕೋಲ್ಕತಾ: ಪಶ್ಚಿಮ ಬಂಗಾಳದಲ್ಲಿ ಇದೇ ಮೊದಲ ಸಲ ಅಧಿಕಾರಕ್ಕೆ ಬರುವಲ್ಲಿ ಯಶಸ್ವಿಯಾಗಿರುವ ಬಿಜೆಪಿ, ಶುಕ್ರವಾರ ತನ್ನ ನೂತನ ಶಾಸಕಾಂಗ ಪಕ್ಷದ ನಾಯಕನನ್ನು ಆಯ್ಕೆ ಮಾಡಲಿದೆ. ಶನಿವಾರ ಪ್ರಮಾಣವಚನ ಸ್ವೀಕಾರ ನಡೆಯಲಿದೆ. ವಿವರ ↘ 9

ಕೆರೆಗಳ ನಿಯಂತ್ರಣಕ್ಕೆ ಈಗ ಬಂಗಾಳ ಹಿಂಸೆ

ಕೋಲ್ಕತಾ: ತೃಣಮೂಲ ಕಾಂಗ್ರೆಸ್ ಸರ್ಕಾರ ಅಧಿಕಾರದಿಂದ ಕೆಳಕ್ಕೆ ಇಳಿಯುತ್ತಿದ್ದಂತೆ ಬಂಗಾಳದಲ್ಲಿ ಹಿಂಸಾಚಾರ ಆರಂಭವಾಗಿದೆ. ಮೀನುಗಾರಿಕಾ ಕೆರೆಗಳ ನಿಯಂತ್ರಣಕ್ಕಾಗಿ ಈಗ ಭರ್ಜರಿ ಕಾದಾಟವೇ ನಡೆಯುತ್ತಿದೆ. ವಿವರ ↘ 9

8 ವಾರಗಳ ಹಿಂದೆ ರಾಜಕೀಯ ಸೇರಿದ ನಿತೀಶ್ ಪುತ್ರ ಈಗ ಬಿಹಾರದಲ್ಲಿ ಸಚಿವ!



ಪಟನಾ: 8 ವಾರಗಳ ಹಿಂದಷ್ಟೇ ರಾಜಕಾರಣ ಪ್ರವೇಶಿಸಿದ, ಬಿಹಾರದ ಮಾಜಿ ಸಿಎಂ ನಿತೀಶ್ ಕುಮಾರ್ ಪುತ್ರ ನಿಶಾಂತ್ ಕುಮಾರ್ ಅವರು ಸಚಿವರಾಗಿ ಗುರುವಾರ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ವಿವರ ↘ 9

ಮೇ 25ರಿಂದ 2 ದಿನ ಎಸ್‌ಬಿಐ ನೌಕರರ ದೇಶವ್ಯಾಪಿ ಮುಷ್ಕರ

4 ದಿನ ಬ್ಯಾಂಕ್ ಸೇವೆ ಸ್ತಬ್ಧ

ನವದೆಹಲಿ: 16 ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಭಾರತೀಯ ಸ್ಟೇಟ್ ಬ್ಯಾಂಕ್ ನೌಕರರು ಮೇ 25, 26 ರಂದು ದೇಶವ್ಯಾಪಿ ಮುಷ್ಕರಕ್ಕೆ ಕರೆ ನೀಡಿದ್ದಾರೆ. ಮೇ 23 ನಾಲ್ಕನೇ ಶನಿವಾರ, 24 ಭಾನುವಾರವಾದ ಕಾರಣ 4 ದಿನ ಸೇವಾ ವ್ಯತ್ಯಯವಾಗಲಿದೆ. ವಿವರ ↘ 9

ಅಮೆರಿಕದ ಕದನ ವಿರಾಮ ಪ್ರಸ್ತಾವ ಪರಿಶೀಲನೆ: ಇರಾನ್

ದುಬೈ: ಹಲವು ವಿಫಲ ಮಾತುಕತೆಗಳು, ತಿರಸ್ಕೃತ ಪ್ರಸ್ತಾವನೆಗಳ ಬಳಿಕ ಇದೀಗ ಅಮೆರಿಕದ ಕಡೆಯಿಂದ ಬಂದಿರುವ ಯುದ್ಧ ಸ್ಥಗಿತ ಪ್ರಸ್ತಾವನೆಯನ್ನು ಪರಿಶೀಲಿಸುತ್ತಿರುವುದಾಗಿ ಇರಾನ್ ಹೇಳಿದೆ. ವಿವರ ↘ 9

ತಮಿಳುನಾಡು ಥ್ರಿಲ್ಲರ್!

ಸರ್ಕಾರ ರಚನೆಗೆ ಅವಕಾಶ ಕೋರಿ 2ನೇ ಬಾರಿ ಹಕ್ಕು ಮಂಡಿಸಿದ ನಟ ವಿಜಯ್ ಮ್ಯಾಜಿಕ್ ನಂಬರ್ 118 ಎಲ್ಲಿದೆ? ಬಹುಮತಕ್ಕೆ ಸಾಕ್ಷ್ಯ ತೋರಿಸಿ ಎಂದ ಗೌರ್ನರ್ ಕೋರ್ಟ್‌ಗಳು ಕೇಳಿದರೆ ನಾನೇನು ಹೇಳಲಿ ಎಂದು ವಿಜಿಗೆ ಪ್ರಶ್ನಿಸಿದ ರಾಜ್ಯಪಾಲ ರಾಜೇಂದ್ರ ಅರ್ಲೇಕರ್ ವಿರುದ್ಧ ವಿಜಯ್ ಸುಪ್ರೀಂಕೋರ್ಟ್ ಮೆಟ್ಟಿಲೇರುವ ಸಂಭವ

ಚೆನ್ನೈ: ಇತ್ತೀಚಿನ ಇತಿಹಾಸದಲ್ಲೇ ರೋಚಕ ವಿಧಾನಸಭಾ ಚುನಾವಣಾ ಫಲಿತಾಂಶ ನೀಡಿದ ತಮಿಳುನಾಡಿನಲ್ಲಿ ಇದೀಗ ಸರ್ಕಾರ ರಚನೆಯ ಪ್ರಕ್ರಿಯೆ ಭಾರೀ ಕುತೂಹಲಕ್ಕೆ ಕಾರಣವಾಗಿದೆ. 108 ಸ್ಥಾನ ಗೆದ್ದ ನಟ ವಿಜಯ್ ನೇತೃತ್ವದ ಟಿವಿಕೆ ಪಕ್ಷ ಇನ್ನೇನು ಪ್ರಮಾಣ ವಚನ ಸ್ವೀಕರಿಸಿ ಅಧಿಕಾರದ ಗದ್ದುಗೆ ಏರಲು ಸಜ್ಜಾಗಿದೆ ಎನ್ನುವ ಹೊತ್ತಿನಲ್ಲೇ ಅದಕ್ಕೆ ರಾಜ್ಯಪಾಲರು ಬ್ರೇಕ್ ಹಾಕಿದ್ದಾರೆ. ಸರ್ಕಾರ ರಚನೆಗೆ ನಿಮ್ಮ ಬಳಿ ಅಗತ್ಯ ಬಹುಮತವೇ ಇಲ್ಲ. ಇದ್ದರೆ, ಅದನ್ನು ತೋರಿಸಿ ಎಂದು ರಾಜ್ಯಪಾಲರು ವಿಜಯ್‌ಗೆ ಸೂಚಿಸಿರುವುದು ರಾಜ್ಯದಲ್ಲಿ ಹೊಸ ಸರ್ಕಾರ ರಚನೆಯನ್ನು ಮತ್ತಷ್ಟು ಕಗ್ಗಂಟಾಗಿಸಿದೆ.



ಸರ್ಕಾರ ರಚನೆ ಸಂಬಂಧ ಬುಧವಾರ ಮೊದಲ ಸಲ ರಾಜ್ಯಪಾಲರನ್ನು ಭೇಟಿಯಾಗಿ ಹಕ್ಕು ಮಂಡಿಸಿದ್ದ ನಟ ವಿಜಯ್, ಗುರುವಾರ ಮತ್ತೆ ರಾಜಭವನಕ್ಕೆ ತೆರಳಿ ರಾಜ್ಯಪಾಲ ರಾಜೇಂದ್ರ ವಿಶ್ವನಾಥ್ ಅರ್ಲೇಕರ್ ಬಳಿ ಸರ್ಕಾರ ರಚನೆಗೆ ಆಹ್ವಾನ ನೀಡುವಂತೆ ಮನವಿ ಮಾಡಿದರು. ಇದೇ ವೇಳೆ ವಿಶ್ವಾಸಮತ ಸಾಬೀತುಪಡಿಸಲು 2 ತಿಂಗಳ ಅವಕಾಶ ನೀಡುವಂತೆಯೂ ಕೋರಿದರು ಎನ್ನಲಾಗಿದೆ.

ಈ ವೇಳೆ ಸರ್ಕಾರ ರಚನೆಗೆ ಅಗತ್ಯವಾದ ಶಾಸಕರ ಬೆಂಬಲ (118 ಶಾಸಕರ ಬೆಂಬಲ) ಪ್ರದರ್ಶಿಸುವಂತೆ ರಾಜ್ಯಪಾಲರು ಕೇಳಿದ್ದಾರೆ. ಅಲ್ಲದೆ ಸರ್ಕಾರ ರಚನೆ ಬಳಿಕ ನಿಮಗೆ ವ್ಯಕ್ತವಾಗ ಬಹುದಾದ ಬೆಂಬಲವನ್ನು ಈಗಲೇ ಪರಿಗಣಿಸಲಾಗದು. ನಿಮ್ಮನ್ನು ಬೆಂಬಲಿಸುವವರ ಪಟ್ಟಿ ನೀಡಿ. ನಾನು ನಿಯಮಗಳ ಅನುಸಾರವೇ ನಡೆದುಕೊಳ್ಳುತ್ತೇನೆ. ಬೆಂಬಲ ಪತ್ರ ತೋರಿಸಿದರೆ ನಿಮಗೇ ಮೊದಲ ಅವಕಾಶ ನೀಡುತ್ತೇನೆ ಎಂದು ರಾಜ್ಯಪಾಲರು ಭರವಸೆ ನೀಡಿದ್ದಾರೆ ಎನ್ನಲಾಗಿದೆ. ↘ 11

ಗೌರ್ನರ್ ಲೆಕ್ಕಾಚಾರ

1. ಸರ್ಕಾರ ರಚನೆಗೆ ಹಕ್ಕು ಮಂಡಿಸಿದವರಿಂದ ಬಹುಮತ ಕೇಳುವುದು ರಾಜ್ಯಪಾಲರ ವಿವೇಚನೆ ಒಳಪಟ್ಟಿದ್ದು
2. ಸರ್ಕಾರ ರಚಿಸುವಷ್ಟು ಸಂಖ್ಯೆ ಇದೆಯೇ ಎಂಬುದು ರಾಜ್ಯಪಾಲರಿಗೆ ಮೇಲ್ನೋಟಕ್ಕೆ ಮನವರಿಕೆಯಾಗಬೇಕು
3. ಆ ಹಂತ ದಾಟಿದ ಬಳಿಕ ಸರ್ಕಾರ ರಚನೆಗೆ ಅವಕಾಶ ಪಡೆದ ಪಕ್ಷಗಳು ವಿಧಾನಸಭೆಯಲ್ಲಿ ಬಹುಮತ ಸಾಬೀತುಪಡಿಸಬೇಕು



ರಾಜ್ಯಪಾಲರನ್ನು ಭೇಟಿ ಮಾಡಿ ಸರ್ಕಾರ ರಚನೆಗೆ 2ನೇ ಬಾರಿ ಹಕ್ಕು ಮಂಡಿಸಿದ ವಿಜಯ್

ಬಲು ಅಪರೂಪ: ಸೋತ ಪಕ್ಷಗಳಿಂದಲೂ ವಿಜಯ್ ಪಕ್ಷದ ಪರ ಈಗ ಸೀಟಿ!

ಸರ್ಕಾರ ರಚನೆಗೆ ಅವಕಾಶಕ್ಕೆ ಆಗ್ರಹ

ಚೆನ್ನೈ: ಅಪರೂಪದ ಬೆಳವಣಿಗೆಯೊಂದರಲ್ಲಿ ತಮಿಳುನಾಡಿನಲ್ಲಿ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿರುವ ವಿಜಯ್ ನೇತೃತ್ವದ ಟಿವಿಕೆ ಪಕ್ಷಕ್ಕೆ ಸರ್ಕಾರ ರಚನೆಗೆ ಆಹ್ವಾನ ನೀಡದ ರಾಜ್ಯಪಾಲ ಆರ್.ವಿ.ಅರ್ಲೇಕರ್ ಅವರ ಕ್ರಮಕ್ಕೆ ವಿಜಯ್ ವಿರುದ್ಧ ಚುನಾವಣೆಯಲ್ಲಿ ಸೋತ ಡಿಎಂಕೆ, ಎಂಎನ್‌ಎಂ, ವಿಸಿಕೆ, ಸಿಪಿಐ ಪಕ್ಷಗಳು ತೀವ್ರ ಅಸಮಾಧಾನ ವ್ಯಕ್ತಪಡಿಸಿವೆ. ರಾಜ್ಯಪಾಲರು ಜನಾದೇಶಕ್ಕೆ ಅಪಮಾನ ಮಾಡಿದ್ದಾರೆ. ಸರ್ಕಾರ ರಚಿಸಲು ವಿಜಯ್‌ಗೆ ಅವಕಾಶ ನೀಡಬೇಕು ಎಂದು ಆಗ್ರಹಿಸಿವೆ. ವಿವರ ↘ 9

ಅಣ್ಣಾಡಿಎಂಕೆಯ 28 ಶಾಸಕರಿಂದ ವಿಜಯ್ ಪಕ್ಷಕ್ಕೆ ಶೀಘ್ರ ಬೆಂಬಲ?

ಡಿಸಿಎಂ, ಸಚಿವ ಸ್ಥಾನಗಳಿಗೆ ಬೇಡಿಕೆ?

ಚೆನ್ನೈ: ಎನ್‌ಡಿಎ ಮಿತ್ರಪಕ್ಷವಾದ ಅಣ್ಣಾಡಿಎಂಕೆಯ 28 ಶಾಸಕರ ಗುಂಪೊಂದು ಪುದುಚೇರಿ ರೆಸಾರ್ಟ್‌ಗೆ ತೆರಳಿದ್ದು, ಟಿವಿಕೆ ಸರ್ಕಾರಕ್ಕೆ ಬೆಂಬಲ ನೀಡುವ ಸಾಧ್ಯತೆ ಇದೆ ಎನ್ನಲಾಗಿದೆ. ಮೂಲಗಳ ಪ್ರಕಾರ ಈಗಾಗಲೇ ಟಿವಿಕೆ ಮುಖಂಡರು ಈ 28 ಶಾಸಕರ ಜತೆಗೆ ಸಂಪರ್ಕದಲ್ಲಿದ್ದಾರೆ. ಈ ಗುಂಪಿನ ನಾಯಕ ಸಿ.ವಿ.ಷಣ್ಮುಗಂ ಅವರಿಗೆ ಉಪಮುಖ್ಯಮಂತ್ರಿ ಹುದ್ದೆ ಮತ್ತು ಇತರೆ ಕೆಲವರಿಗೆ ಸಚಿವ ಹುದ್ದೆಯ ಆಫರ್ ಅನ್ನು ಟಿವಿಕೆ ನೀಡಿದೆ ಎನ್ನಲಾಗಿದೆ.ಒಂದು ವೇಳೆ ಇದು ಖಚಿತವಾದರೆ ಎಐಎಡಿಎಂಕೆ ಹೋಳಾಗುವುದು ಖಚಿತ. ವಿವರ ↘ 9

ಮತ್ತೆ ಕೇಂದ್ರ ವರ್ಸಸ್ ರಾಜ್ಯ

ಜಿ ರಾಮ್ ಜಿ ವಿರುದ್ಧ ಕೋರ್ಟ್‌ಗೆ ಮೊರೆ: ಸಂಪುಟದ ನಿರ್ಧಾರ

ನರೇಗಾದಡಿಯೇ ಕಾಮಗಾರಿಗಾಗಿ ಹೋರಾಟ ಖಾತ್ರಿ ರದ್ದತಿ ವಿರುದ್ಧವೂ ಸಮರಕ್ಕೆ ತೀರ್ಮಾನ


• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ (ಮನರೇಗಾ) ರದ್ದುಪಡಿಸಿ ವಿಬಿ ಜಿ ರಾಮ್ ಜಿ ಯೋಜನೆ ಜಾರಿಗೆ ತಂದಿರುವ ಕೇಂದ್ರ ಸರ್ಕಾರದ ವಿರುದ್ಧ ನ್ಯಾಯಾಲಯದ ಮೆಟ್ಟಿಲೇರಲು ರಾಜ್ಯ ಸರ್ಕಾರ ತೀರ್ಮಾನಿಸಿದೆ.



ವಿಬಿ ಜಿ ರಾಮ್ ಜಿ ಬದಲಿಗೆ ಮನರೇಗಾ ಅಡಿಯಲ್ಲೇ ರಾಜ್ಯದಲ್ಲಿ ಪ್ರಸಕ್ತ ಸಾಲಿನ ಕಾಮಗಾರಿಗಳ ಕ್ರಿಯಾಯೋಜನೆ ರೂಪಿಸಿ ಜಾರಿಗೊಳಿಸಲು ಅನುಮತಿ ನೀಡಬೇಕು ಎಂದು ಕೋರ್ಟ್ ಮೊರೆ ಹೋಗಲು ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಗಿದೆ. ↘ 11

ಕ್ರೀಡಾ ಸಾಧಕರಿಗೆ ಸಿವಿಲ್ ಹುದ್ದೆಗಳಲ್ಲಿ ಶೇ.2 ಮೀಸಲಾತಿ



ಬೆಂಗಳೂರು: ಕ್ರೀಡೆಗಳಲ್ಲಿ ಸಾಧನೆ ಮಾಡಿದವರಿಗೆ ರಾಜ್ಯ ಸಿವಿಲ್ ಸೇವೆಗಳಲ್ಲಿ ಹುದ್ದೆಗಳ ನೇಮಕಾತಿಯಲ್ಲಿ ಶೇ.2 ರಷ್ಟು ಮೀಸಲಾತಿ ನೀಡಲು ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ ಮಾಡಲಾಗಿದೆ ಎಂದು ಸಚಿವ ಎಚ್.ಕೆ.ಪಾಟೀಲ್ ತಿಳಿಸಿದ್ದಾರೆ. ವಿವರ ↘ 6

ಈಗ ಖರ್ಗೆ ಹೆಗಲಿಗೆ ನಿರ್ಧಾರ

ಯಾರಿಗೆ ಒಲಿಯಲಿದೆ ಕೇರಳಂ ಸಿಎಂ ಪಟ್ಟ?

1. ವೇಣುಗೋಪಾಲ್ ಪರ 73% ಶಾಸಕರ ಬಲ
2. ಸತೀಶನ್‌ಗೆ ನಾಯರ್ ವಿವಾದವೇ ಮುಳುವು
3. ಹಿರಿಯ ಚೆನ್ನಿತ್ತಲ ಬಗ್ಗೆ ಶಾಸಕರಲ್ಲೇ ಒಲವಿಲ್ಲ

ತಿರುವನಂತಪುರಂ: ದಶಕದ ಬಳಿಕ ಕೇರಳಂನಲ್ಲಿ ಯುಡಿಎಫ್ (ಸಂಯುಕ್ತ ಪ್ರಜಾಸತ್ತಾತ್ಮಕ ರಂಗ) ಬಹುಮತ ಪಡೆದಿದ್ದರೂ, ಆ ಕೂಟದ ನೇತೃತ್ವ ಹೊತ್ತಿರುವ ಕಾಂಗ್ರೆಸ್‌ನಲ್ಲಿ ಮುಖ್ಯಮಂತ್ರಿ ಆಯ್ಕೆ ವಿಷಯ ಕಗ್ಗಂಟಾಗಿದೆ

ಶಾಸಕಾಂಗ ಪಕ್ಷದ ನೂತನ ನಾಯಕನ ಆಯ್ಕೆಗಾಗಿ ಗುರುವಾರ ನಡೆದ ಸಭೆಯ ವೇಳೆ ಕಾಂಗ್ರೆಸ್‌ನ 63 ಶಾಸಕರ ಪೈಕಿ ಕನಿಷ್ಠ 46 ಮಂದಿ (73%) ವಿಧಾನ ಸಭೆಯ ಸದಸ್ಯರೇ ಅಲ್ಲದ ಹಾಲಿ ಸಂಸದ, ರಾಹುಲ್ ಗಾಂಧಿ ಅವರ ಆಪ್ತ ಹಾಗೂ ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಪರ ಬೆಂಬಲ ಘೋಷಿಸಿದ್ದಾರೆ ಎನ್ನಲಾಗಿದೆ.

ಈ ಬೆಳವಣಿಗೆ ಸಹಜವಾಗಿಯೇ ಸಿಎಂ ಹುದ್ದೆ ಮೇಲೆ ಕಣ್ಣಿಟ್ಟಿದ್ದ, ಹಿಂದಿನ ವಿಧಾನಸಭೆಯಲ್ಲಿನ ವಿಪಕ್ಷ ನಾಯಕ ವಿ.ಡಿ. ಸತೀಶನ್ ಮತ್ತು ಪಕ್ಷದ ಹಿರಿಯ ನಾಯಕ ರಮೇಶ್ ಚೆನ್ನಿತ್ತಲ ಅವರ ಆಕ್ರೋಶಕ್ಕೆ ಕಾರಣವಾಗಿದೆ. ↘ 11



ವೇಣುಗೋಪಾಲ್



ವಿ.ಡಿ. ಸತೀಶನ್



ರಮೇಶ್ ಚೆನ್ನಿತ್ತಲ

- 10 ವರ್ಷ ಬಳಿಕ ಕಾಂಗ್ರೆಸ್ ನೇತೃತ್ವದ ಯುಡಿಎಫ್‌ಗೆ ಕೇರಳಂನಲ್ಲಿ ಭರ್ಜರಿ ಬಹುಮತ
- 140 ಸ್ಥಾನಗಳ ಪೈಕಿ 102 ಸೀಟು ಗೆದ್ದಿರುವ ಯುಡಿಎಫ್. ಈ ಪೈಕಿ ಕಾಂಗ್ರೆಸ್ಸಿನ ಬಲವೇ 63
- ಮುಖ್ಯಮಂತ್ರಿ ಆಯ್ಕೆಗೆ ಎಐಸಿಸಿ ವೀಕ್ಷಕರಿಂದ ರಾಜಧಾನಿ ತಿರುವನಂತಪುರದಲ್ಲಿ ಸಭೆ
- ಕನಿಷ್ಠ 46 ಮಂದಿ ಶಾಸಕರಿಂದ ಎಐಸಿಸಿ ಪ್ರಧಾನ ಕಾರ್ಯದರ್ಶಿ ವೇಣು ಪರ ಬೆಂಬಲ
- ಸಂಸದರಾಗಿರುವ ವೇಣು ಶಾಸಕರಲ್ಲ, ಹೀಗಾಗಿ ಇತರೆ ಆಕ್ಹಾಂಕ್ಷಿಗಳಿಂದ ತೀವ್ರ ವಿರೋಧ
- ಪಿಣರಾಯಿ ಸರ್ಕಾರದ ವಿರುದ್ಧ ಹೋರಾಡಿದ್ದ ವಿಪಕ್ಷ ನಾಯಕ ಸತೀಶನ್ ಮುಂಚೂಣಿಯಲ್ಲಿ
- ಆದರೆ ಜಾತಿ ಸಂಘಟನೆಗಳ ವಿರೋಧ ಮುಳುವು. ಮತ್ತೊಂದೆಡೆ ರಮೇಶ್ ಚೆನ್ನಿತ್ತಲ ರೇಸಲ್ಲಿ
- ಅವರಿಗೆ ಹೆಚ್ಚು ಶಾಸಕರ ಬೆಂಬಲವಿಲ್ಲ. ಹೀಗಾಗಿ ಯಾರಿಗೆ ಪಟ್ಟ? ನಿರ್ಧಾರ ಖರ್ಗೆ ಹೆಗಲಿಗೆ

ಶಾಸಕರು, ರಾಜ್ಯ ಸರ್ಕಾರಕ್ಕೆ ಕೊಡಬೇಕು ಎಂದಿದ್ದು ಕೇಳಿ ಅಚ್ಚರಿ, ಶಾಕ್ ಆಯ್ತು

10000 ಎಕ್ಸ್‌ಟ್ರಾ ಟಿಕೆಟ್ ಕೇಳಿದ್ದಕ್ಕೇ ಐಪಿಎಲ್ ಫೈನಲ್ ಬೆಂಗಳೂರಿಂದ ಎತ್ತಂಗಡಿ: ಬಿಸಿಸಿಐ

ನಾವೇ 15% ಫ್ರೀ ಟಿಕೆಟ್ ಕೊಡುತ್ತಿದ್ದರೂ ಅದರ ಮೇಲೆ ಇನ್ನೂ 10000 ಬೇಕೆಂದರು

ನವದೆಹಲಿ: ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಿಂದ ಐಪಿಎಲ್ ಫೈನಲ್ ಪಂದ್ಯವನ್ನು ಸ್ಥಳಾಂತರಗೊಳಿಸಿದ್ದಕ್ಕೆ ಈಗ ಸ್ವತಃ ಬಿಸಿಸಿಐ ಸ್ಪಷ್ಟನೆ ನೀಡಿದೆ. ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ(ಕೆಎಸ್‌ಸಿಎ) ನಿಗದಿಗಿಂತ ಹೆಚ್ಚುವರಿಯಾಗಿ 10000 ಟಿಕೆಟ್‌ಗೆ ಬೇಡಿಕೆ ಇಟ್ಟಿದ್ದಕ್ಕೆ ಬೆಂಗಳೂರಿಗೆ ಪಂದ್ಯದ ಆತಿಥ್ಯ ನೀಡಿಲ್ಲ ಎಂದಿದೆ.



ಈ ಬಗ್ಗೆ ಮಂಡಳಿಯ ಕಾರ್ಯದರ್ಶಿ ದೇವಜಿತ್ ಸೈಕಿಯಾ ಗುರುವಾರ ರಾಷ್ಟ್ರೀಯ ಮಾಧ್ಯಮವೊಂದಕ್ಕೆ ಪ್ರತಿಕ್ರಿಯೆ ನೀಡಿದ್ದಾರೆ. 'ಐಪಿಎಲ್ ನಿಯಮ ಪ್ರಕಾರ, ಪಂದ್ಯಕ್ಕೆ ಆತಿಥ್ಯ ವಹಿಸುವ ಕ್ರಿಕೆಟ್ ಸಂಸ್ಥೆಗೆ ಅಲ್ಲಿನ ಕ್ರೀಡಾಂಗಣದ ಆಸನ ಸಾಮರ್ಥ್ಯದ ಶೇ.15ರಷ್ಟು ಟಿಕೆಟ್‌ಗಳನ್ನು ಉಚಿತವಾಗಿ ನೀಡಲಾಗುತ್ತದೆ. ಆದರೆ ಐಪಿಎಲ್‌ನ ಲೀಗ್ ಪಂದ್ಯಗಳ ಆತಿಥ್ಯದ ಸಮಯದಲ್ಲಿ, ಕೆಎಸ್‌ಸಿಎ ನಿಗದಿತ ಶೇ.15ಕ್ಕಿಂತ ಹೆಚ್ಚುವರಿ ಉಚಿತ ಟಿಕೆಟ್ ಪಡೆದುಕೊಂಡಿದೆ ಎಂದು ವಿವಿಧ ಮೂಲಗಳಿಂದ ನಮಗೆ ಮಾಹಿತಿ ಬಂದಿದೆ. ಇದರ ಬಗ್ಗೆ ವಿವರ ಕೋರಿ ನಾವು ಕೆಎಸ್‌ಸಿಎಗೆ ಇ-ಮೇಲ್ ಕಳುಹಿಸಿದ್ದೆವು. ↘ 11

- ಐಪಿಎಲ್ ಪಂದ್ಯದ ಆತಿಥ್ಯ ವಹಿಸುವ ಕ್ರಿಕೆಟ್ ಸಂಸ್ಥೆಗೆ 15% ಟಿಕೆಟ್ ಉಚಿತವಾಗಿ ಹಂಚಿಕೆ
- ಲೀಗ್ ಪಂದ್ಯದ ವೇಳೆ 15% ಮಿತಿಗಿಂತ ಹೆಚ್ಚು ಟಿಕೆಟ್‌ಗಳನ್ನು ಪಡೆದಿತ್ತು ರಾಜ್ಯ ಕ್ರಿಕೆಟ್ ಸಂಸ್ಥೆ
- ಈ ಬಗ್ಗೆ ಪ್ರಶ್ನಿಸಿದ್ದ ಬಿಸಿಸಿಐ. ಮೇ 2ರಂದು ಉತ್ತರ ಕೊಟ್ಟ ಕೆಎಸ್‌ಸಿಎ, ಉತ್ತರ ಕಂಡು ಶಾಕ್
- 15% ಉಚಿತ ಟಿಕೆಟ್ ಜತೆಗೆ ಸದಸ್ಯರು, ಕ್ಲಬ್‌ಗಳು, ಇತರರಿಗೆ ಹೆಚ್ಚುವರಿ ಟಿಕೆಟ್‌ಗೆ ಬೇಡಿಕೆ
- ಶಾಸಕರು, ಸರ್ಕಾರಕ್ಕೂ 700 ಟಿಕೆಟ್ ಕೇಳಿದ್ದ ಸಂಸ್ಥೆ: ಬಿಸಿಸಿಐ

ಶಾಸಕರ ಉಚಿತ ಟಿಕೆಟ್‌ಗೂ ನಮಗೂ ಸಂಬಂಧವೇ ಇಲ್ಲ



ಕ್ರೀಡಾಂಗಣದ ಆಸನ ಸಾಮರ್ಥ್ಯದಲ್ಲಿ ಶೇ.15ರಷ್ಟು ಉಚಿತ ಟಿಕೆಟ್‌ಗಳನ್ನು ಬಿಸಿಸಿಐ ನೀಡುತ್ತದೆ. ಅಂದರೆ 2000ದಷ್ಟು ಟಿಕೆಟ್ ಸಿಗುತ್ತವೆ. ಆದರೆ ನಮ್ಮ ಸದಸ್ಯರು, ಕ್ಲಬ್‌ಗಳ ಸಂಖ್ಯೆ 3000ಕ್ಕೂ ಹೆಚ್ಚಿವೆ. ಅವರಿಗೆಲ್ಲಾ ಟಿಕೆಟ್ ಕೊಡಬೇಕಾಗುತ್ತದೆ. ಹೀಗಾಗಿಯೇ ನಮ್ಮ ಅಗತ್ಯವೇನು ಎಂಬುದರ ಬಗ್ಗೆ ಬಿಸಿಸಿಐಗೆ ಮಾಹಿತಿ ನೀಡಿದ್ದೆವು. ಅದಕ್ಕೆ ಅವರು ಒಪ್ಪಿಲ್ಲ. ಇನ್ನು, ಶಾಸಕರ ಉಚಿತ ಟಿಕೆಟ್‌ಗೂ ನಮಗೂ ಸಂಬಂಧವಿಲ್ಲ. ಅವರಿಗೆ ಟಿಕೆಟ್‌ಗಳನ್ನು ಆರ್‌ಸಿಬಿಯೇ ನೀಡುತ್ತಿತ್ತು.

• **ವಿನಯ್ ಮೃತ್ಯುಂಜಯ** ಕೆಎಸ್‌ಸಿಎ ಮಾಧ್ಯಮ ವಕ್ತಾರ

ಅಭಿಮಾನ | ಪುಷ್ಪಾಲಂಕೃತ ಸಾರೋಟಿನಲ್ಲಿ ಯಡಿಯೂರಪ್ಪ ಅವರನ್ನು ಕೂರಿಸಿ ಬೃಹತ್ ಮೆರವಣಿಗೆ

ಮಿನಿ ದಸರಾ ರೀತಿ ಇಂದು ಬಿಎಸ್‌ವೈ ಪುರಪ್ರವೇಶ!

ಚಿತ್ರದುರ್ಗದಲ್ಲಿ ನಾಳೆ ಬಿಎಸ್‌ವೈ ಅಭಿಮಾನೋತ್ಸವ | ದುರ್ಗದಲ್ಲಿ ಇಂದು ಮಾಜಿ ಸಿಎಂಗೆ ಅದ್ದೂರಿ ಸ್ವಾಗತ


• **ಕನ್ನಡಪ್ರಭ ವಾರ್ತೆ** ಚಿತ್ರದುರ್ಗ

ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಅವರು ರಾಜಕೀಯ ಪ್ರವೇಶಿಸಿ 50 ವರ್ಷ ಸಂದ ಹಿನ್ನೆಲೆಯಲ್ಲಿ ಅವರನ್ನು ಅಭಿನಂದಿಸಲು ಶನಿವಾರ ಮಧ್ಯಾಹ್ನ ಚಿತ್ರದುರ್ಗದಲ್ಲಿ ಆಯೋಜಿಸಿರುವ 'ಬಿಎಸ್‌ವೈ ಅಭಿಮಾನೋತ್ಸವ'ಕ್ಕೆ ಕ್ಷಣಗಣನೆ ಆರಂಭವಾಗಿದ್ದು, ರೈತ ನಾಯಕನ ಅದ್ದೂರಿ ಸ್ವಾಗತಕ್ಕೆ ಕೋಟೆ ನಗರಿ ಸಜ್ಜಾಗಿದೆ.

ಶುಕ್ರವಾರ ಸಂಜೆ 4 ಗಂಟೆಗೆ ಹೊಳಲ್ಕೆರೆ ರಸ್ತೆಯ ಕನಕ ವೃತ್ತಕ್ಕೆ ಆಗಮಿಸುವ ಯಡಿಯೂರಪ್ಪ ಅವರನ್ನು ಒಂದು ಸಾವಿರ ಮಹಿಳೆಯರು ಪೂರ್ಣಕುಂಭದೊಂದಿಗೆ ಸ್ವಾಗತಿಸಲಿದ್ದಾರೆ. ರೈತರು ಸಾಂಪ್ರದಾಯಿಕ ರಾಶಿ ಪೂಜೆಯೊಂದಿಗೆ ರೈತ ಗೌರವ ಸಲ್ಲಿಸಲಿದ್ದಾರೆ. ಬಳಿಕ, ಯಡಿಯೂರಪ್ಪ ಅವರನ್ನು ಪುಷ್ಪಾಲಂಕೃತ ಸಾರೋಟಿನಲ್ಲಿ ಕುಳ್ಳಿರಿಸಿ, ಕನಕದಾಸ ವೃತ್ತದ ಸಮೀಪ ಚಂದ್ರವಳ್ಳಿ ಮೈದಾನದಿಂದ ಅದ್ದೂರಿ ಮೆರವಣಿಗೆಯಲ್ಲಿ ಕರೆತರಲಾಗುವುದು. ↘ 11


ಹೇಗಿರುತ್ತೆ ಮೆರವಣಿಗೆ?

- ಶುಕ್ರವಾರ ಸಂಜೆ 4 ಗಂಟೆಯ ವೇಳೆಗೆ ಹೊಳಲ್ಕೆರೆ ರಸ್ತೆಯ ಕನಕ ವೃತ್ತಕ್ಕೆ ಆಗಮಿಸುವ ಯಡಿಯೂರಪ್ಪ
- 1000 ಮಹಿಳೆಯರಿಂದ ಪೂರ್ಣ ಕುಂಭ ಸ್ವಾಗತ. ರಾಶಿ ಪೂಜೆ ಮೂಲಕ ರೈತರಿಂದ ಗೌರವ ಸಲ್ಲಿಕೆ
- ಪುಷ್ಪಾಲಂಕೃತ ಸಾರೋಟಿನಲ್ಲಿ ಯಡಿಯೂರಪ್ಪ ಮೆರವಣಿಗೆ. ನೇಗಿಲು ಹಿಡಿದು 2000 ರೈತರ ಸಾಥ್
- ನಾರಿ ಶಕ್ತಿ ವಂದನ್‌ಗೆ ಗೌರವ ಸಲ್ಲಿಸಲು ಓಬ್ಬವನ ಪಾತ್ರಧಾರಿಗಳಾಗಿ 200ಕ್ಕೂ ಹೆಚ್ಚು ಮಹಿಳೆಯರ ಮೆರವಣಿಗೆ
- 25ಕ್ಕೂ ಹೆಚ್ಚು ಸಾಂಸ್ಕೃತಿಕ, ಜಾನಪದ ಕಲಾತಂಡಗಳು, ಸ್ತಬ್ಧಚಿತ್ರಗಳಿಂದ ಯಡಿಯೂರಪ್ಪ ಜೀವನ ಅನಾವರಣ



10 ಲಕ್ಷ ಜನರ ಸಮ್ಮುಖ ನಾಳೆ ಅಭಿಮಾನೋತ್ಸವ

ಶನಿವಾರ ಮಧ್ಯಾಹ್ನ ನಡೆಯಲಿರುವ ಅಭಿಮಾನೋತ್ಸವವನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ಉದ್ಘಾಟಿಸಲಿದ್ದಾರೆ. ಸಾವಿರಕ್ಕೂ ಹೆಚ್ಚು ಮಠಾಧೀಶರು, 10 ಲಕ್ಷಕ್ಕೂ ಹೆಚ್ಚು ಜನ ಭಾಗವಹಿಸಲಿದ್ದು, ಕಾರ್ಯಕ್ರಮಕ್ಕಾಗಿ ಬೃಹತ್ ವೇದಿಕೆ ನಿರ್ಮಿಸಲಾಗಿದೆ. ಈ ವೇಳೆ, 'ಕೆಂದಾವರೆ-ಕಮಲದಲ್ಲಿ ಅರಳಿದ ಹೂ' ಹಾಗೂ 'ಸದನದಲ್ಲಿ ಶಿಕಾರಿ' ಎಂಬ ಎರಡು ಅಭಿನಂದನಾ ಗ್ರಂಥಗಳನ್ನು ಬಿಡುಗಡೆಗೊಳಿಸಲಾಗುವುದು.



ಪ.ಬಂಗಾಳ ವಿಧಾನಸಭೆ ವಿಸರ್ಜನೆ ಅಸ್ತ್ರ

ಮಮತಾಗೆ ಗೌರ್ನರ್ ಗೇಟ್ ಪಾಸ್: ದೀದಿ ಈಗ ಬೀದಿಗೆ!

ಎಲೆಕ್ಷನ್ ಸೋತ್ರೂ ರಾಜೀನಾಮೆ ಕೊಡಲ್ಲ ಎಂದಿದ್ದ ಮಮತಾ ಅವಧಿ ಮುಗಿದ ಕಾರಣ ರಾಜ್ಯಪಾಲರಿಂದ ಅಸೆಂಬ್ಲಿ ವಿಸರ್ಜನೆ

ಕೋಲ್ಕತಾ: ಮಹತ್ವದ ಬೆಳವಣಿಗೆಯೊಂದರಲ್ಲಿ ಪಶ್ಚಿಮ ಬಂಗಾಳ ವಿಧಾನಸಭೆಯನ್ನು ರಾಜ್ಯಪಾಲ ಆರ್. ಎನ್. ರವಿ ಗುರುವಾರದಿಂದ ಜಾರಿಗೆ ಬರುವಂತೆ ವಿಸರ್ಜಿಸಿದ್ದಾರೆ. ಈ ಮೂಲಕ ಇತ್ತೀಚಿನ ಚುನಾವಣೆಯಲ್ಲಿ ಸೋತರೂ ಮುಖ್ಯಮಂತ್ರಿ ಹುದ್ದೆಗೆ ರಾಜೀನಾಮೆ ನೀಡುವುದಿಲ್ಲ ಎಂದು ಘೋಷಿಸಿ ರಾಜ್ಯವು ಸಾಂವಿಧಾನಿಕ ಬಿಕ್ಕಟ್ಟಿನತ್ತ ಹೆಜ್ಜೆ ಹಾಕುವಂತೆ ಮಾಡಿದ್ದ ಮಮತಾ ಬ್ಯಾನರ್ಜಿಗೆ ಗೇಟ್‌ಪಾಸ್ ನೀಡಿದ್ದಾರೆ. ↘ 11



ಚುನಾವಣೆ ಸೋತ ದೀದಿ ಮರಳಿ ವಕೀಲಿ ವೃತ್ತಿಗೆ?

ಕೋಲ್ಕತಾ: ಬಂಗಾಳ ಚುನಾವಣೆ ಸೋಲುವ ಜೊತೆಗೆ ಸ್ವತಃ ವಿಧಾನಸಭೆಗೆ ಆಯ್ಕೆಯಾಗುವುದರಿಂದಲೂ ವಂಚಿತರಾಗಿರುವ ಮಾಜಿ ಮುಖ್ಯಮಂತ್ರಿ, ಮಮತಾ ಬ್ಯಾನರ್ಜಿ ಮತ್ತೆ ತಮ್ಮ ಹಿಂದಿನ ವಕೀಲ ವೃತ್ತಿ ಆರಂಭಿಸುವ ಸಾಧ್ಯತೆ ಇದೆ. ಚುನಾವಣಾ ಸೋಲಿನ ಬಗ್ಗೆ ಸುಪ್ರೀಂಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿ ಅದರಲ್ಲಿ ವಾದ ಮಂಡಿಸುವ ಮೂಲಕವೇ ಅವರು ವಕೀಲ ವೃತ್ತಿಗೆ ಮರಳುವ ಇರಾದೆ ಹೊಂದಿದ್ದಾರೆ ಎನ್ನಲಾಗಿದೆ. ↘ 11

ಕೋಹಿನೂರ್ ವಜ್ರ ಭಾರತಕ್ಕೆ ವಾಪಸ್ ಕೊಡಿ: ನ್ಯೂಯಾರ್ಕ್ ಮೇಯರ್

ಸಂಚಲನ ಮೂಡಿಸಿದ ನ್ಯೂಯಾರ್ಕ್ ಮೇಯರ್ ಮಮ್ದಾನಿ ಹೇಳಿಕೆ | ಭಾರತೀಯ ಚಿತ್ರರಂಗದ ನಿರ್ಮಾಪಕಿ ಮೀರಾ ನಾಯರ್ ಪುತ್ರ ಜೋಹ್ರನ್


- **ಆನಂದ್ ಎಂ. ಸೌದಿ**
- **ಕನ್ನಡಪ್ರಭ ವಾರ್ತೆ** ಯಾದಗಿರಿ


ವಿಶ್ವಪ್ರಸಿದ್ಧ ಕೋಹಿನೂರ್ ವಜ್ರವನ್ನು ಭಾರತಕ್ಕೆ ಹಿಂತಿರುಗಿಸಬೇಕೆಂಬ ಒತ್ತಾಸೆಯ ದನಿ ಇದೀಗ ವಿಶ್ವದೆಲ್ಲೆಡೆ ಪ್ರತಿಧ್ವನಿಸುತ್ತಿದೆ. ಕೋಹಿನೂರ್ ಕುರಿತು, ಅಮೆರಿಕದ ನ್ಯೂಯಾರ್ಕ್‌ನ ಮೇಯರ್, ಪ್ರಭಾವಿ ಯುವ ರಾಜಕಾರಣಿ ಜೋಹ್ರನ್ ಮಮ್ದಾನಿಯ ಇತ್ತೀಚಿನ ಈ ಹೇಳಿಕೆ ಜಾಗತಿಕ ಮಟ್ಟದಲ್ಲಿ ಸದ್ದು ಮಾಡುತ್ತಿದೆ. ಮುಂಬೈ ಮೂಲದ ಮೊಹಮ್ಮದ್ ಮಮ್ದಾನಿ ಹಾಗೂ ಭಾರತೀಯ ಚಲನಚಿತ್ರರಂಗದ ಪ್ರಸಿದ್ಧ ನಿರ್ಮಾಪಕಿ ಮೀರಾ ನಾಯರ್ ಪುತ್ರ ಜೋಹ್ರನ್ ಮಮ್ದಾನಿ ಹೇಳಿಕೆ ಭಾರೀ ಸಂಚಲನ ಮೂಡಿಸಿದೆ.


ಜೋಹ್ರನ್ ಮಮ್ದಾನಿ.

9/11 ದಾಳಿಯಲ್ಲಿ ಮೃತಪಟ್ಟವರ ಸ್ಮರಣಾರ್ಥ ನಡೆದ ಕಾರ್ಯಕ್ರಮದಲ್ಲಿ ಗೌರವ ಸಲ್ಲಿಸಲು ನ್ಯೂಯಾರ್ಕ್‌ಗೆ ಬುಧವಾರ ಬ್ರಿಟನ್ ರಾಜ ಚಾರ್ಲ್ಸ್ ಆಗಮಿಸಿದ್ದರು. ಈ ವೇಳೆ, ಅಲ್ಲಿನ ಮೇಯರ್ ಜೋಹ್ರನ್ ಮಮ್ದಾನಿ ಭೇಟಿ ನಿಗದಿಯಾಗಿತ್ತು. ಭೇಟಿಗೂ ಮುನ್ನ, ಮಾಧ್ಯಮಗಳೊಂದಿಗೆ ಮಾತನಾಡಿದ ಜೋಹ್ರನ್ ಮಮ್ದಾನಿ, 'ನಾನು ರಾಜನೊಂದಿಗೆ ಪ್ರತ್ಯೇಕವಾಗಿ ಮಾತನಾಡುವ ಅವಕಾಶ ಸಿಕ್ಕರೆ, ಕೋಹಿನೂರ್ ವಜ್ರವನ್ನು ಹಿಂದಿರುಗಿಸುವಂತೆ ಕೇಳುತ್ತೇನೆ.' ಎಂದು ಹೇಳಿದ್ದರು.

ನಂತರದಲ್ಲಿ ಅವರಿಬ್ಬರು ಈ ವಿಷಯದ ಬಗ್ಗೆ ಚರ್ಚೆ ನಡೆಸಿದರೋ ಅಥವಾ ಇಲ್ಲವೋ ಸ್ಪಷ್ಟವಾಗಿಲ್ಲವಾದರೂ, ಆದರೆ, ವಜ್ರ ಹಿಂತಿರುಗಿಸುವ ಕುರಿತು ಮಮ್ದಾನಿ ಹೇಳಿಕೆ ಜಾಗತಿಕ ಮಟ್ಟದಲ್ಲಿ ವ್ಯಾಪಕ ಚರ್ಚೆಗೆ ಗ್ರಾಸವಾಗಿದೆ.






ಬ್ರಿಟಿಷ್ ಪ್ರವಾಸಿಗ, ಲೇಖಕ ರಾಬರ್ಟ್ ಸೀವೆಲ್ ಬರೆದ 'ಎ ಫಾರಗಟನ್ ಎಂಪಾಯರ್- ವಿಜಯನಗರ' ಹಾಗೂ ವಿಲಿಯಂ ಡೇಲಿಂಪ್ಲ್ ಮತ್ತು ಅನಿತಾ ಆನಂದ್ ಅವರ 2017ರಲ್ಲಿ ಪ್ರಕಟವಾದ ' ಕೋಹಿನೂರ್ : ದ ಹಿಸ್ಟರಿ ಆಫ್ ವರ್ಲ್ಡ್ ಮೋಸ್ಟ್ ಇನ್‌ಫೇಮಸ್ ಡೈಮಂಡ್' ಪುಸ್ತಕಗಳ ಮುಖಪುಟ.


ಕೋಹಿನೂರ್ ವಜ್ರದ ನೋಟ.

ಮಮ್ದಾನಿ ಹೇಳಿಕೆ: ಗರಿಗೆದರಿದ ಚರ್ಚೆ

ಬ್ರಿಟನ್ ಪ್ರಧಾನಿಯಾಗಿದ್ದ ಡೇವಿಡ್ ಕೆಮರೂನ್ 2010ರಲ್ಲಿ ಭಾರತಕ್ಕೆ ಭೇಟಿ ನೀಡಿದ್ದ ವೇಳೆ, ಕೋಹಿನೂರ್‌ವಜ್ರವನ್ನು ಭಾರತಕ್ಕೆ ಹಿಂದಿರುಗಿಸುವ ಬಗ್ಗೆ ಪ್ರಶ್ನೆ ಕೇಳಲಾಗಿತ್ತು. ಆಗ, ಇದಾಗುವುದಿಲ್ಲ ಎಂದು ಪ್ರತಿಕ್ರಿಯಿಸಿದ್ದ ಡೇವಿಡ್, ಬ್ರಿಟನ್‌ನಲ್ಲಿ ಗ್ರೀಸ್, ಈಜಿಪ್ಟ್ ಮುಂತಾದವು ಸೇರಿದಂತೆ ವಿವಿಧ ರಾಷ್ಟ್ರಗಳ ಅನೇಕ ವಸ್ತುಗಳನ್ನು ಸಂಗ್ರಹಿಸಲ್ಪಟ್ಟಿವೆ. ಒಂದು ವಸ್ತುವನ್ನು ಹಿಂದಿರುಗಿಸಿದರೆ, ಭಾರತ ಮಾತ್ರವಲ್ಲ ಇತರ ದೇಶಗಳೂ ಅದೇ ಬೇಡಿಕೆಯನ್ನು ಮುಂದಿಡುತ್ತವೆ ಎಂದಿದ್ದರು. ಇನ್ನು, 2016ರಲ್ಲಿ, ಸಾರ್ವಜನಿಕ ಹಿತಾಸಕ್ತಿ ಅರ್ಜಿಯೊಂದರ ವಿಚಾರಣೆಯ ವೇಳೆ, ಸ್ನೇಹಪೂರ್ವಕವಾಗಿ ಕೋಹಿನೂರ್ ವಜ್ರ ವಾಪಸ್ ಪಡೆಯಲಾಗುವುದು ಎಂದು ಸರ್ಕಾರದ ಪರ ವಕೀಲರು ಸುಪ್ರೀಂಕೋರ್ಟಿಗೆ ತಿಳಿಸಿದ್ದರು. ಆದರೆ, ಮ್ಯೂಸಿಯಂ ಕಾಯ್ದೆ ಪ್ರಕಾರ ವಸ್ತುಗಳನ್ನು ಹಿಂತಿರುಗಿಸುವುದು ಕಷ್ಟಕರ ಎಂದು ಬ್ರಿಟನ್ ಸ್ಪಷ್ಟಪಡಿಸಿತ್ತು. ಸದ್ಯ, ಮಮ್ದಾನಿ ಅವರ ಹೇಳಿಕೆ ಮತ್ತೇ ಈ ವಿಚಾರವನ್ನು ಜಾಗತಿಕ ಮಟ್ಟದಲ್ಲಿ ಮುಂದಿಟ್ಟಂತಾಗಿದೆ.



ಪಹಣಿಗಳಲ್ಲಿ ಕೋಹಿನೂರ್‌ವಜ್ರದ ಕುರಿತದ ದಾಖಲೆಪತ್ರ

ಏನಿದು ಕೋಹಿನೂರ್ ವಜ್ರ?

'ಕೋಹ್-ಎ-ನೂರ್', ಪರ್ಷಿಯನ್ ಭಾಷೆಯಲ್ಲಿನ ಈ ಪದದ ಅರ್ಥ ಬೆಳಕಿನ ಪರ್ವತ (ಕೋಹ್ ಅಂದರೆ ಪರ್ವತ, ನೂರ್ ಅಂದರೆ ಬೆಳಕು). ವಿಶ್ವದಲ್ಲಿನ ಅತಿ ದೊಡ್ಡ ಕತ್ತರಿಸಿದ ವಜ್ರಗಳಲ್ಲೊಂದು. 105.6 ಕ್ಯಾರೆಟ್ ತೂಕದ, ಒಂದು ಕೋಳಿ ಮೊಟ್ಟೆಯಷ್ಟು ಗಾತ್ರದ ಕೋಹಿನೂರ್ ವಜ್ರವನ್ನು 1849 ರಲ್ಲಿ ಬ್ರಿಟಿಷರು ಸಿಖ್ ಸಾಮ್ರಾಜ್ಯದ 10 ವರ್ಷದ ಮಹಾರಾಜ ದುಲೀಪ್ ಸಿಂಗ್ ರಿಂದ ಪಡೆಯಲಾಗಿತ್ತು. ಕಾಕತೀಯರು, ಮೊಗಲರ ನಂತರ ಸಿಖ್ ದೊರೆಗಳ ವಶದಲ್ಲಿತ್ತು. ಒಪ್ಪಂದವೊಂದಕ್ಕೆ ಸಹಿ ಹಾಕುವ ವೇಳೆ ದುಲೀಪ್ ಸಿಂಗ್‌ರಿಂದ ಪಡೆದು, ವಿಕ್ಟೋರಿಯಾ ರಾಣಿಗೆ ಒಪ್ಪಿಸಲಾಗಿತ್ತು. ಸದ್ಯ, ಕೋಹಿ ನೂರ್ ವಜ್ರ ಬ್ರಿಟನ್ ರಾಜಮನೆ ತನದ ಎಲಿ ಜಬೆತ್ ರಾಣಿ ಕಿರೀಟ ದಲ್ಲಿ ಅಳವಡಿಸಲಾಗಿದ್ದು, ಲಂಡನ್ ಟವರ್‌ನಲ್ಲಿರುವ ಕ್ರೌನ್ ಜುವೆಲ್ಸ್ ಮ್ಯೂಸಿಯಂನಲ್ಲಿ ಪ್ರದರ್ಶನಕ್ಕಿದ್ದು 2002ರಲ್ಲಿ ಅವರ ಅಂತ್ಯ ಕ್ರಿಯೆ ಯಲ್ಲಿ ಸಾರ್ವಜನಿಕವಾಗಿ ವಜ್ರ, ಕೊನೆಯ ಬಾರಿ ಕಂಡುಬಂದಿತ್ತು.

ಕೊಳ್ಳೂರಿನಲ್ಲಿ ಕೋಹಿನೂರ್ ಉಗಮ !

ಶಹಾಪುರ ತಾಲೂಕಿನ ಕೊಳ್ಳೂರು (ಎಂ) ಗ್ರಾಮದ ಕೃಷ್ಣಾ ನದಿಯಲ್ಲಿ ಕೋಹಿನೂರ್ ವಜ್ರ ಸಿಕ್ಕ ಐತಿಹ್ಯದ ದಾಖಲೆಗಳಿವೆ. ಬ್ರಿಟಿಷ್ ಪ್ರವಾಸಿಗ, ಲೇಖಕ ರಾಬರ್ಟ್ ಸೀವೆಲ್ ಬರೆದ 'ಎ ಫಾರಗಟನ್ ಎಂಪಾಯರ್- ವಿಜಯನಗರ' ಹಾಗೂ ವಿಲಿಯಂ ಡೇಲಿಂಪ್ಲ್ ಮತ್ತು ಅನಿತಾ ಆನಂದ್ ಅವರ 2017ರಲ್ಲಿ ಪ್ರಕಟವಾದ ' ಕೋಹಿನೂರ್ : ದ ಹಿಸ್ಟರಿ ಆಫ್ ವರ್ಲ್ಡ್ ಮೋಸ್ಟ್ ಇನ್‌ಫೇಮಸ್ ಡೈಮಂಡ್' ಪುಸ್ತಕದಲ್ಲಿ ಈ ಬಗ್ಗೆ ತಿಳಿಸಿದ್ದಾರೆ. ಇತಿಹಾಸ ಸಂಶೋಧಕರಾಗಿದ್ದ ಶಹಾಪುರದ ದಿ. ಭಾಸ್ಕರರಾವ್ ಮುಡಬೂಳ್ ಅವರು ಈ ಬಗ್ಗೆ ದಾಖಲೆಗಳ ಸಂಗ್ರಹಕ್ಕೆ ಪ್ರಯತ್ನಿಸಿದ್ದರು. ರಾಜ್ಯ ಸರ್ಕಾರದ ಹಾಲಿ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಗೋಯಲ್ ಅವರು, ಅಂದಿನ ಎಚ್ಕೆಡಿಬಿ ಕಾರ್ಯದರ್ಶಿಯಾಗಿದ್ದ ವೇಳೆ ಇಲ್ಲಿನ ಸರ್ವೆ ನಂ.337 ಹಾಗೂ 342ರಲ್ಲಿನ ಒಟ್ಟು 8 ಎಕರೆ 19 ಗುಂಟೆ ಪ್ರದೇಶವನ್ನು ಸಂರಕ್ಷಿತ ಸ್ಥಳವೆಂದು ಗುರುತಿಸಿದ್ದರಲ್ಲದೆ, ಪ್ರವಾಸೋದ್ಯಮ ಇಲಾಖೆಯ ಮೂಲಕ ಅಭಿವೃದ್ಧಿಗೆ ರೂಪುರೇಷೆ ಸಿದ್ಧಪಡಿಸಿದ್ದರು. ಇಲ್ಲಿನ ಉತ್ಕೃಷ್ಟ ಮರಳಿಗೆ ಕನ್ನ ಹಾಕುತ್ತಿದ್ದವರ ತಡೆದು, ಇಲ್ಲಿ ಮರಳು ಗಣಿಗಾರಿಕೆ ನಿಷೇಧ ಹೇರಿ ಆದೇಶಿಸಲಾಗಿದೆ.

ಐಟಿಐ ಪ್ರವೇಶ ಪಡೆಯಲು ಆನ್‌ಲೈನ್ ಮೂಲಕ ಅರ್ಜಿ

- **ಕನ್ನಡಪ್ರಭ ವಾರ್ತೆ** ಯಾದಗಿರಿ

ಯಾದಗಿರಿ ಜಿಲ್ಲೆಯ ಸುರಪುರ ತಾಲೂಕಿನ ಕೃಷ್ಣಾಪುರ, ಬಿಜಾಪುರ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆದಲ್ಲಿ 2026ನೇ ಸಾಲಿನ ಐಟಿಐ ಪ್ರವೇಶ ಪಡೆಯಲು ಆನ್‌ಲೈನ್ ಮೂಲಕ ಅರ್ಜಿಯನ್ನು ಆಹ್ವಾನಿಸಲಾಗಿದೆ ಎಂದು ಸುರಪುರ ಸರ್ಕಾರಿ ಕೈಗಾರಿಕೆ ತರಬೇತಿ ಸಂಸ್ಥೆ ಪ್ರಾಂಶುಪಾಲರು ಅವರು ತಿಳಿಸಿದ್ದಾರೆ.

ಸಂಸ್ಥೆಯಲ್ಲಿರುವ ಲಭ್ಯವಿರುವ ವೃತ್ತಿಗಳು ಎಲೆಕ್ಟ್ರಿಷಿಯನ್ (ಎನ್‌ಸಿವಿಟಿ) ಎರಡು ವರ್ಷ ಅವಧಿ ಇದೆ.

ಫೀಟರ್(ಎನ್‌ಸಿವಿಟಿ) 2 ವರ್ಷ ಅವಧಿ ಇದೆ.

ಎಲೆಕ್ಟ್ರಾನಿಕ್ಸ್ ಮೆಕ್ಯಾನಿಕ್ (ಎನ್‌ಸಿವಿಟಿ) ಎರಡು ವರ್ಷ ಅವಧಿ ಇದೆ.

ಮೆಕ್ಯಾನಿಕ್ ಮೋಟಾರ್‌ವಾಹನ (ಎಮ್‌ಎಮ್‌ವಿ) (ಎನ್‌ಸಿವಿಟಿ) ಎರಡು ವರ್ಷಗಳ ಅವಧಿ ಇರುತ್ತದೆ.

ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಸುರಪುರ (ಕೃಷ್ಣಾಪೂರ/ಬಿಜಾಪೂರ)ದಲ್ಲಿ ಪ್ರವೇಶಕ್ಕೆ ಮೆರಿಟ್ ಕಂ ರಿಜರ್ವೇಶನ್ ಆಧಾರದ ಮೇಲೆ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಿದೆ.

ಅರ್ಹರು ಇಚ್ಛೆಯುಳ್ಳವರು (ಎಸ್.ಎಸ್.ಎಲ್.ಸಿ ಉತ್ತೀರ್ಣರಾದ) ಅಭ್ಯರ್ಥಿಗಳು ಪ್ರವೇಶ ಪಡೆಯಲು ಆನ್‌ಲೈನ್ www.cite.karnataka.gov.in ನಲ್ಲಿ 2026ರ ಮೇ 8ರ ಒಳಗೆ ಅರ್ಜಿಸಲ್ಲಿಸಬೇಕು, ಮಹಿಳೆಯರಿಗೆ ಉಚಿತ ಪ್ರವೇಶ ಇರುತ್ತದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 9900544676, 7026729493, 9513066654, 9019337464ಗೆ ಸಂಪರ್ಕಿಸಬಹುದು ಎಂದು ಅವರು ತಿಳಿಸಿದ್ದಾರೆ.

ಬಿಎಸ್ವೈ ರಾಜಕೀಯ ಪಯಣ ಅದ್ಭುತ ಇತಿಹಾಸ: ಡಾ. ಶರಣಭೂಪಾಲರೆಡ್ಡಿ

ಯಾದಗಿರಿ: ರಾಜ್ಯದಲ್ಲಿ ಬಿಜೆಪಿಗೆ ಯಾವುದೇ ಅಸ್ತಿತ್ವವಿಲ್ಲದ ಕಾಲಘಟ್ಟದಲ್ಲಿ, ಸೈಕಲ್ ಏರಿ ಹಳ್ಳಿ-ಹಳ್ಳಿಗಳನ್ನು ಸುತ್ತಿ ಪಕ್ಷವನ್ನು ಕಟ್ಟಿ ಬೆಳೆಸಿದ ಧೀಮಂತ ಶಕ್ತಿ, ಅನ್ನದಾತನ ಬದುಕಿಗೆ ಹೊಸ ಆಯಾಮ ನೀಡಿ ದೇಶದ ಇತಿಹಾಸದಲ್ಲೇ ಮೊಟ್ಟಮೊದಲ ಬಾರಿಗೆ ಪ್ರತ್ಯೇಕ ಕೃಷಿ ಬಜೆಟ್ ಮಂಡಿಸಿ, ಕೃಷಿಕ್ಷೇತ್ರಕ್ಕೆ ರಾಜಗೌರವ ತಂದುಕೊಟ್ಟ ರೈತಬಂಧು ಮಾಜಿ ಸಿಎಂ ಬಿಎಸ್ವೈ ಅವರ ರಾಜಕೀಯ ಪಯಣ ಅದ್ಭುತ ಇತಿಹಾಸ ಎಂದು ಜಿಲ್ಲಾ ಬಿಜೆಪಿ ಮಾಜಿ ಅಧ್ಯಕ್ಷ ಡಾ. ಶರಣಭೂಪಾಲರೆಡ್ಡಿ ನಾಯ್ಕಲ್ ಪತ್ರಿಕಾಗೋಷ್ಠಿ ಹೇಳಿದರು.

ರೈತ ಸುಖವಾಗಿದ್ದರೆ ದೇಶ ಸುಭಿಕ್ಷ ಎನ್ನುವ ಮಾತಿಗೆ ಜೀವ ನೀಡಿದವರು ಬಿಎಸ್ವೈ. ರೈತನೊಬ್ಬ ಆರ್ಥಿಕವಾಗಿ ಸಶಕ್ತನಾಗಬೇಕೆಂಬ ಹಂಬಲದಿಂದ ಸಾಲಮನ್ನಾ ಮಾಡಿ, ಕೋಟ್ಯಂತರ ಕುಟುಂಬಗಳ ಪಾಲಿನ ಸಂಜೀವಿನಿ. ಬಗರ್‌ಹುಕುಂ ಸಾಗುವಳಿದಾರರ ಹಕ್ಕುಗಳಿಗಾಗಿ ಅವರು ನಡೆಸಿದ ಹೋರಾಟ ಮತ್ತು ರೈತ ಸಮುದಾಯದ ಪರವಾಗಿ ಸದಾ ಧ್ವನಿ ಎತ್ತಿದ ಅವರ ಕಾಳಜಿ ಇಂದಿಗೂ ನಮಗೆಲ್ಲ ಪ್ರೇರಣೆ. ಅಧಿಕಾರಕ್ಕೋಸ್ಕರ ಅಲ್ಲ, ರೈತರ ಉದ್ಧಾರಕ್ಕಾಗಿ ಶ್ರಮಿಸಿದ್ದಾರೆ ಎಂದರು.

ಯಾದಗಿರಿಯನ್ನು ಆಡಳಿತಾತ್ಮಕ ದೃಷ್ಟಿಯಿಂದ ಮತ್ತು ಸಮಗ್ರ ಅಭಿವೃದ್ಧಿಯ ಹಿತದೃಷ್ಟಿಯಿಂದ ಪ್ರತ್ಯೇಕ ಜಿಲ್ಲೆಯನ್ನಾಗಿ ಘೋಷಿಸಿದ ಕೀರ್ತಿ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರಿಗೆ ಸಲ್ಲುತ್ತದೆ. 2009ರಲ್ಲಿ ಕಲಬುರಗಿ ಜಿಲ್ಲೆಯಿಂದ ಯಾದಗಿರಿಯನ್ನು ವಿಭಜಿಸಿ ಕರ್ನಾಟಕದ 30ನೇ ಜಿಲ್ಲೆಯನ್ನಾಗಿ ಮಾಡಿದ ಸಾಹಸ ಸನ್ಮಾನ್ಯ ಯಡಿಯೂರಪ್ಪನವರದ್ದಾಗಿದೆ ಎಂದರು. ಭೀಮನಗೌಡ ಕ್ಯಾತನಾಳ, ತಾ.ಪಂ ಮಾಜಿ ಸದಸ್ಯರಾದ ಶರಣಭೂಪಾಲರೆಡ್ಡಿ ಗುರುಸುಣಗಿ, ಜಿಲ್ಲಾ ವಕ್ತಾರರಾದ ಹಣಮಂತ ಇಟಗಿ, ವೀಣಾ ಮೋದಿ, ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷ ಸುನಿತಾ ಚೌಹಾಣ್, ಮಾಜಿ ಜಿಲ್ಲಾ ಕಾರ್ಯಕಾರಿಣಿ ಸದಸ್ಯರಾದ ಭೀಮರೆಡ್ಡಿಗೌಡ ಚಟ್ನಳ್ಳಿ, ಜಿಲ್ಲಾ ಪ್ರಕೋಷ್ಠಗಳ ಸಂಚಾಲಕರಾದ ಮಲ್ಲನಗೌಡ ಬಿಳ್ಹಾರ, ಶಿವರಾಜ ಪಾಟೀಲ್, ಸಹ ಸಂಚಾಲಕರಾದ ಉದಯ ರಾಯಕೋಟಿ ಮಾಧ್ಯಮ ವಕ್ತಾರರಾದ ವಿರೂಪಾಕ್ಷಯ್ಯ ಸ್ವಾಮಿ ಹೆಡಗಿಮದ್ರ, ಸಹ ವಕ್ತಾರರಾದ ಚಂದ್ರಶೇಖರ್‌ಕಡೆಸೂರ್, ಉಪಾಧ್ಯಕ್ಷರಾದ ಮಲ್ಲು ಕೋಲಿವಾಡ ಇದ್ದರು.

ಸಾಹಿತ್ಯ-ಶಿಕ್ಷಣ-ಸಮಾಜ ಸೇವೆಯ ಸಮನ್ವಯ ಸಾಧಕ

ಪುತ್ತೂರು ಉಮೇಶ್ ನಾಯಕ್

ಪುತ್ತೂರು ಉಮೇಶ್ ನಾಯಕ್ ಅವರು ಸಾಹಿತ್ಯ, ಶಿಕ್ಷಣ ಹಾಗೂ ಸಮಾಜ ಸೇವಾ ಕ್ಷೇತ್ರಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುವ ಬಹುಮುಖ ವ್ಯಕ್ತಿತ್ವ. ಚಿಂತನೆ, ಕ್ರಿಯಾಶೀಲತೆ ಮತ್ತು ಮಾನವೀಯ ಸೇವಾಭಾವದ ಮೂಲಕ ಪುತ್ತೂರು ತಾಲೂಕು ಮಾತ್ರವಲ್ಲದೆ ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ವಿಶಿಷ್ಟ ಗುರುತನ್ನು ನಿರ್ಮಿಸಿಕೊಂಡಿರುವ ಅವರು, ಸಮಾಜದ ವಿವಿಧ ಹಂತಗಳ ಮೇಲೆ ಸ್ಪಷ್ಟವಾದ ಸಕಾರಾತ್ಮಕ ಪ್ರಭಾವ ಬೀರಿರುವ ಸೇವಾ ಸಾಧಕರು.



ಪ್ರಸ್ತುತ ಪುತ್ತೂರು ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿರುವ ಅವರು, ಕಳೆದ ನಾಲ್ಕು ವರ್ಷಗಳಿಂದ ತಾಲೂಕಿನ 32 ಗ್ರಾಮಗಳಲ್ಲಿ ಪ್ರತಿಮಾಸವೂ ಮಕ್ಕಳ ಸಾಹಿತ್ಯ ಸಮ್ಮೇಳನದ ಸ್ವರೂಪದ ಗ್ರಾಮ ಸಾಹಿತ್ಯ ಸಂಭ್ರಮ ಎಂಬ ವಿನೂತನ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತಿದ್ದಾರೆ. ಗ್ರಾಮ ಸಾಹಿತ್ಯ ಸಂಭ್ರಮದಲ್ಲಿ ವಿದ್ಯಾರ್ಥಿ ಕವಿ ಗೋಷ್ಠಿ ಜೊತೆಗೆ ವಿನೂತನ ಪ್ರಯೋಗಗಳಾದ ಬಾಲಕಥಾಗೋಷ್ಠಿ, ಪ್ರವಾಸ ಕಥನ ಲೇಖನ, ನನ್ನ ಆಪ್ತಮಿತ್ರ ಲೇಖನ, ನನ್ನ ನೆಚ್ಚಿನ ಶಿಕ್ಷಕ ಲೇಖನ ಗೋಷ್ಠಿಗಳನ್ನು ಅಳವಡಿಸಿಕೊಂಡು ಯುವ ಜನತೆಯನ್ನು ಸಾಹಿತ್ಯ ಕ್ಷೇತ್ರದತ್ತ ಬರಮಾಡಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. 250ಕ್ಕೂ ಹೆಚ್ಚು ವಿವಿಧ ಕ್ಷೇತ್ರಗಳ ಸಾಧಕರನ್ನು ಗ್ರಾಮ ಮಟ್ಟದಲ್ಲಿ ಗುರುತಿಸಿ ಗೌರವಿಸಿದ್ದಾರೆ. 100ಕ್ಕೂ ಅಧಿಕ ಹೊಸ ಕೃತಿಗಳ ಪ್ರಕಟಣೆಗೆ ಮಾರ್ಗದರ್ಶನ ನೀಡಿ ಉದಯೋನ್ಮುಖ ಸಾಹಿತಿಗಳಿಗೆ ಬೆಂಬಲ ನೀಡಿದ್ದಾರೆ.

ಪುತ್ತೂರು ತಾಲೂಕಿನಲ್ಲಿ ಸುಮಾರು 20 ವರ್ಷಗಳಿಂದ ನಿಂತುಹೋದ ಕರ್ನಾಟಕ ರಾಜ್ಯೋತ್ಸವದ ಕನ್ನಡ ಭುವನೇಶ್ವರಿಯ ಭವ್ಯ ಮೆರವಣಿಗೆಯನ್ನು ಪುತ್ತೂರಿನ ಶಾಸಕರಾದ ಅಶೋಕ್ ರೈ ಯವರ ಮಾರ್ಗದರ್ಶನದಲ್ಲಿ ಸುಮಾರು 50ಕ್ಕೂ ಹೆಚ್ಚು ಸಂಘ-ಸಂಸ್ಥೆಗಳ ಸಹಯೋಗದಲ್ಲಿ ಪುನರಾರಂಭಿಸಿ, ರಾಜ್ಯೋತ್ಸವದ ಅಂಗವಾಗಿ ನಡೆಯುವ ಸನ್ಮಾನವನ್ನು ತಾಲೂಕು ರಾಜ್ಯೋತ್ಸವ ಪ್ರಶಸ್ತಿ ಸ್ವರೂಪಕ್ಕೆ ತಂದ ಪ್ರಮುಖ ವ್ಯಕ್ತಿ. ಜಿಲ್ಲೆಯಲ್ಲಿ ತಾಲೂಕು ಮಟ್ಟದಲ್ಲಿ ರಾಜ್ಯೋತ್ಸವ ಪ್ರಶಸ್ತಿ ವ್ಯವಸ್ಥಿತವಾಗಿ ನಡೆಯುತ್ತಿರುವುದು ಪುತ್ತೂರಿನಲ್ಲಿ ಮಾತ್ರ ಎನ್ನುವುದು ಗಮನಾರ್ಹ.

ಕನ್ನಡದಲ್ಲೂ ಐಎಎಸ್ ಬರೆಯಿರಿ' ಅಭಿಯಾನ

ಶಿಕ್ಷಣ ಕ್ಷೇತ್ರದಲ್ಲಿ ಇವರ ಕೊಡುಗೆ ವಿಶೇಷವಾಗಿದೆ. ಕನ್ನಡ ಮಾಧ್ಯಮ ವಿದ್ಯಾರ್ಥಿಗಳ ಸ್ಪರ್ಧಾತ್ಮಕ ಭವಿಷ್ಯವನ್ನು ಗಮನದಲ್ಲಿರಿಸಿ ತಾಲೂಕಿನಿಂದ ಹೆಚ್ಚಿನ ಸಂಖ್ಯೆಯಲ್ಲಿ ಐಎಎಸ್ ಅಧಿಕಾರಿಗಳಾಗಬೇಕೆಂಬ ಮಹಾದಾಸೆಯಿಂದ ಕನ್ನಡದಲ್ಲೂ ಐಎಎಸ್ ಪರೀಕ್ಷೆ ಬರೆಯಿರಿ ಎಂಬ ಅಭಿಯಾನವನ್ನು ಆರಂಭಿಸಿ, 200ಕ್ಕೂ ಅಧಿಕ ಐಎಎಸ್- ಐಪಿಎಸ್ ಹಾಗೂ ತತ್ಸಮಾನ ಸ್ಪರ್ಧಾತ್ಮಕ ಪರೀಕ್ಷೆಗಳ ಕುರಿತು ಮಾಹಿತಿ ಕಾರ್ಯಗಾರಗಳನ್ನು ಕನ್ನಡದಲ್ಲೇ ನಡೆಸಿ ವಿದ್ಯಾರ್ಥಿಗಳಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳ ಕುರಿತು ಅರಿವನ್ನುಂಟು ಮಾಡುವಲ್ಲಿ ಯಶಸ್ವಿಯಾಗಿದ್ದಾರೆ.

ಗ್ರಾಮಮಟ್ಟದಲ್ಲಿ ಸಾಹಿತ್ಯ ಸಂಭ್ರಮ ಮತ್ತು ಸ್ಪರ್ಧಾತ್ಮಕ ಪರೀಕ್ಷೆಗಳ ಜಾಗೃತಿ ಕಾರ್ಯಕ್ರಮಗಳನ್ನು ಸಂಯೋಜಿತವಾಗಿ ನಡೆಸಿರುವುದು ರಾಜ್ಯದ ಕನ್ನಡ ಸಾಹಿತ್ಯ ಪರಿಷತ್ತು ಇತಿಹಾಸದಲ್ಲೇ ವಿನೂತನ ಪ್ರಯತ್ನವಾಗಿದೆ.

ಸಾಹಿತ್ಯ ಕ್ಷೇತ್ರದಲ್ಲಿ ಅವರು ಸಾಧಕ ಲೇಖಕರಾಗಿಯೂ ಗುರುತಿಸಿಕೊಂಡಿದ್ದಾರೆ. ಇತಿಹಾಸ ಪ್ರಸಿದ್ಧ ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಸಂಕ್ಷಿಪ್ತ ಸ್ಥಳಪುರಾಣವಾದ ಸ್ವಯಂಭೂ ಮಹಾಲಿಂಗೇಶ್ವರ ಕೃತಿಯನ್ನು ರಚಿಸಿದ್ದು, ಈ ಕೃತಿ ಧಾರ್ಮಿಕ ದತ್ತಿ ಇಲಾಖೆಯಿಂದ ಪ್ರಕಟವಾಗಿದೆ. ಇದಲ್ಲದೆ ಇನ್ನೂ ಮೂರು ಕೃತಿಗಳನ್ನು ರಚಿಸಿ ಕನ್ನಡ ಸಾಹಿತ್ಯಕ್ಕೆ ತಮ್ಮ ಕೊಡುಗೆಯನ್ನು ನೀಡಿದ್ದಾರೆ.

ನಿರ್ಗತಿಕರ ಪುನರ್ವಸತಿ ಸೇವೆ: ಪುತ್ತೂರು ಉಮೇಶ್ ನಾಯಕ್ ಅವರ ಸೇವಾ ಬದುಕಿನ ಅತ್ಯಂತ ಸ್ಪರ್ಶಕ ಅಧ್ಯಾಯವೆಂದರೆ ನಿರ್ಗತಿಕರು, ಭಿಕ್ಷುಕರು ಮತ್ತು ಅನಾಥರ ಪುನರ್ವಸತಿ ಕಾರ್ಯ. ಕಳೆದ ಹತ್ತು ವರ್ಷಗಳಲ್ಲಿ 100ಕ್ಕೂ ಅಧಿಕ ನಿರ್ಗತಿಕರನ್ನು ಪುನರ್ವಸತಿ ಕೇಂದ್ರಗಳಿಗೆ ಸೇರಿಸಿ ಸಮಾಜದ ಮುಖ್ಯವಾಹಿನಿಗೆ ತರುವ ಸಂಕಲ್ಪದೊಂದಿಗೆ ಅವರಿಗೆ ಹೊಸ ಬದುಕಿನ ಆಶಾಕಿರಣ ನೀಡಿದ್ದಾರೆ. ವಿಶೇಷವಾಗಿ ಎಚ್‌ಐವಿ ಪೀಡಿತ ಓರ್ವ ಮಹಿಳೆ ಹಾಗೂ ಇಬ್ಬರು ಮಕ್ಕಳನ್ನು ರಕ್ಷಿಸಿ, ಅವರಿಗೆ ವೈದ್ಯಕೀಯ ನೆರವು, ಆಶ್ರಯ ಮತ್ತು ವಿದ್ಯಾಭ್ಯಾಸದ ವ್ಯವಸ್ಥೆ ಕಲ್ಪಿಸಿರುವುದು ಇವರ ಮಾನವೀಯತೆಯ ಮಾದರಿಯಾಗಿದೆ.


ಕನ್ನಡಪ್ರಭ ಮತ್ತು ಸುವರ್ಣ ನ್ಯೂಸ್ ವತಿಯಿಂದ ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ಸಮಾರಂಭದಲ್ಲಿ 'ಸುವರ್ಣ ಕನ್ನಡಿಗ' ಪ್ರಶಸ್ತಿ ಪ್ರದಾನ ಮಾಡಲಾಯಿತು.

ಗೌರವಗಳು :

ಇವರ ಸಾಹಿತ್ಯಿಕ, ಶೈಕ್ಷಣಿಕ ಹಾಗೂ ಸಮಾಜಮುಖಿ ಸೇವೆಗಳನ್ನು ಗುರುತಿಸಿ 2020ರಲ್ಲಿ ರೋಟರಿ ಅನ್‌ಸಂಗ್ ಹೀರೋ ಪ್ರಶಸ್ತಿ ಹಾಗೂ 2025ರಲ್ಲಿ ಪುತ್ತೂರು ತಾಲೂಕು ಗಣರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಇತ್ತೀಚೆಗೆ ಕನ್ನಡಪ್ರಭ ಏಷಿಯಾನೆಟ್ ಸುವರ್ಣನ್ಯೂಸ್ನ ಸುವರ್ಣ ಕನ್ನಡಿಗ' ಪ್ರಶಸ್ತಿಗೆ ಭಾಜನರಾಗಿದ್ದು, ಇವರ ಸಮಾಜಸೇವೆಗೆ ದೊರೆತ ಮುಕುಟವಾಗಿದೆ.

ತಮ್ಮ ಒಡಹುಟ್ಟಿದ ಡೌನ್ ಸಿಂಡ್ರೋಮ್ ಸಹೋದರ ಸುರೇಶ್ ನಾಯಕ್ ಅವರನ್ನು ಸಮಾಜದ ಮುಖ್ಯ ವಾಹಿನಿಗೆ ತರುವಲ್ಲಿ ಹಾಗೂ ಅವರಿಗೆ ಜಾದೂ ಪ್ರದರ್ಶನ ಕಲಿಸಿ ಅವರ ಪ್ರತಿಭೆಯನ್ನು ಪ್ರಪಂಚಕ್ಕೆ ತೋರಿಸಿಕೊಟ್ಟಿದ್ದಾರೆ. ಅವರು ದೇಶದಾದ್ಯಂತ ಇದುವರೆಗೆ 500ಕ್ಕೂ ಅಧಿಕ ಉಚಿತ ಪ್ರದರ್ಶನಗಳ ಮೂಲಕ ಬುದ್ಧಿಮಾಂದ್ಯತಾ ಜನಜಾಗೃತಿಯನ್ನು ಮೂಡಿಸಿದ್ದಾರೆ. ಉಡುಪಿಯ ಡೌನ್ ಸಿಂಡ್ರೋಮ್ ಈಜುಗಾರ್ತಿ ಅರ್ಚನಾ ಜೈ ವಿಠಲ್, ಮೈಸೂರಿನ ದಿವ್ಯಾಂಗ ಕೀ ಬೋರ್ಡ್ ಕಲಾವಿದ ಶ್ರೀ ಗಣೇಶ್ ಭಟ್ ಹಾಗೂ ಡೌನ್ ಸಿಂಡ್ರೋಮ್ ಜಾದೂಗಾರ ಸುರೇಶ ನಾಯಕ್ ಇವರಿಗೆ ವಿಶ್ವ ಅಂಗವಿಕಲ ದಿನಾಚರಣೆಯ ರಾಷ್ಟ್ರಪತಿಗಳ ರಾಷ್ಟ್ರ ಪ್ರಶಸ್ತಿ ದೊರಕುವಲ್ಲಿ ಮಹತ್ತರ ಪಾತ್ರ ವಹಿಸಿದ್ದಾರೆ.

ಪ್ರಸ್ತುತ ಅವರು ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲೂಕಿನಲ್ಲಿ ಶ್ರೀರಾಮ್ ಶೇರ್ಸ್ ಅಂಡ್ ಫೈನಾನ್ಷಿಯಲ್ ಕನ್ಸಲ್ಟೆಂಟ್ ಎಂಬ ಸಂಸ್ಥೆಯ ಆಡಳಿತ ನಿರ್ದೇಶಕರಾಗಿದ್ದು, ಈ ಸಂಸ್ಥೆಯ ಮೂಲಕ ಶೇರು ಉದ್ಯಮವನ್ನು ನಡೆಸುತ್ತಿದ್ದಾರೆ. ಪತ್ನಿ ರೂಪಶ್ರೀ ನಾಯಕ್, ಪುತ್ರ ಸಾತ್ವಿಕ್ ನಾಯಕ್ ಹಾಗೂ ಸಹೋದರ ಸುರೇಶ್ ನಾಯಕ್ ಹಾಗೂ ಪೋಷಕರೊಂದಿಗೆ ಪುತ್ತೂರಿನಲ್ಲಿ ವಾಸವಾಗಿದ್ದಾರೆ (ದೂರವಾಣಿ: 9844401295).



ಸಂಚಾರ ನಿಯಮ ಉಲ್ಲಂಘನೆ: ₹23,500 ದಂಡ, ವಾಹನ ಜಪ್ತಿ

ಕಲಬುರಗಿ: ರಸ್ತೆ ಸಂಚಾರ ನಿಯಮ ಉಲ್ಲಂಘಿಸಿದ್ದ ಆಟೊವೊಂದಕ್ಕೆ ಪೊಲೀಸರು ₹ 23,500 ದಂಡ ವಿಧಿಸಿ, ವಾಹನ ಜಪ್ತಿ ಮಾಡಿದ್ದಾರೆ. ಸೇಡಂ ರಿಂಗ್ ರಸ್ತೆಯಿಂದ ಹಾಗರಗಾ ಕಡೆಗೆ ತೆರಳುತ್ತಿದ್ದ ಆಟೋ ತಡೆದ ಪೊಲೀಸರು ಅದರ ನೋಂದಣಿ ಸಂಖ್ಯೆಯ ಆಧಾರದಲ್ಲಿ ಪರಿಶೀಲಿಸಿದಾಗ, ನಿಯಮ ಉಲ್ಲಂಘನೆ ಪ್ರಕರಣ ಪತ್ತೆಯಾಗಿವೆ. ದಂಡದ 10 ಅಡಿ ಉದ್ದದ ರಸೀದಿ ಬಂದಿದೆ. ಸಿಗ್ನಲ್ ಜಂಪ್, ನೋ-ಪಾರ್ಕಿಂಗ್ ವಾಹನ ನಿಲುಗಡೆ, ಚಾಲನೆ ವೇಳೆ ಮೊಬೈಲ್ ಫೋನ್ ಬಳಕೆ ಸೇರಿದಂತೆ ಹಲವು ಉಲ್ಲಂಘನೆ ಪತ್ತೆಯಾಗಿವೆ. ಶಹಾಬಾದ್ ಬಸವೇಶ್ವರ ನಗರ ನಿವಾಸಿಯೊಬ್ಬರಿಗೆ ಸೇರಿದ ಆಟೊ ಇದಾಗಿದ್ದು, ದಂಡ ವಿಧಿಸಿದ ಬಳಿಕ ವಾಹನ ಜಪ್ತಿ ಮಾಡಲಾಗಿದೆ.

ಗರಿಷ್ಠ 37°c | ಕನಿಷ್ಠ 27°c

ಸುದ್ದಿ ಸಿಂಚನ

ಅಗ್ನಿಶಾಮಕರ ಪಾತ್ರ ಅನನ್ಯ: ಅಸ್ಪಕ್ ಹುಸೇನ್

ಕಲಬುರಗಿ: ರಾಷ್ಟ್ರದ ರಕ್ಷಣೆಯಲ್ಲಿ ಅಗ್ನಿಶಾಮಕರ ಪಾತ್ರ ಅನನ್ಯ ಎಂದು ಪ್ರಮುಖ ಅಗ್ನಿಶಾಮಕ ಅಸ್ಪಕ್ ಹುಸೇನ್ ಹೇಳಿದರು. ನಗರದ ಅಗ್ನಿಶಾಮಕ ಠಾಣೆಯಲ್ಲಿ 'ಬಸವೇಶ್ವರ ಸಮಾಜ ಸೇವಾ ಬಳಗ' ಮತ್ತು ಅಗ್ನಿಶಾಮಕ ಠಾಣೆಯ ಜಂಟಿ ಆಶ್ರಯದಲ್ಲಿ 'ಅಂತಾರಾಷ್ಟ್ರೀಯ ಅಗ್ನಿಶಾಮಕರ ದಿನಾಚರಣೆ' ಉದ್ಘಾಟಿಸಿ ಮಾತನಾಡಿದರು. ಡಿಸೆಂಬರ್ 2, 1998 ರಂದು ಆಸ್ಟ್ರೇಲಿಯಾದ ಲಿಂಟನ್ ಪಟ್ಟಣದಲ್ಲಿ ಕಾಡ್ಗಿಚ್ಚನ್ನು ನಂದಿಸಲು ಆಮ್‌ಸ್ಟ್ರಾಂಗ್, ಗ್ಯಾರಿ ವ್ರೆಡೆವೆಲ್ಡ್ಟ್, ಕ್ರಿಸ್ ಇವಾನ್ಸ್, ಸ್ಟುವರ್ಟ್ ಡೇವಿಡ್ಸನ್, ಜೇಸನ್ ಥಾಮಸ್ ಎಂಬ ಐದು ಜನ ಅಗ್ನಿಶಾಮಕ ಸಿಬ್ಬಂದಿ ತಮ್ಮ ಪ್ರಾಣವನ್ನು ಕಳೆದುಕೊಂಡಿದ್ದರು. ಇಂತಹ ಸಿಬ್ಬಂದಿಗೆ ನಮನ ಸಲ್ಲಿಸಲು 'ಅಂತಾರಾಷ್ಟ್ರೀಯ ಅಗ್ನಿಶಾಮಕ ದಿನದ ಆಚರಣೆ ಪ್ರಾರಂಭವಾಯಿತು ಎಂದರು. ಉಪನ್ಯಾಸಕ ಎಚ್.ಬಿ.ಪಾಟೀಲ, ಅಗ್ನಿಶಾಮಕರಿಗೆ ಸಮಾಜದ ಪ್ರೋತ್ಸಾಹ, ಗೌರವ ನೀಡುವುದು ಅಗತ್ಯವಾಗಿದೆ ಎಂದರು. ಅಗ್ನಿಶಾಮಕ ಠಾಣಾಧಿಕಾರಿ ಪ್ರವೀಣ ಕಲಶೆಟ್ಟಿ, ಬಸವೇಶ್ವರ ಬಳಗದ ಗೌರವ ಸಲಹೆಗಾರ ಶಿವಯೋಗೆಪ್ಪಾ ಎಸ್.ಬಿರಾದಾರ, ಸದಸ್ಯರಾದ ಡಾ.ರಾಜಶೇಖರ ಪಾಟೀಲ, ಮಹಾಂತೇಶ ಬಿರಾದಾರ, ಶಿವಕುಮಾರ ಪಾಟೀಲ, ಅಗ್ನಿಶಾಮಕರಾದ ಹೊನ್ನಪ್ಪ ಹುಲ್ಲುರ, ಮಿರಾಜುದ್ದೀನ್ ಹುಮನಾಬಾದ, ಶರಣಪ್ಪ ದೇವಕ್ಕಿ, ಸಿದ್ದಪ್ಪ ಕಲ್ಲೂರ, ಶ್ರೀಕಾಂತ ಭಂಕೂರ, ಸಿಬ್ಬಂದಿ ವಿಜಯಕುಮಾರ ರಾಠೋಡ ಇದ್ದರು.

'ಸ್ವಚ್ಛ ಕಲಬುರಗಿ ಶಾಶ್ವತ ಸಮೃದ್ಧಿ' ಮ್ಯಾರಥಾನ್

ಕಲಬುರಗಿ: ಸ್ವಚ್ಛ ಭಾರತ ಮಿಷನ್ 2.0ರ ಅಡಿಯಲ್ಲಿ ಸಾರ್ವಜನಿಕರಲ್ಲಿ ಸ್ವಚ್ಛತೆಯ ಬಗ್ಗೆ ಜಾಗೃತಿ ಮೂಡಿಸುವ ಉದ್ದೇಶದಿಂದ ಮಹಾನಗರ ಪಾಲಿಕೆಯು ಇದೇ ಮೇ 10ರಂದು ನಗರದಲ್ಲಿ ಬೃಹತ್ ಮ್ಯಾರಥಾನ್ ಹಾಗೂ ಸೈಕ್ಲೋಥಾನ್ ಆಯೋಜಿಸಿದೆ. ''ಸ್ವಚ್ಛ ಕಲಬುರಗಿ ಶಾಶ್ವತ ಸಮೃದ್ಧಿ'' ಎಂಬ ಆಶಯದೊಂದಿಗೆ ಅಂದು ಬೆ.7 ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗುವುದು. ನಗರದ ಅಂದ ಹೆಚ್ಚಿಸುವಲ್ಲಿ ನಾಗರಿಕರ ಪಾತ್ರ ಹಾಗೂ ಪರಿಸರ ಕಾಳಜಿಯ ಕುರಿತು ಅರಿವು ಮೂಡಿಸುವುದು ಈ ಓಟದ ಗುರಿಯಾಗಿದೆ. ಸಂಚರಿಸುವ ಮಾರ್ಗ: ಜಾಗೃತಿ ಓಟವು ನಗರದ ಜಗತ್ ವೃತ್ತದಿಂದ ಆರಂಭವಾಗಲಿದೆ. ಅನ್ನಪೂರ್ಣ ಕ್ರಾಸ್, ಲಾಹೋಟಿ ಪೆಟ್ರೋಲ್ ಬಂಕ್ ಹಾಗೂ ಮಾಂಗಲ್ಯ ಶೋರೂಮ್ ಮಾರ್ಗವಾಗಿ ಸಂಚರಿಸಿ, ಸರ್ದಾರ್‌ವಲ್ಲಭಭಾಯಿ ಪಟೇಲ್ ವೃತ್ತದಲ್ಲಿ (ತಿಮ್ಮಾಪುರ ವೃತ್ತ) ಸಮಾರೋಪಗೊಳ್ಳಲಿದೆ. ಸಚಿವರು, ಶಾಸಕರು ಭಾಗವಹಿಸಲಿದ್ದಾರೆ. ಜಿಲ್ಲಾಧಿಕಾರಿ, ಪಾಲಿಕೆ ಆಯುಕ್ತರು, ಜಿಲ್ಲಾ ಮಟ್ಟದ ಹಿರಿಯ ಅಧಿಕಾರಿಗಳು ಉಪಸ್ಥಿತರಿರಲಿದ್ದಾರೆ. ಸ್ವಚ್ಛ ಹಾಗೂ ಸುಂದರವಾಗಿಸುವ ನಿಟ್ಟಿನಲ್ಲಿ ಹಮ್ಮಿಕೊಳ್ಳಲಾಗಿರುವ ಈ ಅಭಿಯಾನದಲ್ಲಿ ಶಾಲಾ-ಕಾಲೇಜು ವಿದ್ಯಾರ್ಥಿಗಳು, ವಿವಿಧ ಸಂಘ-ಸಂಸ್ಥೆಗಳ ಪದಾಧಿಕಾರಿಗಳು, ಕ್ರೀಡಾಪಟುಗಳು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸಬೇಕು ಎಂದು ತಿಳಿಸಿದೆ.

ಸಮಾಜಕ್ಕೆ ದೇವದಾಸಿ ಪದ್ಧತಿ ಮಾರಕ: ಪಾಟೀಲ

ಅಫಜಲಪುರ: ದೇವದಾಸಿ ಪದ್ಧತಿಯು ಸಮಾಜಕ್ಕೆ ಮಾರಕವಾದ ರೋಗವಿದ್ದಂತೆ. ದೇವದಾಸಿಯನ್ನಾಗಿ ಮಾಡುವುದು ಕಾನೂನು ಪ್ರಕಾರ ಅಪರಾಧ. ಇಂತಹ ಕೃತ್ಯ ಎಸಗುವವರಿಗೆ ಹಾಗೂ ಭಾಗಿಯಾದವರಿಗೆ 5 ವರ್ಷ ಜೈಲು ಶಿಕ್ಷೆ ಮತ್ತು 5 ರಿಂದ 10 ಸಾವಿರದವರೆಗೆ ದಂಡ ವಿಧಿಸಲಾಗುತ್ತದೆ ಎಂದು ನಿಂಬಾಳ್ ಪಿ.ಎಸ್.ಐ ಇಂದಮ್ಮ ಪಾಟೀಲ ಹೇಳಿದರು. ಮಣ್ಣೂರ ಗ್ರಾಮದ ಯಲ್ಲಮ್ಮಾದೇವಿ ದೇಗುಲ ಆವರಣದಲ್ಲಿ, ದೇವದಾಸಿ ಪುನರ್ವಸತಿ ಯೋಜನೆಯಿಂದ ದೇವದಾಸಿ ಪದ್ಧತಿಯ ದುಷ್ಪರಿಣಾಮ ಬಗ್ಗೆ ಜಾಗೃತಿ ಅಭಿಯಾನಕ್ಕೆ ಚಾಲನೆ ನೀಡಿದರು. ಯೋಜನಾ ಅನುಷ್ಠಾನಾಧಿಕಾರಿ ಬಸವರಾಜ ಆರ್. ನಿಂಬರ್ಗಿಕರ ಮಾತನಾಡಿದರು. 1982ರ ದೇವದಾಸಿ ಸಮರ್ಪಣಾ ನಿಷೇಧ ಕಾಯ್ದೆಯ ಅಡಿಯಲ್ಲಿ ಭಿಕ್ಷೆ ಬೇಡುವುದನ್ನು ಹಾಗೂ ಬೆತ್ತಲೆ ಸೇವೆ ಮಾಡುವುದನ್ನು ತಡೆಯಲು ಧ್ವನಿವರ್ಧಕಗಳ ಮೂಲಕ ವ್ಯಾಪಕ ಪ್ರಚಾರ ನಡೆಸಲಾಯಿತು. ಕರಪತ್ರ, ಹಂಚಿ, ಪೋಸ್ಟರ್‌ಅಂಟಿಸುವ ಮೂಲಕ ಜಾಗೃತಿ ಮೂಡಿಸಲಾಯಿತು. ಮಹೇಶ ಪ್ಯಾಟಿ, ಎ.ಎಸ್.ಐ ರಾಜಶೇಖರ ಮುದಗಲ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಶಾರದಾ ಅವಟೆ, ಮಲ್ಲಿಕಾರ್ಜುನ ದೊಡ್ಡಮನಿ, ನಾಮದೇವ ಗುಡೂರ, ವಾಯ್.ಡಿ ಬಡಿಗೇರ ಇದ್ದರು.



ಕಲಬುರಗಿ ನಗರದ ಅಗ್ನಿಶಾಮಕ ಠಾಣೆಯಲ್ಲಿ 'ಬಸವೇಶ್ವರ ಸಮಾಜ ಸೇವಾ ಬಳಗ' ಮತ್ತು ಅಗ್ನಿಶಾಮಕ ಠಾಣೆಯ ಜಂಟಿ ಆಶ್ರಯದಲ್ಲಿ ನಡೆದ 'ಅಂತಾರಾಷ್ಟ್ರೀಯ ಅಗ್ನಿಶಾಮಕರ ದಿನಾಚರಣೆ'ಯನ್ನು ಪ್ರಮುಖ ಅಗ್ನಿಶಾಮಕ ಅಸ್ಪಕ್ ಹುಸೇನ್ ಉದ್ಘಾಟಿಸಿದರು. ಅಗ್ನಿಶಾಮಕ ದಳದ ಸಿಬ್ಬಂದಿ ಮುಂತಾದವರು ಇದ್ದರು.



ಅಫಜಲಪುರದ ಮಣ್ಣೂರ ಗ್ರಾಮದಲ್ಲಿ, ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ದೇವದಾಸಿ ಪುನರ್ವಸತಿ ಯೋಜನೆಯಿಂದ ಆಯೋಜಿಸಿದ್ದ ಭಕ್ತಾದಿಗಳಿಗೆ ದೇವದಾಸಿ ಪದ್ಧತಿಯ ದುಷ್ಪರಿಣಾಮಗಳ ಬಗ್ಗೆ ಜಾತ್ರಾ ಜಾಗೃತಿ ಅಭಿಯಾನಕ್ಕೆ ನಿಂಬಾಳ್ ಪಿ.ಎಸ್.ಐ ಇಂದಮ್ಮ ಪಾಟೀಲ ಚಾಲನೆ ನೀಡಿದರು.

785 ಮೊಬೈಲ್ ಪತ್ತೆ ಹಚ್ಚಿ ವಾರಸುದಾರರಿಗೆ ಹಸ್ತಾಂತರ

ನಗರ ಪೊಲೀಸ್ ಆಯುಕ್ತ ಡಾ.ಶರಣಪ್ಪ ಎಸ್.ಡಿ.ಮಾಹಿತಿ | ಕಲಬುರಗಿ ನಗರ ಪೊಲೀಸರಿಂದ 2 ತಿಂಗಳ ವಿಶೇಷ ಕಾರ್ಯಾಚರಣೆ

• **ಕನ್ನಡಪ್ರಭ ವಾರ್ತೆ** ಕಲಬುರಗಿ

ನಗರ ಪೊಲೀಸರು ಎರಡು ತಿಂಗಳ ವಿಶೇಷ ಕಾರ್ಯಾಚರಣೆ ನಡೆಸಿ ಸಿಇಐಆರ್ ಪೋರ್ಟಲ್ ಮೂಲಕ ₹1.45 ಕೋಟಿ ಮೌಲ್ಯದ 785 ಮೊಬೈಲ್ ಪತ್ತೆ ಹಚ್ಚಿದ್ದು, ಪತ್ತೆಯಾದ ಮೊಬೈಲ್‌ಗಳನ್ನು ಅವುಗಳ ವಾರಸುದಾರರಿಗೆಹಸ್ತಾಂತರಮಾಡಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಡಾ. ಶರಣಪ್ಪ ಎಸ್.ಡಿ.ತಿಳಿಸಿದರು.

ನಗರದ ಪೊಲೀಸ್ ಆಯುಕ್ತರ ಕಚೇರಿಯಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಲಬುರಗಿ ನಗರ ಪೊಲೀಸ್ ಆಯುಕ್ತಾಲಯ ವ್ಯಾಪ್ತಿಯ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಸಾರ್ವಜನಿಕರು ತಮ್ಮ ಮೊಬೈಲ್ ಕಳೆದುಕೊಂಡ ಬಗ್ಗೆ ಇ-ಲಾಸ್ಟ್ ಮತ್ತು ಸಿಇಐಆರ್‌ಪೋರ್ಟಲ್‌ನಲ್ಲಿ ದೂರು ದಾಖಲಿಸಿದ್ದರು. ಈ ದೂರುಗಳ ಅನ್ವಯ ಕಳವಾದ ಮೊಬೈಲ್‌ಗಳ ಪತ್ತೆಗೆ ನಗರ ಪೊಲೀಸ್‌ಆಯುಕ್ತರಮಾರ್ಗದರ್ಶನದಲ್ಲಿ ಡಿಸಿಪಿಗಳಾದ ಶಾಲೂ, ಪ್ರವೀಣ್ ಹೆಚ್ .ನಾಯಕ್ ಅವರ ನೇತೃತ್ವದಲ್ಲಿ ಎಲ್ಲಾ ಪೊಲೀಸ್ ಠಾಣೆಗಳ ಇನ್ಸ್‌ಪೆಕ್ಟರ್ ಮುಂದಾಳತ್ವದಲ್ಲಿಸಿಇಐಆರ್‌ಪೋರ್ಟಲ್ ಹಾಗೂ ಸಿಇಎನ್ ಪೊಲೀಸ್ ಠಾಣೆಗಳ ಸಿಬ್ಬಂದಿ ಸಹಾಯದಿಂದ ₹1.45 ಕೋಟಿ ಮೌಲ್ಯದ 785 ಮೊಬೈಲ್ ಪತ್ತೆ ಹಚ್ಚಿ ಅವುಗಳನ್ನು ವಾರಸುದಾರರಿಗೆ ಹಸ್ತಾಂತರಿಸಲಾಗಿದೆಎಂದುವಿವರಿಸಿದರು.

ಇಲ್ಲಿಯವರೆಗೆ2,408ಮೊಬೈಲ್‌ಗಳನ್ನು ಪತ್ತೆ ಹಚ್ಚಿ ಅವುಗಳ ವಾರಸುದಾರರಿಗೆ ಹಸ್ತಾಂತರಿಸಲಾಗಿದೆ ಎಂದು ತಿಳಿಸಿದರು.

ಚೌಕ್ ಪೊಲೀಸ್ ಠಾಣೆಯಿಂದ 150, ರೋಜಾ ಪೊಲೀಸ್ ಠಾಣೆಯಿಂದ 131,



1.45 ಕೋಟಿ ಮೌಲ್ಯದ 785 ಮೊಬೈಲ್ ಪತ್ತೆ ಹಚ್ಚಿ ವಾರಸುದಾರರಿಗೆ ಹಸ್ತಾಂತರ.

ಸ್ಟೇಷನ್ ಬಜಾರ್‌ಪೊಲೀಸ್ ಠಾಣೆಯಿಂದ 80, ವಿಶ್ವವಿದ್ಯಾಲಯ ಪೊಲೀಸ್ ಠಾಣೆಯಿಂದ 68, ಅಶೋಕ ನಗರ ಪೊಲೀಸ್ ಠಾಣೆಯಿಂದ 67, ಸಬ್ ಅರ್ಬನ್ ಪೊಲೀಸ್ ಠಾಣೆಯಿಂದ 66, ಸೆನ್ ಪೊಲೀಸ್ ಠಾಣೆಯಿಂದ 59, ಬ್ರಹ್ಮಪೂರ ಪೊಲೀಸ್ ಠಾಣೆಯಿಂದ 54, ಎಂ.ಬಿ.ನಗರಪೊಲೀಸ್‌ಠಾಣೆಯಿಂದ46, ರಾಘವೇಂದ್ರನಗರಪೊಲೀಸ್‌ಠಾಣೆಯಿಂದ 42,ಫರಹತಾಬಾದಪೊಲೀಸ್‌ಠಾಣೆಯಿಂದ 22 ಮೊಬೈಲ್ ಸೇರಿ 785 ಮೊಬೈಲ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ತಿಳಿಸಿದರು.

ನಗರದಲ್ಲಿಕಳ್ಳತನವಾದ/ಕಳೆದುಕೊಂಡ ಮೊಬೈಲ್‌ಗಳ ಪೈಕಿ ದೇಶದ ವಿವಿಧ ರಾಜ್ಯಗಳಲ್ಲಿ ಪತ್ತೆ ಹಚ್ಚಲಾಗಿದ್ದು, ಕರ್ನಾಟಕದಲ್ಲಿ 688, ಮಹಾರಾಷ್ಟ್ರದಲ್ಲಿ 41, ಆಂಧ್ರಪ್ರದೇಶದಲ್ಲಿ 23, ತೆಲಂಗಾಣದಲ್ಲಿ 23, ಬಿಹಾರದಲ್ಲಿ 7, ಉತ್ತರ ಪ್ರದೇಶದಲ್ಲಿ 3 ಮೊಬೈಲ್‌ಗಳನ್ನು, ಕಲಬುರಗಿ ನಗರದಲ್ಲಿ 487, ಜಿಲ್ಲೆಯಲ್ಲಿ 103, ವಿಜಯಪುರ ಜಿಲ್ಲೆಯಲ್ಲಿ 20, ಬೀದರ್‌ಜಿಲ್ಲೆಯಲ್ಲಿ 18, ಬೆಂಗಳೂರು ಜಿಲ್ಲೆಯಲ್ಲಿ 17, ಯಾದಗಿರಿ ಜಿಲ್ಲೆಯಲ್ಲಿ 16, ರಾಯಚೂರು ಜಿಲ್ಲೆಯಲ್ಲಿ 12, ವಿಜಯನಗರ ಜಿಲ್ಲೆಯಲ್ಲಿ 8 ಹಾಗೂ ಬಳ್ಳಾರಿ ಜಿಲ್ಲೆಯಲ್ಲಿ 7 ಮೊಬೈಲ್ ಪತ್ತೆ ಹಚ್ಚಲಾಗಿದೆ ಎಂದು ತಿಳಿಸಿದರು.

ಸಾರ್ವಜನಿಕರು ಮೊಬೈಲ್‌ಗಳಿಗೆ ಸ್ಟ್ರಾಂಗ್ ಪಾಸ್‌ವರ್ಡ್‌ಗಳನ್ನು ಅಳವಡಿಸಬೇಕು, ಮೊಬೈಲ್‌ಗಳಲ್ಲಿಫೈಂಡ್ ಮೈ ಡಿವೈಸ್ ಸೆಟ್ಟಿಂಗ್ಸ್‌ಗಳನ್ನು ಸಕ್ರಿಯಗೊಳಿಸಬೇಕು, ಮೊಬೈಲ್‌ಗಳಿಗೆ ಥಂಬ್‌ಲಾಕ್ ಅಳವಡಿಸಬೇಕು, ಮೊಬೈಲ್ ಕಳೆದುಕೊಂಡಾಗಕಡ್ಡಾಯವಾಗಿಇ-ಲಾಸ್ಟ್ ಮತ್ತು ಸಿಇಐಆರ್‌ಪೋರ್ಟಲ್‌ಗಳಲ್ಲಿ ದೂರು ದಾಖಲಿಸಬೇಕು ಎಂದು ಅವರು ಮನವಿ ಮಾಡಿದರು.

ಡಿಸಿಪಿಗಳಾದಶಾಲೂ, ಪ್ರವೀಣ್ ಹೆಚ್ .ನಾಯಕ್, ವಿವಿಧ ಪೊಲೀಸ್ ಠಾಣೆಗಳ ಇನ್ಸ್‌ಪೆಕ್ಟರ್‌ಗಳು, ಸಿಇಐಆರ್‌ಪೋರ್ಟಲ್ ಹಾಗೂ ಸಿಇಎನ್ ಪೊಲೀಸ್ ಠಾಣೆಗಳ ಸಿಬ್ಬಂದಿ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಕನ್ನಡದ ಭಾಷೆ, ನೆಲ, ಜಲ ಸಂರಕ್ಷಣೆ ಕಸಾಪ ಉದ್ದೇಶ

ಕಸಾಪ 112ನೇ ಸಂಸ್ಥಾಪನಾ ದಿನಾಚರಣೆ | ವಿಶೇಷ ಉಪನ್ಯಾಸ ಪರಿಷತ್ತಿನ ಹಿರಿಯ ಸದಸ್ಯರಿಗೆ ಸನ್ಮಾನ

• **ಕನ್ನಡಪ್ರಭ ವಾರ್ತೆ** ಚಿತ್ತಾಪುರ

ನೆಲ, ಜಲ, ಭಾಷೆ ಸಂರಕ್ಷಣೆ ಮಾಡುವ ಉದ್ದೇಶದಿಂದ ಕನ್ನಡ ಸಾಹಿತ್ಯ ಪರಿಷತ್ತು ಜನ್ಮ ತಾಳಿದೆ ಎಂದು ಸರ್ಕಾರಿ ಬಾಲಕರ ಪ್ರೌಢ ಶಾಲೆ ಮುಖ್ಯಗುರು ಕಾಶಿರಾಯ ಕಲಾಲ ಹೇಳಿದರು.

ಪಟ್ಟಣದಸ್ವಾಮಿವಿವೇಕಾನಂದಶಿಕ್ಷಣ ಸಂಸ್ಥೆಯ ಸಂಚಾಲಿತ ವಿದ್ಯಾನಿಕೇತನ ಪ್ರೌಢಶಾಲೆಯಸಭಾಂಗಣದಲ್ಲಿತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ವತಿಯಿಂದ ಏರ್ಪಡಿಸಿದ್ದ ಕನ್ನಡ ಸಾಹಿತ್ಯ ಪರಿಷತ್ತಿನ 112ನೇಸಂಸ್ಥಾಪನಾದಿನಾಚರಣೆ,ವಿಶೇಷ ಉಪನ್ಯಾಸ,ಪರಿಷತ್ತಿನಹಿರಿಯಸದಸ್ಯರಿಗೆ ಗೌರವ ಸನ್ಮಾನ ಕಾರ್ಯಕ್ರಮದಲ್ಲಿ ಉಪನ್ಯಾಸನೀಡಿಮಾತನಾಡಿದಅವರು, ಕನ್ನಡ ಭಾಷೆ ಸರಳ ಭಾಷೆವಾಗಿದೆ. ಕನ್ನಡ ಭಾಷೆ ಪ್ರತಿಯೊಬ್ಬರ ಮನೆ ಹೆಬ್ಬಾಗಿಲು ಇದ್ದಂತೆ. ಎಲ್ಲರೂ ಕನ್ನಡ ಭಾಷೆಯ ಅಭಿಮಾನ, ಸ್ವಾಭಿಮಾನ ಬೆಳೆಸಿಕೊಳ್ಳಬೇಕು. ಬೇರೆ ಭಾಷೆಗಳನ್ನು ದ್ವೇಷಿಸಬಾರದು ಎಂದು ಸಲಹೆ ನೀಡಿದರು.



ಚಿತ್ತಾಪುರ ತಾಲೂಕಿನಲ್ಲಿ ಕಸಾಪ 112ನೇ ಸಂಸ್ಥಾಪನಾ ದಿನಾಚರಣೆ, ವಿಶೇಷ ಉಪನ್ಯಾಸ, ಪರಿಷತ್ತಿನ ಹಿರಿಯ ಸದಸ್ಯರಿಗೆ ಸನ್ಮಾನಿಸಲಾಯಿತು.

ಕನ್ನಡಸಾಹಿತ್ಯ ಪರಿಷತ್ತು ಹೆಮ್ಮರವಾಗಿ ರಾಜ್ಯದಲ್ಲಿ ಬೆಳೆದು ಕರ್ನಾಟಕದ ಆರು ಕೋಟಿಕನ್ನಡಿಗರಪ್ರಾತಿನಿಧಿಕಸಂಸ್ಥೆವಾಗಿದೆ ಎಂದು ಹೇಳಿದರು.

ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಭೀಮಣ್ಣ ಸಾಲಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಕನ್ನಡಭಾಷೆವಿಶ್ವದಲ್ಲೇಶ್ರೇಷ್ಠವಾದ ಭಾಷೆಯಾಗಿದೆ. ಎಲ್ಲರಲ್ಲೂ ಅರಿವು ಮೂಡಿಸುವ ಕೆಲಸ ಕನ್ನಡ ಸಾಹಿತ್ಯ ಪರಿಷತ್ತು ಮಾಡುತ್ತಿದೆ. ಮಾತೃಭಾಷೆ ಕನ್ನಡಕ್ಕೆ ಹೆಚ್ಚಿನ ಆದ್ಯತೆ ಕೊಡಬೇಕು. ಉಳಿದ ಇಂಗ್ಲಿಷ್, ಹಿಂದಿ ಜತೆಗೆ ಇರಲಿ. ಕನ್ನಡಕಟ್ಟುವ, ಬೆಳೆಸುವಮನೋಭಾವನೆ ಬೆಳೆಸಿಕೊಳ್ಳಬೇಕೆಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಕಸಾಪ ತಾಲೂಕು ಅಧ್ಯಕ್ಷ ವೀರಭದ್ರಪ್ಪ ಗುರುಮಿಠಕಲ, ಬಿಜೆಪಿತಾಲೂಕುಅಧ್ಯಕ್ಷರವೀಂದ್ರಸಜ್ಜನಶೆಟ್ಟಿ, ಪುರಸಭೆ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಜಗದೀಶ ಚವ್ಹಾಣ, ತಾಲೂಕು ದೈಹಿಕ ಶಿಕ್ಷಣ ಪರಿವೀಕ್ಷಕಶಿವಶರಣಪ್ಪಮಠಾಳೆಮಾತನಾಡಿದರು. ಕಸಾಪ ಹಿರಿಯ ಅಜೀವ ಸದಸ್ಯರಾದ ರಾಜಶೇಖರ ಗೋಣಗಿ, ಸಂಜಯ ಕೋಟ್ರಕಿ ಅವರಿಗೆ ಸನ್ಮಾನಿಸಲಾಯಿತು.

ಕಸಾಪ ತಾಲೂಕು ಗೌರವಾಧ್ಯಕ್ಷ ವೀರೇಂದ್ರಕುಮಾರ ಕೊಲ್ಲೂರ, ಮುಖ್ಯಗುರು ರಮೇಶ ಯಾದವಾಡ, ಪ್ರಮುಖರಾದಬಸವರಾಜಬೊಮ್ಮನಳ್ಳಿ,ಮಹೇಶ, ಶ್ರೀದೇವಿ,ಗೌರವಕಾರ್ಯದರ್ಶಿನರಸಪ್ಪ ಚಿನ್ನಕಟ್ಟಿ ಪ್ರಾರ್ಥನೆ ಗೀತೆ ಹಾಡಿದರು. ಲಲಿತಮ್ಮ ರೇಷ್ಮಿ ಸ್ವಾಗತಿಸಿದರು. ಬಸಪ್ಪ ಯಂಬತ್ನಾಳ ನಿರೂಪಣೆ ಮಾಡಿದರು. ಅನಿಲಕುಮಾರ ಸನ್ಮುಖ ವಂದಿಸಿದರು.

ಸಿಯುಕೆಯಲ್ಲಿ ಅಂತರರಾಷ್ಟ್ರೀಯ ಸಮ್ಮೇಳನದ ಕರಪತ್ರ ಬಿಡುಗಡೆ



• **ಕನ್ನಡಪ್ರಭ ವಾರ್ತೆ** ಕಲಬುರಗಿ

ಕೇಂದ್ರೀಯ ವಿವಿಯಲ್ಲಿ ದೇವಾಲಯಗಳ ಆರ್ಥಿಕತೆ, ಪ್ರವಾಸೋದ್ಯಮ ಮತ್ತು ಸಾರ್ವಜನಿಕ ನೀತಿ ಕುರಿತು ಆ.5ರಿಂದ 7ರವರೆಗೆ ನಡೆವ ಅಂತರ ರಾಷ್ಟ್ರೀಯ ಸಮ್ಮೇಳನದ ಕರಪತ್ರವನ್ನು ಸಿಯುಕೆ ಪ್ರೊ. ಬಟ್ಟು, ಕುಲಸಚಿವ ಆರ್.ಆರ್. ಬಿರಾದಾರ ಅಧ್ಯಾಪಕರಾದ ಪಾಂಡುರಂಗ ವಿ. ಡಾ.ಜಿ. ಮಹೇಂದ್ರ ರೆಡ್ಡಿ, ಪುಷ್ಪ ಸವದತ್ತಿ, ಡಾ.ಎಸ್.ಲಿಂಗಮೂರ್ತಿ, ದೇವರಾಜ ಬಿಡುಗಡೆ ಮಾಡಿದರು.

ಕೇಂದ್ರೀಯ ವಿವಿ, ಕಲಬುರಗಿ ಮತ್ತು ಭಾರತೀಯ ಸಾಮಾಜಿಕ ವಿಜ್ಞಾನ ಸಂಶೋಧನಾ ಮಂಡಳಿ, ನವದೆಹಲಿ ಸಂಯುಕ್ತಾಶ್ರಯದಲ್ಲಿ 'ಅಂತರರಾಷ್ಟ್ರೀಯ ಸಮ್ಮೇಳನವು ಸಿಯುಕೆನಲ್ಲಿ ನಡೆಯಲಿದೆ. ದೇಗುಲ ಆರ್ಥಿಕ, ಸಾಮಾಜಿಕ ಹಾಗೂ ಸಾರ್ವಜನಿಕ ನೀತಿ ಸಂಬಂಧಿತ ಆಯಾಮಗಳ ಕುರಿತು ಪ್ರಬಂಧ ಮಂಡನೆ ನಡೆಯಲಿವೆ. ಅಂತರರಾಷ್ಟ್ರೀಯ ಮಟ್ಟದ ಶಿಕ್ಷಣ ತಜ್ಞರು, ಸಂಶೋಧಕರು, ಭಾಗವಹಿಸಲಿದ್ದಾರೆ. ದೇವಾಲಯಗಳು ಮತ್ತು ಪ್ರಾದೇಶಿಕ ಅಭಿವೃದ್ಧಿ, ಜೀವನೋಪಾಯ ಸೃಷ್ಟಿ, ಸಾಂಸ್ಕೃತಿಕ ಸಂರಕ್ಷಣೆ ಮತ್ತು ಸ್ಥಿರ ಪ್ರವಾಸೋದ್ಯಮಕ್ಕೆ ನೀಡುವ ಕೊಡುಗೆಯನ್ನು ಅನ್ವೇಷಿಸುವುದು ಈ ಸಮ್ಮೇಳನದ ಮುಖ್ಯ ಉದ್ದೇಶವಾಗಿದೆ. ಆಸಕ್ತರು ದೇವಾಲಯ ಆರ್ಥಿಕತೆ ಮತ್ತು ಅದರ ಆರ್ಥಿಕ ಪರಿಣಾಮ, ಆಡಳಿತ ಮತ್ತು ಕಾನೂನು ಚೌಕಟ್ಟುಗಳು, ಸ್ಥಿರ ಪ್ರವಾಸೋದ್ಯಮ, ಪರಂಪರೆ ಮತ್ತು ಸಾಂಸ್ಕೃತಿಕ ಸಂಪತ್ತು, ದೇವಾಲಯ ನಿರ್ವಹಣೆಯಲ್ಲಿ ಡಿಜಿಟಲ್ ನವೀಕರಣ, ಕೃತಕ ಬುದ್ಧಿಮತ್ತೆ ಕುರಿತು ಪ್ರಬಂಧ ಮಂಡನೆ ಮಾಡಬಹುದಾಗಿದೆ. ಸಂಕ್ಷಿಪ್ತ ಪ್ರಬಂಧ ಸಲ್ಲಿಕೆಗೆ ಜೂನ್ 15, ಕೊನೆಯ ದಿನ. ಹೆಚ್ಚಿನ ಮಾಹಿತಿಗಾಗಿ ಡಾ. ಜಿ. ಮಹೇಂದ್ರ ರೆಡ್ಡಿ: 9666851851 ಮತ್ತು ಡಾ.ಎಸ್. ಲಿಂಗಮೂರ್ತಿ ಅವರನ್ನು 9014030809 ಸಂಪರ್ಕಿಸಬಹುದಾಗಿದೆ.

ಅಂಬೇಡ್ಕರ್ ವಸತಿ ಶಾಲೆಗೆ ಸ್ವಂತ ಕಟ್ಟಡ ಮಂಜೂರು

• **ಕನ್ನಡಪ್ರಭ ವಾರ್ತೆ** ಚಿಂಚೋಳಿ

ಕುಂಚಾವರಂಅರಣ್ಯಪ್ರದೇಶದತಾಂಡಾ, ಗ್ರಾಮಗಳಲ್ಲಿ ಬಡ ಮಕ್ಕಳು ಶಿಕ್ಷಣದಿಂದ ವಂಚಿತರಾಗದಿರಲು ಸರ್ಕಾರ ಪ್ರಾರಂಭಿಸಿದ ಅಂಬೇಡ್ಕರ್‌ಆಂಗ್ಲ ಮಾಧ್ಯಮ ವಸತಿಶಾಲೆಗೆಇದೀಗಸ್ವಂತಕಟ್ಟಡಮಂಜೂರಿಯಾಗಿದ್ದು, ಕಟ್ಟಡ ಕಾಮಗಾರಿ ಚುರುಕಿನಿಂದ ನಡೆಯುತ್ತಿದೆ.

ಮೀಸಲು ಚಿಂಚೋಳಿ ಮತಕ್ಷೇತ್ರದ 2015-16ನೇ ಸಾಲಿನಲ್ಲಿ ಕಾಂಗ್ರೆಸ್ ಶಾಸಕರಾಗಿದ್ದ ಡಾ.ಉಮೇಶ ಜಾಧವ್ ಸಿದ್ದರಾಮಯ್ಯ ಸರ್ಕಾರದಲ್ಲಿ ಅಂಬೇಡ್ಕರ್ ಆಂಗ್ಲಮಾಧ್ಯಮವಸತಿಶಾಲೆಮಂಜೂರಿಮಾಡಿಸಿದ್ದರು. ಸ್ವಂತ ಜಾಗ ಇಲ್ಲದ ಕಾರಣ ಸರ್ಕಾರಿ ಶಾಲೆಯಲ್ಲೇ ಪ್ರಾರಂಭಿಸಲಾಗಿತ್ತು. ಈಗ ಕುಂಚಾವರಂ- ತಾಂಡೂರ ರಾಜ್ಯ ಹೆದ್ದಾರಿ ಪಕ್ಕದಲ್ಲಿ ಸರ್ಕಾರಿ ಜಮೀನು ಸರ್ವೇ ನಂ.83ರಲ್ಲಿ 9.26ಎಕರೆ ಪ್ರದೇಶದಲ್ಲಿ ವಿಶಾಲ ಕಟ್ಟಡ



ನಿರ್ಮಾಣ ಕಾಮಗಾರಿ ಪ್ರಾರಂಭಿಸಲು ಸರ್ಕಾರ 2020-21ನೇಸಾಲಿನಲ್ಲಿ28ಕೋಟಿಮಂಜೂರಿಮಾಡಿದೆ. 6ರಿಂದ 10ನೇ ತರಗತಿಯಲ್ಲಿ ವಿದ್ಯಾಭ್ಯಾಸ ಮಾಡುವ 125 ಬಾಲಕಿಯರು, 125ಬಾಲಕರು ಸೇರಿ ಒಟ್ಟು 250 ವಿದ್ಯಾರ್ಥಿಗಳಿಗೆ ಅನುಕೂಲವಾಗಲಿದೆ.

ಶೈಕ್ಷಣಿಕ ಪ್ರಗತಿ: ಗಡಿಪ್ರದೇಶದಲ್ಲಿ ಅಂಬೇಡ್ಕರ ವಸತಿ ಶಾಲೆಕಟ್ಟಡನಿರ್ಮಾಣಕ್ಕಾಗಿಸಾಕಷ್ಟುಕಾನೂನುತೊಂದರೆ ಇದ್ದರೂ ಹೋರಾಟ ಮಾಡಿ ಮಂಜೂರಿಗೊಳಿಸಲಾಗಿದೆ. ಶೈಕ್ಷಣಿಕಪ್ರಗತಿಕಂಡುಬರುತ್ತಿದೆಎಂದುಜಿಲ್ಲಾಗ್ಯಾರಂಟಿ ಯೋಜನೆ ಉಪಾಧ್ಯಕ್ಷ ನರಸಿಂಹಲು ಕುಂಬಾರ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಶಾಸಕರಹರ್ಷ: ಕುಂಚಾವರಂಗಡಿಪ್ರದೇಶದಲ್ಲಿಶೈಕ್ಷಣಿಕ ಪ್ರಗತಿಗೆ ಶಾಸಕ ಅವಿನಾಶ ಜಾಧವ್, ಮಾಜಿ ಸಂಸದ ಉಮೇಶಜಾಧವ್‌ಇಚ್ಛಾಶಕ್ತಿಯಿಂದಗಡಿಪ್ರದೇಶದಬಡ ಮಕ್ಕಳಿಗೆ ಶಿಕ್ಷಣ ಸಿಗುತ್ತಿದೆ ಎಂದು ಬಿಜೆಪಿ ಮುಖಂಡ ಅಶೋಕ ಮಗದಂಪೂರ ಹರ್ಷ ವ್ಯಕ್ತಪಡಿಸಿದ್ದಾರೆ. ಕುಂಚಾವರಂ ಗಡಿಪ್ರದೇಶದ ಹೆಣ್ಣು ಮಕ್ಕಳಿಗೆ ಶಿಕ್ಷಣ ಸಿಗಬೇಕೆಂದು ಶಾಸಕರ, ಸಂಸದರ ಗಮನಕ್ಕೆ ತಂದಿದ್ದೆ. ಅಂಬೇಡ್ಕರ್ ವಸತಿ ಶಾಲೆಯಿಂದ ಹೆಣ್ಣು ಮಕ್ಕಳಿಗೆ ವರದಾನವಾಗಲಿದೆ ಎಂದು ಗ್ರಾಪಂ ಮಾಜಿ ಅಧ್ಯಕ್ಷೆ ಅನುಸೂಜಮ್ಮ ಗೊಲ್ಲ ಹರ್ಷ ವ್ಯಕ್ತಪಡಿಸಿದ್ದಾರೆ.

ಮನವಿ ಸಲ್ಲಿಕೆ | ರೈತರು, ಕೃಷಿ ಕಾರ್ಮಿಕರ ಹಕ್ಕುಗಳಿಗಾಗಿ ಸಿಎಂಗೆ ಮನವಿ | 43 ದಿನಗಳ ಧರಣಿ ಸತ್ಯಾಗ್ರಹದಲ್ಲಿ ಬೇಡಿಕೆ ಈಡೇರಿಕೆಗೆ ಒತ್ತಾಯ

ಕೃಷಿ, ಕೂಲಿ ಕಾರ್ಮಿಕರ ಪರ ಕಿಸಾನ್ ಸಭಾ ಪ್ರತಿಭಟನೆ

• **ಕನ್ನಡಪ್ರಭ ವಾರ್ತೆ** ಆಳಂದ

ಭಾರತೀಯಖೇತ್‌ಮಜ್ದೂರ್‌ಯೂನಿಯನ್ ಮತ್ತುಕಿಸಾನ್‌ಸಭಾಸಂಘಟನೆಗಳನೇತೃತ್ವದಲ್ಲಿ ಆಳಂದ ತಾಲೂಕು ಆಡಳಿತ ಸೌಧದ ಮುಂದೆ ಬೃಹತ್ ಪ್ರತಿಭಟನೆ ನಡೆಯಿತು.

ರೈತರು ಮತ್ತು ಕೃಷಿ ಕೂಲಿ ಕಾರ್ಮಿಕರ ಪರವಾಗಿ ಹಮ್ಮಿಕೊಳ್ಳಲಾದ ನಿರಂತರ ಧರಣಿ ಸತ್ಯಾಗ್ರಹವು ಇಂದಿಗೆ 43 ದಿನ ಪೂರೈಸಿದ ಹಿನ್ನೆಲೆ, ಪ್ರತಿಭಟನಾಕಾರರು ತಹಸೀಲ್ದಾರ್ ಅಣ್ಣಾರಾವ್ ಪಾಟೀಲ್ ಅವರ ಮೂಲಕ ರಾಜ್ಯದಮುಖ್ಯಮಂತ್ರಿಗಳಿಗೆತಮ್ಮಪ್ರಮುಖ ಬೇಡಿಕೆಗಳ ಮನವಿಯನ್ನು ಸಲ್ಲಿಸಿದರು.

ಪ್ರವಾಸಿ ಮಂದಿರದ ಮುಂದೆ ಕಿಸಾನ್ ಸಭಾ ಹಲವಾರು ರೈತ ಪರ ಬೇಡಿಕೆಗಳಿಗಾಗಿ ನಿರಂತರ ಧರಣಿ ನಡೆಸುತ್ತ ಬಂದಿದ್ದು, ಅದರ ಮಧ್ಯೆ ಇಂದು ತಾಲೂಕು ಕಚೇರಿ ಮುಂದೆ ಬಲವಾದ ಪ್ರತಿಭಟನೆ ನಡೆಸಿ ತಮ್ಮ ಬೇಡಿಕೆಗಳನ್ನು ಒತ್ತಾಯಿಸಲಾಯಿತು. ರೈತರು ಮತ್ತು ಕೃಷಿಕಾರ್ಮಿಕರುಈಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.



ಆಳಂದದ ಪ್ರವಾಸಿ ಮಂದಿರ ಮುಂದೆ ಕಿಸಾನಸಭಾ ಅನಿರ್ದಿಷ್ಟಾವಧಿ ಧರಣಿ ನಡುವೆ ಆಡಳಿತಸೌಧ ಮುಂದೆ ಕಿಸಾನಸಭಾ ಪ್ರತಿಭಟನೆ ನಡೆಸಿ ತಹಸೀಲ್ದಾರ ಅಣ್ಣಾರಾವ್ ಪಾಟೀಲಗೆ ಮನವಿ ಸಲ್ಲಿಸಿದರು.

ಖಾಸಗಿ ಲೇವಾದೇವಿ: ಕ್ಯಾನ್ಸರ್‌ಮತ್ತು ಎಚ್ .ಐ.ವಿ.ಗಿಂತಲೂ ಭೀಕರ ಸಾಮಾಜಿಕ ಸಮಸ್ಯೆಯಾಗಿ ಇಂದಿನ ಪ್ರತಿಭಟನೆಯ 11 ಬೇಡಿಕೆಗಳ ಪೈಕಿ ಖಾಸಗಿ ಲೇವಾದೇವಿ ವಿಷಯವು ಅತ್ಯಂತ ಮಹತ್ವದ ಅಂಶವಾಗಿ ಮುನ್ನೆಲೆಗೆಬಂದಿದ್ದು, ಇದರಬಗ್ಗೆತಹಸೀಲ್ದಾರ ಅಣ್ಣಾರಾವ್ ಪಾಟೀಲ ಅವರ ಅಧ್ಯಕ್ಷತೆಯಲ್ಲಿ ವಿಶೇಷ ಸಭೆ ನಡೆಸಲಾಯಿತು.

ಸಂಘಟನೆಯ ಮುಖಂಡರು ಮಾತನಾಡುತ್ತ, 'ಖಾಸಗಿ ಲೇವಾದೇವಿ ವ್ಯವಹಾರಗಳು ಕ್ಯಾನ್ಸರ್‌ಮತ್ತು ಎಚ್ .ಐ.ವಿ.ಗಿಂತಲೂ ಹೆಚ್ಚು ಭೀಕರವಾದ ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳನ್ನು ಸೃಷ್ಟಿಸಿವೆ' ಎಂದು ಆಕ್ರೋಶವ್ಯಕ್ತಪಡಿಸಿದರು.

ಆಳಂದ ತಾಲೂಕಿನಲ್ಲಿ ನೋಂದಾಯಿತ ಮತ್ತು ನೋಂದಾಯಿಸದ ಲೇವಾದೇವಿ ಸಂಸ್ಥೆಗಳಸಂಖ್ಯೆಗಣನೀಯವಾಗಿಹೆಚ್ಚಾಗಿದ್ದು, ಲೇವಾದೇವಿಮಾಡುತ್ತಿರುವತಪ್ಪಿತಸ್ಥರವಿರುದ್ಧ ಕಾನೂನುಕ್ರಮಕೈಗೊಳ್ಳಬೇಕೆಂದುಕಿಸಾನಸಭಾ ರಾಜ್ಯ ಕಾರ್ಯಾಧ್ಯಕ್ಷ ಮೌಲಾ ಮುಲ್ಲಾ ಅವರು ಒತ್ತಾಯಿಸಿದರು. ಭೂರಹಿತ ಕೃಷಿ ಕೂಲಿ ಕಾರ್ಮಿಕರಿಗೆ ಸ್ವಯಂ ಉದ್ಯೋಗ ಮತ್ತು ಆಶ್ರಯ ಒದಗಿಸುವಂತೆ ಆಗ್ರಹಿಸಿದರು.

ಭೂರಹಿತ ಕೃಷಿ ಕೂಲಿ ಕಾರ್ಮಿಕರು ನಿರುದ್ಯೋಗಿಗಳಾಗಿದ್ದು, ಅವರಿಗೆ ಸ್ವಯಂ ಉದ್ಯೋಗನಿರ್ಮಿಸಿಕೊಡಲುಸರ್ಕಾರತ್ವರಿತ ಕ್ರಮ ತೆಗೆದುಕೊಳ್ಳಬೇಕೆಂದು ಪ್ರತಿಭಟನಾಕಾರರು ಒತ್ತಾಯಿಸಿದರು. ಅದರಲ್ಲಿ ಮುಖ್ಯವಾಗಿ: ಹೈನುಗಾರಿಕೆ, ಕುರಿ ಮತ್ತು ಕೋಳಿ ಸಾಕಾಣಿಕೆಘಟಕಸ್ಥಾಪನೆಗೆಸರ್ಕಾರಿಬ್ಯಾಂಕ್‌ಗಳಿಂದ ರಿಯಾಯಿತಿ ದರದಲ್ಲಿಆರ್ಥಿಕನೆರವು ನೀಡಬೇಕು. ಅಗತ್ಯ ಇರುವವರಿಗೆ ಸರ್ಕಾರಿ ಗ್ಯಾರಂಟಿ ಜಾಗದಲ್ಲಿ ನಿವೇಶನ ಮತ್ತು ಮನೆ ನಿರ್ಮಿಸಿ ಕೊಡಬೇಕು. ಕೃಷಿಗೆ ನೀರು, ಕುಡಿವ ನೀರಿಗಾಗಿ ಅಂತರ್ಜಲ ಯೋಜನೆ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಕೃಷಿ ಮತ್ತು ಕುಡಿವ ನೀರಿಗಾಗಿ ಹಣಮಂತರಾವ್ ಸಮಿತಿಯ ಮಾರ್ಗದರ್ಶನದ ಪ್ರಕಾರ ತಾಲೂಕಿನಾದ್ಯಂತ ಅಂತರ್ಜಲ ಸಂಪರ್ಕ ಯೋಜನೆ ಕೈಗೊಳ್ಳಬೇಕು.

ಈ ಯೋಜನೆ ಅನುಷ್ಠಾನದಿಂದ ಕೃಷಿ ನೀರಾವರಿ, ಕುಡಿವ ನೀರಿನ ಸಮಸ್ಯೆ ಮತ್ತು ನಿರುದ್ಯೋಗ ಮೂರು ಸಮಸ್ಯೆಗಳನ್ನು ಒಂದೇ ಬಾರಿನಿವಾರಿಸಲುಸಾಧ್ಯಎಂದುಮುಖಂಡರು ಜೊತೆಗೆ ಈ ಕಾಮಗಾರಿಯನ್ನು ಮನರೇಗಾ ಅಡಿನಿರಂತರನಡೆಸಿಕೊಂಡುಹೋಗಬೇಕೆಂದು ಕಿಸಾನ್ ಸಭಾ ರಾಜ್ಯ ಕಾರ್ಯಾಧ್ಯಕ್ಷ ಮೌಲಾ ಮುಲ್ಲಾ, ತಾಲೂಕಾಧ್ಯಕ್ಷಧರ್ಮಣ್ಣಪೂಜಾರಿ, ಉಪಾಧ್ಯಕ್ಷ ಮಹಾದೇವ ಮಂಟಗಿ, ಗ್ರಾ.ಪಂ ಮಾಜಿ ಅಧ್ಯಕ್ಷ ಮೈಲಾರಿ ಜೋಗೆ, ನ್ಯಾ. ಪಂಡಿತ್ ಸಲ್ಗರ್, ಕಮಲೇಶ ಅವಟೆ, ಮಹಾದೇವ ಜಿಡ್ಡೆ, ಕಬೀರಾ ಬೇಗಂ, ರಮೇಶ ಹಾತ್ತಿಗಳೆ, ಅಶ್ರಫ್ ಮುಲ್ಲಾ, ಬಾಷಾ ಯಳಸಂಗಿ, ರತನಲಾಲ ಕಲಶೆಟ್ಟಿ, ಶರಣಗೌಡ ಪಾಟೀಲ ಒತ್ತಾಯಿಸಿದರು.

ಮೇ 9ರಂದು ಚಿತ್ತಾಪುರದ ಹಜರತ್ ಚಿತಾಶಹವಲಿ ಜಾತ್ರೆ

ಹಿಂದು-ಮುಸ್ಲಿಂ ಭಾವೈಕ್ಯತೆಯ ಚಿತಾಶಹವಲಿ ಉರುಸ್



ಚಿತ್ತಾಪುರ ಪಟ್ಟಣದ ಐತಿಹಾಸಿಕ ಸೂಫಿ ಸಂತ ಹಜರತ್ ಚಿತ್ತಾಶಹವಲಿ ದರ್ಗಾದ ಚಿತ್ರ.

ಚಿತ್ತಾಪುರ: ಕೋಮುಸೌಹಾರ್ದತೆಯಪ್ರತೀಕಹಿಂದು-ಮುಸ್ಲಿಂಆರಾಧ್ಯದೈವವಾಗಿರುವ ಐತಿಹಾಸಿಕ ಖ್ಯಾತ ಸೂಫಿ ಸಂತ ಹಜರತ್ ಚಿತಾಶಹವಲಿ ದರ್ಗಾದ 799 ನೇ ಉರುಸ್ ಶನಿವಾರ ಆರಂಭವಾಗಲಿದೆ. ಹೊರವಲಯದಲ್ಲಿರುವ ಬಾಹರಪೇಠದ ದರ್ಗಾಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದ್ದು, ಮೇ 9ರಂದು ಬೆಳಿಗ್ಗೆ 10ಕ್ಕೆ ಹಿಂದೂ ಭಕ್ತ ನಾಗಣ್ಣ ಮಾಸ್ತರ ಬಳ್ಳಾ ಅವರ ಮನೆಯಲ್ಲಿ ಈಗಲೂ ಸಾಮೂಹಿಕ ಪ್ರಾರ್ಥನೆ (ಫತೇಹ), ಸರ್ವ ಧರ್ಮಗಳ ಮೌಲ್ವಿಗಳು ಪಾಲ್ಗೊಂಡು ಗಲಾಫ್ ಮೆರವಣಿಗೆ ಹೊರಡುವುದು. ನಾಗಣ್ಣ ಮಾಸ್ತರಬಳ್ಳಾಮನೆಯಿಂದ ರಾತ್ರಿ 10 ಗಂಟೆಗೆ ಗಲಾಫ್ ಮೆರವಣಿಗೆ ಹೊರಟು ದರ್ಗಾದ ಮುತ್ತವಲಿ ಸೈಯದ ಮಿನಾಜೊದ್ದಿನ್ ಚಿಸ್ತಿ ಮನೆ ತಲುಪುತ್ತದೆ. ಅಲ್ಲಿಂದ ಶ್ರೀಗಂಧದ ಮೆರಣೆಗೆಯು ಭುವನೇಶ್ವರಿ ವೃತ್ತ, ಜನತಾ ಚೌಕ್, ಕಿರಾಣಿ ಬಜಾರ ಕಪಡಾ ಬಜಾರ ಮೂಲಕ ಚಿತಾಶಹವಲಿ ದರ್ಗಾಕ್ಕೆ ಬೆಳಗಿನ ಜಾವ ತಲುಪುತ್ತದೆ.

ಮೆರವಣಿಗೆಯಲ್ಲಿ ಒಂಟೆಗಳು, ಗಲಾಫ ಹೊತ್ತ ಕುದುರೆ, ಸಂತರ ಹಾಡುಗಳು, ಯುವಕರ ಸಾಹಸ ಕ್ರೀಡೆಗಳಾದ ಮಲ್ಲಗಂಭ, ಕಟ್ಟಿಗೆಯಾಟ, ಸಂಗೀತ ವಾದ್ಯಗಳು ರಾತ್ರಿಯಿಡಿ ನೋಡುಗರ ಗಮನ ಸೆಳೆಯುತ್ತವೆ. ಮರುದಿನ ಬೆಳಗಿನ ಜಾವ 5 ಗಂಟೆಗೆ ದರ್ಗಾದಲ್ಲಿ ಶ್ರೀಗಂಧಲೇಪನ್, ಗಲಾಫ್ ಹೊದಿಕೆ ಹಾಗೂ ತಬುರಕ ವಿತರಣೆ ನಡೆಯುತ್ತದೆ. ಸಾಯಂಕಾಲ ದರ್ಗಾ ಆವರಣದಲ್ಲಿ ದೀಪೋತ್ಸವ ನಡೆಯಲಿದೆ. ರಾತ್ರಿ 9.30ಕ್ಕೆ ಖ್ಯಾತ ಗಾಯಕರಿಂದ ಖವ್ವಾಲಿ ಕಾರ್ಯಕ್ರಮ, ಗೀಗಿ ಪದಗಳು ನಡೆಯಲಿವೆ. ಹಿಂದೂ ಮುಸ್ಲಿಂಮರು ಉರುಸ್‌ಗೆ ಮೆರಗು ನೀಡುತ್ತಾರೆ. ಆಂಧ್ರ, ಮಹಾರಾಷ್ಟ್ರದ ಭಕ್ತರು ಭಾಗವಹಿಸುತ್ತಾರೆ.

ವಸತಿ ಶಾಲೆ ಗುಣಾತ್ಮಕ ಶಿಕ್ಷಣದ ಮೈಲುಗಲ್ಲು

ಅಭಿನಂದನಾ ಸಮಾರಂಭದಲ್ಲಿ ಡಾ.ಯೋಗೀಶ್ ಮಾತು | ಪಿಯುಸಿ, ಎಸ್ಎಸ್ಎಲ್‌ಸಿ ಸಾಧಕ ವಿದ್ಯಾರ್ಥಿಗಳಿಗೆ ಸನ್ಮಾನ

• **ಕನ್ನಡಪ್ರಭ ವಾರ್ತೆ** ಬೀದರ್

ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕ್ರೈಸ್ ಅಡಿಯ ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ವಸತಿ ಶಾಲೆಗಳು ಗುಣಾತ್ಮಕ ಶಿಕ್ಷಣ ನೀಡುವಲ್ಲಿ ಮೈಲುಗಲ್ಲು ಸ್ಥಾಪಿಸಿವೆ ಎಂದು ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕರಾದ ಡಾ.ಯೋಗೀಶ್ ಎಸ್.ಬಿ. ರವರು ನುಡಿದರು.

ಕರ್ನಾಟಕರಾಜ್ಯಕ್ರೈಸ್‌ಪ್ರಾಂಶುಪಾಲರಸಂಘ, ವಸತಿಶಾಲಾನೌಕರರಸಂಘಮತ್ತುನಿಲಯಪಾಲಕರ ಸಂಘದ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ 2025-26 ನೇರ ಸಾಲಿನ ದ್ವಿತೀಯ ಪಿಯುಸಿ /ಎಸ್ಎಸ್ಎಲ್‌ಸಿ ಪರೀಕ್ಷೆಯಲ್ಲಿ ಅತ್ಯುತ್ತಮ ಸಾಧನೆ ತೋರಿದ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಗಳಿಗೆ ಅಭಿನಂದನಾ ಸಮಾರಂಭ ಉದ್ಘಾಟಿಸಿ ಮಾತನಾಡಿ, ವಸತಿ ಶಾಲೆಗಳು ಗ್ರಾಮೀಣ ಭಾಗದ ಬಡ ಪ್ರತಿಭಾವಂತ ಮಕ್ಕಳ ಭಾಗ್ಯೋದಯ ತೆರೆದಿವೆ. ಈ ಶಾಲೆಗಳ ಸಾಧನೆ ಬೀದರ ಜಿಲ್ಲೆಯ ಶೈಕ್ಷಣಿಕ ವ್ಯವಸ್ಥೆಗೆ ನವ ಚೈತನ್ಯ ನೀಡಿದೆ ಎಂದರು.



ಕರ್ನಾಟಕ ರಾಜ್ಯ ಕ್ರೈಸ್ ಪ್ರಾಂಶುಪಾಲರ ಸಂಘ, ವಸತಿ ಶಾಲಾ ನೌಕರರ ಸಂಘ ಮತ್ತು ನಿಲಯಪಾಲಕರ ಸಂಘದ ಸಂಯುಕ್ತಾಶ್ರಯದಲ್ಲಿ ವಿದ್ಯಾರ್ಥಿಗಳಿಗೆ ಮತ್ತು ಸಿಬ್ಬಂದಿಗೆ ಅಭಿನಂದನಾ ಸಮಾರಂಭ ಜರುಗಿತು.

ಬಡಮಕ್ಕಳಪಾಲಿನಗುರುಕುಲವೆನಿಸಿಕೊಂಡಿರುವ ಬೀದರ ಜಿಲ್ಲೆಯ 29 ವಸತಿ ಶಾಲೆಗಳ ಪೈಕಿ 18 ವಸತಿ ಶಾಲೆಗಳು ಶೇ.100ರಷ್ಟು ಫಲಿತಾಂಶ ನೀಡಿವೆ. ಜಿಲ್ಲೆಯ ಎಸ್ ಎಸ್ ಎಲ್ ಸಿ ಫಲಿತಾಂಶ ಶೇ92.18 ಇದ್ದರೆ ವಸತಿಶಾಲೆಗಳಸರಾಸರಿಫಲಿತಾಂಶಶೇ.98.30 ಇದೆ ಎಂದರು. ಈ ಫಲಿತಾಂಶಕ್ಕೆ ಕಾರಣರಾದ ಸಮಸ್ತ ವಸತಿ ಶಾಲೆಗಳ ಸಿಬ್ಬಂದಿ ಶ್ಲಾಘನಾರ್ಹರು ಎಂದು ಹೇಳಿದರು.

ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಗಿರೀಶ್ ರಂಜೋಳಕರ್ ಸಾರ್ವಜನಿಕ ಶಿಕ್ಷಣ ಇಲಾಖೆಯ ಶಾಲೆ, ಸಿಬ್ಬಂದಿ ಮತ್ತು ಮಕ್ಕಳಿಗೆ ಸಿಗುವ ಎಲ್ಲಾ ತೆರನಾದ ಸೌಲಭ್ಯಗಳನ್ನು ವಸತಿ ಶಾಲೆಗಳಿಗೂ ಒದಗಿಸಿಕೊಡಲು ಪ್ರಾಮಾಣಿಕ ಪ್ರಯತ್ನ ಮಾಡುವೆನೆಂದು ಹೇಳಿದರು.

ಕ್ರೈಸ್ ಜಿಲ್ಲಾ ಸಮನ್ವಯಾಧಿಕಾರಿ ಶರಣಪ್ಪ ಬಿರಾದಾರಅಧ್ಯಕ್ಷತೆವಹಿಸಿಮಾತನಾಡಿ,6ನೇತರಗತಿ ಪ್ರವೇಶಪಡೆಯುವಸಂದರ್ಭದಲ್ಲಿಬಡವಿದ್ಯಾರ್ಥಿಗಳಾಗಿ ದಾಖಲಾತಿ ಪಡೆಯುವ ಮಕ್ಕಳಿಗೆ ಮುಂದೆ ಹತ್ತನೇ ತರಗತಿ ಮುಗಿದ ತಕ್ಷಣ ಖಾಸಗಿ ಕಾಲೇಜುಗಳಲ್ಲಿ ಲಕ್ಷಾಂತರ ರೂಪಾಯಿ ಡೋನೇಷನ್ ಕೊಟ್ಟು ಪ್ರವೇಶ ಹೊಂದುವ ಧೋರಣೆ ಸರಿಯಾದುದಲ್ಲ. ನಮ್ಮ ವಸತಿಪದವಿಪೂರ್ವ ಕಾಲೇಜುಗಳಲ್ಲಿ ಅತ್ಯಂತ ಹೆಚ್ಚು ಅಗ್ರ ಶ್ರೇಣಿ ಮತ್ತು ಪ್ರಥಮ ದರ್ಜೆಯಲ್ಲಿ ಮಕ್ಕಳು ಉತ್ತೀರ್ಣರಾಗುತ್ತಿದ್ದಾರೆ. ಅಗ್ರ ಶ್ರೇಣಿಯಲ್ಲಿ ಉತ್ತೀರ್ಣರಾದ ಮಕ್ಕಳಿಗೆ 10000 ನಗದು ಪುರಸ್ಕಾರ ಸರ್ಕಾರ ಕೊಡುತ್ತಿದೆ. ಇದರ ಜೊತೆಗೆ ನೀಟ್, ಜೆಇಇ ತರಬೇತಿ ಉಚಿತ ನೀಡುತ್ತಿದೆ ಎಂದರು.

ಕ್ರೈಸ್‌ಪ್ರಾಂಶುಪಾಲರಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಚನ್ನಬಸವ ಹೇಡೆ ಮಾತನಾಡಿ, ಅನೇಕ ಸಮಸ್ಯೆಗಳ ಮಧ್ಯ ಇಂದು ವಸತಿ ಶಾಲೆಗಳು ಪ್ರತಿಭೆಗೆ ಇಂಬು ನೀಡುವ ಎಲ್ಲಾ ಉಪಕ್ರಮ ಕೈಗೊಂಡಿವೆ. ಇದಕ್ಕೆ ಪ್ರಾಮಾಣಿಕವಾಗಿ ದುಡಿಯುವ ಸಮಸ್ತ ಬೋಧಕ ಬೋಧಕೇತರ ಸಿಬ್ಬಂದಿಗಳು ಕಾರಣ. ಹೀಗಾಗಿ ನ್ಯಾಯಯುತವಾಗಿ ದೊರಯಬೇಕಾದ ಎಲ್ಲಾ ಸೌಲಭ್ಯ ನೌಕರರಿಗೆ ಕೊಡಬೇಕು. ಅಕ್ಷರ ಆವಿಷ್ಕಾರ, ಪಿ.ಎಂ.ಶ್ರೀ ಯೋಜನೆ ನಮ್ಮ ವಸತಿ ಶಾಲೆಗಳನ್ನು ಪರಿಗಣಿಸಬೇಕು. ಶಿಕ್ಷಕರನ್ನು ಜಿಲ್ಲಾ ಮತ್ತು ರಾಜ್ಯ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿಗೆ ಪರಿಗಣಿಸಬೇಕು ಎಂದು ಒತ್ತಾಯಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕಸಿದ್ರಾಮಸಿಂಧೆ, ಪ್ರಾಂಶುಪಾಲರಸಂಘದ ಜಿಲ್ಲಾಧ್ಯಕ್ಷರವೀಂದ್ರ ಚಟ್ನಳ್ಳಿ, ವಸತಿ ಶಾಲಾ ನೌಕರರ ಸಂಘದ ಜಿಲ್ಲಾಧ್ಯಕ್ಷ ದೇವಿದಾಸ ಜೋಶಿ, ನಿಲಯ ಪಾಲಕರ ಸಂಘದ ಜಿಲ್ಲಾಧ್ಯಕ್ಷ ಶ್ರೀಮಂತ ಸಪಾಟೆ, ಹಾಗೂ ಕ್ರೈಸ್ ಸಿಬ್ಬಂದಿ, ಪಾಲಕರು ಮತ್ತು ವಿದ್ಯಾರ್ಥಿಗಳು, ಮತ್ತಿತರರು ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ಪ್ರತಿ ವಸತಿ ಶಾಲೆಯಿಂದ ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನ ಪಡೆದ ಮಕ್ಕಳಿಗೆ, ಶೇ.100ರಷ್ಟು ಫಲಿತಾಂಶ ನೀಡಿದ ವಸತಿ ಶಾಲೆಗಳ ಪ್ರಾಂಶುಪಾಲರು ಮತ್ತು ಬೋಧಕ, ಬೋಧಕೇತರ ಸಿಬ್ಬಂದಿಗಳನ್ನು ಗೌರವಿಸಿ ಸತ್ಕರಿಸಲಾಯಿತು.

ಸುದ್ದಿ ಸಿಂಚನ

ಶ್ರೀ ಸಿದ್ದೇಶ್ವರ ದೇವಾಲಯ ಜೀರ್ಣೋದ್ಧಾರಕ್ಕೆ ದೇಣಿಗೆ

ಬೀದರ್: ತಾಲೂಕಿನ ಕಂಗನಕೋಟ ಗ್ರಾಮದ ಸಿದ್ದೇಶ್ವರ ದೇವಾಲಯದ ಜೀರ್ಣೋದ್ಧಾರ ಕಾಮಗಾರಿಗಾಗಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ 1.50 ಲಕ್ಷ ರು. ಅನುದಾನ ಮಂಜೂರಾಗಿದ್ದು, ಅದರ ಚೆಕ್ ವಿತರಣೆ ಕಾರ್ಯಕ್ರಮ ನಡೆಯಿತು. ಬೀದರ ಜಿಲ್ಲೆಯ ಧರ್ಮಸ್ಥಳ ಯೋಜನಾ ನಿರ್ದೇಶಕರಾದ ಮುರಳೀಧರ ಎಚ್.ಎಲ್. ಅವರು ದೇವಾಲಯದ ಟ್ರಸ್ಟ್ ಅಧ್ಯಕ್ಷರಾದ ಕೇದಾರನಾಥ ಶಂಭು ಅವರಿಗೆ ದೇವಾಲ ಯದ ಸಮಿತಿಯ ಸಮ್ಮುಖದಲ್ಲಿ ಚೆಕ್ ಹಸ್ತಾಂತರಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಕೇದಾರನಾಥ ಶಂಭು ಅವರು, ಗ್ರಾಮೀಣ ಭಾಗಗಳಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಸಂಸ್ಥೆ ಕೈಗೊಂಡಿರುವ ಜನಸಹಕಾರಿ ಹಾಗೂ ಧಾರ್ಮಿಕ ಸೇವಾ ಕಾರ್ಯಕ್ರಮಗಳ ಬಗ್ಗೆ ಸಂತೋಷ ವ್ಯಕ್ತಪಡಿಸಿದರು. ಶಾಂತಕುಮಾರ ಶಂಭು, ಗಣಪತಿ ಶಂಭು, ಪಾರ್ವತಿ ಭುಳ್ಳ, ಓಂಕಾರ ಪಾಟೀಲ, ಕಂಟೆಪ್ಪ ಓತಿ, ಸಂತೋಷ ಓತಿ, ಪ್ರೇಮಲತಾ ಉಪ್ಪೆ, ನಿರ್ಮಲ ಶಂಭು, ಕಂಗನಕೋಟ್ ಸಿದ್ದೇಶ್ವರ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷರು ಮತ್ತು ಪಧಾಧಿಕಾರಿಗಳು ಉಪಸ್ಥಿತರಿದ್ದರು. ಅಭಿ ಶಂಭು ಸ್ವಾಗತಿಸಿದರು. ನಿಜಗುಣ ಶಂಭು ನಿರೂಪಿಸಿದರು. ಸೋಮನಾಥ ಶಂಭು ವಂದಿಸಿದರು.

ಅಡ್ವಾನ್ಸ್ಡ್ ಕಾಂಕ್ರೀಟ್ ಎಂಜಿನಿಯರ್‌ಗಳ ಸಭೆ



ಬೀದರ್: ಕಟ್ಟಡಗಳು ದೀರ್ಘ ಕಾಲದವರೆಗೆ ಬಾಳಿಕೆ ಬರಲು ಗುಣಮಟ್ಟದ ಸಿಮೆಂಟ್ ಬಳಕೆ ಅಗತ್ಯವಾಗಿದೆ ಎಂದು ಶ್ರೀ ಸಿಮೆಂಟ್‌ನ ರಾಜ್ಯ ಮುಖ್ಯಸ್ಥ ಉದಯ ಪಾಟೀಲ ಹೇಳಿದರು. ನಗರದ ಮಯೂರಾ ಹೋಟೆಲ್ ಸಭಾಂಗಣದಲ್ಲಿ ಶ್ರೀ ಸಿಮೆಂಟ್ ವತಿಯಿಂದ ಬುಧವಾರ ನಡೆದ ಅಡ್ವಾನ್ಸ್ಡ್ ಕಾಂಕ್ರೀಟ್ ಎಂಜಿನಿಯರ್‌ಗಳ ಸಭೆಯಲ್ಲಿ ಮಾತನಾಡಿ, ಕಾಂಕ್ರೀಟ್ ಹಾಗೂ ಸ್ಟೀಲ್‌ಗಳನ್ನು ಗಟ್ಟಿಯಾಗಿ ಜೋಡಿಸಿಡುವುದೇ ಸಿಮೆಂಟ್. ಗುಣಮಟ್ಟ ಹಾಗೂ ಬಾಳಿಕೆ ವಿಚಾರದಲ್ಲಿ ಶ್ರೀ ಸಿಮೆಂಟ್ ದೇಶದಲ್ಲೇ ಹೆಸರುವಾಸಿಯಾಗಿದೆ ಎಂದು ತಿಳಿಸಿದರು. ಶ್ರೀ ಸಿಮೆಂಟ್ ತಾಂತ್ರಿಕ ಮುಖ್ಯಸ್ಥ ಮೋಯಿನ್ ಖಾನ್ ಮಾತನಾಡಿದರು. ಕಂಪನಿಯ ತಾಂತ್ರಿಕ ಮುಖ್ಯಸ್ಥ ವೆಂಕಟರಮಣ ರೆಡ್ಡಿ, ಮಹೇಶ ಚಂದಾ, ವೀರಾರೆಡ್ಡಿ, ಜಿಲ್ಲಾ ವಿತರಕ ನೀಲಕಂಠ ಬಿರಾದಾರ, ಮುಜಾಹಿದ್ದೀನ್, ಎಂಜಿನಿಯರ್‌ಗಳಾದ ಸಂತೋಷ್ ಸುಂಕದ, ಪ್ರಶಾಂತ ಲಂಜವಾಡೆ, ರವೀಂದ್ರ ಪನಶೆಟ್ಟೆ ಮತ್ತಿತರರು ಇದ್ದರು.

ಸರ್ಕಾರಿ ನೌಕರರ ಸಾಧಕ ಮಕ್ಕಳಿಂದ ಅರ್ಜಿ ಆಹ್ವಾನ

ಬೀದರ್: ರಾಜ್ಯ ಸರ್ಕಾರಿ ನೌಕರರ ಸಂಘವು 2026ನೇ ಸಾಲಿನ ಎಸ್ಎಸ್ಎಲ್‌ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ 90ಕ್ಕೂ ಅಧಿಕ ಅಂಕ ಗಳಿಸಿ ಸಾಧನೆಗೈದ ರಾಜ್ಯ ಸರ್ಕಾರಿ ನೌಕರರ ಮಕ್ಕಳಿಂದ ಪ್ರತಿಭಾ ಪುರಸ್ಕಾರಕ್ಕೆ ಆನ್‌ಲೈನ್‌ನಲ್ಲಿ ಅರ್ಜಿ ಆಹ್ವಾನಿಸಿದೆ. 2026 ರ ಎಸ್ಎಸ್ಎಲ್‌ಸಿ, ದ್ವಿತೀಯ ಪಿಯುಸಿ ಪರೀಕ್ಷೆ ಯಲ್ಲಿ ಮೊದಲ ಪ್ರಯತ್ನದಲ್ಲೇ ತೇರ್ಗಡೆ ಯಾದ ರಾಜ್ಯ ಸರ್ಕಾರಿ ಕಾಯಂ ನೌಕರರ ಮಕ್ಕಳು https:l/powermedia.info ಲಿಂಕ್ ಬಳಸಿ ಅರ್ಜಿ ಸಲ್ಲಿಸಬಹುದು ಎಂದು ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಸೋಮಶೇಖರ ಬಿರಾದಾರ ಚಿದ್ರಿ ತಿಳಿಸಿದ್ದಾರೆ. ಸಂಘದ ನಿಗದಿತ ನಮೂನೆಯಲ್ಲಿ ವಿದ್ಯಾರ್ಥಿಯ ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ, ಶಾಲಾ, ಕಾಲೇಜಿನ ದೃಢೀಕೃತ ಅಂಕಪಟ್ಟಿ, ಸಂಘದ ಜಿಲ್ಲಾ, ತಾಲ್ಲೂಕು, ಯೋಜನಾ ಶಾಖೆ ಅಧ್ಯಕ್ಷರ ದೃಢೀಕರಣದೊಂದಿಗೆ ಆನ್‌ಲೈನ್‌ನಲ್ಲಿ ಅರ್ಜಿ ಅಪ್‌ಲೋಡ್ ಮಾಡಬೇಕು ಎಂದು ಹೇಳಿದ್ದಾರೆ. ನಿಗಮ, ಮಂಡಳಿ, ಪ್ರಾಧಿಕಾರ, ವಿಶ್ವವಿದ್ಯಾಲಯ, ಖಾಸಗಿ ಹಾಗೂ ಅನುದಾನಿತ ವಿದ್ಯಾ ಸಂಸ್ಥೆಯ ನೌಕರರ ಮಕ್ಕಳು ಅರ್ಜಿ ಸಲ್ಲಿಸುವಂತಿಲ್ಲ. ಅರ್ಜಿ ಸಲ್ಲಿಕೆಗೆ ಮೇ 25 ಕೊನೆಯ ದಿನವಾಗಿದ್ದು, ಹೆಚ್ಚಿನ ಮಾಹಿತಿಗೆ ರಾಜ್ಯ ಸಂಘದ ದೂರವಾಣಿ ಸಂಖ್ಯೆ 080-22354783/84 ಗೆ ಸಂಪರ್ಕಿಸಬಹುದು.

ಬುದ್ಧ, ಬಸವ, ಅಂಬೇಡ್ಕರ್ ಮಹಾನ್ ಸಂತರು

ಧಮ್ಮ ಜಾಗೃತಿ ಬುದ್ಧ ವಿಹಾರದಲ್ಲಿ ನಡೆದ ಸಾಂಸ್ಕೃತಿಕ ಹಬ್ಬದಲ್ಲಿ ದಿಗಂಬರ ಮಡಿವಾಳ ಬಣ್ಣನೆ

• **ಕನ್ನಡಪ್ರಭ ವಾರ್ತೆ** ಬೀದರ್

ಇತ್ತೀಚಿನ ದಿನಗಳಲ್ಲಿ ಮೊಬೈಲ್ ಹಾವಳಿ ಹೆಚ್ಚಾಗಿ ಕಲೆಗಳಿಗೆ ಬೆಲೆ ಇಲ್ಲದಂತಾಗಿದೆ ಎಂದು ಮಹಾನಗರ ಪಾಲಿಕೆ ಸದಸ್ಯ ದಿಗಂಬರ ಮಡಿವಾಳ ನುಡಿದರು.

ಜನಜನಿತ ಕಲಾ ಪ್ರದರ್ಶನ ಸಂಘ ಬೀದರ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಇವರ ಸಂಯುಕ್ತಾಶ್ರಯದಲ್ಲಿ 2025-26ನೇ ಸಾಲಿನ ಪರಿಶಿಷ್ಟಜಾತಿಸಂಘ-ಸಂಸ್ಥೆಗಳ ಧನಸಹಾಯ ಯೋಜನೆಯಡಿ ಬುದ್ಧ, ಬಸವ ಹಾಗೂ ಅಂಬೇಡ್ಕರ್‌ಜಯಂತೋತ್ಸವಅಂಗವಾಗಿ ಹಾರೂರಗೇರಿಯ ಧಮ್ಮ ಜಾಗೃತಿ ಬುದ್ಧ ವಿಹಾರದಲ್ಲಿ ಸಾಂಸ್ಕೃತಿಕ ಹಬ್ಬ, ವಿಚಾರ ಸಂಕಿರಣ, ಕಲಾ ಪ್ರದರ್ಶನ, ನಾಟಕ ಹಾಗೂಸಾಧಕರಿಗೆಸನ್ಮಾನಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇನ್ನಷ್ಟು ಸಂಸ್ಥೆಗಳಿಗೆ ಅನುದಾನ ನೀಡಿದರೆ ಇಂತಹ ಸಾಂಸ್ಕೃತಿಕ ಹಬ್ಬಗಳನ್ನು ಆಯೋಜಿಸಲು ಅನುಕೂಲವಾಗುತ್ತದೆ ಎಂದರು.



ಜನಜನಿತ ಕಲಾ ಪ್ರದರ್ಶನ ಸಂಘದಿಂದ ಹಾರೂರಗೇರಿಯ ಧಮ್ಮ ಜಾಗೃತಿ ಬುದ್ಧ ವಿಹಾರದಲ್ಲಿ ಸಾಂಸ್ಕೃತಿಕ ಹಬ್ಬ, ವಿಚಾರ ಸಂಕಿರಣ, ಸಾಧಕರಿಗೆ ಸನ್ಮಾನ ಕಾರ್ಯಕ್ರಮ ಜರುಗಿತು.

ಜಿಲ್ಲಾ ಬಿಜೆಪಿ ಮಹಿಳಾ ಘಟಕದ ಮಾಜಿ ಅಧ್ಯಕ್ಷೆ ಲುಂಬಿಣಿ ಗೌತಮ್ ಮಾತನಾಡಿ, 'ಹಿಂದೆ ನಾಟಕಗಳಲ್ಲಿ ಮಹಿಳಾ ಪಾತ್ರಗಳನ್ನೂ ಪುರುಷರೇ ನಿರ್ವಹಿಸುತ್ತಿದ್ದರು. ಆದರೆ ಈಗ ಮಹಿಳೆಯರು ಎಲ್ಲ ಕ್ಷೇತ್ರಗಳಲ್ಲೂ ಮುನ್ನಡೆ ಸಾಧಿಸುತ್ತಿದ್ದಾರೆ. ಜನಜನಿತ ಕಲಾ ಪ್ರದರ್ಶನ ಸಂಘವನ್ನು ಯಶಸ್ವಿ ಯಾಗಿ ಮುನ್ನಡೆಸುತ್ತಿರುವ ಚಲನಚಿತ್ರ ನಟ ಯಶವಂತ ಕುಚಬಾಳ ಇನ್ನಷ್ಟು ಎತ್ತರಕ್ಕೆ ಬೆಳೆಯಲಿ. ಡಾಲಿ ಧನಂಜಯ ಅವರೊಂದಿಗೆ ಅಭಿನಯಿಸಿರುವ 'ಮದರ್ ಪ್ರಾಮಿಸ್' ಸಿನಿಮಾ ಯಶಸ್ವಿ ಯಾಗಿ ಇನ್ನಷ್ಟು ಅವಕಾಶಗಳು ದೊರೆಯಲಿ ಎಂದು ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ಪ್ರಕಾಶ ಕುಚಬಾಳ ಅವರ ಹಾಡುಗಳಿಗೆ ಪ್ರೇಕ್ಷಕರು ಮೆಚ್ಚುಗೆ ವ್ಯಕ್ತಪಡಿಸಿದರು. ವಿಶಾಲಡ್ಯಾನ್ಸ್‌ಅಕಾಡೆಮಿಯ ವಿದ್ಯಾರ್ಥಿಗಳು 'ಏಕತೆ' ನಾಟಕ ಪ್ರದರ್ಶಿಸಿ ಮೆಚ್ಚುಗೆ ಪಡೆದರು. ಪವನ ನಾಟಿಕಾರ್‌ತರಬೇತಿ ನೀಡಿದ ನೃತ್ಯಗಳು ಗಮನ ಸೆಳೆದವು. ಮಾತೋಶ್ರೀ ರಮಾಬಾಯಿ ಭಜನ ಮಂಡಳಿಯಿಂದ ಭಜನೆ, ನೇಹಾ ಹಾಗೂ ತಂಡದಿಂದ ನೃತ್ಯ ರೂಪಕ ಮತ್ತು ಸ್ನೇಹ ನಿರ್ದೇಶನದ ನಾಟಕ ಪ್ರದರ್ಶನಗೊಂಡವು. ಗಣಪತಿ ಹಾವೆ ಅಧ್ಯಕ್ಷತೆವಹಿಸಿದ್ದರು. ವಿವಿಧಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಶೇಷರಾವ್ ಬೇಳಕುಣಿಕರ್, ಮನೋಜ್ ಶರ್ಮಾ, ಮಲ್ಲಿಕಾರ್ಜುನ್ ಲಾದಾಕರ್, ಬಕ್ಕಪ್ಪ ತಾರೆ, ಉಮೇಶ ಕಡ್ಯಾಳ್ಕರ್, ಎಸ್.ಬಿ. ಕುಚಬಾಳ, ಪ್ರೀತಮ್ ಕುಚಬಾಳ, ಲುಂಬಿಣಿ ಗೌತಮ್, ಗಂಗಮ್ಮ ಫುಲೇ, ವಿಶಾಲ ಟೇಕರಾಜ್ ಹಾಗೂ ಪವನ ನಾಟೆಕರ್ ಅವರನ್ನು ಸನ್ಮಾನಿಸಲಾಯಿತು.

ಬಸವಣ್ಣನವರು ಸಮಾನತೆಯ ಹರಿಕಾರರು: ಪ್ರೊ.ಬಿರಾದಾರ

ವಿಶ್ವಗುರು ಬಸವಣ್ಣರ 893ನೇ ಜಯಂತ್ಯುತ್ಸವ



ಬೀದರ್‌ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ವಿಶ್ವಗುರು ಬಸವಣ್ಣನರವರ ಜಯಂತ್ಯುತ್ಸವ ಕಾರ್ಯಕ್ರಮ ಜರುಗಿತು. ಕುಲಪತಿ ಪ್ರೊ. ಬಿ.ಎಸ್. ಬಿರಾದಾರ, ಆಡಳಿತ ಕುಲಸಚಿವರಾದ ಪ್ರೊ.ಪರಮೇಶ್ವರ ನಾಯ್ಕ ಇನ್ನಿತರರಿದ್ದರು.

• **ಕನ್ನಡಪ್ರಭ ವಾರ್ತೆ** ಬೀದರ್

ಸಾಂಸ್ಕೃತಿಕ ನಾಯಕ, ವಿಶ್ವಗುರು ಬಸವಣ್ಣನವರು ಸಮಾಜದಲ್ಲಿನ ಎಲ್ಲಾ ವರ್ಗದವರನ್ನು ಸಮಾನವಾಗಿ ಕಂಡಂತಹ ಮಹಾ ಮಾನವತಾವಾದಿ ಹೀಗಾಗಿ ಅವರು ಸಮಾನತೆಯ ಹರಿಕಾರ ರಾಗಿದ್ದಾರೆ ಎಂದು ಬೀದರ್‌ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಬಿ.ಎಸ್. ಬಿರಾದಾರ ನುಡಿದರು.

ಬೀದರ್ ವಿಶ್ವವಿದ್ಯಾಲಯದ ಸಭಾಂಗಣದಲ್ಲಿಬೀದರ್‌ವಿಶ್ವವಿದ್ಯಾಲಯ ಹಾಗೂ ಅಖಿಲ ಭಾರತ ಶರಣ ಸಮನ್ವಯ ವೇದಿಕೆಕರ್ನಾಟಕಇವರಸಹಯೋಗದಲ್ಲಿ ಹಮ್ಮಿಕೊಂಡಿದ್ದ ವಿಶ್ವಗುರು ಬಸವಣ್ಣರವರ 893ನೇ ಜಯಂತ್ಯೋತ್ಸವ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಬಸವಣ್ಣನವರು ಕೇವಲ ಕರ್ನಾಟಕಕ್ಕೆ ಮಾತ್ರ ಸಾಂಸ್ಕೃತಿಕ ನಾಯಕರಾಗದೇ ಇಡೀ ಭರತ ಖಂಡದ ಸಾಂಸ್ಕೃತಿಕ ನಾಯಕರಾಗಿದ್ದಾರೆ. ಅವರ ಖ್ಯಾತಿ ಹಾಗೂಪ್ರಭಾವದಿಂದದೂರದೂರದಿಂದ ಶರಣರು ಕಲ್ಯಾಣದ ಅನುಭವ ಮಂಟಪಕ್ಕೆ ಬಂದರು. ಬಸವಣ್ಣನವರ ಆದರ್ಶಗಳು ಇಂದಿನ ಆಧುನಿಕ ಯುಗದಲ್ಲಿಯೂ ಕೂಡ ಅನಿವಾರ್ಯವಾಗಿವೆ ಎಂದರು.

ಕೇಂದ್ರೀಯ ವಿಶ್ವವಿದ್ಯಾಲಯ, ಕಲಬುರಗಿಯ ಪ್ರಾಧ್ಯಾಪಕ ಪ್ರೊ. ಬಸವರಾಜ ಡೋಣುರು ಮಾತನಾಡಿ, ಸಮಾಜವನ್ನು ಸನ್ಮಾರ್ಗದ ಕಡೆಗೆ ಕೊಂಡೊಯ್ದಂತಹ ಮಹಾಪುರುಷರು. ಅವರು ಆರೋಗ್ಯಕರ ಸಮಾಜದ ರೂಪುರೇಷೆಗಳನ್ನು ಹೊಂದಿದ ಮಹಾಜ್ಞಾನಿಯಾಗಿದ್ದರು. ಅವರು ರಾಜ ಪ್ರಭುತ್ವಕ್ಕೂ ಸಹ ಹೆದರದೆ ತಮ್ಮ ನೇರ ನುಡಿಯ ವಚನಗಳ ಮೂಲಕ ಸಮಾಜದಲ್ಲಿ ಸಮಾನತೆಯನ್ನು ತರಲು ಪ್ರಯತ್ನಿಸಿದರು ಎಂದರು.

ಅಖಿಲ ಭಾರತ ಶರಣ ಸಮನ್ವಯ ವೇದಿಕೆ, ಕರ್ನಾಟಕದ ಸಂಚಾಲಕರಾದ ಡಾ. ಪಲ್ಲವಿ ಪಾಟೀಲ ಸೇಡಂ, ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯ ನಾಗಭೂಷಣ ಕಮಠಾಣೆ, ಇನ್ನೋರ್ವ ಸದಸ್ಯ ರಾದ ಶಾಂತಲಿಂಗ ಸಾವಳಗಿ, ಪ್ರೊ.ವಿಠ್ಠಲ್ ದಾಸ್ ಪ್ಯಾಗೆ, ಅಬ್ದುಲ್ ಸತ್ತಾರ್ ಮಾತನಾಡಿದರು.

ಭಾಲ್ಕಿ ಹಿರೇಮಠದ ಪೀಠಾಧಿಪತಿ ಗುರುಬಸವ ಪಟ್ಟದ್ದೇವರು ಸಾನಿಧ್ಯ ವಹಿಸಿ ಸಮಾನತೆಯ ಹರಿಕಾರರಾದ ಬಸವಣ್ಣನವರು ಕಾಯಕ ಮತ್ತು ದಾಸೋಹ ಸಿದ್ಧಾಂತಕ್ಕೆ ಮಹತ್ವ ನೀಡಿದರು. ಜನರು ಅವರ ಕಾಯಕ ಸಿದ್ಧಾಂತವನ್ನು ಮೈಗೂಡಿಸಿಕೊಂಡರೆ ಸಮಾಜದಲ್ಲಿ ಯಾವುದೇ ಸಮಸ್ಯೆಗಳು ಕಂಡು ಬರುವುದಿಲ್ಲ, ಬಸವಣ್ಣನವರ ವಚನಗಳ ಪಾಲನೆಯಿಂದ ಸುಂದರ ಸಮಾಜದ ನಿರ್ಮಾಣವಾಗುತ್ತದೆ ಎಂದರು.

ವಿಶ್ವವಿದ್ಯಾಲಯದಆಡಳಿತಕುಲಸಚಿವರಾದ ಪ್ರೊ.ಪರಮೇಶ್ವರ ನಾಯ್ಕ ಟಿ. ಪ್ರಾಸ್ತಾವಿಕ ಮಾತನಾಡಿದರು. ವಿಶೇಷಾಧಿಕಾರಿ ಡಾ.ರವೀಂದ್ರನಾಥ ವಿ. ಗಬಾಡಿ, ಆನಂದ ಚಾಕೂರೆ ಇದ್ದರು.

ಬೀದರ್‌ನಲ್ಲಿ ಪತ್ರಕರ್ತರ ಅರ್ಥಪೂರ್ಣ ಸಮ್ಮೇಳನ

ಧನ್ಯವಾದ ಸಮರ್ಪಣಾ ಸಮಾರಂಭದಲ್ಲಿ ತಗಡೂರು ಶ್ಲಾಘನೆ | ಯಶಸ್ಸಿಗೆ ಶ್ರಮಿಸಿದವರಿಗೆ ಸನ್ಮಾನ

• **ಕನ್ನಡಪ್ರಭ ವಾರ್ತೆ** ಬೀದರ್

ಬಸವಣ್ಣನ ನಾಡು, ಸೂಫಿ ಸಂತರ ಬೀಡು ಬೀದರ್‌ನಲ್ಲಿ ಏ.11 ಹಾಗೂ 12 ರಂದು ಎರಡು ದಿನಗಳು ನಡೆದ 40ನೇ ರಾಜ್ಯ ಪತ್ರರ್ತರರ ಸಮ್ಮೇಳನವನ್ನು ಅಚ್ಚುಕಟ್ಟಾಗಿ ಸಂಘಟಿಸಿ, ಯಶಸ್ವಿಗೊಳಿಸಿದ ಹಿನ್ನೆಲೆಯಲ್ಲಿ ಸಮ್ಮೇಳನದ ಯಶಸ್ವಿಗಾಗಿ ಶ್ರಮಿಸಿದವರು ಮತ್ತು ಸಹಕರಿಸಿದವರನ್ನು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ (ಕೆಯುಡಬ್ಲ್ಯೂಜೆ) ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಸನ್ಮಾನಿಸಿದರು.

ಮಂಗಳವಾರ ಬೀದರ ಎಸ್‌ಪಿ ಗೆಸ್ಟ್ ಹೌಸ್ ಆವರಣದಲ್ಲಿ ನಡೆದ ಸಮಾರಂಭದಲ್ಲಿ ವಸತಿ, ಆಹಾರ, ಸಾರಿಗೆ, ಪ್ರಚಾರ, ಮೆರವಣಿಗೆ, ನೋಂದಣಿ, ಅತಿಥಿ ಸತ್ಕಾರ, ಸಾಂಸ್ಕೃತಿಕ, ಸ್ಮರಣ ಸಂಚಿಕೆ, ಮಹಿಳಾ ಸಮಿತಿಯಿಂದ ಹಿಡಿದು ವಸ್ತು ಪ್ರದರ್ಶನ, ಛಾಯಾಚಿತ್ರ ಪ್ರದರ್ಶನ ಸಮಿತಿ ತನಕ ಎಲ್ಲಾ ಉಪ ಸಮಿತಿಗಳ ಪ್ರಧಾನ ಸಂಚಾಲಕರು, ಸಂಚಾಲಕರು, ಸಹ ಸಂಚಾಲಕರ ಸೇವೆಯನ್ನು ಸ್ಮರಿಸಿ ಸನ್ಮಾನಿಸಲಾಯಿತು. ಸಮ್ಮೇಳನಕ್ಕೆ ಒಂದೊಂದು ಜವಾಬ್ದಾರಿ ವಹಿಸಿಕೊಂಡು ಸಹಕಾರ ನೀಡಿದವರನ್ನು ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು, ಕಡಿಮೆ ಅವಧಿಯಲ್ಲಿ ಸಮ್ಮೇಳನವನ್ನು ವ್ಯವಸ್ಥಿತವಾಗಿ ಸಂಘಟಿಸಿದ ಬೀದರ್‌ಜಿಲ್ಲಾ ಘಟಕ, ಬೀದರ್‌ಪತ್ರಕರ್ತರು, ಜಿಲ್ಲಾ ಉಸ್ತುವಾರಿ ಸಚಿವರು, ಜಿಲ್ಲಾಡಳಿತ ಮತ್ತು ನಾಗರೀಕರಿಗೆ ಧನ್ಯವಾದ ತಿಳಿಸಿದರು.

ಸಮ್ಮೇಳನದ ಮೆರವಣಿಗೆಯಿಂದ ಹಿಡಿದು ಊಟೋಪಚಾರತನಕ, ಸಮ್ಮೇಳನದಉದ್ಘಾಟನೆಯಿಂದ ಹಿಡಿದು ಹಲವು ವಿಚಾರ ಗೋಷ್ಠಿಗಳು, ಪ್ರಶಸ್ತಿ ಪ್ರದಾನ ಸಮಾರಂಭ ಮತ್ತು ಸಮಾರೋಪ ತನಕ ಎಲ್ಲವೂ ವ್ಯವಸ್ಥಿತವಾಗಿ, ಅರ್ಥಪೂರ್ಣವಾಗಿ ನಡೆ ದಿವೆ ಎಂದು ತಿಳಿಸಿದರು.



ಬೀದರನಲ್ಲಿ ನಡೆದ ಪತ್ರಕರ್ತರ ಅರ್ಥಪೂರ್ಣ ರಾಜ್ಯ ಸಮ್ಮೇಳನದ ಧನ್ಯವಾದ ಸಮರ್ಪಣಾ ಸಮಾರಂಭದಲ್ಲಿ ಎಸ್ಪಿ ಪ್ರದೀಪ ಗುಂಟಿ ಅವರನ್ನು ಸನ್ಮಾನಿಸಲಾಯಿತು.

ಸಮ್ಮೇಳನ ಎನ್ನುವುದು ಒಂದು ಮೆರಗು, ಸೊಬಗು. ಸಮ್ಮೇಳನದ ಆತಿಥ್ಯ ವಹಿಸಿಕೊಂಡಿದ್ದ ಬೀದರ್‌ಘಟಕ ಸಮ್ಮೇಳನದ ದಿಬ್ಬಣವನ್ನು ಅಚ್ಚುಕಟ್ಟಾಗಿ, ಹಬ್ಬದ ರೂಪದಲ್ಲಿ ಸ್ವಾಗತಿಸಿ, ಸತ್ಕರಿಸಿ ಬೀಳ್ಕೊಟ್ಟಿರುವುದಕ್ಕೆ ಕೆಯುಡಬ್ಲ್ಯೂಜೆ ಆಭಾರಿಯಾಗಿದೆ ಎಂದು ತಗಡೂರು ಹೇಳಿದರು.

ಬೀದರ್‌ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ ಖಂಡ್ರೆ, ಸಚಿವ ರಹೀಂಖಾನ್ ಸೇರಿದಂತೆ ಎಲ್ಲಾ ಶಾಸಕರು ಮತ್ತು ಜನಪ್ರತಿ ನಿಧಿಗಳು ಮತ್ತು ಜಿಲ್ಲಾಧ್ಯಕ್ಷ ಆನಂದ ದೇವಪ್ಪ ಸೇರಿದಂತೆ ಎಲ್ಲ ತಾಲೂಕು ಸಂಘಗಳಿಗೂ ರಾಜ್ಯ ಸಂಘ ಆಭಾರಿಯಾಗಿದೆ ಎಂದು ಶಿವಾನಂದ್ ಹೇಳಿದರು.

ಬೀದರ್‌ಜಿಲ್ಲಾಧ್ಯಕ್ಷ ಆನಂದ ದೇವಪ್ಪ ಮಾತನಾಡಿ, ರಾಜ್ಯ ಸಂಘದ ಅಧ್ಯಕ್ಷರು ನಮ್ಮ ಮೇಲೆ ವಿಶ್ವಾಸವಿಟ್ಟು ಸಮ್ಮೇಳನವನ್ನು ನೀಡಿ, ಸಹಕಾರ ಮಾಡಿದ್ದನ್ನು ಎಂದೂ ಮರೆಯಲು ಸಾಧ್ಯವಿಲ್ಲ. ಹಾಗೆಯೇ ಸಮ್ಮೇಳನಕ್ಕಾಗಿ ದುಡಿದವರಿಗೆ ಹೃದಯಪೂರ್ವಕ ವಾದ ಧನ್ಯವಾದ ಹೇಳಿದರು. ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಪ್ರಧಾನ ಕಾರ್ಯ ದರ್ಶಿ ಜಿ.ಸಿ. ಲೋಕೇಶ ಮಾತನಾಡಿ, ರಾಜ್ಯ ಸಂಘದ ಪರವಾಗಿ ಧನ್ಯವಾದ ಸಲ್ಲಿಸಿದರು. ಕಲಬುರಗಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಬಾಬರಾವ ಯಡ್ರಾಮಿ, ಕೆಯುಡಬ್ಲ್ಯೂಜೆ ರಾಜ್ಯ ಸಮಿತಿ ಸದಸ್ಯ ಭವಾನಿಸಿಂಗ್ ಠಾಕೂರ್‌ಮತ್ತಿತರರು ಉಪಸ್ಥಿತರಿದ್ದರು. ಜಿಲ್ಲಾ ಪೊಲೀಸ್ ವರಿಷ್ಠಾಧಿ ಕಾರಿ ಪ್ರದೀಪ ಗುಂಟಿ, ಗುರುದ್ವಾರದ ಮುಖ್ಯಸ್ಥರಾದ ಬಲಬೀರಸಿಂಗ್ ಸೇರಿದಂತೆ ಹಲವರನ್ನು ಸನ್ಮಾನಿಸಲಾಯಿತು.

ಮಹತ್ವಾಕಾಂಕ್ಷಿ ಯೋಜನೆ | ಬಸವಕಲ್ಯಾಣದಲ್ಲಿ 'ಮನೆಗೊಂದು ಗ್ರಂಥಾಲಯ' ಅನುಷ್ಠಾನ ಸಮಾರಂಭದಲ್ಲಿ ಡಾ.ಗವಿಸಿದ್ದಪ್ಪ ಪಾಟೀಲ ಕಿವಿಮಾತು

ಮನೆಯಲ್ಲಿ ಹಲವು ಜ್ಞಾನ ಶಾಖೆಗಳ ಪುಸ್ತಕಗಳು ಇರಲಿ

• **ಕನ್ನಡಪ್ರಭ ವಾರ್ತೆ** ಬಸವಕಲ್ಯಾಣ

ಹಲವು ಜ್ಞಾನ ಶಾಖೆಗಳ ಪುಸ್ತಕ ಹೊಂದಿರುವ ಗ್ರಂಥಾಲಯ ಮನೆಯಲ್ಲಿರಬೇಕೆಂದು ಕಲಬುರಗಿಯ ಹಿರಿಯ ಸಾಹಿತಿ ಡಾ. ಗವಿಸಿದ್ಧಪ್ಪ ಪಾಟೀಲ ಹೇಳಿದರು.

ಬಸವಕಲ್ಯಾಣದತ್ರಿಪುರಾಂತದಉರಿಲಿಂಗಪೆದ್ದಿ ಶಾಖಾಮಠದ ಪೂಜ್ಯ ಪಂಚಾಕ್ಷರಿ ಸ್ವಾಮೀಜಿ ಮನೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಕನ್ನಡಪುಸ್ತಕಪ್ರಾಧಿಕಾರ, ಬೆಂಗಳೂರುಹಾಗೂ ಜಿಲ್ಲಾಜಾಗೃತಸಮಿತಿಬೀದರ್‌ಸಹಯೋಗದಲ್ಲಿ ಆಯೋಜಿಸಿದ್ದ 'ಮನೆಗೊಂದುಗ್ರಂಥಾಲಯ' ಅನುಷ್ಠಾನ ಸಮಾರಂಭ ಉದ್ಘಾಟಿಸಿ ಮಾತನಾಡಿ, ಮನೆಯಲ್ಲಿ ಗ್ರಂಥಾಲಯ ಇದ್ದರೆ ಸಹಜವಾಗಿಯೇ ಓದುವ ಹವ್ಯಾಸ ಬೆಳೆಯುತ್ತದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪುಸ್ತಕ ಯೋಜನೆಯನ್ನು ಹಾಕಿಕೊಂಡು ಬರಹಗಾರರಿಗೆ ಬರೆಯಲು ಹಚ್ಚಿ ,ಪುಸ್ತಕವನ್ನು ಖರೀದಿ ಮಾಡಿಸಾಹಿತಿಗಳಿಗೆಉತ್ತೇಜನವನ್ನುನೀಡುತ್ತಿದ್ದಾರೆ. ಇದು ಪುಸ್ತಕ ಸಂಸ್ಕೃತಿ ಬೆಳೆಸುವ ಅನನ್ಯ ವಿಧಾನವಾಗಿದೆ. ಜಗತ್ತಿನಲ್ಲಿ ಅತ್ತಿ ಹೆಚ್ಚು ಪುಸ್ತಕ ಓದಿದ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಮತ್ತು ಕಾರ್ಲ ಮಾರ್ಕ್ಸ್ ಇವರ ಓದಿನ, ಅಧ್ಯಯನ ಶೀಲತೆಯ ಸ್ಮರಣಾರ್ಥ ಲಂಡನ್ ಗ್ರಂಥಾಲಯದಲ್ಲಿಸ್ಮಾರಕವಾಗಿಸಿದ್ದಾರೆಎಂದು ಹೇಳಿದರು.

ಬರಹಗಾರಡಾ.ಭೀಮಾಶಂಕರಬಿರಾದಾರ ವಿಶೇಷ ಉಪನ್ಯಾಸ ನೀಡಿ, ಮಾತನಾಡುವ ಪ್ರವೃತ್ತಿ ಹೆಚ್ಚಾಗಿ ಕೃತಿಗಳ ಓದು ಗೌಣವಾಗುತ್ತಿರುವುದು ಈ ಕಾಲದ ಬಹುದೊಡ್ಡ ಸಾಂಸ್ಕೃತಿಕ ಬಿಕ್ಕಟ್ಟಿಗೆ ಕಾರಣವಾಗಿದೆ. ಎಲ್ಲ ದೇಶ ಕಾಲದಲ್ಲಿ ಚಾರಿತ್ರಿಕ ವಾಗಿ, ಸಾಂಸ್ಕೃತಿಕವಾಗಿ ಪಲ್ಲಟಗಳನ್ನು ಮಾಡಲು ಸಾಧ್ಯವಾದದ್ದು ಬರಹಗಳಿಂದ ಮತ್ತು ಕೃತಿಗಳಿಂದ. ಈ ಕಾಲಘಟ್ಟದಲ್ಲಿ ಸಾಕ್ಷರತೆ ಹೆಚ್ಚಿನ ಪ್ರಮಾಣದಲ್ಲಿ ಇದ್ದರೂ, ಗಂಭೀರವಾದ ಓದು, ಅಧ್ಯಯನದಲ್ಲಿ ತೊಡಗಿರುವವರ ಸಂಖ್ಯೆ ವಿರಳವಾಗಿದೆ ಎಂದರು.



ಬಸವಕಲ್ಯಾಣದ ತ್ರಿಪುರಾಂತದ ಉರಿಲಿಂಗ ಪೆದ್ದಿ ಶಾಖಾಮಠದ ಪೂಜ್ಯ ಪಂಚಾಕ್ಷರಿ ಸ್ವಾಮೀಜಿ ಮನೆಯಲ್ಲಿ 'ಮನೆಗೊಂದು ಗ್ರಂಥಾಲಯ' ಅನುಷ್ಠಾನ ಸಮಾರಂಭದಲ್ಲಿ ಡಾ.ಗವಿಸಿದ್ದಪ್ಪ ಪಾಟೀಲ್ ಮಾತನಾಡಿದರು. ಉರಿಲಿಂಗಪೆದ್ದಿ ಮಠದ ಪೀಠಾಧಿಪತಿ ಪಂಚಾಕ್ಷರಿ ಸ್ವಾಮೀಜಿ, ಇನ್ನಿತರರಿದ್ದರು.

ಸಾರ್ವಜನಿಕ ಜೀವನದಲ್ಲಿ ಇರುವವರು ಹೆಚ್ಚು ಓದುವ ಮೂಲಕ ಜನ ಸಮುದಾಯದ ಸಮಸ್ಯೆಗಳನ್ನು ಸವಾಲುಗಳಿಗೆ ಕಾಳಜಿ ಯಿಂದ ಸ್ಪಂದಿಸಬಹುದು. ಪಠ್ಯದ ಓದು ವ್ಯಕ್ತಿಯ ಒಳ ಮತ್ತು ಹೊರ ಜಗತ್ತನ್ನು ಬದಲಾಯಿಸುವ ಸಾಧ್ಯತೆ ಹೊಂದಿದೆ. ಪ್ರತಿಯೊಬ್ಬರೂ ಮನೆಯಲ್ಲಿ ಪುಸ್ತಕ ಮನೆ ನಿರ್ಮಿಸುವುದು ಅಗತ್ಯವಿದೆ ಎಂದರು.

ಕಲಬುರ್ಗಿಯ ನಿವೃತ್ತ ಪ್ರಾಧ್ಯಾಪಕ ಡಾ.ರೊಲೇಕರ ನಾರಾಯಣ ಅಧ್ಯಕ್ಷತೆ ವಹಿಸಿ ಮಾತನಾಡಿ, 'ಯೋಚನೆ ಮಾಡುವ ಶಕ್ತಿಯನ್ನು ಪುಸ್ತಕ ಓದುವುದರಿಂದ ಮಾತ್ರ ಸಾಧ್ಯ. ಪುಸ್ತಕಗಳು ನಮ್ಮ ಜೀವನ ಸಂಗಾತಿಯಾಗಿ ನಮ್ಮನ್ನು ಮುನ್ನಡೆಸುತ್ತವೆ ಎಂದರು.

ಉರಿಲಿಂಗಪೆದ್ದಿ ಮಠದ ಪೀಠಾಧಿಪತಿ ಪಂಚಾಕ್ಷರಿ ಸ್ವಾಮೀಜಿ ಮಾತನಾಡಿ, ಜ್ಞಾನ ಪರಂಪರೆಯ ಬೆಳವಣಿಗೆಗೆ ಪುಸ್ತಕಗಳು ಮಹತ್ವ ಪಡೆಯುತ್ತವೆ. ತತ್ವಶಾಸ್ತ್ರ, ವಚನ, ತತ್ವಪದ ಯಾವುದೇ ಕೃತಿಗಳಾದರೂ ಪ್ರತಿಯೊಬ್ಬರ ಮನೆಯಲ್ಲಿ ಇರಬೇಕು. ಪೋಷಕರು ಮೊಬೈಲ್ ಬಿಟ್ಟು ಪುಸ್ತಕ ಹಿಡಿದರೆ ಮಕ್ಕಳಲ್ಲಿ ಓದುವ ರೂಢಿ ಕರಗತವಾಗುತ್ತದೆ. ಮನೆ, ಮಠ, ಶಾಲೆ ಕಾಲೇಜು, ಸಾರ್ವಜನಿಕ ಸ್ಥಳಗಳಲ್ಲಿ ಗ್ರಂಥಾಲಯ ಅನುಷ್ಠಾನಕ್ಕೆ ತರಬೇಕು. ನಮ್ಮೆಲ್ಲರ ಜೀವನ ಕೈಹಿಡಿದು ನಡೆಸುವ ಕೆಲಸ ಪುಸ್ತಕ ದಿಂದ ಸಾಧ್ಯ ಎಂದರು.


ಮನೆಗೊಂದು ಗ್ರಂಥಾಲಯ ಜಾಗೃತ ಸಮಿತಿ ಜಿಲ್ಲಾ ಸಂಚಾಲಕ ಬಾಲಾಜಿ ಕುಂಬಾರ ಮಾತನಾಡಿ, ಸಾಮಾಜಿಕ ಜಾಲತಾಣ ಎಷ್ಟೇ ಪ್ರಭಾವಶಾಲಿ ಆಗಿದ್ದರೂ, ಎಷ್ಟೇ ವೇಗವಾಗಿ ಮಾಹಿತಿ ಒದಗಿಸಿದರೂ, ಪುಸ್ತಕ ಓದಿನಿಂದ ದೊರೆಯುವ ಖುಷಿ ಅನಂತ ವಾದದ್ದು. ಹೊಸ ಪೀಳಿಗೆಯಲ್ಲಿ ಪುಸ್ತಕ ಓದಿನ ಅಭಿರುಚಿ ಮೂಡಿಸುವ ಉದ್ದೇಶದಿಂದ ಕನ್ನಡ ಪುಸ್ತಕ ಪ್ರಾಧಿಕಾರದ ಮಹತ್ವಾ ಕಾಂಕ್ಷಿ ಯೋಜನೆ ಮನೆಗೊಂದು ಗ್ರಂಥಾಲಯ ಅನುಷ್ಠಾನ ಮುಖಾಂತರ ಪ್ರತಿಯೊಂದು ಮನೆಯಲ್ಲಿ ಪುಸ್ತಕ ಸಂಸ್ಕೃತಿ ಹಾಗೂ ಓದುವ ಸಂಸ್ಕೃತಿ ಬೆಳೆಸುವ ಉದ್ದೇಶ ಹೊಂದಿದೆ ಎಂದರು.

ಇದೇ ಸಂದರ್ಭದಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪದವಿ ಪಡೆದ ಡಾ.ಸಂಜುಕುಮಾರ ನಡುಕರ ಅವರಿಗೆ ಸನ್ಮಾನಿಸಲಾಯಿತು.

ಚಿಂತಕರಾದ ಸಂದೀಪ ಮುಕಿಂದೆ, ರವಿಂದ್ರ ಕೊಳಕೂರ, ಡಾ.ಸಿದ್ದಪ್ಪಾ ಹೊಸಮನಿ, ನಾಗೇಂದ್ರ ಡೋಲೆ, ನಾಗಪ್ಪ ನಿಣ್ಣೆ, ಶ್ರೀಪತಿ ಬೇಲೂರು, ಸುಮಿತ ಖೇಳಗಿ, ಮಹಾಲಿಂಗ ದೇವರು, ರಾಮಜಿ ಸಕ್ಪಾಲ್ ಬೇಲೂರ, ಡಾ.ಪೀರಪ್ಪಾ ಸಜ್ಜನ, ವೀರಶೆಟ್ಟಿ ಪಾಟೀಲ, ಗುರುನಾಥ ವಾಗ್ಮೊರೆ, ಸುಮೀತ್ ಖೇಳಗೆ ಮೊದಲಾದವರು ಇದ್ದರು.

ಅಲಿಯಂಬರ್ ಶಾಲೆಯ ಹಳೆಯ ವಿದ್ಯಾರ್ಥಿಗಳ ಸ್ನೇಹ ಸಮ್ಮಿಲನ

20 ವರ್ಷಗಳ ಬಳಿಕ ಭೇಟಿಯಾದ ಸಹಪಾಠಿಗಳು



ಬೀದರ್‌ತಾಲ್ಲೂಕಿನ ಕಾಡವಾದ ಸಮೀಪದ ವಿಂಟೇಜ್ ರಿಟ್ರೀಟ್ ಸಭಾಂಗಣದಲ್ಲಿ ಅಲಿಯಂಬರ್ ಸರ್ಕಾರಿ ಪ್ರೌಢಶಾಲೆ ಹಳೆಯ ವಿದ್ಯಾರ್ಥಿಗಳ ಸ್ನೇಹ ಸಮ್ಮಿಲನ ಕಾರ್ಯಕ್ರಮ ನಡೆಯಿತು.

• **ಕನ್ನಡಪ್ರಭ ವಾರ್ತೆ** ಬೀದರ್

ತಾಲೂಕಿನ ಅಲಿಯಂಬರ್‌ಗ್ರಾಮದ ಸರ್ಕಾರಿ ಪ್ರೌಢಶಾಲೆಯ 2006ರ ಎಸ್ಎಸ್ಎಲ್‌ಸಿ ಬ್ಯಾಚ್‌ನ ವಿದ್ಯಾರ್ಥಿಗಳ ಸ್ನೇಹ ಸಮ್ಮಿಲನ ಕಾಡವಾದ ಸಮೀಪದ ವಿಂಟೇಜ್ ರಿಟ್ರೀಟ್ ಸಭಾಂಗಣದಲ್ಲಿ ಬುಧವಾರ ನಡೆಯಿತು.

20 ವರ್ಷಗಳ ಬಳಿಕ ಹಳೆಯ ವಿದ್ಯಾರ್ಥಿಗಳು ಸಮ್ಮಿಲಗೊಂಡರು. ಶಾಲಾ ದಿನಗಳು ಹಾಗೂ ಸ್ನೇಹದ ಮಧುರ ಕ್ಷಣಗಳನ್ನು ಪರಸ್ಪರ ಹಂಚಿಕೊಂಡರು. ಆಟಗಳು, ಮನರಂಜನಾ ಚಟುವಟಿಕೆ ಗಳು ಹಾಗೂ ಫೋಟೋ ಸೆಷನ್ ಸಂಭ್ರಮ ಇಮ್ಮಡಿಗೊಳಿಸಿದವು.

ಸ್ನೇಹ ಅಮೂಲ್ಯ ಸಂಪತ್ತು. ಕಾಲ, ಪರಿಸ್ಥಿತಿಗಳು ಬದಲಾಗಬಹುದು. ಆದರೆ, ನಿಜವಾದ ಸ್ನೇಹ ಎಂದೂ ಬದಲಾಗುವುದಿಲ್ಲ. ಎರಡು ದಶಕಗಳ ನಂತರವೂ ಹಳೆಯ ವಿದ್ಯಾರ್ಥಿಗಳು ಗಾಢ ಗೆಳೆತನ, ಪರಸ್ಪರ ಪ್ರೀತಿ, ವಿಶ್ವಾಸ ಉಳಿಸಿಕೊಂಡಿರುವುದು ಇದಕ್ಕೆ ನಿದರ್ಶನ ಎಂದು ಹಳೆಯ ವಿದ್ಯಾರ್ಥಿ ಸಾಗರ್ ಪಡಸಲೆ ಹೇಳಿದರು.

ಯಶಸ್ಸು ಎಂದರೆ ವೈಯಕ್ತಿಕ ಸಾಧನೆಯಲ್ಲ. ನಮ್ಮೊಂದಿಗೆ ಬಂದ ಸ್ನೇಹಿತರೊಂದಿಗೆ ಸಂತೋಷ ಹಂಚಿಕೊಳ್ಳುವುದಾಗಿದೆ ಎಂದು ತಿಳಿಸಿದರು.

ಹಳೆಯ ವಿದ್ಯಾರ್ಥಿಗಳಾದ ಮನ್ಮಥ್ ಮಡಿವಾಳ, ದೇವಿದಾಸ ಘೋಣೆ, ದಿಲೀಪ್ ರಾಜಕುಮಾರ ರಾಯಗೊಂಡೆ, ಪ್ರಕಾಶ್ ಮಾಳೆ, ಅನಿಲ್ ಜ್ಯಾಂತೆ, ಗಣೇಶ್, ಶಿವಕುಮಾರ ಕಪಲಾಪುರೆ, ಭಗವಾನ್, ರಾಜಕುಮಾರ ಜಮಗೆ, ಭಗವಂತ ಸಾಗ್ಯೆ, ಸತೀಶ್, ಬಸಪ್ಪ ಬಸ್ತೆ, ಘುಡುಸಾಬ್, ಆನಂದ ಮಡಿವಾಳ, ವಿಜಯಕುಮಾರ, ತುಕಾರಾಮ, ಭಗವಂತ ರಾಯಗೊಂಡ, ಸೋಮನಾಥ ಸಾಗ್ಯೆ ಜೈಶ್ರೀ ಖಂಡ್ರೆ, ಜೈಶ್ರೀ ಶಿವಶೆಟ್ಟೆ, ಲಕ್ಷ್ಮಿ, ಬಬಿತಾ, ಅಂಬಿಕಾ ಮತ್ತಿತರರು ಇದ್ದರು.

ಕನ್ನಡಪ್ರಭ
ಶುಕ್ರವಾರ 8.05.2026

ಅಧಿಕಾರಿಗಳೊಂದಿಗೆ ನೂತನ ಡಿಸಿ ಮೊದಲ ಸಭೆ

ಕುಡಿಯುವ ನೀರಿನ ಸಮಸ್ಯೆ, ಬಿಸಿಗಾಳಿ, ಜಾನುವಾರುಗಳಿಗೆ ಮೇವಿನ ಲಭ್ಯತೆ ಕುರಿತು ಚರ್ಚೆ ನಡೆಸಿದ ಜಿಲ್ಲಾಧಿಕಾರಿ ಪೂವಿತಾ

• **ಕನ್ನಡಪ್ರಭ ವಾರ್ತೆ** ರಾಯಚೂರು

ಜಿಲ್ಲೆಗೆ ವರ್ಗಾವಣೆಗೊಂಡು ನೂತನ ಜಿಲ್ಲಾಧಿಕಾರಿಯಾಗಿ ಆಗಮಿಸಿದ ಪೂವಿತಾ ಎಸ್. ಅವರು ವಿವಿಧ ಇಲಾಖೆಗಳ ಅಧಿಕಾರಿಗಳೊಂದಿಗೆ ಗುರುವಾರ ಮೊದಲ ಸಭೆಯನ್ನು ನಡೆಸಿದರು.

ಬುಧವಾರ ಸಂಜೆಯಷ್ಟೇ ನಿರ್ಗಮಿತ ಡಿಸಿ ನಿತೀಶ್ ಕೆ. ಅವರಿಂದ ಅಧಿಕಾರ ಹಸ್ತಾಂತರ ಪಡೆದುಕೊಂಡು ಅಧಿಕಾರ ಸ್ವೀಕರಿಸಿದ್ದ ಹೊಸ ಡಿಸಿ ಗುರುವಾರ ಬೆಳಗ್ಗೆ ಸ್ಥಳೀಯ ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಕುಡಿಯುವ ನೀರಿನ ಸಮಸ್ಯೆ. ಬಿಸಿಗಾಳಿ ಹಾಗೂ ಜಾನುವಾರುಗಳಿಗೆ ಮೇವಿನ ಲಭ್ಯತೆ ಕುರಿತು ಚರ್ಚಿಸಿದರು.

ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಹೊಸ ಡಿಸಿ ಪೂವಿತಾ ಎಸ್. ಅವರು, ಬೇಸಿಗೆ ಇರುವುದರಿಂದ ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆಗಳಿಗೆ ಪ್ರಥಮ ಆದ್ಯತೆ ನೀಡುವ ಮೂಲಕ ಜಿಲ್ಲೆಯ



ರಾಯಚೂರು ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ನೂತನ ಜಿಲ್ಲಾಧಿಕಾರಿ ಪೂವಿತಾ ಎಸ್. ಅವರು ವಿವಿಧ ಇಲಾಖೆಗಳ ಅಧಿಕಾರಿಗಳೊಂದಿಗೆ ಮೊದಲ ಸಭೆಯನ್ನು ನಡೆಸಿ ಚರ್ಚಿಸಿದರು.

ಜನರಿಗೆ ಕುಡಿಯುವ ನೀರಿನ ಸಮಸ್ಯೆಗಳಾಗದಂತೆ ನೋಡಿಕೊಳ್ಳಬೇಕು, ಯಾವುದೇ ತಾಲ್ಲೂಕಿನಲ್ಲಿ ನೀರಿನ ಸಮಸ್ಯೆಗಳಿರುವ ಗ್ರಾಮಗಳನ್ನು ಗುರುತಿಸಿ ಮುಂಜಾಗ್ರತೆ ವಹಿಸಬೇಕು. ಈ ಕುರಿತು ಮಾಹಿತಿ ಪಡೆಯಲು ಪ್ರತಿ ಸೋಮವಾರ ವಿಸಿ ಮೂಲಕ ಸಭೆ ಕರೆಯುತ್ತೇನೆ ತಾವು ಇಲ್ಲಿಗೆ ಬರುವುದು ಬೇಕಿಲ್ಲ ಆಯಾ ತಾಲ್ಲೂಕಿನ ಅಧಿಕಾರಿಗಳು ತಾವಿದ್ದ ಸ್ಥಳದಿಂದಲೇ ಮಾಹಿತಿ ಕೊಡಬೇಕು. ಕುಡಿಯುವ ನೀರಿನ ಸಹಾಯವಾಣಿಯಿಂದ ಬರುವ ಕರೆಗಳಿಗೆ ತಕ್ಷಣ ಸ್ಪಂದಿಸಬೇಕು ಎಂದರು.

ನೀರಿನ ಸಮಸ್ಯೆಗಳಿರುವ ಕಡೆ ಖಾಸಗಿ ಬೋರವೆಲ್ ಮತ್ತು ಟ್ಯಾಂಕರಗಳ ಮೂಲಕ ಜನರಿಗೆ ನೀರು ಕೊಡುವ ಕೆಲಸ ಮಾಡಬೇಕು. ನೀರಿನ ಗುಣಮಟ್ಟವನ್ನು ಪರೀಕ್ಷೆ ಮಾಡಬೇಕು. ಜಿಲ್ಲೆಯ ಯಾವ- ಯಾವ ಭಾಗದಿಂದ ಸಮಸ್ಯೆಗಳು ಬರುತ್ತವೆ ಎನ್ನುವುದರ ಕುರಿತು ಪಟ್ಟಿ ಮಾಡಿ. ಕುಡಿಯುವ ನೀರಿಗೆ ಸಂಬಂಧಿಸಿದಂತೆ ಯಾವುದಾದರು ರಿಪೇರಿ ಸೇರಿದಂತೆ ಇತರೆ ಏನಾದರು ಕೆಲಸ ಇದ್ದಲ್ಲಿ ಆಯಾ ತಾಲ್ಲೂಕು ಮಟ್ಟದಲ್ಲಿ ತಾಪಂ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಪ್ರಪೋಸಲ್ ಕೊಡಿ. ಇತರೆ ಯಾವುದೇ ಸಮಸ್ಯೆಗಳಿದ್ದರೆ ನಮ್ಮ ಗಮನಕ್ಕೆ ತರಬೇಕು. ಜಾನುವಾರುಗಳಿಗೆ ಮೇವಿನ ಸಮಸ್ಯೆಗಳಾಗದಂತೆ ನೋಡಿಕೊಳ್ಳಬೇಕೆಂದು ಹೇಳಿದರು.ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಈಶ್ವರ್‌ಕಾಂದೂ ಮಾತನಾಡಿ, ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆಗಳ ಕುರಿತು ಸಂಬಂಧಿಸಿದ ಇಲಾಖೆಯ ಅಧಿಕಾರಿಗಳು ಸರಿಯಾದ ಮಾಹಿತಿ ನೀಡಬೇಕು. ಗ್ರಾಮ ಮತ್ತು ನಗರಪ್ರದೇಶಗಳಲ್ಲಿನೀರಿನಸಮಸ್ಯೆಗಳಾಗಬಾರದು ಇದಕ್ಕೆ ಯಾವುದೇ ಅನುದಾನದ ಕೊರತೆ ಇಲ್ಲ ಈ ಕುರಿತು ಅಧಿಕಾರಿಗಳು ಹೆಚ್ಚಿನ ಗಮನ ಹರಿಸಬೇಕು ಎಂದು ಹೇಳಿದರು.

ಈ ಸಭೆಯಲ್ಲಿ ಮಹಾನಗರ ಪಾಲಿಕೆ ಆಯುಕ್ತ ಜುಬಿನ್ ಮೊಹಾಪಾತ್ರ, ಸಹಾಯಕ ಆಯುಕ್ತ ಡಾ.ಹಂಪಣ್ಣ ಸಜ್ಜನ, ಜಿಪಂ ಯೋಜನಾ ನಿರ್ದೇಶಕ ಶರಣಬಸವರಾಜು, ತಹಸೀಲ್ದಾರ್ ಸುರೇಶ ವರ್ಮಾ ಸೇರಿ ಜಿಲ್ಲಾ ಮತ್ತು ತಾಲೂಕು ಮಟ್ಟದ ವಿವಿಧ ಇಲಾಖೆಗೆ ಅಧಿಕಾರಿ,ಸಿಬ್ಬಂದಿ ವರ್ಗದವರು ಹಾಜರಿದ್ದರು.

ಸುದ್ದಿ ಸಿಂಚನ

11ಕ್ಕೆ ರಾಯಚೂರು ಐಟಿಐ ಕಾಲೇಜಿನಲ್ಲಿ ಶಿಶಿಕ್ಷು ಮೇಳ

ರಾಯಚೂರು: 2026-27ನೇ ಸಾಲಿನಲ್ಲಿ ಪಿ.ಎಮ್. ಎನ್.ಎ.ಎಮ್ ವತಿಯಿಂದ ಸ್ಥಳೀಯ ಮಾಣಿಕ ರಾಯಚೂರು ನಗರದ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಮೇ 11ರ ಬೆಳಗ್ಗೆ 10ಗಂಟೆಗೆ ಶಿಶಿಕ್ಷು ಮೇಳವನ್ನು ಹಮ್ಮಿಕೊಳ್ಳಲಾಗಿದ್ದು, ಅಭ್ಯರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸ ಬೇಕೆಂದು ಕೋರಲಾಗಿದೆ. ಈ ಶಿಶಿಕ್ಷು ಮೇಳದಲ್ಲಿ ವಿವಿಧ ಉದ್ದಿಮೆಗಳ ಪ್ರತಿನಿಧಿಗಳು ಭಾಗವಹಿಸುತ್ತಿದ್ದು, ಶಿಶಿಕ್ಷು ತರಬೇತಿಗಾಗಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳುತ್ತಿರುವುದರಿಂದ ಐಟಿಐ ದ್ವಿತೀಯ ವರ್ಷದಲ್ಲಿ ತರಬೇತಿ ಪಡೆಯುತ್ತಿರುವ ಹಾಗೂ ಈಗಾಗಲೇ ಐಟಿಐ ಉತ್ತೀರ್ಣರಾದ ಪುರುಷ ಹಾಗೂ ಮಹಿಳಾ ಅಭ್ಯರ್ಥಿಗಳು ಈ ಮೇಳದಲ್ಲಿ ಭಾಗವಹಿಸ 'ಬಹುದಾಗಿದೆ. ಮೇಳದಲ್ಲಿ ಕೆ.ಪಿ.ಸಿ, ವೈಟಿಪಿಎಸ್, ಟೋಯೋಟಾ, ಹೋಂಡಾ ಪ್ರೈವೇಟ್ ಲಿಮಿಟೆಡ್ ಕೋಲಾರ, ಕೇನ್ಸ ಟೆಕ್ನಾಲಜಿ ಇಂಡಿಯಾ ಲಿಮಿಟೆಡ್, ಎಲ್.ಎನ್.ಟಿ, ಜೆ.ಎಸ್,ಡಬ್ಲ್ಯೂ ಹಾಗೂ ಬೆಂಗಳೂರು ಮತ್ತು ಹೈದ್ರಾಬಾದ್ ನ ಪ್ರತಿಷ್ಠಿತ ಬಹುರಾಷ್ಟ್ರೀಯ (ಮಲ್ಟಿ ನ್ಯಾಷನಲ್) ಕಂಪನಿಗಳು ಭಾಗವಹಿ ಸಲಿವೆ. ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ: 9036684778, 9035198134, 9538003397, 8904784507ಗೆ ಸಂಪರ್ಕ ಮಾಡಬಹುದಾಗಿದೆ ಅಥವಾ ತರಬೇತಿ ಸಂಸ್ಥೆಗೆ ಕಚೇರಿಗೆ ಭೇಟಿ ನೀಡಿ ಮಾಹಿತಿ ಪಡೆಯಬಹುದು ಎಂದು ಸಂಸ್ಥೆಯ ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಜ್ಜಲಗುಡ್ಡ ಗ್ರಾಮದಲ್ಲಿ ದೀಪದಾನ ಸಮಾರಂಭ



ಮುದಗಲ್: ಪಟ್ಟಣ ಸಮೀಪದ ಸಜ್ಜಲಗುಡ್ಡ ಗ್ರಾಮದ ಸಜ್ಜಲಶ್ರೀ ಡಿಇಡಿ ಕಾಲೇಜಿನ ದ್ವಿತಿಯ ವರ್ಷದ ಪ್ರಶಿಕ್ಷಣಾರ್ತಿಗಳ ದೀಪ ದಾನ ಸಮಾರಂಭ ನಡೆಯಿತು.ಕಾರ್ಯ ಕ್ರಮವನ್ನು ಶ್ರೀಮಠದ ದೊಡ್ಡಬಸವಾರ್ಯ ಶ್ರೀಗಳು ಜೋತಿಬೆಳಗಿಸುವ ಮೂಲಕ ಉದ್ಘಾಟಿಸಿದರು. ನಂತರ ಲಿಂಗಸಗೂರು ತಾಲೂಕು ಪ್ರೌಢಶಾಲೆ ಸಹಶಿಕ್ಷಕರ ಸಂಘದ ಅಧ್ಯಕ್ಷ ಬಸವರಾಜ ಹಂದ್ರಾಳ ಮಾತನಾಡಿ.ವಿದ್ಯಾರ್ಥಿಗಳು ಜೀವನದಲ್ಲಿ ಒತ್ತಡ ನಿರ್ವಹಣೆ, ಸಮಯ ಪ್ರಜ್ಞೆ, ನಿರ್ದಿಷ್ಟ ಗುರಿ ಇಟ್ಟುಕೊಂಡು ಯಶಸ್ಸು ಸಾಧಿಸಬೇಕು ಎಂದರು. ಪರೀಕ್ಷೆಯಲ್ಲಿ ಅಂಕಗಳಿಕೆ ಅಷ್ಟೇ ಅಲ್ಲದೆ ಜೀವನ ಕೌಶಲ ಬೆಳೆಸಿಕೊಳ್ಳಬೇಕು. ನಿಮ್ಮ ಆಸಕ್ತಿಯ ಕ್ಷೇತ್ರದಲ್ಲಿ ಆತ್ಮ ವಿಶ್ವಾಸದಿಂದ ಮುಂದುವರಿದು ಯಶಸ್ವಿಯಾಗಬೇಕು ಎಂದು ಕಿವಿಮಾತು ಹೇಳಿದರು. ಇದೇ ವೇಳೆ ನಂದವಾಡಗಿಯ ಮಹಾಂತ ಶ್ರೀಗಳು ಆಶೀರ್ವಚನ ನೀಡಿದರು. ಈ ಸಂದರ್ಭದಲ್ಲಿ ಶಿಕ್ಷಕರಾದ ಮುತ್ತು ವಡ್ಡರ್, ಸೋಮಶೇಖರ ಬಡಿಗೇರ, ಹಾಲಯ್ಯ ಸೇರಿ ಇನ್ನಿತರರು ಇದ್ದರು.

ಬಸನಗೌಡ ಬಾದರ್ಲಿಗೆ ಸಚಿವ ಸ್ಥಾನ ನೀಡಲು ಭೋವಿಗಳ ಒತ್ತಾಯ

ಸಿಂಧನೂರು: ವಿಧಾನ ಪರಿಷತ್ ಸದಸ್ಯ ಬಸನಗೌಡ ಬಾದರ್ಲಿ ಅವರಿಗೆ ಸಚಿವ ಸಂಪುಟದ ಪುನರ್ ರಚನೆಯ ಸಂದರ್ಭದಲ್ಲಿ ಸಚಿವ ಸ್ಥಾನ ನೀಡಬೇಕು ಎಂದು ಭೋವಿ ಸಮುದಾಯದ ಮುಖಂಡ ಪ್ರಕಾಶ ಸೋಮಲಾಪುರ ಒತ್ತಾಯಿಸಿದರು.ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಯುವ ಕಾಂಗ್ರೆಸ್ ರಾಜ್ಯ ಅಧ್ಯಕ್ಷರಾಗಿ ಬಸನಗೌಡ ಬಾದರ್ಲಿ ಅವರು ರಾಜ್ಯಾದ್ಯಂತ ಕಾಂಗ್ರೆಸ್ ಪಕ್ಷ ಸಂಘಟನೆ ಮಾಡಿದ್ದಾರೆ. ಕೆಪಿಸಿಸಿ ಮತ್ತು ಎಐಸಿಸಿ ಸೂಚನೆ ಮೇರೆಗೆ ಪಕ್ಷದ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ್ದಾರೆ. ಸಾಮಾಜಿಕ ಕಾರ್ಯಗಳನ್ನು ಕೈಗೊಂಡು ಬಡವರಿಗೆ ಆಸರೆಯಾಗಿದ್ದಾರೆ. ಹೀಗಾಗಿ ಬಸನಗೌಡ ಬಾದರ್ಲಿ ಅವರಿಗೆ ಸಚಿವ ಸ್ಥಾನ ನೀಡಿದರೆ ಹೆಚ್ಚು ಅಭಿವೃದ್ಧಿ ಕೆಲಸಗಳ ನಡೆಯುತ್ತವೆ. ಜೊತೆಗೆ ಕಾಂಗ್ರೆಸ್ ಪಕ್ಷ ಸಂಘಟನೆಗೆ ಅನುಕೂಲವಾಗಿದೆ ಎಂದು ಹೇಳಿದರು.ಮುಖಂಡ ವೀರೇಶ ಸಿದ್ರಾಂಪುರ ಮಾತನಾಡಿದರು. ಭೋವಿ ಸಮಾಜದ ಮುಖಂಡರಾದ ರಡ್ಡೆಪ್ಪ ಸೋಮಲಾಪುರ, ಅಯ್ಯಪ್ಪ ಯದ್ದಲದೊಡ್ಡಿ, ನಾಗರಾಜ ಯದ್ದಲದೊಡ್ಡಿ, ಶರಣಪ್ಪ, ಸಿದ್ದಪ್ಪ, ಬಾಲರಾಜ, ಅಯ್ಯಪ್ಪ, ಮಾರುತಿ ಸೇರಿದಂತೆ ಅನೇಕರು ಇದ್ದರು.

56,432 ಹುದ್ದೆಗಳಿಗೆ ಅಧಿಸೂಚನೆ ಹೊರಡಿಸಿ

ಉದ್ಯೋಗಾಕಾಂಕ್ಷಿಗಳ ಹೋರಾಟ ಸಮಿತಿ ಆಗ್ರಹ | ಪ್ರತಿಭಟನೆ ನಡೆಸಿ, ಸ್ಥಾನಿಕ ಅಧಿಕಾರಿ ಮೂಲಕ ಸಿಎಂಗೆ ಮನವಿ

• **ಕನ್ನಡಪ್ರಭ ವಾರ್ತೆ** ರಾಯಚೂರು

ರಾಜ್ಯ ಸರ್ಕಾರ ತಿಳಿಸಿದಂತೆ 56,432 ಹುದ್ದೆಗಳಿಗೆ ಕೂಡಲೇ ಅಧಿಸೂಚನೆ ಹೊರಡಿಸಬೇಕು,ಕೆಪಿಎಸ್ ಸಿಸ್ವಚ್ಚಗೊಳಿಸಬೇಕು, ಪಿ.ಸಿ. ಹೋರಟ ಸಮಿತಿ ವರದಿ ಜಾರಿಗೊಳಿಸುವುದು ಸೇರಿ ವಿವಿಧ ಬೇಡಿಕೆಗಳನ್ನು ಈಡೇರಿಸಲು ಆಗ್ರಹಿಸಿ ಉದ್ಯೋಗಾಕಾಂಕ್ಷಿಗಳ ಹೋರಾಟ ಸಮಿತಿ ನೇತೃತ್ವದಲ್ಲಿ ಗುರುವಾರ ಪ್ರತಿಭಟನೆ ನಡೆಸಲಾಯಿತು.

ಸ್ಥಳೀಯ ಜಿಲ್ಲಾಡಳಿತ ಭವನದ ಆವರಣದಲ್ಲಿ ಸೇರಿದ ಸಮಿತಿ ಪದಾಧಿಕಾರಿಗಳು, ಸದಸ್ಯರು ಹಾಗೂ ಉದ್ಯೋಗಾಕಾಂಕ್ಷಿಗಳು ಘೋಷಣೆ ಕೂಗಿ ಪ್ರತಿಭಟಿಸಿದರು. ನಂತರ ಸ್ಥಾನಿಕ ಅಧಿಕಾರಿ ಮುಖಾಂತರ ಸಿಎಂಗೆ ಮನವಿ ರವಾನಿಸಿದರು. ರಾಜ್ಯ ಸರ್ಕಾರವು ಬೆಳಗಾವಿಯಲ್ಲಿ ನಡೆದ ಚಳಿಗಾಲದ ಅಧಿವೇಶನದಲ್ಲಿ 56,432 ಹುದ್ದೆಗಳನ್ನು ಭರ್ತಿ ಮಾಡುವುದಾಗಿ ನೀಡಿದ ಭರವಸೆಯಂತೆ ತಕ್ಷಣ ನೇಮಕಾತಿ ಅಧಿಸೂಚನೆ ಹೊರಡಿಸಬೇಕು,ಎಲ್ಲ ರೀತಿಯ ಪರೀಕ್ಷಾ ಅಕ್ರಮಗಳನ್ನು ತಡೆಗಟ್ಟಲು ಹಾಗೂ ಪಾರದರ್ಶಕ ನೇಮಕಾತಿಗಾಗಿ ಕೆಪಿಎಸ್ಸಿ



ರಾಯಚೂರಿನ ಜಿಲ್ಲಾಡಳಿತ ಭವನದ ಆವರಣದಲ್ಲಿ ಉದ್ಯೋಗಾಕಾಂಕ್ಷಿಗಳ ಹೋರಾಟ ಸಮಿತಿ ನೇತೃತ್ವದಲ್ಲಿ ಗುರುವಾರ ಪ್ರತಿಭಟನೆ ನಡೆಸಲಾಯಿತು.

ಸಂಪೂರ್ಣವಾಗಿ ಸ್ವಚ್ಚಗೊಳಿಸಲು ಪಿ.ಸಿ. ಹೋರಾಟ ಸಮಿತಿಯ ವರದಿ ಯನ್ನು ತಕ್ಷಣವೇ ಜಾರಿಗೊಳಿಸಬೇಕು ಎಂದು ಒತ್ತಾಯಿಸಿದರು.ಎಲ್ಲ ನೇಮಕಾತಿಗಳ ದುಬಾರಿ ಅರ್ಜಿ ಶುಲ್ಕವನ್ನು ಕೈ ಬಿಡಬೇಕು ಹಾಗೂ ನೇಮಕಾತಿ ಪರೀಕ್ಷೆ ಸಂದರ್ಭದಲ್ಲಿ ಅಭ್ಯರ್ಥಿಗಳಿಗೆ ಉಚಿತ ಸಾರಿಗೆ ಒದಗಿಸ ಬೇಕು, ರಾಜ್ಯದಲ್ಲಿ ಎಲ್ಲ ನೇಮಕಾತಿ ಪ್ರಾಧಿಕಾರಗಳು ಪ್ರತಿ ವರ್ಷ ನೇಮಕಾತಿ ಪ್ರಕ್ರಿಯೆಯ ವಾರ್ಷಿಕ ಕ್ಯಾಲೆಂಡರ್‌ಬಿಡುಗಡೆಗೊಳಿಸಬೇಕು, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಲ್ಲಿ ಖಾಲಿ ಇರುವ ಎಲ್ಲ ಹುದ್ದೆಗಳನ್ನು ಕೂಡಲೇ ಭರ್ತಿಗೆ ಮುಂದಾಗಬೇಕು, ಸರ್ಕಾರಿ ಉದ್ಯೋಗಗಳ ಮೇಲಿನ ಅನುದಾನ ಕಡಿಮೆ ಮಾಡಲು, ತನ್ಮೂಲಕ ಉದ್ಯೋಗ ಕಡಿತಗೊಳಿಸಲು ಪ್ರಮುಖ ಕಾರಣವಾಗಿ ರುವ ಎಫ್‌ಆರ್‌ಬಿಎಂ ಕಾಯ್ದೆ-2003 ರನ್ನು ರದ್ದುಗೊಳಿಸಬೇಕು, ಬಜೆಟ್‌ನಲ್ಲಿ ಘೋಷಿಸಿದಂತೆ ಧಾರವಾಡದಲ್ಲಿ ಉದ್ಯೋಗಾಕಾಂಕ್ಷಿಗಳು ಹೆಚ್ಚಿರುವ ಜಯನಗರ, ಸಪ್ತಾಪುರ, ಶ್ರೀನಗರ, ಕಲ್ಯಾಣನಗರ ಭಾಗದಲ್ಲಿ ಕೂಡಲೇ ಇಂದಿರಾ ಕ್ಯಾಂಟೀನ್ ತೆರೆಯಬೇಕು ಹಾಗೂ ಧಾರವಾಡ, ಬೆಂಗಳೂರು, ವಿಜಯಪುರ ಸೇರಿದಂತೆ ರಾಜ್ಯದಾದ್ಯಂತ ಉದ್ಯೋಗಾಕಾಂಕ್ಷಿ ಗಳು ಹೆಚ್ಚಿರುವ ಪ್ರದೇಶಗಳಲ್ಲಿರುವ ಹೋಟೆಲ್‌ಗಳು, ಖಾನಾವಳಿಗಳು, ಉಪಹಾರ ಮಂದಿರಗಳಲ್ಲಿ ಸ್ವಚ್ಛತೆ ಹಾಗೂ ಗುಣಮಟ್ಟದ ಆಹಾರ ಒದಗಿಸುವುದನ್ನು ಖಾತ್ರಿಪಡಿಸಲು ಸಂಬಂಧಪಟ್ಟ ಇಲಾಖೆಯಿಂದ ಸೂಕ್ತ ನಿಗಾ ವಹಿಸಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಸಮಿತಿ ರಾಜ್ಯ ಸಹ ಸಂಚಾಲಕ ಚನ್ನಬಸವ ಜಾನೇಕಲ್, ಜಿಲ್ಲಾ ಸಂಘಟನಾಕಾರರಾದ ಶಿವಪ್ಪ ಬಸ್ಕಿಹಾಳ, ವಿನೋದ್ ಕುಮಾರ್, ಸಂತೋಷ್ ಸಾಗರ್, ಅಭಿಲಾಶ್ ವಹಿಸಿದ್ದರು. ಪ್ರತಿಭಟನೆಯಲ್ಲಿ ಉದ್ಯೋಗ ಆಕಾಂಕ್ಷಿಗಳಾದ ಶರಣಬಸವ, ರವಿ ಆತ್ಕೂರ್, ಸುದೀಪ್, ನರಸಪ್ಪ, ಭೀಮರೆಡ್ಡಿ, ಶಿವರಾಜ್, ಉದಯ್ ಕಿರಣ್, , ನವೀನ್ ಕುಮಾರ್, ವೆಂಕಟೇಶ್ ಯರಮರಸ್, ವೆಂಕಟೇಶ್, ವಿನಯ್ ಕುಮಾರ್, ನಾಗರಾಜ್, ನರೇಂದ್ರ, ಟಿ. ರಾಥೋಡ್, ಸರೋಜಾ ಸೇರಿ ಅನೇಕರಿದ್ದರು.

ನಾಳೆ ಮಹರ್ಷಿ ವಾಲ್ಮೀಕಿಯ ಕಂಚಿನ ಪ್ರತಿಮೆ ಅನಾವರಣ



ಸಿರವಾರ: ತಾಲೂಕಿನ ಬಲ್ಲಟಗಿ ಗ್ರಾಮದಲ್ಲಿ ಮೇ 9ರಂದು ಶನಿವಾರ ನೂತನವಾಗಿ ನಿರ್ಮಿಸಿದ ಮಹರ್ಷಿ ವಾಲ್ಮೀಕಿ ವೃತ್ತ ಹಾಗೂ ಕಂಚಿನ ಪ್ರತಿಮೆಯ ಉದ್ಘಾಟನಾ ಸಮಾರಂಭನಡೆಯಲಿದೆ ಎಂದು ಶಾಸಕ ಜಿ.ಹಂಪಯ್ಯ ನಾಯಕ ತಿಳಿಸಿದರು.ಪತ್ರಿಕಾಗೋಷ್ಠಿ ಯಲ್ಲಿ ಮಾತನಾಡಿ, ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದ ಪುರಿ ಸ್ವಾಮೀಜಿ ಹಾಗೂ ಗೋಲಪಲ್ಲಿ ಮಠದ ವರಧನೇಶ್ವರ ಸ್ವಾಮೀಜಿ ಮತ್ತು ಕರೆಗುಡ್ಡ ಮಠದ ವಿಜಯ ಮಹಾಂತೇಶ್ವರ ಸ್ವಾಮೀಜಿಗಳು ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಲಿದ್ದು, ಲೋಕೋಪಯೋಗಿ ಇಲಾಖೆ ಸಚಿವ ಸತೀಶ್ ಜಾರಕಿಹೊಳಿ, ಜಿಲ್ಲಾ ಉಸ್ತುವಾರಿ ಸಚಿವ ಡಾ. ಶರಣಪ್ರಕಾಶ್ ಪಾಟೀಲ್, ಸಣ್ಣ ನೀರಾವರಿ ಹಾಗೂ ವಿಜ್ಞಾನ ತಂತ್ರಜ್ಞಾನ ಇಲಾಖೆ ಸಚಿವ ಎನ್.ಎಸ್. ಬೋಸರಾಜು, ಸಂಸದ ಜಿ.ಕುಮಾರ ನಾಯಕ ಸೇರಿ ಅನೇಕರು ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದರು. ಈ ವೇಳೆ ಪಂಚ ಗ್ಯಾರಂಟಿ ಯೋಜನೆಯ ಅನುಷ್ಠಾನ ಸಮಿತಿ ಅಧ್ಯಕ್ಷ ಬ್ರಿಜೇಶ ಪಾಟೀಲ, ಮುಖಂಡರಾದ ಚುಕ್ಕಿ ಶಿವಕುಮಾರ ಸಾಹುಕಾರ,ಪಪಂ ಅಧ್ಯಕ್ಷ ಹಾಜಿ ಚೌಧ್ರಿ ಸೇರಿ ಅನೇಕರು ಇದ್ದರು.

ಕೆಪಿಎಸ್‌ಸಿ ಸುಧಾರಣಾ ಸದನ ಸಮಿತಿಗೆ ಬಾದರ್ಲಿ ನೇಮಕ



ಸಿಂಧನೂರು: ಕರ್ನಾಟಕ ಲೋಕ ಸೇವಾ ಆಯೋಗದಲ್ಲಿ ನಡೆಯುತ್ತಿರುವ ಅಕ್ರಮಗಳಿಗೆ ಕಡಿವಾಣ ಹಾಕಲು ಮತ್ತು ಆಯೋಗದ ಕಾರ್ಯವೈಖರಿಯಲ್ಲಿ ಸಮಗ್ರ ಸುಧಾರಣೆಗಾಗಿ ಬದಲಾವಣೆ ತರುವ ನಿಟ್ಟಿನಲ್ಲಿ ರಾಜ್ಯ ಸರ್ಕಾರವು ಮಹತ್ವದ ಹೆಜ್ಜೆಯನ್ನು ಇಟ್ಟು ಸದನ ಸಮಿತಿಯನ್ನು ರಚಿಸಿದೆ. ಇದಕ್ಕೆ ಸದಸ್ಯರನ್ನಾಗಿ ಸಿಂಧನೂರು ವಿಧಾನಸಭಾ ಕ್ಷೇತ್ರದ ಶಾಸಕ ಹಂಪನಗೌಡ ಬಾದರ್ಲಿ ಅವರನ್ನು ನೇಮಕ ಮಾಡಿ ಆದೇಶವನ್ನು ಹೊರಡಿಸಿದೆ.

ಆಯೋಗದಲ್ಲಿ ಪಾರದರ್ಶಕತೆ ತರುವುದು ಮತ್ತು ಕೆಪಿಎಸ್ಸಿ ಅಭ್ಯರ್ಥಿಗಳಿಗೆ ಆಗುತ್ತಿರುವ ಅನ್ಯಾಯ ವನ್ನು ಸರಿಪಡಿಸುವ ನಿಟ್ಟಿನಲ್ಲಿ ಈ ಸಮಿತಿಯು ಮಹತ್ವದ ಸಲಹೆಗಳನ್ನು ನೀಡಲಿದೆ. ಕೆಪಿಎಸ್ಸಿ ಪರೀಕ್ಷೆಗಳಲ್ಲಿ ಪದೆಪದೇ ಎದುರಾಗುತ್ತಿರುವ ಗೊಂದಲಗಳಿಂದ ಕಂಗೆಟ್ಟಿದ್ದ ಆಕಾಂಕ್ಷಿಗಳಿಗೆ ಈ ಸಮಿತಿಯ ರಚನೆಯಿಂದ ಹೊಸ ಆಶಾಕಿರಣ ಮೂಡಿಸಿದೆ.

ಶಿಕ್ಷಣ ಕ್ಷೇತ್ರದ ಅಭಿವೃದ್ಧಿಗೆ ರಾಜಕಾರಣ ಬೇಡ

ಶಾಸಕಿ ಕರೆಮ್ಮ ಜಿ.ನಾಯಕ ಅಭಿಮತ | ₹3 ಕೋಟಿ ವೆಚ್ಚದಲ್ಲಿ ನಿರ್ಮಾಣಗೊಂಡ ಶಾಲೆ ಉದ್ಘಾಟನೆ

• **ಕನ್ನಡಪ್ರಭ ವಾರ್ತೆ** ದೇವದುರ್ಗ

ಚುನಾವಣೆ ಬಂದಾಗ ರಾಜಕಾರಣ ಮಾಡೋಣ,ಆದರೆ ಶಿಕ್ಷಣ ಕ್ಷೇತ್ರದ ಅಭಿವೃದ್ಧಿ ಹಾಗೂ ಸೌಲಭ್ಯಗಳನ್ನು ಒದಗಿಸುವಲ್ಲಿ ರಾಜಕಾರಣ ಬೇಡ.ನಾವೆಲ್ಲರೂ ಕೂಡಿ ಮಕ್ಕಳಿಗೆ ಸೂಕ್ತ ಕಲಿಕೆ ಮತ್ತು ಇತರೆ ಅವಕಾಶಗಳನ್ನು ಪ್ರಾಮಾಣಿಕವಾಗಿ ಕಲ್ಪಿಸೋಣ ಎಂದು ಶಾಸಕಿ ಕರೆಮ್ಮ ಜಿ.ನಾಯಕ ತಿಳಿಸಿದರು.

ತಾಲೂಕಿನ ಅಂಜಳ ಗ್ರಾಮದಲ್ಲಿ ಕೆಕೆಆರ್‌ಡಿಬಿ ಯೋಜನೆಯಲ್ಲಿ ₹3 ಕೋಟಿ ವೆಚ್ಚದಲ್ಲಿ ನಿರ್ಮಾಣಗೊಂಡ ಶಾಲೆಯನ್ನು ಉದ್ಘಾಟಿಸಿ ಮಾತನಾಡಿದರು. ನೆರಬಂದಾಗಲೆಲ್ಲಾ ಕೃಷ್ಣಾ ನದಿ ಪಾತ್ರದಲ್ಲಿ ಶಾಲೆಗಳನ್ನು ಮುಚ್ಚುವ ಅನಿವಾರ್ಯತೆ ಇರುತ್ತದೆ. ಈ ಗ್ರಾಮದ ಬಾಲಕಿಯೊಬ್ಬಳು ಡಬ್ಬಿಯೊಂದರಲ್ಲಿ ಕೂಡಿಟ್ಟ ಹಣ ತಂದು ನಮಗೆ ಶಾಲೆ ಕಟ್ಟಿಸಿಕೊಡಿ ಎಂದಾಗ ನನಗೆ



ಕಣ್ಣಂಚಿನಲ್ಲಿ ನೀರುಬಂದಿತ್ತು. ಈಗಾಗಲೇ ಕ್ಷೇತ್ರದಲ್ಲಿ ಆರೋಗ್ಯ ಮತ್ತು ಶಿಕ್ಷಣಕ್ಕೆ ಹೆಚ್ಚು ಆದ್ಯತೆ ನೀಡಿದ್ದು, ಸುಮಾರು 140 ಕೋಟಿ ವೆಚ್ಚದ ಕಾಮಗಾರಿಗಳು ಪ್ರಗತಿಯಲ್ಲಿವೆ. ಇಂತಹ ಶಾಲಾ ಕಟ್ಟಡಗಳನ್ನು ಉಳಿಸಿಕೊಳ್ಳಲು ಪಾಲಕರು, ವಿದ್ಯಾರ್ಥಿಗಳು ಮತ್ತು ಗ್ರಾಮದ ಪ್ರಮುಖರು ಸಹಕಾರ ನೀಡಬೇಕು.ಕಿಡಿಗೇಡಿಗಳಿಂದ ಸುಸಜ್ಜಿತ ಕಟ್ಟಡಗಳನ್ನು ಕಾಪಾಡಿಕೊಳ್ಳಬೇಕು.

ಜನರು ನನಗೆ ಅಧಿಕಾರ ನೀಡಿರುವುದು ಅವರ ರಕ್ಷಣೆ ಮತ್ತು ಅಭಿವೃದ್ಧಿಗಾಗಿ. ಹೀಗಾಗಿ ಟೀಕೆ ಮಾಡುವವರಿಗೆ ನನ್ನ ಅಭಿವೃದ್ಧಿ ಮೂಲಕವೇ ಉತ್ತರ ನೀಡುವೆ ಎಂದು ಶಾಸಕಿ ಕರೆಮ್ಮ ಜಿ. ನಾಯಕ ತಿಳಿಸಿದರು. ಈ ಸಂದರ್ಭದಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಲಕ್ಷ್ಮಣ ಜ್ಯೋತಿ, ಮುಖಂಡರಾದ ಸಿದ್ದಣ್ಣ ತಾತಾ ಮುಂಡರಗಿ, ಬಸನಗೌಡ ದೇಸಾಯಿ, ಶಿಖರೇಶ್ವರ ಪಾಟೀಲ್, ರೇಣುಕಾ ಮಯೂರಸ್ವಾಮಿ, ಮಂಜುನಾಥ ಮಾತ್ಪಳ್ಳಿ, ಗೋವಿಂದರಾಜ್ ನಾಯಕ, ಶರಣಪ್ಪ ಬಳೆ, ರಂಗಣ್ಣ ಮಕಾಶಿ, ಶಿವನಗೌಡ ಕಕ್ಕಲದೊಡ್ಡಿ, ರಂಗಮ್ಮ ಇರಬಗೇರಾ, ಕ್ಷೇತ್ರ ಸಮನ್ವಯ ಅಧಿಕಾರಿ ಶಿವರಾಜ ಪೂಜಾರಿ, ಮುಖ್ಯಗುರು ಮಂಜುಳಾ, ಪಿಡಿಒ ಶಂಶುದ್ದೀನ್ ನಾಗಡದಿನ್ನಿ ಹಾಗೂ ಇತರರು ಇದ್ದರು.

ಮನರೇಗಾ ಕಾಮಗಾರಿಯ ಸ್ಥಳಕ್ಕೆ ಇಒ ಖಾಲೀದ್ ಭೇಟಿ, ಪರಿಶೀಲನೆ

• **ಕನ್ನಡಪ್ರಭ ವಾರ್ತೆ** ಮಾನ್ವಿ

ತಾಲೂಕಿನ ಕಪಗಲ್ ಹಾಗೂ ನೀರಮಾನ್ವಿ ಗ್ರಾಪಂ ವ್ಯಾಪ್ತಿಯ ಮನರೇಗಾ ಯೋಜನೆಯಡಿ ಕೈಗೊಂಡಿರುವ ಕಾಮಗಾರಿ ಸ್ಥಳಕ್ಕೆ ತಾಪಂ ಇಒ ಖಾಲೀದ್ ಅಹಮದ್ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಈ ವೇಳೆ ಮಾತನಾಡಿದ ಅವರು, ಬಿಸಿಲಿನ ತಾಪಮಾನ ಹೆಚ್ಚಾಗಿದ್ದು, ಬೆಳಗ್ಗೆ ಬೇಗ ಬಂದು ಕೆಲಸವನ್ನು ಮುಗಿಸಿ ಮನೆಗೆ ಹೋಗಲು ನರೇಗಾ ಕೂಲಿಕಾರ್ಮಿಕರಿಗೆ ತಿಳಿಸಿದ ಅವರ ಸರ್ಕಾರದ ಆದೇಶದಂತೆ ನರೇಗಾ ಕೂಲಿ ಕಾರ್ಮಿಕರಿಗೆ ಕೆಲಸದ ಜಾಗದಲ್ಲಿ ಕುಡಿಯುವ ನೀರು, ಟೆಂಟ್ ಮತ್ತು ಪ್ರಥಮ ಚಿಕಿತ್ಸೆ ವ್ಯವಸ್ಥೆ ಮತ್ತು ಎನ್‌ಎಂಎಸ್ ತಂತ್ರಾಂಶದಲ್ಲಿ ಮುಖಚಹಾರೆ ಕಡ್ಡಾಯವಾಗಿ ಎರಡು ಬಾರಿ ಹಾಜರಾತಿ ದಾಖಲಿಸಬೇಕು ಎಂದರು.

ತಾಪಂ ಸಹಾಯಕ ನಿರ್ದೇಶಕಿ ದೀಪಾ ಅರಳಿಕಟ್ಟಿ, ಕಪಗಲ್ ಗ್ರಾಪಂ ಆಡಳಿತಾಧಿಕಾರಿ ಉಮಾ ಕಾಂತ, ಪಿಡಿಒ ದೇವಪ್ಪ ಮರಡಿ, ನೀರಮಾನ್ವಿ ಗ್ರಾಪಂ ಪಿಡಿಒ ಮಹ್ಮದ ಜುಬೇರ್, ಚಿದಾನಂದ ಟಿಸಿ, ಈರೇಶ, ರಂಜಿತ, ಸಿದ್ದಾರಾಮ, ನಾಗರಾಜ, ನದೀಮ್ ಮುಲ್ಲಾ, ಜಗದೀಶ್, ಸುನೀತಾ, ಗ್ರಾಪಂ ಸಿಬ್ಬಂದಿ, ಕೂಲಿ ಕಾರ್ಮಿಕರು ಇದ್ದರು.

ವಾಲ್ಮೀಕಿ ವಿವಿ ಸ.ಪ್ರಾಧ್ಯಾಪಕರ ನೇಮಕಾತಿಗೆ ಹೈಕೋರ್ಟ್ ತಡೆ

ರಾಯಚೂರು: ಸಮೀಪದ ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯ 24 ಸಹಾಯಕ ಪ್ರಾಧ್ಯಾಪಕ ಹುದ್ದೆಗಳ ನೇಮಕಾತಿಗೆ ಕಲಬುರಗಿ ಹೈಕೋರ್ಟ್ ಪೀಠ ಮಧ್ಯಂತರ ತಡೆಯಾಜ್ಞೆ ನೀಡಿ ಆದೇಶ ಹೊರಡಿಸಿದೆ.

ವಿವಿಯ ಸಹಾಯಕ ಪ್ರಾಧ್ಯಾಪಕ ಹುದ್ದೆಗಳಿಗೆ ನೇರ ನೇಮಕಾತಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಕಳೆದ ಏ.14ರಂದು ಮಂಜೂರಾತಿಗೆ ಆದೇಶ ನೀಡಿ, ನೇಮಕಾತಿಗೆ ಸಂಬಂಧಿಸಿದಂತೆ ಸರ್ಕಾರವು ಮಾರ್ಗಸೂಚಿಗಳನ್ನು ನಿಗದಿಪಡಿಸಿತ್ತು, ಆದರೆ ಮಾರ್ಗಸೂಚಿಗಳು ಯುಜಿಸಿಯ ನಿಯಮಾವಳಿಗಳನ್ನು ಉಲ್ಲಂಘಿಸಿವೆ ಎಂದು ಸ್ಪರ್ಧಾಕಾಂಕ್ಷಿಗಳು ಆಕ್ಷೇಪ ವ್ಯಕ್ತಪಡಿಸಿ ಹೈ ಕೋರ್ಟ್ ಮೊರೆ ಹೋಗಿದ್ದರು. ಅರ್ಜಿ ವಿಚಾರಣೆ ಕೈಗೊಂಡ ನ್ಯಾಯಾಲಯವು ನೇಮಕಾತಿ ಪ್ರಕ್ರಿಯೆಗೆ ಮುಂದಿನ ಆದೇಶದವರೆಗೆ ತಡೆ ನೀಡಿ ಮಧ್ಯಂತರ ಆದೇಶವನ್ನು ಹೊರಡಿಸಿದೆ.

10ಕ್ಕೆ ಹೇಮರಡ್ಡಿ ಮಲ್ಲಮ್ಮ ಜಯಂತ್ಯುತ್ಸವ, ಗಣ್ಯರು ಭಾಗಿ

• **ಕನ್ನಡಪ್ರಭ ವಾರ್ತೆ** ರಾಯಚೂರು

ಹೇಮರಡ್ಡಿ ಮಲ್ಲಮ್ಮ ಜಯಂತಿ ಕಾರ್ಯಕ್ರಮವು ನಗರದ ಪಂಡಿತ ಸಿದ್ಧರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಇದೇ ಮೇ 10ರಂದು ಬೆಳಗ್ಗೆ 10:30ಕ್ಕೆ ಹಮ್ಮಿಕೊಳ್ಳಲಾಗಿದೆ.

ಇಲ್ಲಿನ ಜಿಲ್ಲಾಡಳಿತ, ಜಿಪಂ, ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಿರುವ ಕಾರ್ಯಕ್ರಮವನ್ನು ಉಸ್ತುವಾರಿ ಸಚಿವರು ಉದ್ಘಾಟಿ ಸಲಿದ್ದು, ಜಿಲ್ಲೆ ಸಚಿವರು, ಶಾಸಕರು, ಎಂಎಲ್ಸಿ, ಸಂಸದರು, ನಿಗಮ ಮಂಡಳಿಗಳ ಅಧಯಕ್ಷರು, ಡಿಸಿ, ಎಸ್ಪಿ, ಸಿಇಒ, ಸಮಾಜದ ಬಾಂಧವರು ಸೇರಿ ಅನೇಕರು ಭಾಗವಹಿಸಲಿದ್ದಾರೆ ಎಂದು ಜಿಲ್ಲಾಡಳಿತ ಪ್ರಕಟಣೆ ತಿಳಿಸಿದೆ.

ವಿಷಪೂರಿತ ಹಸಿ ಜೋಳದ ಮೇವು ತಿಂದು 5 ಕುರಿಗಳು ದಾರುಣ ಸಾವು

50 ಕುರಿಗಳು ಅಸ್ವಸ್ಥ; ಔಷಧೋಪಚಾರದಿಂದ ಗುಣಮುಖ



ಮುದಗಲ್ ಸಮೀಪದ ಸೋಂಪುರ ಗೊಲ್ಲರಟ್ಟಿಯಲ್ಲಿ ಹಸಿ ವಿಷ ಪೂರಿತ ಜೋಳದ ಮೇವು ತಿಂದು ಐದು ಕುರಿಗಳು ಸಾವನಪ್ಪಿವೆ.

• **ಕನ್ನಡಪ್ರಭ ವಾರ್ತೆ** ಮುದಗಲ್

ಪಟ್ಟಣ ಸಮೀಪದ ಸೋಂಪುರ ಗೊಲ್ಲರಟ್ಟಿಯಲ್ಲಿ ವಿಷಪೂರಿತ ಹಸಿ ಜೋಳದ ಮೇವು ತಿಂದು ಐದು ಕುರಿಗಳು ಸಾವನಪ್ಪಿರುವ ಘಟನೆ ಜರುಗಿದೆ .

ಗೋಲ್ಲರ ಹಟ್ಟಿಯಲ್ಲಿಯೇ 1 ಎಕರೆಯ ಹೊಲವೊಂದರಲ್ಲಿ ಜೋಳ ಬೆಳೆಯಲಾಗಿತ್ತು, ಜೋಳ ಕಟಾವು ಮಾಡಿದ ಬಳಿಕ ನೀರು ಹಾಯಿಸಿ ಬುಡದಲ್ಲಿ ಮೇವು ಚಿಗಿದಿತ್ತು. 300ಕ್ಕೂ ಹೆಚ್ಚು ಕುರಿಗಳು ಈ ಹಸಿ ಜೋಳದ ಮೇವು ತಿನ್ನಲು ಬಿಟ್ಟಿದ್ದು, ಇದರಲ್ಲಿ ಐದಾರು ಕುರಿಗಳು ಸಾವನಪ್ಪಿದ್ದು, 50 ಕುರಿಗಳು ಅಸ್ವಸ್ಥಗೊಂಡಿವೆ, ಇನ್ನುಳಿದ ಕುರಿಗಳು ಔಷದೋಪಚಾರದಿಂದ ಗುಣಮುಖವಾಗಿವೆ. ಸ್ಥಳಕ್ಕೆ ಧಾವಿಸಿದ ಪಶುಸಂಗೋಪನ ಇಲಾಖೆಯ ವೈದ್ಯಾಧಿಕಾರಿ ಸತ್ತಕುರಿಗಳ ಪಂಚನಾಮೆ ನಡೆಸಿ ವಿಷಪೂರಿತ ಮೇವು ತಿಂದಿರುವುದರಿಂದ ಸಾವನ್ನಪ್ಪಿರುವುದರ ಬಗ್ಗೆ ಖಚಿತಪಡಿಸಿದ್ದಾರೆ. ಅಷ್ಟೇ ಅಲ್ಲದೇ ಸರ್ಕಾರದಿಂದ ಸಿಗುವ ಪರಿಹಾರವನ್ನು ಸಂಬಂಧಿಸಿದ ಕುರಿಗಳ ಮಾಲೀಕರಿಗೆ ಕೊಡಿಸುವುದಾಗಿ ಭರವಸೆ ನೀಡಿದ್ದಾರೆ. ಇದರ ಜೊತೆಗೆ ಕುರಿಗಾಯಿಗಳು ಹಾಗೂ ಮಾಲೀಕರು ಜಾನುವಾರುಗಳನ್ನು ಸಾಕುವಾಗ ಇಂತಹ ಘಟನೆಗಳಾಗದಂತೆ ಎಚ್ಚರಿಕೆ ವಹಿಸಬೇಕು ಎಂದು ಸೂಕ್ತ ಸಲಹೆ ಸೂಚನೆಗಳನ್ನು ನೀಡಿದ್ದಾರೆ.

ನೂತನ ಡಿಸಿಗೆ ಸ್ವಾಗತ | ರಾಯಚೂರಿನಲ್ಲಿ ಕೆಲಸ ನಿರ್ವಹಿಸಿದರೆ ದೇಶದ ಎಲ್ಲಿಯೂ ಕೆಲಸ ಮಾಡುವ ಸ್ಥೈರ್ಯ: ನಿರ್ಗಮಿತ ಡಿಸಿ ನಿತೀಶ್

ನಿರ್ಗಮಿತ ಜಿಲ್ಲಾಧಿಕಾರಿ ನಿತೀಶ್ ಕೆ. ಅವರಿಗೆ ಬೀಳ್ಕೊಡುಗೆ

• **ಕನ್ನಡಪ್ರಭ ವಾರ್ತೆ** ರಾಯಚೂರು

ಜಿಲ್ಲೆಯಲ್ಲಿ ಕೆಲಸ ಮಾಡಿದರೇ ದೇಶದಲ್ಲಿ ಎಲ್ಲಿಬೇಕಾದರೂ ಕೆಲಸ ಮಾಡಬಹುದು ಎಂದು ನಿರ್ಗಮಿತ ಜಿಲ್ಲಾಧಿಕಾರಿ ನಿತೀಶ್ ಕೆ. ಅಭಿಪ್ರಾಯ ವ್ಯಕ್ತಪಡಿಸಿದರು.

ಸ್ಥಳೀಯ ಜಿಪಂ ಸಭಾಂಗಣದಲ್ಲಿ ಜಿಲ್ಲಾಡಳಿತದಿಂದ ಹಮ್ಮಿಕೊಂಡಿದ್ದ ನೂತನ ಜಿಲ್ಲಾಧಿಕಾರಿ ಪೂವಿತಾ ಎಸ್. ಅವರಿಗೆ ಸ್ವಾಗತ ಹಾಗೂ ನಿರ್ಗಮಿತ ಡಿಸಿ ನಿತೀಶ್ ಕೆ. ಅವರಿಗೆ ಬೀಳ್ಕೊಡುಗೆ ಸಮಾರಂಭದಲ್ಲಿ ಮಾತನಾಡಿ, ರಾಯಚೂರಿಗೆ ಬರುವ ಮುಂಚೆ ಅನೇಕ ತಪ್ಪು ಕಲ್ಪನೆಗಳಿದ್ದವು. ಇಲ್ಲಿ ಪ್ರಾಮಾಣಿಕವಾಗಿ ಕಷ್ಟ ಪಟ್ಟು ಕೆಲಸ ಮಾಡಿದರೆ ಜನರು. ಜನಪ್ರತಿನಿಧಿಗಳು ಹಾಗೂ ಸಂಘಟನೆಗಳು ನಮಗೆ ಬಹಳ ಪ್ರೀತಿ ಮತ್ತು ಕಾಳಜಿಯನ್ನು ತೋರುತ್ತಾರೆ. ಬೇರೆ ಜಿಲ್ಲೆಗೆ ಹೋಲಿಸಿದರೆ ರಾಯಚೂರು ಜಿಲ್ಲೆಯಲ್ಲಿ ಬಹಳಷ್ಟು ಹೆಸರು ಮತ್ತು ಕೆಲಸ ಮಾಡಬಹುದು. ನನ್ನ 2 ವರ್ಷಗಳ ಅವಧಿಯಲ್ಲಿ ಜಿಲ್ಲೆಯ ಸಚಿವರು. ಶಾಸಕರು ಇಲ್ಲಿ



ರಾಯಚೂರು ಜಿಪಂ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ನಿರ್ಗಮಿತ ಡಿಸಿ ನಿತೀಶ್ ಕೆ. ಅವರಿಗೆ ಬೀಳ್ಕೊಡುಗೆ ಸಮಾರಂಭದಲ್ಲಿ ಸನ್ಮಾನಿಸಿ ಗೌರವಿಸಲಾಯಿತು.

ಪ್ರಾಮಾಣಿಕವಾಗಿ ಕೆಲಸ ಮಾಡಲು ಒಳ್ಳೆಯ ರೀತಿಯಲ್ಲಿ ಸಹಕಾರ ನೀಡಿದ್ದಾರೆ ಎಂದರು.

ಗೋವಾದಿಂದ ಹೈದರಾಬಾದ್‌ವರೆಗೆ ರಾಷ್ಟ್ರೀಯ ಹೆದ್ದಾರಿ ಕ್ಯಾನ್ಸಲ್ ಆಗುವ ಹಂತದಲ್ಲಿದ್ದಾಗ ನಮ್ಮ ಕಂದಾಯ ಅಧಿಕಾರಿ ಗಳು ಭೂ ಸ್ವಾಧೀನ ಮಾಡಿಕೊಂಡು ಅದನ್ನು ಮುಂದುವರೆಯುವಂತೆ ಮಾಡಿದರು. ರಾಯಚೂರು ಏರ್ಪೋರ್ಟ್ ನನೆಗುದಿಗೆ ಬಿದ್ದಿತ್ತು ಅದನ್ನು ಸರಿಪಡಿಸಿ, ಈಗ ಜಿಲ್ಲೆಗೆ ಪ್ಲೈಟ್ ಬರುವ ಕಾಲ ದೂರವಿಲ್ಲ. ಪ್ರತಿ ಯೊಂದು ಜಿಲ್ಲೆಯಲ್ಲೂ ಕೆಲಸ ಮಾಡುವುದು ಕಲಿಕೆಯಾಗಿದೆ. ಪ್ರತಿಯೊಂದು ಜಿಲ್ಲೆ ಪುಣ್ಯಕ್ಷೇತ್ರವಿದಂತೆ ಜನರನ್ನು ದೇವರೆಂದು ನಾವು ಕೆಲಸ ಮಾಡಬೇಕು, ಜಿಲ್ಲೆಯಲ್ಲಿ ಕೆಲಸ ಮಾಡಲು ನನಗೆ ಸಹಕಾರ ನೀಡಿದಕ್ಕಾಗಿ ಎಲ್ಲರಿಗೂ ಧನ್ಯವಾದಗಳು ನನ್ನಂತೆ ನೂತನ ಜಿಲ್ಲಾಧಿಕಾರಿಗಳಿಗೆ ಸಹಕಾರ ನೀಡಬೇಕೆಂದು ಕೋರಿದರು.ನೂತನ ಜಿಲ್ಲಾಧಿಕಾರಿ ಪೂವಿತಾ ಎಸ್. ಮಾತನಾಡಿ, ನಿರ್ಗಮಿತ ಜಿಲ್ಲಾಧಿಕಾರಿ ನಿತೀಶ್ ಕೆ. ಅವರು ಜಿಲ್ಲೆಯಲ್ಲಿ ಉತ್ತಮ ಕೆಲಸ ಮಾಡಿ ನಮಗೆ ದಾರಿ ಸುಲಭವಾಗಿ ಮಾಡಿದ್ದು, ಅದೇ ಹಾದಿಯಲ್ಲಿ ನಾವೆಲ್ಲರೂ ಸಾಗಿ ಜಿಲ್ಲೆಯ ಅಭಿವೃದ್ಧಿಗೆ ಎಲ್ಲ ಇಲಾಖೆ ಅಧಿಕಾರಿಗಳು ಒಟ್ಟಾಗಿ ಶ್ರಮಿ ಸೋಣ ಎಂದರು.

ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಈಶ್ವರ್‌ಕಾಂದೂ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣಾಂಗ್ಶು ಗಿರಿ, ಮಹಾನಗರ ಪಾಲಿಕೆ ಆಯುಕ್ತ ಜುಬಿನ್ ಮೊಹಾಪಾತ್ರ. ಸಹಾಯಕ ಆಯುಕ್ತ ಡಾ. ಹಂಪಣ್ಣ ಸಜ್ಜನ ಹಾಗೂ ಅಪರ ಜಿಲ್ಲಾಧಿಕಾರಿ ಶಿವಾನಂದ ಅವರು ಮಾತನಾಡಿದರು.

ಇದೇ ವೇಳೆ ನೂತನ ಹಾಗೂ ನಿರ್ಗಮಿತ ಜಿಲ್ಲಾಧಿಕಾರಿಗಳಿಗೆ ವಿವಿಧ ಇಲಾಖೆಯ ಅಧಿಕಾರಿ, ಸಿಬ್ಬಂದಿ ವರ್ಗದವರು ಹಾಗೂ ವಿವಿಧ ಸಂಘ- ಸಂಸ್ಥೆಗಳವರು ಸನ್ಮಾನಿಸಿ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ವಿವಿಧ ಇಲಾಖೆಗಳ ಜಿಲ್ಲಾ, ತಾಲೂಕು ಮಟ್ಟದ ಅಧಿಕಾರಿ, ಸಿಬ್ಬಂದಿ, ವಿವಿಧ ಸಂಘ-ಸಂಸ್ಥೆಗಳ ಪದಾಧಿಕಾರಿಗಳು, ಸದಸ್ಯರು,ಮುಖಂಡರು,ಸಾರ್ವಜನಿಕರು ಇದ್ದರು.

ಸುದ್ದಿ ಸಿಂಚನ

12ಕ್ಕೆ ವಿದ್ಯುತ್ ವ್ಯತ್ಯಯ

ರಾಯಚೂರು: ಜೆಸ್ಕಾಂ ಕಾರ್ಯ ಮತ್ತು ಪಾಲನೆ ಗ್ರಾಮೀಣ ಉಪ ವಿಭಾಗದ ವ್ಯಾಪ್ತಿಗೆ ಬರುವ 33/11 ಕೆವಿ ಗಿಲ್ಲೇಸೂಗೂರು ವಿದ್ಯುತ್ ಉಪ ಕೇಂದ್ರದಲ್ಲಿ ತುರ್ತು ನಿರ್ವಹಣಾ ಕಾರ್ಯ ಹಮ್ಮಿಕೊಂಡಿರುವ ಪ್ರಯುಕ್ತ ಮೇ12ರ ಬೆಳಗ್ಗೆ 8ರಿಂದ ಸಂಜೆ 05ಗಂಟೆವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ವಾಗಲಿದ್ದು, ವಿದ್ಯುತ್ ಗ್ರಾಹಕರು ಸಹಕರಿಸುವಂತೆ ಜೆಸ್ಕಾಂ ಕಾರ್ಯ ಮತ್ತು ಪಾಲನೆ ಗ್ರಾಮೀಣ ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಿಎಸ್ವೈ ಅಭಿಮಾನೋತ್ಸವ: ನಾಳೆ ಚಿತ್ರದುರ್ಗದಲ್ಲಿ 10 ಲಕ್ಷಕ್ಕೂ ಅಧಿಕ ಜನ ಭಾಗಿ

ಬೀದರ್: ಬಿಜೆಪಿಯ ಹಿರಿಯ ಮುತ್ಸದ್ದಿ, ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಅಭಿಮಾನೋತ್ಸವ ಸಮಾರಂಭ ಕೋಟೆ ನಾಡು ಚಿತ್ರದುರ್ಗದಲ್ಲಿ ಮೇ 9ರಂದು ನಡೆಯಲಿದೆ ಎಂದು ಅಭಿಮಾನೋತ್ಸವ ಜಿಲ್ಲಾ ಪ್ರಭಾರಿಯಾದ ಬೀದರ್ ದಕ್ಷಿಣ ಶಾಸಕ ಡಾ.ಶೈಲೇಂದ್ರ ಬೆಲ್ದಾಳೆ ಹಾಗೂ ಬಿಜೆಪಿ ಜಿಲ್ಲಾಧ್ಯಕ್ಷ ಸೋಮನಾಥ ಪಾಟೀಲ್ ತಿಳಿಸಿ ದ್ದಾರೆ. ಈ ಕುರಿತು ಜಂಟಿ ಪ್ರಕಟಣೆ ನೀಡಿ, ಯಡಿಯೂರಪ್ಪ ಅವರ ಸಾರ್ವಜನಿಕ ಬದುಕಿನ 50 ವಸಂತ ಗಳ ಹಿನ್ನೆಲೆಯಲ್ಲಿ ಐತಿಹಾಸಿಕ ಅಭಿಮಾನೋತ್ಸವ ನಡೆಯಲಿದ್ದು, 10 ಲಕ್ಷಕ್ಕೂ ಹೆಚ್ಚು ಜನರು ಭಾಗಿಯಾ ಗುವ ನಿರೀಕ್ಷೆಯಿದೆ ಎಂದರು. ವೇದಿಕೆ ಕಾರ್ಯಕ್ರಮ ಅಂದು ಮಧ್ಯಾಹ್ನ 2 ರಿಂದ 5 ರವರೆಗೆ ನಡೆಯಲಿದೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಉದ್ಘಾಟಿಸಲಿದ್ದಾರೆ. ಅನೇಕ ರಾಜ್ಯ, ರಾಷ್ಟ್ರ ನಾಯಕರು, ಸಹಸ್ರಾರು ಪೂಜ್ಯರು ಆಗಮಿಸಲಿದ್ದಾರೆ. ಇದು ರಾಜ್ಯದ ಇತಿಹಾಸ ದಲ್ಲಿ ಅತಿ ದೊಡ್ಡ ಅಭಿಮಾನೋತ್ಸವವಾಗಲಿದೆ ಎಂದು ಜಂಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸರಿಯಾಗಿ ಗ್ಯಾಸ್ ಸಿಲಿಂಡರ್ ವಿತರಿಸಿ: ಡಿಸಿ

ಯಾದಗಿರಿ: ಗ್ಯಾಸ್ ಏಜೆನ್ಸಿಯವರು ಸಾರ್ವಜನಿಕರಿಗೆ ಸರಿಯಾಗಿ ಗೃಹಬಳಕೆ ಗ್ಯಾಸ್ ಸಿಲಿಂಡರ್‌ಅನ್ನು ಸರಬರಾಜು ಮಾಡಲು ಜಿಲ್ಲಾಧಿಕಾರಿ ಹರ್ಷಲ್ ನಾರಾಯಣರಾವ್ ಭೋಯರ್‌ಸೂಚಿಸಿದರು. ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಗ್ಯಾಸ್ ಏಜೆನ್ಸಿದಾರರೊಂದಿಗೆ ಸಭೆ ನಡೆಸಿದ ಅವರು, ಅನಧಿಕೃತವಾಗಿ ಮಾರಾಟ, ದರ ಹೆಚ್ಚಳ ಮಾಡಿ ಗ್ಯಾಸ್ ಸಿಲಿಂಡರ್‌ಮಾರಾಟ ಮಾಡಿದರೆ ಅಗತ್ಯ ವಸ್ತುಗಳ ಕಾಯಿದೆ 1955 ಮತ್ತು ಪೆಟ್ರೋಲಿಯಂ ವಸ್ತುಗಳ ಸಂಗ್ರಹ, ಬಳಕೆ ಕಾಯಿದೆ 1999 ಅಡಿ ಕ್ರಮ ವಹಿಸಲಾಗುವುದು ಎಂದು ಎಚ್ಚರಿಕೆ ನೀಡಿದರು. ಆಹಾರ ಇಲಾಖೆ ಉಪನಿರ್ದೇಶಕರಾದ ಸೋಮಶೇಖರ ಬಿರಾದಾರ ಸೇರಿದಂತೆ ಏಜೆನ್ಸಿಯವರು, ಆಹಾರ ಇಲಾಖೆ ತಾಲೂಕಾ ಮಟ್ಟದ ಸಿಬ್ಬಂದಿ ಈ ಸಂದರ್ಭದಲ್ಲಿ ಹಾಜರಿದ್ದರು.

ಕಸಾಪವೆಂದರೆ ಕನ್ನಡಿಗರ ಮನ ಮಿಡಿಯುವ ಸಂಸ್ಥೆ

112ನೇ ಕಸಾಪ ಸಂಸ್ಥಾಪನಾ ದಿನಾಚರಣೆ, ಅಭಿನಂದನಾ ಸಮಾರಂಭಕ್ಕೆ ಚಾಲನೆ ನೀಡಿ ಶಾಸಕ ಡಾ.ಶೈಲೇಂದ್ರ ಬೆಲ್ದಾಳೆ ಅಭಿಮತ

• **ಕನ್ನಡಪ್ರಭ ವಾರ್ತೆ** ಬೀದರ್

ಕನ್ನಡ ಭಾಷೆ, ಬಾಂಧವ್ಯ, ಏಳ್ಗೆಗಾಗಿ ಮಿಡಿಯುವ ಕನ್ನಡ ಸಾಹಿತ್ಯ ಪರಿಷತ್ತು ಸಂಸ್ಥೆ ಕನ್ನಡಿಗರ ಮನ ಮಿಡಿಯುವ ಸಂಸ್ಥೆ ಎಂದು ಬೀದರ ದಕ್ಷಿಣ ಕ್ಷೇತ್ರದ ಶಾಸಕರಾದ ಡಾ.ಶೈಲೇಂದ್ರ ಬೆಲ್ದಾಳೆ ನುಡಿದರು.

ಅವರು ಡಾ ಚೆನ್ನಬಸವ ಪಟ್ಟದ್ದೇವರ ರಂಗ ಮಂದಿರದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ರೋಟರಿ ಕ್ಲಬ್ ಜಂಟಿ ಸಹಯೋಗದೊಂದಿಗೆ 112ನೇ ಕಸಾಪ ಸಂಸ್ಥಾನ ದಿನಾಚರಣೆ, ಪ್ರತಿಭಾ ಪುರಸ್ಕಾರ ಹಾಗೂ ಅಭಿನಂದನಾ ಸಮಾರಂಭ ಉದ್ಘಾಟಿಸಿ ಮಾತನಾಡಿ, ನಿರಂತರ ಕನ್ನಡ ಚಟುವಟಿಕೆಗಳು, ಸಾಹಿತ್ಯಿಕ, ಸಾಮಾಜಿಕ, ಧಾರ್ಮಿಕ ಕಾರ್ಯಕ್ರಮಗಳಿಂದ ಜನರ ನೆಮ್ಮದಿ ಹೆಚ್ಚಿಸಿದೆ ಎಂದರು

ಜ್ಞಾನ ಸುಧಾ ಶಿಕ್ಷಣ ಸಂಸ್ಥೆ ಅಧ್ಯಕ್ಷೆ ಡಾ.ಪೂರ್ಣಿಮಾ ಜಿ. ಮಾತನಾಡಿ, ನಾವೆಲ್ಲ ಎಲ್ಲೆ ಇರಲಿ ದಿನ ನಿತ್ಯ ಕನ್ನಡ ಬಳಸುವುದು ಮರೆಯ ಬಾರದು. ಭಾಷೆ ಯಾವುದೇ ಇರಲಿ ಅದರ ಆಳ ಇತಿಹಾಸ ಅರ್ಥೈಸಿಕೊಳ್ಳಬೇಕು. ಅನೇಕ ವರ್ಷಗಳ ಇತಿಹಾಸ ನಮ್ಮ ಕನ್ನಡಕ್ಕಿದ್ದು ಅದರ ಬಳಕೆ ನಮ್ಮಿಂದಲೇ ಆಗಬೇಕು ಎಂದರು

ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕರಾದ ಸುರೇಶ ಎಚ್.ಜಿ. ಮಾತನಾಡಿ, ನಮ್ಮದು ಸುಂದರ ನಾಡು, ಸೌಂದರ್ಯ ಬೀಡು, ಪರಂಪರೆ ಇತಿಹಾಸ ಮೆರೆದ ನಾಡು, ಇದರ ಕಲ್ಪನೆ ಅಂದಿಗಿಂತ ಇಂದಿನ ಮಕ್ಕಳಿಗೆ ತಲುಪಿಸಬೇಕಾದ ಕರ್ತವ್ಯ ಪಾಲಕ, ಪೋಷಕ, ಸಮಾಜದ ಮೇಲಿದೆ. ನಮಗೆ ನಾವೇ ಬೆಲೆ ಕೊಡದಿದ್ದರೆ ಮುಂದೆ ಗತಿಯೇನು ಎಂಬುದು ಒಂದು ಸಲ ಅರ್ಥೈಸಿಕೊಳ್ಳಲೇಬೇಕು.

ಶಾಹೀನ್ ಶಿಕ್ಷಣ ಸಂಸ್ಥೆ ಅಧ್ಯಕ್ಷರಾದ ಅಬ್ದುಲ್ ಖದೀರ ಮಾತನಾಡಿ, ಮಕ್ಕಳ ಇಂದಿನ ಸಾಧನೆ ನೋಡಿ ಸಂತಸವಾಗುತ್ತಿದೆ. ಈ ವರ್ಷ 112ನೇ ವರ್ಷದಕಸಾಪಸಂಭ್ರಮಾಚರಣೆಸುಸಂದರ್ಭದಲ್ಲಿ 112 ಮಕ್ಕಳಿಗೆ ಉಚಿತ ಪಿಯು ಸಿ ಶಿಕ್ಷಣ ಕೊಡಲು ನಾವು ಬದ್ಧರಾಗಿದ್ದೇವೆ. ಮಕ್ಕಳು ಶೇ.95 ಅಂಕ ಪಡೆದು ಕನ್ನಡ ಮಾಧ್ಯಮದಲ್ಲಿ ಓದಿ ಗ್ರಾಮೀಣ ಭಾಗದವರಾಗಿರಬೇಕು. ಅಂಥವರು ನಮ್ಮ ವೆಬ್ ಸೈಟ್ ಗೆ ಅರ್ಜಿ ಸಲ್ಲಿಸಿ ಲಿಖಿತ ಪರೀಕ್ಷೆಗೆ ಕುಳಿತುಕೊಂಡು ಹೆಚ್ಚಿನ ಅಂಕ ಪಡೆದವರಿಗೆ ಸೀಟ್ ಕೊಡಲಾಗುವುದು ಎಂದರು.



ಬೀದರಿನ ಡಾ.ಚೆನ್ನಬಸವ ಪಟ್ಟದ್ದೇವರ ರಂಗ ಮಂದಿರದಲ್ಲಿ ಕಸಾಪ, ರೋಟರಿ ಕ್ಲಬ್ ಜಂಟಿ ಸಹಯೋಗದೊಂದಿಗೆ ಕಸಾಪ ಸಂಸ್ಥಾಪನಾ ದಿನಾಚರಣೆ ಆಚರಿಸಲಾಯಿತು.

ಎನ್‌ಎಸ್‌ಎಸ್‌ಕೆ ಅಧ್ಯಕ್ಷ ಸೂರ್ಯಕಾಂತ ನಾಗಮಾರಪಳ್ಳಿ, ಡಾ.ರಜನೀಶ ವಾಲಿ, ರೇವಣ ಸಿದ್ದಪ್ಪ ಜಲಾದೆ, ಸೋಮಶೇಖರ ಬಿರಾದಾರ ಚಿದ್ರಿ, ಬಸವರಾಜ ಧನ್ನೂರ, ಡಾ ರಘು ಕೃಷ್ಣ ಮೂರ್ತಿ,ಡಾ ಶಿವಶಂಕರ ಟೋಕರೆ, ನಿತಿನ ಕರಪೂರ ಮುಖ್ಯ ಅತಿಥಿಯಾಗಿದ್ದರು.ಹುಲಸೂರಿನ ಡಾ. ಶಿವಾನಂದ ಸ್ವಾಮಿಗಳು ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಕಸಾಪ ಜಿಲ್ಲಾಧ್ಯಕ್ಷ ಸುರೇಶ ಚನ್ನಶೆಟ್ಟಿ ಅಧ್ಯಕ್ಷತೆ ವಹಿಸಿ ಮಾತನಾಡಿ, ನಮ್ಮ ಮಕ್ಕಳಲ್ಲಿ ಪ್ರತಿಭೆ ಇದೆ. ಅದಕ್ಕೆ ಪುರಸ್ಕಾರ ಮಾಡಿದರೆ ಮಕ್ಕಳ ಆತ್ಮ ಸ್ಥೈರ್ಯ ಇಮ್ಮಡಿಗೊಳ್ಳುತ್ತದೆ. ಕಸಾಪ ಸಂಸ್ಥಾಪನಾ ದಿನದಂದು ನಮಗೆ ರೋಟರಿ ಕ್ಲಬ್ ಕೈ ಜೋಡಿಸಿದ್ದು ಅಭಿಮಾನದ ಸಂಗತಿ ಎಂದರು.

ಸಹಾಯಕ ಗವರ್ನರ್‌ಹಾವಶೆಟ್ಟಿ ಪಾಟೀಲ ಪ್ರಾಸ್ತಾವಿಕ ಮಾತನಾಡಿದರು. ರೋಟರಿ ಕ್ಲಬ್ ಬೀದರನ ಅಧ್ಯಕ್ಷ ಬಸವಕುಮಾರ ಪಾಟೀಲ ಸ್ವಾಗತಿಸಿದರೆ, ರೋಟರಿಯನ್ ಅನೀಲಕುಮಾರ ಬಿರಾದಾರ ವಂದಿಸಿದರು.

ಗುರುಗಳಿಗೆ ಗೌರವ ಸಮರ್ಪಣೆ ಶ್ಲಾಘನೀಯ

ಭಾಲ್ಕಿಯಲ್ಲಿ ಗುರುವಂದನಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಸಾಗರ ಖಂಡ್ರೆ ಅಭಿಮತ



ಭಾಲ್ಕಿಯಲ್ಲಿ ನಡೆದ ಗುರುವಂದನಾ ಕಾರ್ಯಕ್ರಮವನ್ನು ಸಂಸದ ಸಾಗರ ಖಂಡ್ರೆ ಉದ್ಘಾಟಿಸಿದರು.

• **ಕನ್ನಡಪ್ರಭ ವಾರ್ತೆ** ಭಾಲ್ಕಿ

ಜ್ಞಾನದಾನ ಮಾಡುವ ಶಿಕ್ಷಕರ ಬಗ್ಗೆ ಭಕ್ತಿ, ನಮ್ರತೆಇಟ್ಟುಕೊಂಡು ಅವರ ಆದರ್ಶಗಳನ್ನು ಪಾಲಿಸುವುದೇ ವಿದ್ಯಾರ್ಥಿಗಳು ಗುರುವಿಗೆ ನೀಡುವ ಅತ್ಯುತ್ತಮ ಕಾಣಿಕೆ ಎಂದು ಸಂಸದ ಸಾಗರ ಖಂಡ್ರೆ ಅಭಿಪ್ರಾಯ ಪಟ್ಟರು.


ನಗರದ ಶಾಂತಿವರ್ಧಕ ಶಿಕ್ಷಣ ಸಂಸ್ಥೆಯ ಕೈಗಾರಿಕೆ ತರಬೇತಿ ಕೇಂದ್ರದಲ್ಲಿ ಹಳೆಯ ವಿದ್ಯಾರ್ಥಿಗಳ ವತಿಯಿಂದ ಆಯೋಜಿಸಿದ್ದ ಗುರುವಂದನಾಮತ್ತುಹಳೆಯವಿದ್ಯಾರ್ಥಿಗಳ ಪನರ್ಮಿಲನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ವಿದ್ಯಾರ್ಥಿಗಳು ತಮ್ಮ ಗುರುಗಳಿಗೆ ನಿತ್ಯವೂ ಗೌರವ, ವಿಧೇಯತೆ ಮತ್ತು ಕೃತಜ್ಞತೆಯನ್ನು ಸಲ್ಲಿಸಬೇಕು. ಸಂಸ್ಥೆಯ ಹಳೆಯ ವಿದ್ಯಾರ್ಥಿಗಳು ಸೇರಿ ಗುರು ವಂದನಾ ಕಾರ್ಯಕ್ರಮದ ಮೂಲಕ ತಮ್ಮ ಗುರುಗಳಿಗೆ ಗೌರವ ನೀಡುತ್ತಿರುವುದು ಮಾದರಿ ಎನಸಿದೆ.

ಈಸಂಸ್ಥೆಯಲ್ಲಿಇದುವರೆಗೂಸಾವಿರಾರೂ ವಿದ್ಯಾರ್ಥಿಗಳು ಐಟಿಐ ಕೋರ್ಸ್ ಪೂರ್ಣ ಗೊಳಿಸಿ ವಿವಿಧ ಪ್ರತಿಷ್ಠಿತ ಕಂಪನಿಗಳಲ್ಲಿ ಉದ್ಯೋಗಿಗಳಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇನ್ನೂ ಕೆಲ ವಿದ್ಯಾರ್ಥಿಗಳು ಸ್ವಂತ ಕಂಪನಿ ಆರಂಭಿಸಿ ನೂರಾರೂ ಯುವಕರಿಗೆ ಉದ್ಯೋಗ ಕಲ್ಪಿಸಿದ್ದಾರೆ ಎಂದು ಮೆಚ್ಚುಗೆ ವ್ಯಕ್ತ ಪಡಿಸಿದರು.ಸಂಸ್ಥೆಯ ಪ್ರಧಾನ ವ್ಯವಸ್ಥಾಪಕ ಸುರೇಂದ್ರನ್ ಆರ್. ಮಾತನಾಡಿದರು. ಹಳೆಯ ವಿದ್ಯಾರ್ಥಿಗಳು ತಮ್ಮ ಅನುಭವ ಹಂಚಿಕೊಂಡರು. ಐಟಿಐ ಪ್ರಾಚಾರ್ಯ ಸಂಗಪ್ಪ ಹುಲಸೂರೆ, ಶಿವರಾಜ ತಡೋಳಗೆ, ವಾಮನರಾವ ಬಿರಾದಾರ್ ಮಾತನಾಡಿದರು. ಈ ವೇಳೆ ಅಕ್ಕಮಹಾದೇವಿ ಕಾಲೇಜಿನ ಪ್ರಾಚಾರ್ಯ ಭೀಮರಾವ ಗಿರಿ ಸೇರಿದಂತೆ ಹಲವರು ಇದ್ದರು. ಮಲ್ಲಿಕಾರ್ಜುನ ಮೇತ್ರೆ ಸ್ವಾಗತಿಸಿ ದರು. ದೀಪಕ ಠಮಕೆ ನಿರೂಪಿಸಿ, ವಂದಿಸಿದರು.

ಪಶು ವಿವಿ ಕುಲಪತಿ,ಕುಲಸಚಿವರ ವಜಾಗೆ ಆಗ್ರಹ

ಬೀದರ್: ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವ ವಿದ್ಯಾಲಯದಲ್ಲಿ ಸದ್ಯ ಕುಲಪತಿಗಳಾಗಿರುವ ಕೆ.ಸಿ.ವೀರಣ್ಣ ನವರು ಕುಲಪತಿ ಹುದ್ದೆ ಪಡೆದು ಕೊಳ್ಳಲು ರಾಜ್ಯಪಾಲರಿಗೆ ಸಲ್ಲಿಸಿರುವ ಪಿಹೆಚ್ ಡಿ ಪದವಿಯಲ್ಲಿ ಅನೇಕ ತಪ್ಪುಗಳಿದ್ದು, ಕೂಡಲೇ ಅವರನ್ನು ವಜಾಗೊಳಿಸಬೇಕೆಂದು ವೀರ ಕನ್ನಡಿಗರ ಸೇನೆ ಆಗ್ರಹಿಸಿದೆ.

ಈ ಕುರಿತು ಮುಖ್ಯಮಂತ್ರಿಗೆ ಬರೆದ ಮನವಿಯಲ್ಲಿ 2011 ರಲ್ಲಿ ನಕಲಿ ಪಿಎಚ್‌ಡಿ ಪ್ರಮಾಣ ಪತ್ರ ಸೃಷ್ಟಿಸಿ, ಹುದ್ದೆಯನ್ನು ಪಡೆದುಕೊಂಡಿದ್ದಾರೆ ಎಂದು ಕಳೆದ ಜನವರಿ 28ರಂದು ವಿಶ್ವ ವಿದ್ಯಾಲಯದ ಕುಲಸಚಿವರ ಮುಖಾಂತರ ರಾಜ್ಯಪಾಲರಿಗೆ ಮನವಿ ಸಲ್ಲಿಸಿದರೂ ಯಾವುದೇ ಕ್ರಮ ಕೈಗೊಂಡಿಲ್ಲ



ಆರೋಪಿಸಿರುವ ಸೇನೆಯ ರಾಜ್ಯಾಧ್ಯಕ್ಷ ಅಮೃತ ಪಾಟೀಲ್ ಸಿರನೂರು ಹಾಗೂ ರಾಜ್ಯ ಸಂಚಾಲಕ ಡಾ. ಸುಬ್ಬಣ್ಣ ಕರಕನಳ್ಳಿ ಹಾಗೂ ಕಾರ್ಯಕರ್ತರು ಕುಲಸಚಿವ ಪಿಟಿ ರಮೇಶ ಅವರ ವಜಾಕ್ಕೂ ಮನವಿಯಲ್ಲಿ ಆಗ್ರಹಿಸಿದ್ದಾರೆ.

ರಾಜ್ಯದಲ್ಲಿ ತಾಪಮಾನ ಡಿಗ್ರಿ ಸೆಲ್ಸಿಯಸ್‌ಗಳಲ್ಲಿ

	ಗದಗ	ದಾವಣಗೆರೆ	ಧಾರವಾಡ	ಬಾಗಲಕೋಟೆ	ಶಿವಮೊಗ್ಗ
ಗರಿಷ್ಠ	38.0	37.5	37.4	37.1	36.6
ಕನಿಷ್ಠ	21.6	21.2	21.4	23.0	24.2

ವಿಶೇಷಚೇತನರ ಉದ್ಯೋಗಕ್ಕಾಗಿ ಸರ್ಕಾರದಿಂದ 'ಆದಿದ್ವಾರ' ಆ್ಯಪ್

ಬೆಂಗಳೂರು: ವಿಶೇಷಚೇತನರಿಗೆ ಉದ್ಯೋಗಾವಕಾಶಗಳು ಮತ್ತು ಕೌಶಲ್ಯಾಭಿವೃದ್ಧಿಗೆ ವೇದಿಕೆ ಒದಗಿಸುವ 'ಆದಿದ್ವಾರ' ಅಪ್ಲಿಕೇಶನ್ ಅನ್ನು ಗುರುವಾರ ಬಿಡುಗಡೆಗೊಳಿಸಲಾಯಿತು. ಅಸಿಸ್ಟೆಕ್ ಫೌಂಡೇಶನ್ (ಎಟಿಎಫ್) ಸಹಯೋಗದೊಂದಿಗೆ



ವಿಕಾಸಸೌಧದಲ್ಲಿ ನಡೆದ ಸಮಾರಂಭದಲ್ಲಿ ಸಚಿವ ಡಾ.ಶರಣ ಪ್ರಕಾಶ ಪಾಟೀಲ್ ಈ ಆ್ಯಪ್ ಬಿಡುಗಡೆ ಮಾಡಿದರು. ಇದೇ ವೇಳೆ, ಬರುವ ಆಗಸ್ಟ್‌ನಲ್ಲಿ ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ವಿಶೇಷಚೇತನರಿಗಾಗಿ (ಪಿಡಬ್ಲ್ಯುಡಿಗಳು) ವಿಶೇಷ ಉದ್ಯೋಗ ಮೇಳ ನಡೆಸುವುದಾಗಿ ಘೋಷಿಸಿ, ಉದ್ಯೋಗ ಮೇಳದ ಅಧಿಕೃತ ಲೋಗೋ ಅನಾವರಣಗೊಳಿಸಿದರು.

2000+ ಕಾಫಿ ಗಿಡ, 250 ಮೆಣಸಿನ ಬಳ್ಳಿಗಳನ್ನು ಕಡಿದ ದುಷ್ಕರ್ಮಿಗಳು

ಪೊನ್ನಂಪೇಟೆ(ಕೊಡಗು): ಫಸಲು ಬರುವ ಸಮಯದಲ್ಲಿ ಸುಮಾರು 2000ಕ್ಕೂ ಅಧಿಕ ಕಾಫಿಗಿಡ ಮತ್ತು 250ಕ್ಕೂ ಹೆಚ್ಚು ಕಾಳುಮೆಣಸು ಬಳ್ಳಿಗಳನ್ನು ದುಷ್ಕರ್ಮಿಗಳು ಕಡಿದು ಹಾಕಿರುವ ಘಟನೆ ಪೊನ್ನಂಪೇಟೆ ತಾಲೂಕಿನ ಬಿರುನಾಣಿ ಸಮೀಪದ ಕಳಕೂರು ಗ್ರಾಮದಲ್ಲಿ ನಡೆದಿದೆ. ಗ್ರಾಮದ ಕುಪ್ಪಣಮಾಡ ಗೌತಮ್ ಅವರಿಗೆ ಸೇರಿದ ಸುಮಾರು 3.5 ಎಕರೆ ಜಾಗದಲ್ಲಿ ಏಳೆಂಟು ವರ್ಷದ ಕಾಫಿ ಗಿಡಗಳು ಹಾಗೂ ಕಾಳುಮೆಣಸು ಬಳ್ಳಿಗಳನ್ನು ದುಷ್ಕರ್ಮಿಗಳು ನಾಶ ಮಾಡಿದ್ದಾರೆ. ತೋಟದಲ್ಲಿ ಅಳವಡಿಸಿದ್ದ ಎರಡು ಸಿಸಿ ಕ್ಯಾಮೆರಾಗಳನ್ನು ಕಿಡಿಗೇಡಿಗಳು ಕಿತ್ತೊಗೆದಿದ್ದಾರೆ. ಮಾಲೀಕರು ಮದುವೆಗೆಂದು ಮೈಸೂರಿಗೆ ಹೋದ ಸಮಯವನ್ನು ತಿಳಿದು ದುಷ್ಕರ್ಮಿಗಳು ಕಾಫಿ ಬೆಳೆಯನ್ನು ನಾಶ ಮಾಡಿದ್ದಾರೆ. ಈ ಸಂಬಂಧ ಶ್ರೀಮಂಗಲ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಮಡಿಕೇರಿಯಿಂದ ಶ್ವಾನ ದಳವನ್ನು ಸ್ಥಳಕ್ಕೆ ಕರೆತಂದು ಪೊಲೀಸರು ದುಷ್ಕರ್ಮಿಗಳ ಪತ್ತೆಗೆ ಮುಂದಾಗಿದ್ದಾರೆ.

ತಮ್ಮ ಪುತ್ರ ರಾಕೇಶ್ ಸ್ಮರಣಾರ್ಥ 2 ಆ್ಯಂಬುಲೆನ್ಸ್‌ಗೆ ಸಿಎಂ ಚಾಲನೆ



ತಮ್ಮ ಹಿರಿಯ ಪುತ್ರ ರಾಕೇಶ್ ಅವರ ಸ್ಮರಣಾರ್ಥ ಸಮತಾ ಟ್ರಸ್ಟ್ ವತಿಯಿಂದ ಆರೋಗ್ಯ ಇಲಾಖೆಗೆ ನೀಡಲಾದ ಎರಡು ಆ್ಯಂಬುಲೆನ್ಸ್‌ಗಳಿಗೆ ಸಿಎಂ ಸಿದ್ದರಾಮಯ್ಯ ಅವರು ಗುರುವಾರ ಮೈಸೂರಿನ ತಮ್ಮ ನಿವಾಸದ ಬಳಿ ಹಸಿರು ನಿಶಾನೆ ತೋರಿಸಿ ಚಾಲನೆ ನೀಡಿದರು.

ಲವ್ ಜಿಹಾದ್ ಆರೋಪ: ಮುಸ್ಲಿಂ ವ್ಯಕ್ತಿಗೆ ಹಿಂದೂ ಯುವಕರ ಥಳಿತ

ಕೊಪ್ಪಳ: ಅಪ್ರಾಪ್ತೆಯೊಂದಿಗೆ ಲವ್ವಿಡವ್ವಿ ನಡೆಸುತ್ತಿದ್ದಾನೆ ಎಂದು ಆರೋಪಿಸಿ ಮುಸ್ಲಿಂ ವ್ಯಕ್ತಿಗೆ ಹಿಂದುಪರ ಸಂಘಟನೆಗಳ ಯುವಕರು ಥಳಿಸಿದ ಘಟನೆ ನಗರದಲ್ಲಿ ನಡೆದಿದೆ. ನಿರ್ಮಿತಿ ಕೇಂದ್ರ ವ್ಯಾಪ್ತಿಯ ನಿವಾಸಿ ಸಮೀರ್ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ. 8 ಆರೋಪಿಗಳನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಬಿಜೆಪಿ ನಾಯಕರು ಪೋಕ್ಸೋ ಪ್ರಕರಣ ದಾಖಲು ಮಾಡಿ ಆರೋಪಿಯನ್ನು ಜೈಲಿಗಟ್ಟುವಂತೆ ಆಗ್ರಹಿಸಿದ್ದಾರೆ. ಅಪ್ರಾಪ್ತೆಯೊಂದಿಗೆ ಸಮೀರ್ ಸುತ್ತಾಡುವುದನ್ನು ಹಿಂದುಪರ ಸಂಘಟನೆಗಳ ಯುವಕರು ಕೆಲ ದಿನಗಳಿಂದ ನೋಡಿದ್ದರು. ಬುಧವಾರ ಕೊಪ್ಪಳ ನಗರದ ಕೆಫೆಯೊಂದರಲ್ಲಿ ಕುಳಿತಿರುವಾಗಲೇ ಪ್ರಶ್ನೆ ಮಾಡಿದ್ದಾರೆ. ಆಗ ಮಾತಿಗೆ ಮಾತು ಬೆಳೆದು ವಾಗ್ವಾದವಾಗಿದೆ. ಈ ವೇಳೆ ಸಮೀರ್‌ನನ್ನು ಥಳಿಸಿದ್ದಾರೆ. ಇದರಿಂದ ಕೆರಳಿದ ಮುಸ್ಲಿಂ ಯುವಕರ ಗುಂಪು ಕೊಪ್ಪಳ ನಗರ ಠಾಣೆಯ ಮುಂದೆ ಜಮಾಯಿಸಿ ಆರೋಪಿಗಳನ್ನು ಬಂಧಿಸುವಂತೆ ಆಗ್ರಹಿಸಿದ್ದಾರೆ. ಪೊಲೀಸರು ಕೆಫೆಯಲ್ಲಿನ ಸಿಸಿಟಿವಿ ಫುಟೇಜ್ ಆಧರಿಸಿ, 8 ಜನರನ್ನು ವಶಕ್ಕೆ ಪಡೆದಿದ್ದಾರೆ.

ರಾಜ್ಯ ಶಿಕ್ಷಣ ನೀತಿ ಜಾರಿಗೆ ಸಂಪುಟ ಉಪಸಮಿತಿ ರಚನೆ

ಸಂಪುಟ ಸಭೆಗೆ ಹಾಜರಾಗಿದ್ದ ಶಿಕ್ಷಣ ನೀತಿ ಆಯೋಗ ಅಧ್ಯಕ್ಷ ಪ್ರೊ.ಥೋರಟ್ | ವರದಿ ಬಗ್ಗೆ ಸಚಿವ ಸಂಪುಟಕ್ಕೆ ಖುದ್ದು ವಿವರಣೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ರಾಜ್ಯದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಬದಲಿಗೆ ಪ್ರತ್ಯೇಕವಾಗಿ ರಾಜ್ಯ ಶಿಕ್ಷಣ ನೀತಿ ಜಾರಿ ಗೊಳಿಸುವ ಉದ್ದೇಶದಿಂದ ರಚಿಸಿದ್ದ ರಾಜ್ಯ ಶಿಕ್ಷಣ ನೀತಿ ಆಯೋಗದ ಅಂತಿಮ ವರದಿ ಕುರಿತು ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ವಿಸ್ತೃತ ಚರ್ಚೆ ನಡೆಸಿದ್ದು, ವರದಿ ಅನುಷ್ಠಾನಗೊಳಿಸುವ ಕುರಿತು ಶಿಫಾರಸು ಮಾಡಲು ಸಚಿವ ಸಂಪುಟ ಉಪಸಮಿತಿ ರಚಿಸಲು ತೀರ್ಮಾನಿಸಲಾಗಿದೆ.



ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ನಡೆದ ಸಂಪುಟ ಸಭೆಯಲ್ಲಿ ಖುದ್ದು ರಾಜ್ಯ ಶಿಕ್ಷಣ ನೀತಿ ಆಯೋಗದ ಅಧ್ಯಕ್ಷರಾದ ಪ್ರೊ.ಸುಖದೇವ್ ಥೋರಟ್ ಅವರೇ ವರದಿ ಬಗ್ಗೆ ವಿವರಣೆ ನೀಡಿದರು.

ವರದಿಯಲ್ಲಿ ರಾಜ್ಯದ ಶಾಲೆಗಳಲ್ಲಿ ದ್ವಿಭಾಷಾ ನೀತಿ ಅನುಷ್ಠಾನಗೊಳಿಸಬೇಕು. ಇದರಲ್ಲಿ ಒಂದು ಮಾತೃಭಾಷೆ ಅಥವಾ ಕನ್ನಡ ಕಡ್ಡಾಯವಾಗಿರಬೇಕು ಎಂದು ಶಿಫಾರಸು ಮಾಡಲಾಗಿದೆ. ಜತೆಗೆ, ಖಾಸಗಿ ಅನುದಾನ ರಹಿತ ಸಂಸ್ಥೆಗಳಲ್ಲೂ ಎಸ್ಸಿ, ಎಸ್ಟಿ, ಒಬಿಸಿ ಮೀಸಲಾತಿ ನಿಯಮ ಅನ್ವಯಿಸಬೇಕು. ರಾಜ್ಯಾದ್ಯಂತ ಮಾಧ್ಯಮಿಕ ಶಿಕ್ಷಣವನ್ನು ಸಾರ್ವತ್ರಿಕಗೊಳಿಸಬೇಕು. ಕೆಲ ಪರೋಕ್ಷ ತೆರಿಗೆಗಳ ಮೇಲೆ ಶಿಕ್ಷಣ ಸರ್ಚಾರ್ಜ್ ಪರಿಗಣಿಸಿ ಶಿಕ್ಷಣ ಬಜೆಟ್ ಹೆಚ್ಚಳ ಮಾಡಬೇಕು. ಖಾಸಗಿ ಶಾಲಾ-ಕಾಲೇಜುಗಳ ಶುಲ್ಕ ನಿಯಂತ್ರಣಕ್ಕೆ ಸೂಕ್ತ ವ್ಯವಸ್ಥೆ ಮಾಡಬೇಕು ಎಂಬಿತ್ಯಾದಿ ವಿಷಯಗಳ ಬಗ್ಗೆ ಸಂಪುಟ ಸಭೆ ಗಮನಕ್ಕೆ ತರಲಾಯಿತು ಎಂದು ಮೂಲಗಳು ತಿಳಿಸಿವೆ.

ಉಪಸಮಿತಿ ರಚನೆಗೆ ನಿರ್ಧಾರ: ಈ ವೇಳೆ ಖಾಸಗಿ ಅನುದಾನ ರಹಿತ ಸಂಸ್ಥೆಗಳಲ್ಲಿ ಮೀಸಲಾತಿ ಜಾರಿ, ಶಿಕ್ಷಣದ ಬಜೆಟ್ ಹೆಚ್ಚಳ, ಖಾಲಿ ಹುದ್ದೆಗಳ ಭರ್ತಿ, ಶುಲ್ಕ ನಿಯಂತ್ರಣದ ವಿಷಯಗಳ ಕುರಿತು ಮತ್ತಷ್ಟು ಸ್ಪಷ್ಟನೆ ಬೇಕಿದೆ. ಎಂಟು ಸಂಪುಟಗಳಲ್ಲಿನ ಅಷ್ಟೂ ಶಿಫಾರಸುಗಳ ಕುರಿತು ಸಂಪುಟ ಸಭೆಯಲ್ಲಿ ನಿರ್ಧರಿಸಲು ಸಾಧ್ಯವಿಲ್ಲ. ಹೀಗಾಗಿ ಸಚಿವ ಸಂಪುಟ ಉಪಸಮಿತಿ ರಚನೆ ಮಾಡಿ ಉಪಸಮಿತಿಯು ಅನುಷ್ಠಾನ ಯೋಗ್ಯ ಅಂಶಗಳನ್ನು ಶಿಫಾರಸು ಮಾಡಲು ಸೂಚಿಸಲಾಯಿತು.

ಇದೇ ವೇಳೆ ಸಂಪುಟ ಉಪಸಮಿತಿ ರಚನೆ ಮಾಡುವ ಅಧಿಕಾರವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ವಹಿಸಿ ಸಂಪುಟ ನಿರ್ಧಾರ ಮಾಡಿತು ಎಂದು ತಿಳಿದುಬಂದಿದೆ.

ಈ ಶೈಕ್ಷಣಿಕ ವರ್ಷದಿಂದ ಜಾರಿಯಿಲ್ಲ-ಸಚಿವ: ರಾಜ್ಯ ಶಿಕ್ಷಣ ನೀತಿ ಬಗ್ಗೆ ಏನು ಮಾಡಬೇಕು ಹಾಗೂ ಏನು ಮಾಡಬಾರದು ಎಂಬುದನ್ನು ನಿರ್ಧರಿಸಲು ಸಚಿವ ಸಂಪುಟ ಉಪಸಮಿತಿ ರಚನೆ ಮಾಡಲು ತೀರ್ಮಾನ ಮಾಡಲಾಗಿದೆ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ್ ತಿಳಿಸಿದರು.

ಪ್ರಸ್ತುತ ಶೈಕ್ಷಣಿಕ ವರ್ಷದಲ್ಲೇ ಶಿಕ್ಷಣ ನೀತಿ ಅನುಷ್ಠಾನ ಮಾಡುತ್ತೇವೆ ಎಂಬ ವಿಚಾರವಿಲ್ಲ. ಶಿಕ್ಷಣ ನೀತಿ ಆಯೋಗದ ವರದಿಯು ಎಂಟು ಸಂಪುಟಗಳಷ್ಟಿದೆ. ಅದರಲ್ಲಿ ಆರ್ಥಿಕ ಅಂಶಗಳು, ಮಾನವ ಸಂಪನ್ಮೂಲ, ಪಠ್ಯಕ್ರಮ, ಬೋಧನಾಕ್ರಮ ಮತ್ತಿತರ ವಿಷಯಗಳ ಬಗ್ಗೆ ವಿಸ್ತೃತ ಶಿಫಾರಸುಗಳು ಇವೆ.

ವಿಶ್ವವಿದ್ಯಾಲಯಗಳು, ಡೀಮ್ಡ್ ವಿಶ್ವವಿದ್ಯಾಲಯ, ಖಾಸಗಿ ವಿಶ್ವವಿದ್ಯಾಲಯ ಹೀಗೆ ಪ್ರತಿಯೊಂದಕ್ಕೂ ಪ್ರತ್ಯೇಕ ಅಂಶಗಳಿವೆ. ಹೀಗಾಗಿ ಅನುಷ್ಠಾನ ಕುರಿತು ಸೂಕ್ತ ಶಿಫಾರಸು ಮಾಡಲು ಸಂಪುಟ ಉಪಸಮಿತಿ ರಚನೆಗೆ ತೀರ್ಮಾನಿಸಲಾಗಿದೆ ಎಂದು ಹೇಳಿದರು.

ಸಭೆಯಲ್ಲಿ ಕುಸಿದು ಬಿದ್ದ ಡಾ.ಥೋರಟ್



ಬೆಂಗಳೂರು: ರಾಜ್ಯ ಶಿಕ್ಷಣ ನೀತಿ ಕುರಿತು ಸಚಿವ ಸಂಪುಟ ಸಭೆಗೆ ವಿವರಣೆ ನೀಡಲು ಖುದ್ದು ಹಾಜರಾಗಿದ್ದ ರಾಜ್ಯ ಶಿಕ್ಷಣ ನೀತಿ ಆಯೋಗದ ಅಧ್ಯಕ್ಷ ಪ್ರೊ. ಸುಖದೇವ್ ಥೋರಟ್ ಅವರು ಕುಸಿದು ಬಿದ್ದ ಘಟನೆ ನಡೆದಿದೆ ಎನ್ನಲಾಗಿದೆ. ರಕ್ತದೊತ್ತಡ ವ್ಯತ್ಯಯದಿಂದ ಆರಂಭದಲ್ಲೇ ಸುಸ್ತಾಗಿ ಕುಸಿದು ಬಿದ್ದರು. ತಕ್ಷಣ ಅವರಿಗೆ ಪ್ರಾಥಮಿಕ ಚಿಕಿತ್ಸೆ ನೀಡಲಾಯಿತು. ಬಳಿಕ ಚೇತರಿಸಿಕೊಂಡ ಅವರು ತಾವು ಸಲ್ಲಿಸಿದ ವರದಿ ಬಗ್ಗೆ ಸುದೀರ್ಘ ವಿವರಣೆ ನೀಡಿದರು ಮೂಲಗಳು ತಿಳಿಸಿವೆ.

ಸುದ್ದಿ ಸಿಂಚನ

ಬೆಂಗ್ಳೂರಲ್ಲಿರುವ ಉಚಿತ ವಿದ್ಯಾರ್ಥಿನಿ ನಿಲಯಕ್ಕೆ ಸೇರಲು ಅರ್ಜಿ ಆಹ್ವಾನ

ಬೆಂಗಳೂರು: ಅಕ್ಕಮಹಾದೇವಿ ಸೇವಾ ಸಮಾಜ ಬೆಂಗಳೂರಿನ ಅಕ್ಕಿಪೇಟೆ, ಕುಮಾರಪಾರ್ಕ್, ರಾಜಾಜಿನಗರ, ರಾಜರಾಜೇಶ್ವರಿ ನಗರಗಳಲ್ಲಿ ನಡೆಸುತ್ತಿರುವ ಉಚಿತ ವಿದ್ಯಾರ್ಥಿನಿ ನಿಲಯಗಳಿಗೆ ಸೇರಲು ಮೂರನೇ ತರಗತಿಯಿಂದ 10ನೇ ತರಗತಿಗಳಿಗೆ ಸೇರಲಿರುವ ಬಡ ವಿದ್ಯಾರ್ಥಿನಿಯರಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಅರ್ಜಿ ಫಾರಂಗಳನ್ನು ಗೌರವ ಕಾರ್ಯದರ್ಶಿ ಅಕ್ಕಮಹಾದೇವಿ ಸೇವಾ ಸಮಾಜ, ನಂ.20, ಅಕ್ಕಮಹಾದೇವಿ ಸೇವಾಸಮಾಜ ರಸ್ತೆ 2ನೇ ಬ್ಲಾಕ್, ಕುಮಾರಪಾರ್ಕ್, ಪಶ್ಚಿಮ ಬಡಾವಣೆ, ಬೆಂಗಳೂರು-560020 ಇವರಿಂದ ಖುದ್ದು ಅಥವಾ ಅಂಚೆ ಮೂಲಕ ಪಡೆಯಬಹುದು. ಭರ್ತಿ ಮಾಡಿದ ಅರ್ಜಿಗಳನ್ನು ಕಳುಹಿಸಿದ ವಿದ್ಯಾರ್ಥಿನಿಯರನ್ನು ಮೇ 27ರಂದು ಬೆ. 11ಕ್ಕೆ ಕುಮಾರಪಾರ್ಕ್‌ನಲ್ಲಿರುವ ಸಮಾಜದಲ್ಲಿ ಸಂದರ್ಶಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಹಿರಿಯ ಪತ್ರಕರ್ತ ಕುಳಲಿ ನಿಧನ: ಸಿಎಂ ಸಂತಾಪ

ಬೆಂಗಳೂರು: ಹಿರಿಯ ಪತ್ರಕರ್ತ ಪ್ರಹ್ಲಾದ್ ಕುಳಲಿ (87) ಅವರು ಗುರುವಾರ ಕೆಂಗೇರಿಯ ತಮ್ಮ ಸ್ವಗೃಹದಲ್ಲಿ ನಿಧನರಾದರು. ಪತ್ರಿಕಾರಂಗದಲ್ಲಿ 6 ದಶಕಕ್ಕೂ ಹೆಚ್ಚಿನ



ಅವಧಿ ಸುದೀರ್ಘ ಸೇವೆ ಸಲ್ಲಿಸಿದ್ದ ಪ್ರಹ್ಲಾದ್ ಅವರು, ಮಾಜಿ ಸಿಎಂ ಆರ್. ಗುಂಡೂರಾವ್ ಅವರ ಮಾಧ್ಯಮ ಕಾರ್ಯದರ್ಶಿಯಾಗಿಯೂ ಸೇವೆ ಸಲ್ಲಿಸಿದ್ದರು. ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದು, ಗುರುವಾರ ಬೆಳಗ್ಗೆ 8.30ಕ್ಕೆ ಕೊನೆಯುಸಿರೆಳೆದರು. ಚಾಮರಾಜಪೇಟೆಯ ಹಿಂದೂ ರುದ್ರಭೂಮಿಯಲ್ಲಿ ಮಧ್ಯಾಹ್ನ ಅಂತ್ಯಕ್ರಿಯೆ ನೆರವೇರಿಸಲಾಯಿತು. ಪ್ರಹ್ಲಾದ್ ಕುಳಲಿ ಅವರ ನಿಧನಕ್ಕೆ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಸೇರಿದಂತೆ ಅನೇಕರು ಸಂತಾಪ ವ್ಯಕ್ತಪಡಿಸಿದ್ದಾರೆ. ಸಿದ್ದರಾಮಯ್ಯ ಅವರು, ಪ್ರಹ್ಲಾದ್ ಕುಳಲಿ ಅವರ ನಿಧನವಾರ್ತೆ ದುಃಖ ಉಂಟುಮಾಡಿದೆ. 1956ರಲ್ಲಿ ಪತ್ರಕರ್ತರಾಗಿ ವೃತ್ತಿಜೀವನ ಆರಂಭಿಸಿ ಸಾಮಾಜಿಕ ಮೌಲ್ಯಗಳಿಗೆ ಸೇವೆ ಸಲ್ಲಿಸಿದ್ದಾರೆ. ಮೂಲತಃ ಬೆಳಗಾವಿಯವರಾಗಿದ್ದ ಪ್ರಹ್ಲಾದ್ ಅವರು ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ 40 ವರ್ಷಕ್ಕೂ ಹೆಚ್ಚುಕಾಲ ಸೇವೆ ಸಲ್ಲಿಸಿ, ಸ್ಥಾನಿಕ ಸಂಪಾದಕರಾಗಿ ನಿವೃತ್ತರಾಗಿದ್ದರು ಅವರ ಕುಟುಂಬವರ್ಗಕ್ಕೆ ನೋವು ಭರಿಸುವ ಶಕ್ತಿ ಸಿಗಲಿ ಎಂದು ಪ್ರಾರ್ಥಿಸಿದ್ದಾರೆ.

ಗುಜರಾತ್‌ನಿಂದ ಕೈಗಾಗೆ ಯಂತ್ರ ತರ್ತಿದ್ದ ಲಾರಿ ಪಲ್ಟಿ

ಕಾರವಾರ: ಕೈಗಾ ಅಣುಸ್ಥಾವರದ ವಿಸ್ತರಿತ 5 ಮತ್ತು 6ನೇ ಘಟಕಗಳಿಗಾಗಿ ಗುಜರಾತ್‌ನಿಂದ ಬೃಹತ್ ಗಾತ್ರ ಹಾಗೂ ತೂಕದ ಯಂತ್ರೋಪಕರಣ ಹೊತ್ತು ತರುತ್ತಿದ್ದ ವಾಹನ, ಕೈಗಾಗೆ 3 ಕಿ.ಮೀ. ದೂರದಲ್ಲಿ ಪಲ್ಟಿಯಾಗಿದೆ. ಕಾರವಾರ ತಾಲೂಕಿನ ಹರ್ಟುಗಾ ಗ್ರಾಮದ ಬಳಿ ಭಾರಿ ಗಾತ್ರದ ಯಂತ್ರದ ಭಾಗವು ರಸ್ತೆಯಂಚಿಗೆ ಉರುಳಿ ಬಿದ್ದಿದೆ. ಈ ಲಾರಿ ಫೆಬ್ರವರಿಯಲ್ಲಿ ಗುಜರಾತ್‌ನಿಂದ ಹೊರಟ್ಟಿತ್ತು. ಏ.15ಕ್ಕೆ ಕಾರವಾರ ಪ್ರವೇಶಿಸಿತ್ತು. 20 ದಿನಗಳಿಂದ ಕಾರವಾರ-ಕೈಗಾ ಮಾರ್ಗದಲ್ಲಿ ಸಂಚರಿಸುತ್ತಿತ್ತು.

ಬುರುಡೆ ಕೇಸ್: ತನಿಖೆಗೆ ಮಟ್ಟಣ್ಣವರ್ ಫೋನ್ ವಶ

ಬೆಳ್ತಂಗಡಿ: ಧರ್ಮಸ್ಥಳ ಗ್ರಾಮದ ಬುರುಡೆ ಪ್ರಕರಣದ ಸಂಬಂಧ ತನಿಖೆಗಾಗಿ ಸಾಮಾಜಿಕ ಹೋರಾಟಗಾರ ಗಿರೀಶ್ ಮಟ್ಟಣ್ಣವರ್ ಅವರ ಮೊಬೈಲ್ ಅನ್ನು ಎಸ್‌ಐಟಿ ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ.

ದೇಶದಲ್ಲೀಗ ಆಗತ್ಯಕ್ಕಿಂತ 3 ಪಟ್ಟು ಹೆಚ್ಚು ಆಹಾರ ಸಂಗ್ರಹ

604 ಲಕ್ಷ ಟನ್ ದಾಸ್ತಾನು ಇದೆ: ಸಚಿವ ಜೋಶಿ

• **ಕನ್ನಡಪ್ರಭ ವಾರ್ತೆ** ನವದೆಹಲಿ

'ಭಾರತದ ಆಹಾರ ಭದ್ರತಾ ವ್ಯವಸ್ಥೆ ಉತ್ತಮವಾಗಿದ್ದು, ಪ್ರಸ್ತುತ ವರ್ಷ ಬಫರ್ ಅವಶ್ಯಕತೆಗಿಂತ 3 ಪಟ್ಟು ಹೆಚ್ಚಾಗಿದೆ' ಎಂದು ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಪ್ರಲ್ಹಾದ ಜೋಶಿ ತಿಳಿಸಿದ್ದಾರೆ.



ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಕೇಂದ್ರ ಸರ್ಕಾರ ದೇಶದ ಪ್ರತಿಯೊಬ್ಬರಿಗೂ ಆಹಾರ ಭದ್ರತೆ ಒದಗಿಸುವಲ್ಲಿ ಬದ್ಧತೆ ತೋರಿದ್ದು, ಪರಿಣಾಮ ನಮ್ಮ ಆಹಾರ ಭದ್ರತಾ ಚೌಕಟ್ಟು ಬಲವಾಗಿ ಬೆಳೆಯುತ್ತಲೇ ಇದೆ ಎಂದು ಪ್ರತಿಪಾದಿಸಿದ್ದಾರೆ.

604.02 ಲಕ್ಷ ಟನ್ ದಾಸ್ತಾನು: ಪ್ರಸ್ತುತ ಕೇಂದ್ರ ಸರ್ಕಾರದ ಆಹಾರ ಧಾನ್ಯ ದಾಸ್ತಾನು 604.02 ಲಕ್ಷ ಟನ್ ತಲುಪಿದೆ. ಇದು ಕಡ್ಡಾಯ ಬಫರ್ ಅವಶ್ಯಕತೆಗಿಂತ 3 ಪಟ್ಟು ಎಂದು ಮಾಹಿತಿ ನೀಡಿದ್ದಾರೆ. ದೇಶದಲ್ಲಿ ಗೋಧಿ ಮತ್ತು ಅಕ್ಕಿ ದಾಸ್ತಾನು ಸಮೃದ್ಧವಾಗಿದ್ದು, ದೇಶಾದ್ಯಂತ ಸಾರ್ವಜನಿಕ ವಿತರಣಾ ವ್ಯವಸ್ಥೆ ಹಾಗೂ ವಿವಿಧ ಜನಕಲ್ಯಾಣ ಯೋಜನೆಗಳಿಗೆ ನಿರಂತರ ಪೂರೈಕೆಯನ್ನು ಸಾಧ್ಯವಾಗುತ್ತಿದೆ. ಪ್ರಧಾನಮಂತ್ರಿ ಗರೀಬ್ ಕಲ್ಯಾಣ ಅನ್ನ ಯೋಜನೆ ಒಂದರಿಂದಲೇ 80 ಕೋಟಿಗೂ ಹೆಚ್ಚು ಭಾರತೀಯರಿಗೆ ಉಚಿತ ಆಹಾರ ಧಾನ್ಯ ವಿತರಣೆ ಮಾಡಲಾಗುತ್ತಿದೆ ಎಂದು ಹೇಳಿದ್ದಾರೆ.

ದೇಶೀಯವಾಗಿ ಆಹಾರ ಭದ್ರತೆ ಒದಗಿಸುವ ಜತೆಗೆ ರೈತರಿಂದ ವ್ಯವಸ್ಥಿತ ಖರೀದಿ, ಸಮೃದ್ಧ ಫಸಲು ಮತ್ತು ಅನ್ನದಾತರಿಗೆ ನೀಡುತ್ತಿರುವ ನಿರಂತರ ಬೆಂಬಲವು ರೈತಕಲ್ಯಾಣ ಮತ್ತು ದೇಶದ ಸುಭದ್ರತೆ ಕಡೆಗಿನ ಬದ್ಧತೆಯನ್ನು ಮತ್ತಷ್ಟು ಗಟ್ಟಿಗೊಳಿಸುತ್ತಿದೆ ಎಂದು ಹೇಳಿದ್ದಾರೆ.

ಚಾಕುವಿಂದ ಇರಿತಕ್ಕೊಳಗಾದವ ಬೈಕ್ ಚಲಾಯಿಸಿ ಆಸ್ಪತ್ರೆಗೆ!

ಹೊಟ್ಟೆಗೆ ಟವೆಲ್ ಕಟ್ಟಿಕೊಂಡು ಆಸ್ಪತ್ರೆಗೆ ರೋಡಲೇ ಕುಸಿದವಗೆ ಪೊಲೀಸ್ ನೆರವು

• **ಕನ್ನಡಪ್ರಭ ವಾರ್ತೆ** ಧಾರವಾಡ

- ಸೆಂಟ್ರಿಂಗ್ ಕೆಲಸಕ್ಕೆ ಹೋಗುತ್ತಿದ್ದ ವ್ಯಕ್ತಿ ಮೇಲೆ ದಾಳಿ: ಕಾರಣ ಅಸ್ಪಷ್ಟ

ಸೆಂಟ್ರಿಂಗ್ ಕೆಲಸಕ್ಕೆ ತೆರಳಿದ್ದ ವ್ಯಕ್ತಿಯೊಬ್ಬರಿಗೆ ಕ್ಷುಲ್ಲಕ ವಿಚಾರಕ್ಕೆ ದುಷ್ಕರ್ಮಿಯೊಬ್ಬ ಚಾಕುವಿನಿಂದ ಹಲ್ಲೆ ನಡೆಸಿರುವ ಘಟನೆ ಧಾರವಾಡ ನಗರದ ಹಾವೇರಿಪೇಟ ಬಡಾವಣೆ ಸಮೀಪ ಗುರುವಾರ ನಡೆದಿದೆ.

ಮೊಹಮ್ಮದ್ ರಫೀಕ್ (35) ಹಲ್ಲೆಗೊಳಗಾದ ವ್ಯಕ್ತಿ. ಎಂದಿನಂತೆ ಬೆಳಿಗ್ಗೆ ಸೆಂಟ್ರಿಂಗ್ ಕೆಲಸಕ್ಕೆ ತೆರಳಿದ್ದ ವೇಳೆ ದುಷ್ಕರ್ಮಿಗಳಿಂದ ದಾಳಿ ನಡೆದಿದೆ. ಮಾತಿನ ಚಕಮಕಿಯಿಂದ ಆರಂಭವಾದ ವಿವಾದ ಕೆಲವೇ ಕ್ಷಣಗಳಲ್ಲಿ ಹಿಂಸಾತ್ಮಕ ತಿರುವು ಪಡೆದು, ರಫೀಕ್ ಹೊಟ್ಟೆ ಭಾಗಕ್ಕೆ ಚಾಕುವಿನಿಂದ ಇರಿತಕ್ಕೊಳಗಾಗಿದ್ದಾನೆ ಎಂದು ತಿಳಿದುಬಂದಿದೆ.

ಗಂಭೀರವಾಗಿ ಗಾಯಗೊಂಡಿದ್ದ ರಫೀಕ್ ರಕ್ತದ ಮಡುವಿನಲ್ಲೇ ಮನೆಗೆ ತಲುಪಿ, ಹೊಟ್ಟೆಗೆ ಟವೆಲ್ ಕಟ್ಟಿಕೊಂಡು ಚಿಕಿತ್ಸೆಗಾಗಿ ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಗೆ ತೆರಳಲು ಬೈಕ್ ಮೇಲೆ ಹೊರಟಿದ್ದಾನೆ. ಆದರೆ ಮಾರ್ಗ ಮಧ್ಯೆ ರಕ್ತಸ್ರಾವ ಹೆಚ್ಚಾಗಿ ಪ್ರಜ್ಞೆ ತಪ್ಪಿ ರಸ್ತೆಯಲ್ಲೇ ಕುಸಿದು ಬಿದ್ದಿದ್ದಾನೆ.

ತಕ್ಷಣ ಮಾಹಿತಿ ಪಡೆದ ನವನಗರ ಪೊಲೀಸರು ಸ್ಥಳಕ್ಕಾಗಮಿಸಿ ಗಾಯಾಳುವನ್ನು ಕಿಮ್ಸ್ ಆಸ್ಪತ್ರೆಗೆ ದಾಖಲಿಸಿದ್ದು, ಚಿಕಿತ್ಸೆ ಮುಂದುವರಿದಿದೆ. ಘಟನೆ ಸಂಬಂಧ ಧಾರವಾಡ ಟೌನ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪ್ರಕರಣ ದಾಖಲಾಗಿದೆ. ಪೊಲೀಸರ ತನಿಖೆ ಬಳಿಕ ಘಟನೆಗೆ ನಿಖರವಾದ ಕಾರಣ ತಿಳಿದುಬರಬೇಕಿದೆ.

ಹಕ್ಕಿಜ್ವರದಿಂದ ತುಮಕೂರಲ್ಲಿ ಮತ್ತೆ 12 ನವಿಲು ಸಾವು: ಹೆಚ್ಚಿದ ಆತಂಕ

ಒಂದು ತಿಂಗಳೊಳಗೆ ಒಟ್ಟು 57 ನವಿಲು ಸಾವು

• **ಕನ್ನಡಪ್ರಭವಾರ್ತೆ** ತುಮಕೂರು



- ಏ.16ರಂದು 45 ನವಿಲು ಮೃತಪಟ್ಟಿದ್ದವು
- ನವಿಲು ಮಾಂಸವನ್ನು ಎಳೆದೊಯ್ಯುತ್ತಿರುವ ನಾಯಿಗಳು
- ಇದರಿಂದ ಮನುಷ್ಯರಿಗೂ ಸೋಂಕು ಹರಡುವ ಭೀತಿ
- ಹಕ್ಕಿಜ್ವರ ಖಚಿತಪಡಿಸಿದ ಭೋಪಾಲ್ ಲ್ಯಾಬ್

ಕಲ್ಪತರುನಾಡಿನಲ್ಲಿ ಹಕ್ಕಿಜ್ವರದ ರುದ್ರನರ್ತನ ಮುಂದುವರೆದಿದ್ದು, ದುರ್ಗದಹಳ್ಳಿ, ಹಿರೇಹಳ್ಳಿಯಲ್ಲಿ ಮತ್ತೆ 12 ನವಿಲುಗಳು ಸಾವನ್ನಪ್ಪಿವೆ. ಏ.16ರಂದು ಕೋಳಿಹಳ್ಳಿಯಲ್ಲಿ 45 ನವಿಲುಗಳು ಸಾವನ್ನಪ್ಪಿದ್ದ ಘಟನೆ ಮಾಸುವ ಮುನ್ನವೇ ಇದೀಗ ಮತ್ತೆ 12 ನವಿಲುಗಳು ಮೃತಪಟ್ಟಿದ್ದು, ಮೃತ ನವಿಲುಗಳ ಸಂಖ್ಯೆ ಒಟ್ಟು 57ಕ್ಕೆ ಏರಿಕೆಯಾಗಿದೆ.

ನವಿಲುಗಳಿಗೆ ಎಚ್5ಎನ್1 ಕಂಟಕವಾಗಿದ್ದು ಜಿಲ್ಲೆಯಾದ್ಯಂತ ಸೋಂಕಿನ ಭೀತಿ ಉಂಟಾಗಿದೆ. ಕಾಡುಪಕ್ಷಿಗಳಲ್ಲಿ ಮೊದಲ ಬಾರಿಗೆ ಹಕ್ಕಿಜ್ವರ ದೃಢಪಟ್ಟಿರುವುದು ಮತ್ತು ನವಿಲುಗಳ ಸಾವು ಮುಂದುವರಿದಿರುವುದರಿಂದ ಆತಂಕ ಶುರುವಾಗಿದೆ. ಮೃತಪಟ್ಟ ನವಿಲುಗಳ ಮಾಂಸವನ್ನು ಬೀದಿನಾಯಿಗಳು ಎಳೆದೊಯ್ಯುತ್ತಿದ್ದು, ಇದರಿಂದ ಮನುಷ್ಯರಿಗೆ ಸೋಂಕು ಹರಡುವ ಸಾಧ್ಯತೆಯಿದೆ ಎಂಬ ಭೀತಿಯಲ್ಲಿ ಗ್ರಾಮಸ್ಥರಿದ್ದಾರೆ.

ಮೃತ ನವಿಲುಗಳ ಅಂಗಾಂಶ ಪರೀಕ್ಷಿಸಿದ ಭೋಪಾಲ್ ಲ್ಯಾಬ್, ಹಕ್ಕಿಜ್ವರ ಎಂದು ದೃಢಪಡಿಸಿದೆ. ತುಮಕೂರು ನಗರದ ಗಡಿ ಭಾಗದಲ್ಲಿ ನವಿಲುಗಳ ಸಂಚಾರ ಹೆಚ್ಚಿದ್ದು, ಜನರಲ್ಲೂ ಸೋಂಕಿನ ಭಯ ಶುರುವಾಗಿದೆ.

ಬಂಧುಭಾವ ಇಲ್ಲದಿದ್ರೆ ಸ್ವಾತಂತ್ರ್ಯ ರಕ್ಷಣೆ ಕಷ್ಟ: ಭಾಗವತ್

ಕಟ್ಟಕಡೆಯ ವ್ಯಕ್ತಿಯ ಅಭಿವೃದ್ಧಿಯೇ ದೇಶದ ಸರ್ವಾಂಗೀಣ ಅಭಿವೃದ್ಧಿ: ಆರ್‌ಎಸ್‌ಎಸ್ ಸರ ಸಂಘಚಾಲಕ

• **ಕನ್ನಡಪ್ರಭ ವಾರ್ತೆ** ಮೈಸೂರು

ರಾಜಕೀಯ ಮತ್ತು ಆರ್ಥಿಕ ಸಮಾನತೆಗಿಂತ ಸಾಮಾಜಿಕ ಸಮಾನತೆ ಮುಖ್ಯ ಎಂದು ಅಂಬೇಡ್ಕರ್ ಪ್ರತಿಪಾದಿಸಿದ್ದಾರೆ. ಸ್ವಾತಂತ್ರ್ಯ ಮತ್ತು ಸಮಾನತೆಯನ್ನು ಬೆಸೆಯುವ ಕೊಂಡಿಯೇ ಬಂಧುಭಾವ. ಈ ಬಂಧುಭಾವ ಇಲ್ಲದಿದ್ದರೆ ದೇಶದ ಸ್ವಾತಂತ್ರ್ಯ ಕಾಪಾಡಿಕೊಳ್ಳುವುದು ಕಷ್ಟ ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸರ ಸಂಘಚಾಲಕ ಡಾ। ಮೋಹನ್ ಭಾಗವತ್ ಹೇಳಿದರು.



ನಗರದ ಸುತ್ತೂರು ಶಾಖಾ ಮಠದ ಆವರಣದಲ್ಲಿ ಗುರುವಾರ ಜೆಎಸ್‌ಎಸ್ ಮಹಾವಿದ್ಯಾಪೀಠದ ಸುವರ್ಣ ಮಹೋತ್ಸವ ವಿಶೇಷ ಉಪನ್ಯಾಸ- 15 'ರಾಷ್ಟ್ರೀಯ ಅಭಿವೃದ್ಧಿಗೆ ಸಾಮಾಜಿಕ ಸೌಹಾರ್ದತೆ ಪ್ರೇರಕ' ವಿಷಯ ಕುರಿತು ಅವರು ಮಾತನಾಡಿದರು. ಸಹೋದರರನ್ನು ಅಸ್ಪೃಶ್ಯರಾಗಿ ಶತಮಾನಗಳ ಕಾಲ ದೂರವಿಡಲಾಗಿದೆ. ಮೇಲು- ಕೀಳು ಎಂಬ ಮನೋಭಾವ ಕಳೆದು ಸರ್ವರೂ ಒಂದೇ ಎಂಬ ಏಕಭಾವ ಭಾರತೀಯರಲ್ಲಿ ಮೂಡಬೇಕು.

ದೇಶದ ಕೆಲವೇ ಕೆಲವು ಶ್ರೀಮಂತ ವ್ಯಕ್ತಿಗಳ ಏಳಿಗೆಯಿಂದ ದೇಶ ಅಭಿವೃದ್ಧಿಯಾಗಿದೆ ಎಂದು ಹೇಳಲಾಗದು. ದೇಹದ ಒಂದು ಭಾಗ ಪಾರ್ಶ್ವವಾಯುವಿಗೆ ಒಳಗಾಗಿದ್ದರೆ, ಇಡೀ ದೇಹ ಆರೋಗ್ಯವಾಗಿದೆ ಎಂದು ಹೇಗೆ ಹೇಳಲು ಆಗುವುದಿಲ್ಲವೋ ಹಾಗೆಯೇ ಸಮಾಜದ ಕಟ್ಟಕಡೆಯ ವ್ಯಕ್ತಿಯ ಅಭಿವೃದ್ಧಿಯೂ ಆಗದಿದ್ದರೆ ಅದು ನಿಜವಾದ ಅಭಿವೃದ್ಧಿಯಲ್ಲ. ಹೀಗಾಗಿ ಕಟ್ಟಕಡೆಯ ವ್ಯಕ್ತಿಯೂ ಸಾಮರಸ್ಯ, ಸೌಹಾರ್ದತೆಯಿಂದ, ನಾವೆಲ್ಲರೂ ಒಂದು ಎಂದು ಸಂತೋಷದಿಂದ ಇದ್ದಾಗ ಮಾತ್ರ ದೇಶದ ನಿಜವಾದ ಅಭಿವೃದ್ಧಿ ಆಗುತ್ತದೆ ಎಂದು ಅವರು ಪ್ರತಿಪಾದಿಸಿದರು.

ಸಮಾಜದಲ್ಲಿ ಸಾಮರಸ್ಯ ಮೂಡಿಸಲು ವಿವಿಧ ಜಾತಿ, ಧರ್ಮ ಮತ್ತು ಭಾಷೆಯ ಜನರ ಮನೆಗಳಿಗೆ ಭೇಟಿ ನೀಡಿ ಸ್ನೇಹ ಬೆಳೆಸಬೇಕು. ದುರ್ಬಲ ವರ್ಗದವರ ಉದ್ಧಾರಕ್ಕೆ ಎಲ್ಲರೂ ಒಗ್ಗೂಡಿ ಶ್ರಮಿಸಬೇಕು. ಕಟುವಾದ ನುಡಿಗಳನ್ನು ಬಿಟ್ಟು, ಸತ್ಯ ಮತ್ತು ಪ್ರೀತಿಯಿಂದ ಸಂವಹನ ನಡೆಸುವ ಮೂಲಕ ಮನಸ್ಸಿನ ವಿಕಾರಗಳನ್ನು ದೂರ ಮಾಡಬೇಕು ಎಂದರು. ಭಾರತೀಯರು ಭ್ರಾತೃತ್ವ ಮತ್ತು ಪರಸ್ಪರ ಸಹಾಯದೊಂದಿಗೆ ನಾಗರಿಕತೆ ಕಟ್ಟಿದ್ದಾರೆ. ಭಾಷೆ, ಜಾತಿ, ಪಂಗಡಗಳನ್ನು ಮೀರಿ ಬಂಧುತ್ವ ನೆಲೆಗೊಳ್ಳಬೇಕು. ಅಸ್ತಿತ್ವಕ್ಕಾಗಿ ಮತ್ತೊಬ್ಬರ ವಿರುದ್ಧ ಹೋರಾಟ ನಡೆಸುವುದು ಪಾಶ್ಚಾತ್ಯ ಪರಿಕಲ್ಪನೆ ಎಂದು ಭಾಗವತ್ ತಿಳಿಸಿದರು.

ಕಾರ್ಯಕ್ರಮದಲ್ಲಿ ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಇದ್ದರು.

ನಾಳೆ ರಾಜ್ಯದಲ್ಲಿ 40000ಕ್ಕೂ ಹೆಚ್ಚು ಮಂದಿಗೆ ಕಾಮೆಡ್-ಕೆ ಯುಜಿಇಟಿ

ದೇಶಾದ್ಯಂತ ಪರೀಕ್ಷೆ ಬರೆಯಲಿರುವ 1.30 ಲಕ್ಷ+ ಮಂದಿ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ರಾಜ್ಯದ ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳು ಮತ್ತು ದೇಶದ ವಿವಿಧ ಖಾಸಗಿ ಹಾಗೂ ಡೀಮ್ಡ್ ವಿಶ್ವವಿದ್ಯಾಲಯಗಳಲ್ಲಿನ ಎಂಜಿನಿಯರಿಂಗ್ ಸೀಟುಗಳ ಪ್ರವೇಶಕ್ಕೆ ಕಾಮೆಡ್-ಕೆ ನಡೆಸುವ 2026ನೇ ಸಾಲಿನ ಯುಜಿಇಟಿ ಹಾಗೂ ಯೂನಿಗೇಜ್ ಸಂಯೋಜಿತ ಪರೀಕ್ಷೆಗಳು ಮೇ 9ರಂದು ದೇಶಾದ್ಯಂತ ನಡೆಯಲಿದೆ.

ಕರ್ನಾಟಕವೂ ಸೇರಿ ದೇಶದ 28 ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳ 171 ನಗರಗಳಲ್ಲಿ ಒಟ್ಟು 303 ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ. ಕಂಪ್ಯೂಟರ್ ಆಧಾರಿತ ಆನ್‌ಲೈನ್ ಪರೀಕ್ಷೆ ಇದಾಗಿದ್ದು, ಈ ಬಾರಿ ಕರ್ನಾಟಕದ 40 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಸೇರಿ ದೇಶಾದ್ಯಂತ 1.30 ಲಕ್ಷಕ್ಕೂ ಹೆಚ್ಚು ಮಕ್ಕಳು ಪರೀಕ್ಷೆಗೆ ನೋಂದಾಯಿಸಿದ್ದಾರೆ. ಪರೀಕ್ಷೆ ಸುಸೂತ್ರವಾಗಿ ನಡೆಸಲು ಎಲ್ಲ ಅಗತ್ಯ ಸಿದ್ಧತೆಗಳನ್ನು ಮಾಡಲಾಗಿದೆ ಎಂದು ಕಾಮೆಡ್-ಕೆ ತಿಳಿಸಿದೆ.

ಬೆ.9ರಿಂದ 12 ಗಂಟೆ ಮತ್ತು ಮಧ್ಯಾಹ್ನ 2ರಿಂದ 5 ಗಂಟೆವರೆಗೆ ಎರಡು ಅವಧಿಯಲ್ಲಿ ಪರೀಕ್ಷೆಗಳು ನಡೆಯಲಿವೆ. ಅಭ್ಯರ್ಥಿಗಳು ನಿಗದಿತ ಸಮಯಕ್ಕೆ ಮುನ್ನ ಪರೀಕ್ಷಾ ಕೇಂದ್ರಗಳನ್ನು ತಲುಪಬೇಕು. ಪರೀಕ್ಷಾ ಪ್ರವೇಶ ಪತ್ರವನ್ನು ಮರೆಯದೆ ತರಬೇಕು. ಜೊತೆಗೆ ಎರಡು ಫೋಟೋ, ಒಂದು ಅರ್ಹ ಗುರುತಿನ ಚೀಟಿ, ವಾಟರ್ ಬಾಟಲ್ ಮತ್ತು ಪೆನ್ಸಿಲ್ ಹೊರತುಪಡಿಸಿ ಮತ್ಯಾವುದೇ ವಸ್ತುಗಳನ್ನು ಪರೀಕ್ಷಾ ಕೇಂದ್ರಕ್ಕೆ ತರುವಂತಿಲ್ಲ.

ಸ್ಪಷ್ಟನೆ ಕ್ರೀಡಾಂಗಣ ಸಾಮರ್ಥ್ಯ 33000 | ಹೀಗಾಗಿ ಸ್ಥಳಾಂತರ: ಸಚಿವ

ಭದ್ರತೆ ದೃಷ್ಟಿಯಿಂದ ಐಪಿಎಲ್ ಫೈನಲ್ ಸ್ಥಳಾಂತರ ಆಗಿಲ್ಲ: ಪರಂ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ 33 ಸಾವಿರ ಆಸನದ ವ್ಯವಸ್ಥೆಯಿದ್ದು, ಅದರಲ್ಲಿ ಏಳೆಂಟು ಸಾವಿರ ಆಸನಗಳನ್ನು ಪ್ರಾಯೋಜಕರಿಗೆ ಕೊಡಬೇಕಾಗುತ್ತದೆ. ಅದು ವ್ಯಾವಹಾರಿಕವಾಗಿ ಲಾಭ ಅಲ್ಲ ಎನ್ನುವ ಕಾರಣಕ್ಕೆ ಐಪಿಎಲ್ ಅಂತಿಮ ಪಂದ್ಯ ಸ್ಥಳಾಂತರಿಸಲಾಗಿದೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ತಿಳಿಸಿದರು.



ಗುರುವಾರ ಸುದ್ದಿಗಾರರ ಜೊತೆ ಮಾತನಾಡಿ, ಭದ್ರತೆ ವಿಚಾರವಾಗಿ ಯಾವುದೇ ದೂರು ಬಂದಿಲ್ಲ. ಐದು ಪಂದ್ಯಗಳು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದಿವೆ. ಆರ್‌ಸಿಬಿ ಅವರಾಗಲಿ ಅಥವಾ ಪೊಲೀಸ್ ಅವರಿಂದಾಗಲೀ ಯಾವುದೇ ದೂರು ಇಲ್ಲ ಎಂದರು.

ತಮಗೆ ಬಂದಿರುವ ಮಾಹಿತಿ ಪ್ರಕಾರ, ಇಲ್ಲಿ 33 ಸಾವಿರ ಆಸನದ ವ್ಯವಸ್ಥೆ ಇದೆ. 7-8 ಸಾವಿರ ಆಸನಗಳು ಅವರ ಪ್ರಾಯೋಜಕರಿಗೆ ಮತ್ತು ಇತರರಿಗೆ ಕೊಡಬೇಕಾಗಿರುತ್ತದೆ. ಹೀಗಾಗಿ ಅವರೇ 7-8 ಸಾವಿರ ಸೀಟ್ ಬ್ಲಾಕ್ ಮಾಡುತ್ತಾರೆ. ಇದರಿಂದ ಅವರಿಗೆ 25 ಸಾವಿರ ಆಸನಗಳು ಮಾತ್ರ ಉಳಿಯುತ್ತದೆ. ಹೀಗಾಗಿ, ವ್ಯಾವಹಾರಿಕವಾಗಿ ಲಾಭದಾಯವಲ್ಲ ಎಂದು ಹೇಳಿದರು.

ಕೆಎಸ್‌ಸಿಎ ಅವರು ನಿರಂತರವಾಗಿ ಸಂಪರ್ಕದಲ್ಲಿದ್ದರೂ ಪಂದ್ಯವನ್ನು ಇಲ್ಲಿಗೆ ಕೊಟ್ಟಿಲ್ಲ. ಯಾವುದೇ ತಂಡ ಚಾಂಪಿಯನ್ ಆದಾಗ ಅದರ ಮುಂದಿನ ಆವೃತ್ತಿಯಲ್ಲಿ, ಆ ತಂಡದ ತವರು ಮೈದಾನದಲ್ಲಿ ಮೊದಲ ಹಾಗೂ ಫೈನಲ್ ಮ್ಯಾಚ್ ಆಡಬೇಕಾಗುತ್ತದೆ. ಆದರೆ ಇವರು ಮೊದಲೇ ಇದೆಲ್ಲವನ್ನು ವರದಿ ಮಾಡಿ ನಿರ್ಧಾರ ಮಾಡಿದ್ದಾರೆ ಎಂದು ಅನಿಸುತ್ತದೆ ಎಂದು ತಿಳಿಸಿದರು.

ಶಾಸಕರಿಗೆ ಟಿಕೆಟ್ ನೀಡಿಕೆಯಿಂದ ಪಂದ್ಯ ಸ್ಥಳಾಂತರವಾಯಿತೇ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಅದಕ್ಕೂ ಪಂದ್ಯ ಸ್ಥಳಾಂತರಕ್ಕೂ ಯಾವುದೇ ಸಂಬಂಧ ಇಲ್ಲ. ನಾಲ್ಕು ಪಾಸ್ ಕೊಟ್ಟರೆ ಏನಾಗುತ್ತದೆ? ಎಂದರು.

ತೀರ್ಮಾನ ರಾಜ್ಯ ಸಚಿವ ಸಂಪುಟ ಸಭೆ ಮಹತ್ವದ ನಿರ್ಧಾರ

ಕ್ರೀಡಾ ಸಾಧಕರಿಗೆ ಸಿವಿಲ್ ಹುದ್ದೆ ನೇಮಕಾತಿಯಲ್ಲಿ 2% ಮೀಸಲಾತಿ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಕ್ರೀಡೆಗಳಲ್ಲಿ ಸಾಧನೆ ಮಾಡಿದವರಿಗೆ ರಾಜ್ಯ ಸಿವಿಲ್ ಸೇವೆಗಳಲ್ಲಿ ಹುದ್ದೆಗಳ ನೇಮಾತಿಯಲ್ಲಿ ಶೇ.2 ರಷ್ಟು ಮೀಸಲಾತಿ ನೀಡಲು ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನ ಮಾಡಲಾಗಿದೆ ಎಂದು ಸಚಿವ ಎಚ್.ಕೆ.ಪಾಟೀಲ್ ತಿಳಿಸಿದ್ದಾರೆ.

ಸಂಪುಟ ಸಭೆ ಬಳಿಕ ಸುದ್ದಿಗೋಷ್ಠಿ ನಡೆಸಿದ ಅವರು, ಇದಕ್ಕಾಗಿ ಕರ್ನಾಟಕ ನಾಗರಿಕ ಸೇವಾ (ಸಾಮಾನ್ಯ ನೇಮಕಾತಿ) ತಿದ್ದುಪಡಿ ನಿಯಮಗಳು -2026ಕ್ಕೆ ಸಂಪುಟ ಸಭೆ ಅನುಮೋದನೆ ನೀಡಿದೆ ಎಂದು ಮಾಹಿತಿ ನೀಡಿದರು.

ಮೂಲಗಳ ಪ್ರಕಾರ, ಈ ಹಿಂದೆ ಕರ್ನಾಟಕ ಸರ್ಕಾರ ವಿವಿಧ ಹುದ್ದೆಗಳ ನೇಮಕಾತಿಯಲ್ಲಿ ಕ್ರೀಡಾ ಸಾಧಕರಿಗೆ ಶೇ.2 ರಷ್ಟು ಹುದ್ದೆಗಳನ್ನು ಮೀಸಲಿರಿಸಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಆದೇಶ ಮಾಡಿತ್ತು. ಆದರೆ 2024ರ ಡಿಸೆಂಬರ್‌ನಲ್ಲಿ ಈ ಆದೇಶಕ್ಕೆ ತಡೆ ನೀಡಲಾಗಿತ್ತು. ವಿಶೇಷ ರಾಜ್ಯಪತ್ರದ ಮೂಲಕ ಈ ಕುರಿತು ಅಧಿಕೃತ ಆದೇಶ ಹೊರಡಿಸಲಾಗಿತ್ತು.

ಪುನರ್ ಪರಿಶೀಲನೆ: ಆದೇಶದಲ್ಲಿ ಸರ್ಕಾರವು ಕರ್ನಾಟಕ ನಾಗರಿಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1970 ನಿಯಮ 9ಕ್ಕೆ ತಿದ್ದುಪಡಿ ಮಾಡಿರುವುದನ್ನು ಪುನರ್ ಪರಿಶೀಲಿಸಲಿದೆ.

ಆದುದರಿಂದ, ರಾಜ್ಯ ಸಿವಿಲ್ ಸೇವೆಯಲ್ಲಿನ ನೇರ ನೇಮಕಾತಿಯಲ್ಲಿ ಕ್ರೀಡಾ ಸಾಧಕರಿಗೆ ಶೇ. 2 ರಷ್ಟು ಹುದ್ದೆಗಳನ್ನು ಮೀಸಲಿರಿಸಿ ಹೊರಡಿಸಲಾಗಿರುವ ಅಧಿಸೂಚನೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ತಡೆಹಿಡಿಯಲಾಗಿದೆ ಎಂದು ಎಲ್ಲಾ ನೇಮಕಾತಿ ಪ್ರಾಧಿಕಾರಗಳಿಗೆ ಆದೇಶದಲ್ಲಿ ಸೂಚನೆ ಕೊಡಲಾಗಿತ್ತು.

ಇದೀಗ ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಯಾವ ನಿಯಮಗಳ ಅಡಿ ಕ್ರೀಡಾ ಸಾಧಕರಿಗೆ ಮೀಸಲಾತಿ ಒದಗಿಸಬಹುದು ಎಂಬ ಬಗ್ಗೆ ವಿಸ್ತೃತ ಚರ್ಚೆ ನಡೆಸಲಾಗಿದೆ. ಅಂತಿಮವಾಗಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಮಂಡಿಸಿದ್ದ ಕರ್ನಾಟಕ ನಾಗರಿಕ ಸೇವಾ (ಸಾಮಾನ್ಯ ನೇಮಕಾತಿ) ತಿದ್ದುಪಡಿ ನಿಯಮಗಳು -2026ಕ್ಕೆ ಒಪ್ಪಿಗೆ ದೊರೆತಿರುವುದಾಗಿ ತಿಳಿದುಬಂದಿದೆ.

ಮುರಳೀಧರ ಎಕಲಾರಕರ್‌ಗೆ ರಾಷ್ಟ್ರೀಯ ಸದ್ಭಾವನಾ ಪ್ರಶಸ್ತಿ

ರಾಜ್ಯಪಾಲ ಗೆಹಲೋತ್‌ರಿಂದ ಪ್ರಶಸ್ತಿ ಪ್ರದಾನ

• **ಕನ್ನಡಪ್ರಭ ವಾರ್ತೆ** ಬೀದರ್

ಇಲ್ಲಿಯ ಯಲ್ಲಾಲಿಂಗ ಶಿಕ್ಷಣ ಸಂಸ್ಥೆಗಳ ಸಮೂಹದ ಅಧ್ಯಕ್ಷ ಮುರಳೀಧರ ಎಕಲಾರಕರ್ ಅವರಿಗೆ ಬೆಂಗಳೂರಿನ ಸನಾತನ ಫೌಂಡೇಶನ್ ವತಿಯಿಂದ ಕೊಡಲಾಗುವ ಪ್ರಸಕ್ತ ಸಾಲಿನ



ಮಹಾತ್ಮ ಗಾಂಧಿ ರಾಷ್ಟ್ರೀಯ ಸದ್ಭಾವನಾ ಪ್ರಶಸ್ತಿ ಲಭಿಸಿದೆ.

ಶಿಕ್ಷಣ, ಸಮಾಜ ಸೇವೆ ಸೇರಿದಂತೆ ವಿವಿಧ ಕ್ಷೇತ್ರಕ್ಕೆ ನೀಡಿದ ಗಣನೀಯ ಕೊಡುಗೆಗಾಗಿ ಅವರನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಬೆಂಗಳೂರಿನ ಸ‌ರ್.ಎಂ.ವಿ. ಆಡಿಟೋರಿಯಂನಲ್ಲಿ ಗುರುವಾರ ನಡೆದ 'ಗಾಂಧಿ ಸ್ಮೃತಿ: ನಮ್ಮ ನಡೆ ಗಾಂಧಿ ತತ್ವದೆಡೆ' ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಅವರು ಪ್ರಶಸ್ತಿ ಪ್ರದಾನ ಮಾಡಿದರು.

ಎಕಲಾರಕರ್ ಅವರು ಬೀದರ್ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ, ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದ್ದಾರೆ. ಪ್ರಸ್ತುತ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಸಂಯೋಜಕರಾಗಿದ್ದಾರೆ.

ರಾಜ್ಯದಲ್ಲಿ ತಾಪಮಾನ ಡಿಗ್ರಿ ಸೆಲ್ಸಿಯಸ್‌ಗಳಲ್ಲಿ

	ಕಲಬುರಗಿ	ಬೀದರ್	ವಿಜಯಪುರ	ಕೊಪ್ಪಳ	ರಾಯಚೂರು
ಗರಿಷ್ಠ	41.0	39.0	39.0	39.0	38.4
ಕನಿಷ್ಠ	26.6	24.6	26.0	23.4	24.0

ಸಿಎಂ ಬದಲಾಗ್ತಾರೆ ಅಂತ ಹೇಳಲ್ಲ, ಇರ್ತಾರೆ ಅಂತಲೂ ಹೇಳಲ್ಲ: ರಾಜಣ್ಣ



ಮೈಸೂರು: ಮುಖ್ಯಮಂತ್ರಿ ಬದಲಾಗುತ್ತಾರೆ ಎಂದು ನಾನು ಹೇಳುವುದಿಲ್ಲ. ಇರುತ್ತಾರೆ ಎಂದು ಕೂಡ ನಾನು ಹೇಳುವುದಿಲ್ಲ. ಈ ವಿಚಾರದಲ್ಲಿ ಕಾಂಗ್ರೆಸ್ ಹೈಕಮಾಂಡ್ ಅತಿ ಬೇಗ ಜಾಗರೂಕವಾಗಿ ನಿರ್ಧಾರ ಕೈಗೊಳ್ಳಲಿ ಎಂದು ಮಾಜಿ ಸಚಿವ ಕೆ.ಎನ್.ರಾಜಣ್ಣ ತಿಳಿಸಿದರು. ಸಿಎಂ ಸಿದ್ದರಾಮಯ್ಯ ಅವರನ್ನು ಮೈಸೂರಿನ ನಿವಾಸದಲ್ಲಿ ಗುರುವಾರ ಭೇಟಿಯಾದ ಬಳಿಕ ಸುದ್ದಿಗಾರರ ಜತೆ ಮಾತನಾಡಿ, ನಿರ್ಧಾರ ತಡವಾದಷ್ಟು ಅದು ಪಕ್ಷಕ್ಕೆ ಮತ್ತು ಸರ್ಕಾರದ ಮೇಲೆ ಪರಿಣಾಮ ಬೀರುತ್ತದೆ. ಸಿಎಂಗೆ ನೀವು ಪರಿಪೂರ್ಣ ಸ್ವತಂತ್ರರು, ಅಧಿಕಾರ ಮುಂದುವರಿಸಿ ಎಂಬ ಗ್ರೀನ್ ಸಿಗ್ನಲ್ ಆದರೂ ಕೊಡಲಿ. ಇಲ್ಲ ಬದಲಾವಣೆ ಮಾಡುತ್ತೇವೆ ಎಂಬುದಾದರು ಹೇಳಲಿ. ಎರಡು ಬಿಟ್ಟು ಬರಿ ಗೊಂದಲವೇ ಇದ್ದರೆ ಅದು ಎಲ್ಲಾ ರೀತಿಯ ಸಮಸ್ಯೆಗೆ ಕಾರಣವಾಗುತ್ತದೆ ಎಂದರು.

ವಿಜಯ್‌ಗೆ ಸರ್ಕಾರ ರಚಿಸಲು ಬಿಡದ ಗೌರ್ನರ್ ನಡೆ ಸರಿಯಲ್ಲ: ಡಿಕೆಶಿ



ಬೆಂಗಳೂರು: ತಮಿಳುನಾಡಿನಲ್ಲಿ ವಿಜಯ್‌ಗೆ ಸರ್ಕಾರ ರಚಿಸಿ ಬಹುಮತ ಸಾಬೀತು ತಡೆದಿರುವ ರಾಜ್ಯಪಾಲರ ನಡೆ ಸರಿಯಲ್ಲ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು. ವಿಧಾನಸೌಧದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ತಮಿಳುನಾಡು ರಾಜ್ಯಪಾಲರು ವಿಜಯ್ ಅವರಿಗೆ ಸರ್ಕಾರ ರಚನೆಗೆ ಅವಕಾಶ ನೀಡಬೇಕು. ಕರ್ನಾಟಕದಲ್ಲಿ ಈ ಹಿಂದೆ ಯಡಿಯೂರಪ್ಪರಿಗೆ ರಾಜ್ಯಪಾಲರು ಅನುಮತಿಸಿದ್ದರು. ಹೆಚ್ಚು ಸ್ಥಾನ ಗಳಿಸಿದ ಪಕ್ಷಗಳಿಗೆ ಸರ್ಕಾರ ರಚಿಸಲು ಹಿಂದೆಯೂ ಹಲವೆಡೆ ಅನುಮತಿ ಸಲಾಗಿತ್ತು. ರಾಷ್ಟ್ರಪತಿಗಳಾದ ನಾರಾಯಣನ್, ಅಬ್ದುಲ್ ಕಲಾಂ ಈ ರೀತಿ ಮಾಡಿದ್ದರು. ವಾಜಪೇಯಿ ಅವರಿಗೂ ಇದೇ ರೀತಿ ಸದನದಲ್ಲಿ ಬಹುಮತ ಸಾಬೀತಿಗೆ ಅವಕಾಶ ನೀಡಲಾಗಿತ್ತು. ಆದರೆ, ಈಗ ಟಿವಿಕೆಗೆ ಅವಕಾಶ ನೀಡದಿರುವುದು ತಪ್ಪು ಎಂದರು.

ಜೀವರಾಜ್ ವಿರುದ್ಧದ ಎಫ್‌ಐಆರ್‌ಗೆ ಮಧ್ಯಂತರ ತಡೆಯಾಜ್ಞೆ ವಿಸ್ತರಣೆ



ಬೆಂಗಳೂರು: ಅಂಚೆ ಮತ ಮರು ಎಣಿಕೆಯಲ್ಲಿ ಮತಗಳನ್ನು ತಿರುಚಿದ ಆರೋಪ ಸಂಬಂಧ ಶೃಂಗೇರಿ ಬಿಜೆಪಿ ಶಾಸಕ ಡಿ.ಎನ್. ಜೀವರಾಜ್ ವಿರುದ್ಧ ಚಿಕ್ಕಮಗಳೂರು ಟೌನ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್‌ಗೆ ನೀಡಲಾಗಿರುವ ಮಧ್ಯಂತರ ತಡೆಯಾಜ್ಞೆ ಆದೇಶ ಹೈಕೋರ್ಟ್ ಜೂ.3ರವರೆಗೆ ವಿಸ್ತರಿಸಿದೆ. ಕಾಂಗ್ರೆಸ್ ಏಜೆಂಟ್ ಸುಧೀರ್ ಮುರೋಳ್ಳಿ ದೂರಿನ ಆಧಾರದಲ್ಲಿ ದಾಖಲಾಗಿರುವ ಎಫ್‌ಐಆರ್ ರದ್ದತಿಗೆ ಕೋರಿ ಜೀವರಾಜ್, ಚಿಕ್ಕಮಗಳೂರು ಹಿಂದಿನ ಡೀಸಿ ಕೆ.ಎನ್.ರಮೇಶ್ ಸಲ್ಲಿಸಿರುವ ಅರ್ಜಿಗಳು ನ್ಯಾ. ಶ್ರೀಶಾನಂದರ ರಜಾಕಾಲೀನ ಏಕಸದಸ್ಯ ಪೀಠದ ಮುಂದೆ ಮತ್ತೆ ವಿಚಾರಣೆಗೆ ಬಂದಿದ್ದವು. ಸುಧೀರ್ ಪರ ವಕೀಲರು, ಆಕ್ಷೇಪಣೆಗೆ ಕಾಲಾವಕಾಶ ಕೋರಿದರು. ಪರಿಗಣಿಸಿದ ಕೋರ್ಟ್, ವಿಚಾರಣೆಯನ್ನು ಜೂ.3ಕ್ಕೆ ಮುಂದೂಡಿತು.

ಬೇಲ್ ರಹಿತ ವಾರೆಂಟ್ ಬೆನ್ನಲ್ಲೇ ಹರೀಶ್ ಜಡ್ಜ್ ಮುಂದೆ ಹಾಜರು



ಬೆಂಗಳೂರು: ತಮ್ಮ ವಿರುದ್ಧ ಜಾಮೀನು ರಹಿತ ವಾರೆಂಟ್ ಜಾರಿ ಹಿನ್ನೆಲೆ ಹರಿಹರ ಕ್ಷೇತ್ರದ ಬಿಜೆಪಿ ಶಾಸಕ ಬಿ.ಪಿ.ಹರೀಶ್ ಅವರು ಗುರುವಾರ ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ಕೋರ್ಟ್ ನ್ಯಾಯಾಧೀಶ ಸಂತೋಷ್ ಗಜಾನನ ಭಟ್ ಮುಂದೆ ಹಾಜರಾಗಿದ್ದರು. ವಿಚಾರಣೆ ನಡೆಸಿದ ನ್ಯಾಯಾಧೀಶರು ವಿಚಾರಣೆ 27ಕ್ಕೆ ಮುಂದೂಡಿದರು. ನಿಮ್ಮ ಮೇಲೆ ಆರೋಪ ಏನಿದೆ ಎಂದು ನ್ಯಾಯಾಧೀಶರು ಪ್ರಶ್ನಿಸಿದರು. ಇದಕ್ಕೆ ಹರೀಶ್ ಪರ ವಕೀಲರು ಅಟ್ರಾಸಿಟಿ ಕೇಸ್ ಎಂದು ಹೇಳಿದರು. ವೋಟ್ ಹಾಕಿಲ್ಲ ಅಂತ ಬೈದಿರಾ ಎಂದು ಜಡ್ಜ್ ಕೇಳಿ ದರು. ಇದಕ್ಕೆ ಇಲ್ಲಾ ಸ್ವಾಮಿ ಎಂದರು. ಈ ವೇಳೆ ಜಾಮೀನು ರಹಿತ ವಾರೆಂಟ್ ಹಿಂಪಡೆಯುವಂತೆ ಹರೀಶ್ ಅರ್ಜಿ ಸಲ್ಲಿಸಿದ್ದು, ಮಾನ್ಯ ಮಾಡಿದ ಕೋರ್ಟ್ ಒಂದು ಸಾವಿರ ರು. ದಂಡ ವಿಧಿಸಿ ಪ್ರಕರಣದ ವಿಚಾರಣೆ ಮುಂದೂಡಿತು.

ಅಭಿಮಾನೋತ್ಸವದಲ್ಲಿ ಬಿಎಸ್‌ವೈ ಕೊಡುಗೆಗಳ ಸ್ತಬ್ಧಚಿತ್ರ

ಭಾಗ್ಯಲಕ್ಷ್ಮಿ, ಹೆಣ್ಣುಮಕ್ಕಳಿಗೆ ಸೈಕಲ್, ಕೃಷಿ ಬಜೆಟ್ ಬಿಂಬಿಸುವ ಸ್ತಬ್ಧ ಚಿತ್ರಗಳ ಮೆರವಣಿಗೆ | ನೇಗಿಲು ಹೊತ್ತು ಸಾಗಲಿರುವ 2000 ರೈತರು

• **ಕನ್ನಡಪ್ರಭ ವಾರ್ತೆ** ಚಿತ್ರದುರ್ಗ

ಚಿತ್ರದುರ್ಗದಲ್ಲಿ ಶನಿವಾರ ನಡೆಯಲಿರುವ 'ಯಡಿಯೂರಪ್ಪ ಅಭಿಮಾನೋತ್ಸವ' ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಅವರು ಶುಕ್ರವಾರ ಸಂಜೆ ನಗರಕ್ಕೆ ಆಗಮಿಸಲಿದ್ದು, ಅದ್ದೂರಿ ಮೆರವಣಿಗೆ ಮೂಲಕ ಅವರನ್ನು ನಗರಕ್ಕೆ ಕರೆತರಲಾಗುವುದು. ಮೆರವಣಿಗೆಯಲ್ಲಿ ಬಿಎಸ್‌ವೈ ಕೊಡುಗೆಗಳ 'ಸ್ತಬ್ಧಚಿತ್ರ'ಗಳು ಪ್ರಮುಖ ಆಕರ್ಷಣೆಯಾಗಲಿವೆ.

ಯಡಿಯೂರಪ್ಪ ಅವರು ರಾಜಕೀಯ ಪ್ರವೇಶಿಸಿ 50 ವರ್ಷ ಸಂದ ಹಿನ್ನೆಲೆಯಲ್ಲಿ ಅವರನ್ನು ಅಭಿನಂದಿಸಲು ಚಿತ್ರದುರ್ಗದಲ್ಲಿ 'ಯಡಿಯೂರಪ್ಪ ಅಭಿಮಾನೋತ್ಸವ' ಆಯೋಜಿಸಲಾಗಿದ್ದು, ರೈತನಾಯಕನ ಸ್ವಾಗತಕ್ಕೆ ಕೋಟೆನಗರಿ, ಚಿತ್ರದುರ್ಗ ಮಧುವಣಗಿತ್ತಿಯಂತೆ ಶೃಂಗಾರಗೊಂಡಿದೆ.

ಅಭಿಮಾನೋತ್ಸವದ ಮುನ್ನಾದಿನ, ಶುಕ್ರವಾರ ಸಂಜೆ 4 ಗಂಟೆಗೆ ಅವರು ನಗರ ಪ್ರವೇಶಿಸಲಿದ್ದು, ಅವರು ಚಿತ್ರದುರ್ಗ ಪ್ರವೇಶಿಸುವ ಕ್ಷಣಗಳನ್ನು ಸಾರ್ಥಕಗೊಳಿಸುವ ಸಂಬಂಧ ಸಾಂಸ್ಕೃತಿಕ ಲೋಕವನ್ನೇ



ಸೃಷ್ಟಿಸಲಾಗುತ್ತಿದೆ. ಯಡಿಯೂರಪ್ಪ ಅವರ ಪುರಪ್ರವೇಶಕ್ಕೆ ಇಡೀ ಚಿತ್ರದುರ್ಗ ನಗರವನ್ನು ಸಿಂಗರಿಸಲಾಗಿದೆ.

ಶುಕ್ರವಾರ ಸಂಜೆ 4 ಗಂಟೆ ಸುಮಾರಿಗೆ ಹೊಳಲ್ಕೆರೆ ರಸ್ತೆಯ ಕನಕ ವೃತ್ತಕ್ಕೆ ಆಗಮಿಸುವ ಯಡಿಯೂರಪ್ಪ ಅವರನ್ನು ಒಂದು ಸಾವಿರ ಮಹಿಳೆಯರು ಪೂರ್ಣಕುಂಭದೊಂದಿಗೆ ಸ್ವಾಗತಿಸಲಿದ್ದಾರೆ. ಇದೇ ಸಂದರ್ಭದಲ್ಲಿ ರೈತರು ಸಾಂಪ್ರದಾಯಿಕ ರಾಶಿ ಪೂಜೆಯೊಂದಿಗೆ ರೈತ ಗೌರವ ಸಲ್ಲಿಸಲಿದ್ದಾರೆ. ಕನಕದಾಸ ವೃತ್ತದ ಸಮೀಪ ಚಂದ್ರವಳ್ಳಿ ಮೈದಾನದಿಂದ ಸಾಗುವ ಮೆರವಣಿಗೆಯಲ್ಲಿ ಯಡಿಯೂರಪ್ಪನವರನ್ನು ಪುಷ್ಪಾಲಂಕೃತ ಸಾರೋಟ್‌ನಲ್ಲಿ ಕುಳ್ಳಿರಿಸಿ ಮೆರವಣಿಗೆಯಲ್ಲಿ ಕರೆ ತರಲಾಗುವುದು. 2000ಕ್ಕೂ ಹೆಚ್ಚಿನ ಸಂಖ್ಯೆಯ ರೈತರು ನೇಗಿಲು ಹಿಡಿದು ಶಿಸ್ತುಬದ್ಧವಾಗಿ ಮೆರವಣಿಗೆಯಲ್ಲಿ ರೈತ ಘೋಷಣೆಯೊಂದಿಗೆ ನಡೆದು ಬರಲಿದ್ದಾರೆ. ಒನಕೆ ಓಬವ್ವನ ನೆಲದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ನಾರಿ ಶಕ್ತಿ ವಂದನ್ ಕಾಯ್ದೆಗೆ ಗೌರವ ಸಲ್ಲಿಸಲು 200ಕ್ಕೂ ಹೆಚ್ಚು ಮಹಿಳೆಯರು ಒನಕೆ ಓಬವ್ವನ ಪಾತ್ರಧಾರಿಗಳಾಗಿ ಶಿಸ್ತುಬದ್ಧವಾಗಿ ಮೆರವಣಿಗೆಯಲ್ಲಿ ನಡೆದು ಬರಲಿದ್ದಾರೆ. ರಾಜ್ಯದ ವಿವಿಧ ಮೂಲೆಗಳಿಂದ ಆಗಮಿಸುತ್ತಿರುವ ಸುಮಾರು 25ಕ್ಕೂ ಹೆಚ್ಚು ಸಾಂಸ್ಕೃತಿಕ ಹಾಗೂ ಜನಪದ ತಂಡಗಳು ಈ ಮೆರವಣಿಗೆಯಲ್ಲಿ ಭಾಗವಹಿಸುತ್ತಿವೆ.

ಅಂಬಾಸಿಡರ್ ಕಾರು ಪ್ರಮುಖ ಆಕರ್ಷಣೆ

ಯಡಿಯೂರಪ್ಪನವರ ಹೋರಾಟದ ದಿನಗಳ ನೆನಪಾಗಿ ಉಳಿದಿರುವ ಅವರ ವಾಹನ (ಅಂಬಾಸಿಡರ್ ಕಾರು ಸಿಕೆಆರ್ 45) ಸಹ ಪ್ರಮುಖ ಆಕರ್ಷಣೆಯಾಗಲಿದೆ. ಮೆರವಣಿಗೆಗೆ ವಿಶೇಷ ಮೆರುಗು ನೀಡಲು ಹಾಗೂ ಯಡಿಯೂರಪ್ಪನವರು ನಡೆದು ಬಂದ ಹಾದಿ, ಸಾಧನೆ ಹಾಗೂ ಅವರು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ನೀಡಲಾದ ಜನಪ್ರಿಯ ಯೋಜನೆಗಳಾದ ಭಾಗ್ಯಲಕ್ಷ್ಮಿ, ಹೆಣ್ಣುಮಕ್ಕಳಿಗೆ ಸೈಕಲ್ ವಿತರಣೆ, ಕೃಷಿ ಬಜೆಟ್ ಮೊದಲಾದವುಗಳನ್ನು ಪ್ರತಿಬಿಂಬಿಸುವ ಸ್ತಬ್ಧ ಚಿತ್ರಗಳು ಮೆರವಣಿಗೆಯ ಪ್ರಮುಖ ಆಕರ್ಷಣೆಗಳಾಗಲಿವೆ. ಮೆರವಣಿಗೆಯಲ್ಲಿ ಆರು ಎಲ್‌ಇಡಿಗಳು ಇರಲಿದ್ದು, ಒಂದೊಂದರಲ್ಲಿ ಯಡಿಯೂರಪ್ಪನವರ ಬಾಲ್ಯದಿಂದ ಹಿಡಿದು ವಿಧಾನಸೌಧದವರೆಗೂ ಅವರ ಜೀವನ ಚರಿತ್ರೆಯನ್ನು ಪ್ರಸ್ತುತ ಪಡಿಸಲಾಗುವುದು. ಯಡಿಯೂರಪ್ಪ ಅವರ ಸಾಧನೆಯ ಹಾದಿಯನ್ನು ಈ ಸ್ತಬ್ಧಚಿತ್ರಗಳ ಮೂಲಕ ತೆರೆದಿಡಲಾಗುವುದು. ಮೆರವಣಿಗೆಯಲ್ಲಿ ವಿವಿಧ ಕಲಾ ತಂಡಗಳು ಪಾಲ್ಗೊಳ್ಳಲಿವೆ.

ಸುದ್ದಿ ಸಿಂಚನ

ಚುನಾವಣಾ ರಾಜಕಾರಣಕ್ಕೆ ಎಚ್.ವಿಶ್ವನಾಥ್ ಗುಡ್ ಬೈ



ಮೈಸೂರು: 'ನಾನು ರಾಜಕೀಯ ಚಟುವಟಿಕೆಯಲ್ಲಿ ಸಕ್ರಿಯವಾಗಿರುತ್ತೇನೆ. ಆದರೆ, ಚುನಾವಣೆಗೆ ಮಾತ್ರ ಸ್ಪರ್ಧಿಸುವುದಿಲ್ಲ' ಎಂದು ವಿಧಾನ ಪರಿಷತ್ ಸದಸ್ಯ ಎಚ್. ವಿಶ್ವನಾಥ್ ಘೋಷಿಸಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ವಿಧಾನಸಭೆಗೆ ಸ್ಪರ್ಧಿಸಲು ಕನಿಷ್ಠ ₹50 ಕೋಟಿ ಬೇಕು. ರಿಯಲ್ ಎಸ್ಟೇಟ್‌ನಲ್ಲಿ ತೊಡಗಿದವರು ಜಮೀನು, ಮನೆ ಮಾರಿ ಸ್ಪರ್ಧಿಸಬಹುದು. ಆದರೆ, ನಮ್ಮಿಂದ ಸಾಧ್ಯವಿಲ್ಲ ಎಂದರು.

ಸಿದ್ಧಾಂತ ರಕ್ಷಣೆಗೆ ಟಿವಿಕೆಗೆ ಕೈ ಬೆಂಬಲ: ಪ್ರಿಯಾಂಕ್

ಬೆಂಗಳೂರು: ತಮಿಳುನಾಡಿನಲ್ಲಿ ಕಾಂಗ್ರೆಸ್ ಪಕ್ಷ ಡಿಎಂಕೆ ಮೈತ್ರಿ ಬಿಟ್ಟು ನಟ ವಿಜಯ್ ನೇತೃತ್ವದ ಟಿವಿಕೆ ಪಕ್ಷ ಬೆಂಬಲಿಸಿರುವುದನ್ನು ಸಚಿವ ಪ್ರಿಯಾಂಕ್ ಖರ್ಗೆ ಸಮರ್ಥಿಸಿಕೊಂಡಿದ್ದಾರೆ. ಮಾಧ್ಯಮದವರ ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿ, ಬಿಜೆಪಿಯವರ ಸಿದ್ಧಾಂತ ದೂರ ಇಡಬೇಕೆಂದು ಕಾಂಗ್ರೆಸ್ ಟಿವಿಕೆ ಬೆಂಬಲಿಸಲು ನಿರ್ಧಾರ ತೆಗೆದುಕೊಂಡಿದೆ. ಅದಕ್ಕೆ ನಾವು ಬದ್ಧ ಎಂದರು.

ಶಾಸಕ ಎಸ್‌ಟಿಎಸ್‌ಗೆ ಮಾತೃ ವಿಯೋಗ



ಕೆಂಗೇರಿ: ಯಶವಂತಪುರ ಕ್ಷೇತ್ರದ ಶಾಸಕ ಎಸ್.ಟಿ. ಸೋಮಶೇಖರ್ ತಾಯಿ ಟಿ. ಸೀತಮ್ಮ (98) ವಯೋಸಹಜ ಕಾಯಿಲೆಯಿಂದ ಗುರುವಾರ (ಮೇ 7) ಸಂಜೆ 6.30ಕ್ಕೆ ನಿಧನರಾದರು. ಬಿಟಿಎಂ ಲೇಔಟ್ 2ನೇ ಹಂತದಲ್ಲಿನ ಗೋಪಾಲನ್ ಮಾಲ್ ಎದುರಿನ ಶಾಸಕರ ಮನೆಯಲ್ಲಿ ಶುಕ್ರವಾರ ಬೆಳಗ್ಗೆ 11 ಗಂಟೆವರೆಗೆ ಅಂತಿಮ ದರ್ಶನಕ್ಕೆ ಅವಕಾಶ ಕಲ್ಪಿಸಲಾಗುತ್ತಿದೆ. ಚನ್ನಪಟ್ಟಣ ತಾಲೂಕಿನ ಶೆಟ್ಟಿಹಳ್ಳಿಯಲ್ಲಿ ಸಂಜೆ 4ಕ್ಕೆ ಅಂತ್ಯಕ್ರಿಯೆ ನಡೆಸಲಾಗುವುದು ಎಂದು ಕುಟುಂಬ ವರ್ಗ ತಿಳಿಸಿದೆ.

ಅಭಿಮಾನೋತ್ಸವ: 30 ಮಠಾಧೀಶರಿಗೆ ಆಹ್ವಾನ

ದೇಶದ ವಿವಿಧ ಮಠಗಳ 1000ಕ್ಕೂ ಹೆಚ್ಚು ಶ್ರೀಗಳು ಕಾರ್ಯಕ್ರಮದಲ್ಲಿ ಭಾಗಿ: ವಿಜಯೇಂದ್ರ

• **ಕನ್ನಡಪ್ರಭ ವಾರ್ತೆ** ಹಾನಗಲ್ಲ(ಹಾವೇರಿ)

ಹಾನಗಲ್ಲ ತಾಲೂಕಿನ ಅಕ್ಕಿಆಲೂರಿನ ಮುತ್ತಿನ ಕಂತಿಮಠದಲ್ಲಿ 30ಕ್ಕೂ ಅಧಿಕ ಮಠಾಧೀಶರನ್ನು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಭೇಟಿ ಮಾಡಿ, ಬಿ.ಎಸ್. ಯಡಿಯೂರಪ್ಪ ಅವರ ಅಭಿಮಾನೋತ್ಸವಕ್ಕೆ ಆಹ್ವಾನ ನೀಡಿದರು.

ಈವೇಳೆ ಮಾತನಾಡಿದ ಅವರು, ಅಭಿಮಾನೋತ್ಸವಕ್ಕೆ ಎಲ್ಲ ಮಠಾಧೀಶರಿಗೆ ಆಹ್ವಾನ ನೀಡಲಾಗುತ್ತಿದೆ. ಲಕ್ಷೋಪಲಕ್ಷ ಅಭಿಮಾನಿ ಕಾರ್ಯಕರ್ತರು, ದೇಶಾದ್ಯಂತ ಸಾವಿರಕ್ಕೂ ಅಧಿಕ ಮಠಾಧೀಶರು ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ. ಶ್ರೀಗಳು ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ಮೂಲಕ ಸುದೀರ್ಘ ರಾಜಕೀಯ ಜೀವನದಲ್ಲಿ ರಾಜ್ಯ, ದೇಶದ ಹಿತಕ್ಕೆ ಸಮರ್ಪಿಸಿಕೊಂಡಿರುವ ಬಿ.ಎಸ್. ಯಡಿಯೂರಪ್ಪ ಅವರನ್ನು ಆಶೀರ್ವದಿಸಬೇಕು. ರಾಜ್ಯದ ರೈತ ಹೋರಾಟಗಾರರು, ಮಠ-ಮಾನ್ಯಗಳಿಗೆ ಅತ್ಯಂತ ಗೌರವ ಹೊಂದಿದವರು ಆಗಿರುವ ಯಡಿಯೂರಪ್ಪ ಅವರು ಎಲ್ಲರ ಅಭಿಮಾನಕ್ಕೆ ಪಾತ್ರರಾಗಿದ್ದಾರೆ. ಇದು ಇಡೀ ಅಭಿಮಾನಿಗಳ ಅಭಿಮಾನದ ಉತ್ಸವವಾಗಿದೆ ಎಂದರು.



ಬಿಎಸ್‌ವೈ ಅಭಿಮಾನೋತ್ಸವ ಕಾರ್ಯಕ್ರಮಕ್ಕೆ 30ಕ್ಕೂ ಅಧಿಕ ಮಠಾಧೀಶರನ್ನು ಬಿಜೆಪಿ ರಾಜ್ಯಾಧ್ಯಕ್ಷ ಬಿವೈವಿ ಆಹ್ವಾನಿಸಿದರು.

ಸ್ಕ್ಯಾನ್ ಮಾಡಿದರೆ ಸಿಗುತ್ತದೆ ಪಾರ್ಕಿಂಗ್ ಕುರಿತ ಮಾಹಿತಿ

ಚಿತ್ರದುರ್ಗದ ಹೊರ ವಲಯದಲ್ಲಿ ಮೇ 9ರಂದು ನಡೆಯಲಿರುವ ಬಿ.ಎಸ್.ಯಡಿಯೂರಪ್ಪ ಅವರ ಅಭಿಮಾ ನೋತ್ಸವದ ವಾಹನ ನಿಲುಗಡೆಯ ಮಾಹಿತಿಯನ್ನು ಸ್ಕ್ಯಾನ್ ಮಾಡುವುದರ ಮೂಲಕ ಪಡೆಯಬಹುದು.

ನಾಯಕತ್ವ ಗೊಂದಲ ಎಚ್ಚರಿಕೆಯಿಂದ ಬಗೆಹರಿಸಬೇಕು: ರಾಮಲಿಂಗಾರೆಡ್ಡಿ

3 ವರ್ಷಗಳಿಂದ ಸರ್ಕಾರ ಉತ್ತಮ ಕಾರ್ಯ ಮಾಡಿದೆ ಗೊಂದಲ ಬಗೆಹರಿದರೆ 2028ರಲ್ಲೂ ಪಕ್ಷ ಅಧಿಕಾರಕ್ಕೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ನಾಯಕತ್ವ ವಿಚಾರ ಗೊಂದಲ ಹೈಕಮಾಂಡ್ ಶೀಘ್ರ ಎಚ್ಚರಿಕೆಯಿಂದ ನಿವಾರಿಸಿದರೆ ಒಳ್ಳೆಯದು. ಗೊಂದಲದಿಂದ ಪಕ್ಷಕ್ಕೆ ನಷ್ಟವಾಗಿದ್ದು, ಬಗೆಹರಿಸಿದರೆ 2028ರಲ್ಲೂ ಮತ್ತೆ ಅಧಿಕಾರಕ್ಕೆ ಬರುವ ಅವಕಾಶ ಇರಲಿದೆ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.



ಸುದ್ದಿಗಾರರೊಂದಿಗೆ ಮಾತನಾಡಿ, ನಾಯಕತ್ವ ಕುರಿತು ಪಕ್ಷದೊಳಗಿನ ಗೊಂದಲ ನಿವಾರಿಸಬೇಕು. ಮುಂದಿನ ಎರಡು ವರ್ಷಗಳಲ್ಲಿ ಚುನಾವಣೆ ಬರಲಿದ್ದು, ಅಷ್ಟರೊಳಗೆ ಗೊಂದಲ ನಿವಾರಿಸಬೇಕು. ನಾಯಕತ್ವ ಗೊಂದಲ ಮೂರು ವರ್ಷಗಳಿಂದ ಇದೆ. ಇದರಿಂದ ಆಂತರಿಕವಾಗಿ ನಮಗೆ ನಷ್ಟವಾಗಿದೆ. ಮುಂದಿನ ಎರಡು ವರ್ಷ ತಮ್ಮನ್ನೂ ಸೇರಿ ಎಲ್ಲರೂ ಮಾಧ್ಯಮಗಳ ಮುಂದೆ ಸುಮ್ಮನೆ ಮಾತನಾಡದೆ ಕೆಲಸ ಮಾಡಿಕೊಂಡು ಹೋಗಬೇಕು ಎಂದರು.

ಸಚಿವ ಸಂಪುಟ ಪುನಾರಚನೆ ಕುರಿತು ಪ್ರತಿಕ್ರಿಯಿಸಿ, ಸಚಿವ ಸಂಪುಟ ಪುನಾರಚನೆ ಆಗಬಹುದು. ಸರ್ಕಾರ ರಚನೆಯಾಗಿ ಎರಡೂವರೆ ವರ್ಷಕ್ಕೆ ಸಂಪುಟ ಪುನಾರಚನೆಯಾಗುತ್ತದೆ ಎಂದು ಕೆಲವರು ಭಾವಿಸಿದ್ದರು. ಸಚಿವರಾಗಬೇಕು ಎಂಬ ಆಸೆ ಇದ್ದವರು ಈಗಾಗಲೇ ದೆಹಲಿಗೂ ಹೋಗಿ ಬಂದಿದ್ದಾರೆ. ಇದರ ಬಗ್ಗೆ ಗೊಂದಲ ಹೆಚ್ಚುವುದಕ್ಕೂ ಮುನ್ನ ಹೈಕಮಾಂಡ್ ನಾಯಕರು ಸಿಎಂ, ಡಿಸಿಎಂ ಜತೆ ಮಾತಾಡಿ ನಿರ್ಧರಿಸಬೇಕು. ಅನೇಕ ಹಿರಿಯರಿದ್ದಾರೆ, ಅವರಿಗೂ ಅವಕಾಶ ಸಿಗಬೇಕು ಎಂದರು.

ರಾಜ್ಯಾದ್ಯಂತ ದಳಕ್ಕೆ ಶಕ್ತಿ ತುಂಬಲು ಯತ್ನ: ನಿಖಿಲ್

ಇದಕ್ಕಾಗಿ ಕ.ಕರ್ನಾಟಕ, ಕರಾವಳಿ ಸಂಚಾರ | ಮಂಡ್ಯದಲ್ಲಿ 'ಜನರೊಂದಿಗೆ ಜನತಾದಳ', ಬೆಳ್ಳಿ ಹಬ್ಬ ಸಂಭ್ರಮ

• **ಕನ್ನಡಪ್ರಭ ವಾರ್ತೆ** ಪಾಂಡವಪುರ

ಜೆಡಿಎಸ್ ಹಳೇ ಮೈಸೂರಿಗೆ ಸೀಮಿತವಾದ ಪಕ್ಷ ಎಂಬ ಭಾವನೆ ಇದೆ. ಅದನ್ನು ದೂರ ಮಾಡುವ ಉದ್ದೇಶದಿಂದ ಕಲ್ಯಾಣ ಕರ್ನಾಟಕ, ಕಿತ್ತೂರು ಕರ್ನಾಟಕ, ಕರಾವಳಿಯಾದ್ಯಂತ ಸಂಚರಿಸಿ ಪಕ್ಷಕ್ಕೆ ಶಕ್ತಿ ತುಂಬುವ ಪ್ರಯತ್ನ ಮಾಡುತ್ತಿದ್ದೇನೆ ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಹೇಳಿದರು.

ಗುರುವಾರ ಪಟ್ಟಣದ ಪಾಂಡವ ಕ್ರೀಡಾಂಗಣದ ಬಳಿ ಜನರೊಂದಿಗೆ ಜನತಾದಳ ಹಾಗೂ ಜೆಡಿಎಸ್ ಪಕ್ಷದ 25ನೇ ವರ್ಷದ ಬೆಳ್ಳಿಹಬ್ಬದ ಸಂಭ್ರಮ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಜನತಾದಳವನ್ನು ಅನೇಕ ಹಿರಿಯರು ನಿಸ್ವಾರ್ಥ ಭಾವನೆಯಿಂದ ಕಟ್ಟಿದ್ದಾರೆ. ಕನ್ನಡ ನಾಡಿನ ಅಸ್ಮಿತೆಯ ಉಳಿವಿಗಾಗಿ ಹುಟ್ಟಿದ ಪಕ್ಷ. ನಾಡಿನ ನೆಲ- ಜಲ, ಭಾಷೆ ಮತ್ತು ಜನಪರ ಚಳವಳಿ ಮತ್ತು ಹೋರಾಟದಿಂದಲೇ ಜನತಾದಳ ಪ್ರಾದೇಶಿಕ ಪಕ್ಷವಾಗಿ ಬೆಳೆದು ಬಂದಿರುವುದು



ಇತಿಹಾಸ ಎಂದು ನುಡಿದರು.

ದೇವೇಗೌಡರ ಹೋರಾಟ ಕಿಚ್ಚು ಸ್ಫೂರ್ತಿ: 93ರ ಇಳಿ ವಯಸ್ಸಿನಲ್ಲೂ ದೇವೇಗೌಡರ ಹೋರಾಟದ ಕಿಚ್ಚು ಕಡಿಮೆಯಾಗಿಲ್ಲ. ನೀರಾವರಿ ಯೋಜನೆಗಳ ಬಗ್ಗೆ ಅವರಿಗಿರುವ ತಿಳಿವಳಿಕೆ, ರಾಜ್ಯದ ಪರ ನಿಲುವು ಇಂದಿನ ಯುವಕರಿಗೆ ಸ್ಫೂರ್ತಿ. ಜೆಡಿಎಸ್ ಒಂದು ಜಿಲ್ಲೆಯಲ್ಲಿ ಮಾತ್ರವಲ್ಲದೆ ರಾಜ್ಯದಲ್ಲಿ ಗಟ್ಟಿಯಾಗಿದೆ. ಕಾರ್ಯಕರ್ತರು ಪಕ್ಷದ ದೊಡ್ಡ ಶಕ್ತಿಯಾಗಿದ್ದಾರೆ ಎಂದು ಹೇಳಿದರು.

2018 ಎಚ್.ಡಿ.ಕುಮಾರಸ್ವಾಮಿ ಸಿಎಂ ಆಗಿದ್ದ ಅವಧಿಯಲ್ಲಿ ಕರ್ನಾಟಕ ರಾಮರಾಜ್ಯವಾಗಿತ್ತು. ಆ ಸಮಯದಲ್ಲಿ ರೈತರ ₹2,600 ಕೋಟಿ ಸಾಲ ಮನ್ನಾ ಮಾಡಿ ರೈತರ ಮೇಲಿನ ಆರ್ಥಿಕ ಹೊರೆ ಇಳಿಸಿದ್ದರು. ರೈತರ ಆತ್ಮಹತ್ಯೆಯನ್ನು ತಡೆಗಟ್ಟುವಲ್ಲಿ ಯಶಸ್ವಿಯಾಗಿದ್ದರು ಎಂದರು.

ನನ್ನ ರಾಜಕಾರಣ ಮಂಡ್ಯದಿಂದಲೇ ಆರಂಭಗೊಂಡಿತು. ಅಂದಿನ ನಿಖಿಲ್‌ಗೂ ಇಂದಿನ ನಿಖಿಲ್‌ಗೂ ವ್ಯತ್ಯಾಸಗಳಿವೆ. ಚುನಾವಣೆಯಲ್ಲಿ ಏಳು- ಬೀಳುಗಳು ಸಹಜ. ಸೋಲುಗಳಿಂದ ನನಗೆ ರಾಜಕೀಯ ಪಕ್ವತೆ ಬಂದಿದೆ. ಜನರು ನನ್ನನ್ನು ಚುನಾವಣೆಯಲ್ಲಿ ಸೋಲಿಸಿದರೂ ನಾನು ಹೋದಲ್ಲೆಲ್ಲಾ ಅಕ್ಕರೆ, ಪ್ರೀತಿ ತೋರಿಸುತ್ತಿದ್ದಾರೆ ಎಂದರು.

ಒಗ್ಗಟ್ಟಾಗಿ ಪಕ್ಷ ಮುನ್ನಡೆಸಿ: ಜೆಡಿಎಸ್‌ಗೆ ಈಗ 25 ವರ್ಷವಾಗಿದೆ. ರಾಜ್ಯದಲ್ಲಿ ಪಕ್ಷ ಯಶಸ್ಸು ಕಾಣುತ್ತಿದೆ. ನಾವೆಲ್ಲರೂ ಒಗ್ಗಟ್ಟಾಗಿ ಪಕ್ಷವನ್ನು ಬಲ ಪಡಿಸುವ ಕೆಲಸ ಮಾಡಬೇಕಿದೆ ಎಂದರು.

2028ಕ್ಕೆ ತ.ನಾಡಿನ ವಿಜಯ್ ರೀತಿ ನಿಖಿಲ್ ಪುಟಿದೇಳುತ್ತಾರೆ: ಪುಟ್ಟರಾಜು

ನಿಖಿಲ್ ಮೇಲೆ ದೈವಶಕ್ತಿ ಇದೆ: ಮಾಜಿ ಸಚಿವ ಅವರಿಂದ ಹೊಸ ಅಧ್ಯಾಯ ಶುರುವಾಗಲಿದೆ

• **ಕನ್ನಡಪ್ರಭ ವಾರ್ತೆ** ಪಾಂಡವಪುರ(ಮಂಡ್ಯ)

ತಮಿಳುನಾಡು ವಿಧಾನಸಭಾ ಚುನಾವಣೆಯಲ್ಲಿ ನಟ ವಿಜಯ್ ಸುನಾಮಿ ರೀತಿ ಮೇಲೆದ್ದು ಬಂದಂತೆ 2028ರ ಚುನಾ ವಣೆಯಲ್ಲಿ ನಿಖಿಲ್ ಕುಮಾರಸ್ವಾಮಿ ಅವರು ಮೇಲೆದ್ದು ಬರುತ್ತಾರೆ ಎಂದು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಭವಿಷ್ಯ ನುಡಿದರು.



ತಾಲೂಕಿನಲ್ಲಿ ಗುರುವಾರ ನಡೆದ ಜನರೊಂದಿಗೆ ಜನತಾದಳ ಮತ್ತು ಜೆಡಿಎಸ್ 25ನೇ ವರ್ಷದ ಸಂಭ್ರಮಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಿಖಿಲ್ ಮೇಲೆ ದೈವಶಕ್ತಿ ಇದೆ. ರಾಜ್ಯದಲ್ಲಿ ಜೆಡಿಎಸ್ ಅಲೆ ಎಬ್ಬಿಸಿ ಪಕ್ಷವನ್ನು ಅಧಿಕಾರಕ್ಕೆ ತರುವ ಶಕ್ತಿ ನಿಖಿಲ್ ಅವರಿಗಿದೆ. ಅದಕ್ಕಾಗಿ ಪಾಂಡವರು ಹೋರಾಡಿದ ಮಣ್ಣಿನಿಂದಲೇ ಚಾಲನೆಯನ್ನು ನೀಡಿದ್ದಾರೆ. ಮುಂದಿನ ಚುನಾವಣೆಯಲ್ಲಿ ಗೆದ್ದು ಬಂದು ರಾಜ್ಯದ ಆಶಾಕಿರಣವಾಗಲಿದ್ದಾರೆ. ಅವರಿಂದ ಹೊಸದೊಂದು ಅಧ್ಯಾಯ ಶುರುವಾಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

X ಫೈಲ್ಸ್

ಎಲ್ಲಾ ಸ್ವಾಹಾ..

ಉದ್ಧವ್ ಠಾಕ್ರೆ.. ಸ್ವಾಹಾ , ಶರದ್ ಪವಾರ್.. ಸ್ವಾಹಾ, ಅಖಿಲೇಶ್ ಯಾದವ್.. ಸ್ವಾಹಾ, ನವೀನ್ ಪಟ್ನಾಯಕ್.. ಸ್ವಾಹಾ, ಲಾಲು-ತೇಜಸ್ವಿ... ಸ್ವಾಹಾ, ಕೇಜ್ರಿವಾಲ್.. ಸ್ವಾಹಾ, ತರುಣ್ ಗೊಗೋಯ್.. ಸ್ವಾಹಾ , ಸ್ಟಾಲಿನ್.. ಸ್ವಾಹಾ, ಮಮತಾ ಬ್ಯಾನರ್ಜಿ.. ಸ್ವಾಹಾ

• ಅಗಸ್ತ್ಯ

ದುಡ್ಡು ಬೇಡ, ತಗೊಂಡ್ ಹೋಗಿ

ಆಕೆ ಒಂದು ಗಂಟೆ ಹುಡುಕಾಡಿ, 30 ಜೊತೆಗೆ ಹೆಚ್ಚು ಚಪ್ಪಲಿಗಳನ್ನು ಟ್ರೈ ಮಾಡಿ, ಕೊನೆಗೆ ಒಂದನ್ನು ಆಯ್ಕೆ ಮಾಡಿಕೊಂಡು, ಕೇಳಿದಳು, 'ಇದು ಚೆನ್ನಾಗಿದೆ, ಎಷ್ಟು?'

ಅಂಗಡಿಯವನು: ದುಡ್ಡೇನೂ ಕೊಡೋದು ಬೇಡ, ನೀವು ಫ್ರೀ ಆಗಿ ತಗೊಂಡ್ ಹೋಗಿ. ಯಾಕೆಂದ್ರೆ ಅದು ನಿಮ್ದೆ. ಅದೇ ಚಪ್ಪಲಿ ಹಾಕೊಂಡು ನೀವು ಅಂಗಡಿಗೆ ಬಂದಿದ್ದು.

• ರಮೇಶ್

ಆಕ್ರೋಶ ರಾಮಚಂದ್ರರಾವ್ ಅಮಾನತು ಹಿಂಪಡೆದಿದ್ದಕ್ಕೆ ಕಿಡಿ

ಭ್ರಷ್ಟರ ರಕ್ಷಣೆಯೇ ರಾಜ್ಯ ಸರ್ಕಾರಕ್ಕೆ ಮುಖ್ಯವಾಯ್ತೇ?: ಶಾಸಕ ಅಶೋಕ್

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಲೈಂಗಿಕ ಹಗರಣದ ಸಂಬಂಧ 5 ತಿಂಗಳ ಹಿಂದೆ ತಲೆದಂಡಕ್ಕೆ ಗುರಿಯಾಗಿದ್ದ ಪೊಲೀಸ್ ಮಹಾನಿರ್ದೇಶಕ (ಡಿಜಿಪಿ) ಡಾ.ಕೆ.ರಾಮಚಂದ್ರ ರಾವ್ ಅಮಾನತು ಆದೇಶ ಹಿಂಪಡೆದಿರುವ ಸರ್ಕಾರದ ವಿರುದ್ಧ ವಿಪಕ್ಷದ ನಾಯಕ ಆರ್. ಅಶೋಕ್ ಕಿಡಿಕಾರಿದ್ದಾರೆ.



ಹೆಣ್ಣುಮಕ್ಕಳ ಮಾನಕ್ಕಿಂತಲೂ ಭ್ರಷ್ಟ ಅಧಿಕಾರಿಗಳ ರಕ್ಷಣೆಯೇ ಕಾಂಗ್ರೆಸ್ ಸರ್ಕಾರಕ್ಕೆ ಮುಖ್ಯವಾಯಿತೇ ಎಂದು ಗುರುವಾರ 'ಕನ್ನಡಪ್ರಭ'ದಲ್ಲಿ ಪ್ರಕಟಗೊಂಡ ಸುದ್ದಿಯ ಪ್ರತಿಯೊಂದಿಗೆ ಎಕ್ಸ್ ಖಾತೆ ಮೂಲಕ ಸರ್ಕಾರವನ್ನು ಪ್ರಶ್ನಿಸಿದ್ದಾರೆ.

ಲೈಂಗಿಕ ಹಗರಣದ ವಿಡಿಯೋ ಅಸಲಿ ಎಂದು ವರದಿ ಬಂದಿದ್ದರೂ, ಕಾಮುಕ ಅಧಿಕಾರಿಯನ್ನು ರಕ್ಷಿಸುತ್ತಿರುವ ಕಾಂಗ್ರೆಸ್ ಸರ್ಕಾರಕ್ಕೆ ನ್ಯಾಯದ ಮೇಲೆ ನಂಬಿಕೆ ಇಲ್ಲದಂತಾಗಿದೆ. ಡಿಜಿಪಿ ಶ್ರೇಣಿಯ ಅಧಿಕಾರಿಯೊಬ್ಬರ ಮೇಲೆ ಲೈಂಗಿಕ ದೌರ್ಜನ್ಯದ ಆರೋಪ ಕೇಳಿಬಂದಾಗ, ಗಂಭೀರವಾಗಿ ಪರಿಗಣಿಸ ಬೇಕಾದ ರಾಜ್ಯ ಸರ್ಕಾರ, ಅಮಾನತು ಆದೇಶವನ್ನೇ ಹಿಂಪಡೆದು ಅವರಿಗೆ ರೆಡ್ ಕಾರ್ಪೆಟ್ ಸ್ವಾಗತ ನೀಡಿದೆ ಎಂದು ಹರಿಹಾಯ್ದಿದ್ದಾರೆ.

ಕಾನೂನಿಗಿಂತ ದೊಡ್ಡವರೇ?: ಸಿಎಂ ಸಿದ್ದರಾಮಯ್ಯನವರೇ, ಗೃಹ ಸಚಿವ ಡಾ.ಜಿ. ಪರಮೇಶ್ವರ್ ಅವರೇ, ಹಿಂದಿನ ಮರ್ಮ ವೇನು? ಸಾಕ್ಷಿ ಇದ್ದರೂ ಸಲಾಮು ಹೊಡೆಯುತ್ತಿರುವುದೇಕೆ? ವಿಡಿಯೋ ಅಸಲಿ ಎಂದು ಸರ್ಕಾರವೇ ನೇಮಿಸಿದ ಸಮಿತಿ ವರದಿ ನೀಡಿದ ಮೇಲೂ ಅಧಿಕಾರಿಗೆ ಕ್ಲೀನ್ ಚಿಟ್ ಕೊಡುವ ಧಾವಂತ ವೇಕೆ? ಕಾನೂನಿಗಿಂತ ವ್ಯಕ್ತಿ ದೊಡ್ಡವರೇ? ನಿವೃತ್ತಿ ಹೊಸ್ತಿಲಲ್ಲಿರುವ ಅಧಿಕಾರಿಗೆ ಇಷ್ಟು ಆತುರವಾಗಿ 'ರಿಲೀಫ್' ನೀಡುವ ಮೂಲಕ ನೀವು ಸಂತ್ರಸ್ತ ಮಹಿಳೆಯರಿಗೆ ಯಾವ ಸಂದೇಶ ನೀಡುತ್ತಿದ್ದೀರಿ ಎಂದು ಖಾರವಾಗಿ ಪ್ರಶ್ನಿಸಿದ್ದಾರೆ. ಇದೇನಾ ಕಾಂಗ್ರೆಸ್ ನೈತಿಕತೆ? ಕಾಮುಕರಿಗೆ ರಕ್ಷಣೆ ನೀಡುವ ಈ ವಿಕೃತ ಮನಸ್ಥಿತಿಯನ್ನು ರಾಜ್ಯದ ಜನ ಕ್ಷಮಿಸಲ್ಲ. ಅಧಿಕಾರಕ್ಕೆ ಕುತ್ತು ಬರುವ ಭಯವೋ ಅಥವಾ ಒಳಗುಟ್ಟಿನ ರಕ್ಷಣೆಯೋ? ಕಾಂಗ್ರೆಸ್ ಸರ್ಕಾರ ಉತ್ತರ ನೀಡಲಿ ಎಂದು ಅಶೋಕ್ ಆಗ್ರಹಿಸಿದ್ದಾರೆ.

ನೆರವಾಗಿ ಶ್ರೀಗಂಧ ಬೆಳೆಗಾರರು, ವಿಜ್ಞಾನಿಗಳು, ಸಂಸ್ಥೆಗಳಿಗೆ ಕೋರಿಕೆ

ಶ್ರೀಗಂಧ ಕಳ್ಳತನ ತಡೆಗೆ ಟೆಕ್ನಾಲಜಿ ಮಾಹಿತಿ ನೀಡಲು ಎಂಬಿಪಾ ಮನವಿ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಶ್ರೀಗಂಧ ಮರ-ಗಿಡಗಳ ಕಳ್ಳತನ ತಡೆಯುವ ಸಂಬಂಧ ತಂತ್ರಜ್ಞಾನದ ನೆರವು ಪಡೆಯಲು ಕರ್ನಾಟಕ ಸಾಬೂನು ಮತ್ತು ಮಾರ್ಜಕಗಳ ನಿಯಮಿತ (ಕೆಎಸ್‌ಡಿಎಲ್) ಮುಂದಾಗಿದ್ದು, ಅದಕ್ಕಾಗಿ ತಂತ್ರಜ್ಞಾನದ ಮಾಹಿತಿ ಹೊಂದಿರುವವರು ಕೆಎಸ್‌ಡಿಎಲ್‌ಗೆ ಮಾಹಿತಿ ನೀಡುವಂತೆ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಕೋರಿದ್ದಾರೆ.



ಮೈಸೂರು ಸ್ಯಾಂಡಲ್ ಸೋಪ್ ತಯಾರಿಕೆಗೆ ಶ್ರೀಗಂಧ ಪ್ರಮುಖ ಕಚ್ಚಾವಸ್ತುವಾಗಿದ್ದು, ಅದರ ಬೆಳೆ ಉತ್ತೇಜಿಸಲು ಕರ್ನಾಟಕ ಸಾಬೂನು ಮತ್ತು ಮಾರ್ಜಕಗಳ ನಿಯಮಿತ ಮುಂದಾಗಿದೆ. ಅದಕ್ಕಾಗಿ ಶ್ರೀಗಂಧ ಮರ-ಗಿಡಗಳ ಕಳ್ಳತನ ತಡೆಯಲು ತಂತ್ರಜ್ಞಾನದ ನೆರವು ಪಡೆಯಲು ನಿರ್ಧರಿಸಲಾಗಿದೆ. ಅದರ ಭಾಗವಾಗಿ ಶ್ರೀಗಂಧ ಕಳ್ಳತನ ತಡೆಗೆ ಸಂಬಂಧಿಸಿದ ಸುಧಾರಿತ ಉಪಕರಣಗಳು ಅಥವಾ ಆಧುನಿಕ ತಂತ್ರಜ್ಞಾನಗಳ ಮಾಹಿತಿ ಹೊಂದಿರುವ ರೈತರು, ವಿಜ್ಞಾನಿಗಳು ಮತ್ತು ಸಂಸ್ಥೆಗಳು ಕೆಎಸ್‌ಡಿಎಲ್ ಅನ್ನು ಸಂಪರ್ಕಿಸಿ ಮಾಹಿತಿ ಹಂಚಿಕೊಳ್ಳಬಹುದು. ಆ ತಂತ್ರಜ್ಞಾನ ಸೂಕ್ತ ಎಂದು ಪರಿಗಣನೆಗೆ ಬಂದರೆ ಅದರ ಅನುಷ್ಠಾನಕ್ಕೆ ಬೇಕಾಗುವ ವೆಚ್ಚ ಕೆಎಸ್‌ಡಿಎಲ್ ಭರಿಸಲಿದೆ ಎಂದು ಸಚಿವ ಎಂ.ಬಿ.ಪಾಟೀಲ್ ತಿಳಿಸಿದ್ದಾರೆ.

ಇನ್ನು, ಶ್ರೀಗಂಧ ಬೆಳೆ ಉತ್ತೇಜಿಸುವ ಉದ್ದೇಶದಿಂದ ಕರ್ನಾಟಕ ಸಾಬೂನು ಮತ್ತು ಮಾರ್ಜಕಗಳ ನಿಯಮಿತಕ್ಕೆ ಅತಿಹೆಚ್ಚು ಪ್ರಮಾಣದಲ್ಲಿ ಶ್ರೀಗಂಧ ಪೂರೈಸುವ ರೈತರಿಗೆ ಜೂ.4ರಂದು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಜನ್ಮ ದಿನದಂದು ಪ್ರಶಸ್ತಿ ನೀಡಿ ಸನ್ಮಾನಿಸಲಾಗುವುದು. ಶ್ರೀಗಂಧ ಕಳ್ಳರನ್ನು ಬಂಧಿಸುವಲ್ಲಿ ಹಾಗೂ ಪ್ರಕರಣ ದಾಖಲಿಸುವಲ್ಲಿ ಸಾಧನೆ ತೋರುವ ಪೊಲೀಸ್ ಸಿಬ್ಬಂದಿ, ಅರಣ್ಯ ಇಲಾಖೆ ಸಿಬ್ಬಂದಿ, ಅಧಿಕಾರಿಗಳು ಹಾಗೂ ಅದಕ್ಕೆ ಸಂಬಂಧಿಸಿ ಮಾಹಿತಿ ನೀಡುವ ಸಾರ್ವಜನಿಕರಿಗೂ ಪುರಸ್ಕಾರ ನೀಡಲಾಗುವುದು ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.

ಶಿಕ್ಷೆ ರದ್ದು ಕೋರಿ ಶಾಸಕ ವಿನಯ್ ಅರ್ಜಿ ವಿಚಾರಣೆ ಮುಂದೂಡಿಕೆ

ಉತ್ತರ ನೀಡಲು ಕಾಲಾವಕಾಶ ಕೇಳಿದ ಸಿಬಿಐ 26ರ ವರೆಗೆ ಕಾಲಾವಕಾಶ ನೀಡಿದ ಹೈಕೋರ್ಟ್

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಬಿಜೆಪಿ ಮುಖಂಡ ಯೋಗೀಶ್ ಗೌಡ ಕೊಲೆ ಪ್ರಕರಣದಲ್ಲಿ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ವಿಧಿಸಿರುವ ಜೀವಾವಧಿ ಶಿಕ್ಷೆ ರದ್ದು ಕೋರಿ ಮಾಜಿ ಕಾಂಗ್ರೆಸ್ ಶಾಸಕ ವಿನಯ್ ಕುಲಕರ್ಣಿ ಸಲ್ಲಿರುವ ಕ್ರಿಮಿನಲ್ ಮೇಲ್ಮನವಿಗೆ ಉತ್ತರಿಸಲು 26ರವರೆಗೆ ಸಿಬಿಐಗೆ ಹೈಕೋರ್ಟ್ ಕಾಲಾವಕಾಶ ನೀಡಿದೆ.



ಅಪರಾಧಿಗಳಾಗಿರುವ ವಿನಯ್ ಕುಲಕರ್ಣಿ, ಮತ್ತು ಚಂದ್ರಶೇಖರ್ ಇಂಡಿ ಅವರು ಸಲ್ಲಿಸಿದ್ದ ಪ್ರತ್ಯೇಕ ಕ್ರಿಮಿನಲ್ ಮೇಲ್ಮನವಿ ನ್ಯಾಯಮೂರ್ತಿಗಳಾದ ಸಚಿನ್ ಶಂಕರ್‌ಮುಗದುಂ ಮತ್ತು ರಾಜೇಶ್ ರೈ ಅವರ ವಿಭಾಗೀಯ ಪೀಠದ ಮುಂದೆ ವಿಚಾರಣೆಗೆ ಬಂದಿತ್ತು. ಆಕ್ಷೇಪಣೆ ಸಲ್ಲಿಸಲು ಕಾಲಾವಾಕಾಶ ನೀಡಬೇಕೆಂಬ ಸಿಬಿಐ ಪರ ವಕೀಲರು ಮನವಿಗೆ ಒಪ್ಪಿದ ಪೀಠ, ವಿನಯ್ ಕುಲಕರ್ಣಿ ಅವರ ಮೇಲ್ಮನವಿ ಅರ್ಜಿ ವಿಚಾರಣೆಯನ್ನು ಮೇ 26ಕ್ಕೆ ಮುಂದೂಡಿತು. ಇದೇ ವೇಳೆ ಪ್ರಕರಣದ ಮತ್ತೊಬ್ಬ ಆರೋಪಿ ಚನ್ನಕೇಶವ ಟಿಂಗರಿಕರ್ ಸಲ್ಲಿಸಿರುವ ಮೇಲ್ಮನವಿ ಮೇ 14ಕ್ಕೆ ಮುಂದೂಡಿತು. 2016ರಲ್ಲಿ ನಡೆದಿದ್ದ ಯೋಗೀಶ್ ಗೌಡ ಕೊಲೆ ಪ್ರಕರಣದಲ್ಲಿ ಜನಪ್ರತಿನಿಧಿಗಳ ನ್ಯಾಯಾಲಯ 17 ಮಂದಿ ಆರೋಪಿಗಳನ್ನು ಏ.15ರಂದು ದೋಷಿಗಳು ಎಂದು ನಿರ್ಧರಿಸಿ, ಏ.17ರಂದು ವಿನಯ್ ಸೇರಿ 16 ಮಂದಿಗೆ ಜೀವಾವಧಿ ಶಿಕ್ಷೆ ವಿಧಿಸಿತ್ತು.

ಕನ್ನಡಪ್ರಭ ಸಂಪಾದಕೀಯ


ತಮಿಳುನಾಡು ಸರ್ಕಾರ ರಚನೆ ಬಿಕ್ಕಟ್ಟು ಬಗ್ಗೆ ಹಲವು ಪ್ರಶ್ನೆಗಳು

ತಮಿಳುಚಿತ್ರರಂಗದಪ್ರಸಿದ್ಧನಟಜೋಸೆಫ್‌ವಿಜಯ್‌ತಮಿಳುನಾಡುವಿಧಾನಸಭೆ ಚುನಾವಣೆಯಲ್ಲಿ ಘಟಾನುಘಟಿ ದ್ರಾವಿಡ ಪಕ್ಷಗಳನ್ನೆಲ್ಲಾ ಹಿಂದಿಕ್ಕಿ ಅತಿ ಹೆಚ್ಚು ಸ್ಥಾನಗಳನ್ನು ಗಳಿಸಿದ್ದು ದೇಶಾದ್ಯಂತ ಅಚ್ಚರಿಗೇನೋ ಕಾರಣವಾಗಿದೆ. ಚುನಾವಣಾ ಫಲಿತಾಂಶದನಂತರತಮಿಳುನಾಡಿನಲ್ಲಿಸರ್ಕಾರರಚನೆವಿಚಾರವಾಗಿನಡೆಯುತ್ತಿರುವ ಬೆಳವಣಿಗೆಗಳು ಕೂಡ ಹೊಸದೊಂದು ಬಗೆಯ ಚರ್ಚೆಗೆ ಕಾರಣವಾಗಿವೆ. 234 ಸದಸ್ಯ ಬಲದತಮಿಳುನಾಡು ವಿಧಾನಸಭೆಯಲ್ಲಿವಿಜಯ್ ನೇತೃತ್ವದಟಿವಿಕೆ108 ಸ್ಥಾನಗಳನ್ನು ಗೆದ್ದಿದೆ. ವಿಜಯ್ ಅವರು 2 ಸ್ಥಾನಗಳಲ್ಲಿ ಸ್ಪರ್ಧಿಸಿ, ಒಂದಕ್ಕೆ ರಾಜೀನಾಮೆ ನೀಡಿರುವುದರಿಂದ ಅವರ ಪಕ್ಷದ ಬಲ 107ಕ್ಕೆ, ವಿಧಾನಸಭೆಯ ಒಟ್ಟು ಬಲ 233ಕ್ಕೆ ಕುಸಿದಿದೆ. ಹೀಗಾಗಿ ಬಹುಮತ ಸಾಬೀತಿಗೆ 117 ಸ್ಥಾನಗಳು ಬೇಕು. ವಿಜಯ್ ಅವರ ಪಕ್ಷಕ್ಕೆಐವರುಸದಸ್ಯರನ್ನುಹೊಂದಿರುವಕಾಂಗ್ರೆಸ್ ಬೆಂಬಲಿಸಿರುವ ಕಾರಣ ಆ ಮೈತ್ರಿಯ ಬಲ 112ಕ್ಕೇರಿಕೆಯಾಗಿದೆ. ಇನ್ನೂ ಐದು ಸ್ಥಾನಗಳ ಕೊರತೆ ಇದೆ. ಅತಿದೊಡ್ಡ ಪಕ್ಷವಾಗಿರುವ ಕಾರಣ ಸರ್ಕಾರ ರಚನೆಗೆ ಹಕ್ಕು ಮಂಡನೆ ಮಾಡಿದರೂ ರಾಜ್ಯಪಾಲರು ಸಂಖ್ಯಾಬಲ ತೋರಿಸುವಂತೆ ಕೇಳುತ್ತಿದ್ದಾರೆ. ಹೀಗಾಗಿಸರ್ಕಾರರಚನೆಪ್ರಕ್ರಿಯೆಗೆ ಅಲ್ಲಿತೊಡಕಾಗಿದೆ. ಇಲ್ಲಿಎದ್ದಿರುವಪ್ರಶ್ನೆಎಂದರೆ, ರಾಜ್ಯಪಾಲರು ರಾಜಭವನದಲ್ಲೇ ಸಂಖ್ಯಾಬಲ ತೋರಿಸಲು ಕೇಳಬಹುದೇ? ಸರ್ಕಾರಗಳು ಬಹುಮತ ಸಾಬೀತುಪಡಿಸಬೇಕಿರುವುದು ಸದನದಲ್ಲೇ ಹೊರತು ರಾಜಭವನಗಳಲ್ಲಿ ಅಲ್ಲ ಎಂದು ಎಸ್.ಆರ್. ಬೊಮ್ಮಾಯಿ ಅವರ ಪ್ರಕರಣದಲ್ಲಿ ಸುಪ್ರೀಂಕೋರ್ಟ್ ಐತಿಹಾಸಿಕ ತೀರ್ಪು ನೀಡಿದೆ. 1996ರಲ್ಲಿ ಅತಂತ್ರ ಲೋಕಸಭೆ ಸೃಷ್ಟಿಯಾದಾಗ ಅತಿದೊಡ್ಡ ಪಕ್ಷ ಬಿಜೆಪಿಯನ್ನು ಮುನ್ನಡೆಸುತ್ತಿದ್ದ ಕಾರಣಕ್ಕೆ ವಾಜಪೇಯಿ ಅವರಿಗೇ ಅಂದಿನ ರಾಷ್ಟ್ರಪತಿಗಳು ಸರ್ಕಾರ ರಚನೆಗೆ ಅವಕಾಶ ಕೊಟ್ಟಿದ್ದರು. ಆನಂತರ ಅವರು ಬಹುಮತ ಸಾಬೀತುಪಡಿಸಲಿಲ್ಲ, ಅದು ಬೇರೆಮಾತು. 2018ರಲ್ಲೂ ಕರ್ನಾಟಕದಲ್ಲೂ ಅತಿದೊಡ್ಡ ಪಕ್ಷ ಎಂಬ ಕಾರಣಕ್ಕೇ ಯಡಿಯೂರಪ್ಪ ಅವರು ಬಹುಮತ ಇಲ್ಲದಿದ್ದರೂ ಸರ್ಕಾರ ರಚನೆಗೆ ಅವಕಾಶ ಪಡೆದಿದ್ದರು.

> 1996ರಲ್ಲಿ ಅತಂತ್ರ ಲೋಕಸಭೆ ಸೃಷ್ಟಿಯಾದಾಗ ಅತಿದೊಡ್ಡ ಪಕ್ಷ ಬಿಜೆಪಿಯನ್ನು ಮುನ್ನಡೆಸುತ್ತಿದ್ದ ಕಾರಣಕ್ಕೆ ವಾಜಪೇಯಿ ಅವರಿಗೇ ಅಂದಿನ ರಾಷ್ಟ್ರಪತಿಗಳು ಸರ್ಕಾರ ರಚನೆಗೆ ಅವಕಾಶ ಕೊಟ್ಟಿದ್ದರು.

ಆದರೆ ಇದೀಗ ತಮಿಳುನಾಡಿನಲ್ಲಿ ವಿಜಯ್ ಅವರಿಗೆ ಸರ್ಕಾರ ರಚನೆಗೆ ಮುನ್ನವೇ ರಾಜ್ಯಪಾಲರು ಸಂಖ್ಯಾಬಲ ಇರುವ ಬಗ್ಗೆ ಸ್ಪಷ್ಟನೆ ಕೇಳಿದ್ದಾರೆ. ಅವಕಾಶ ನೀಡುವ ವಿಷಯದಲ್ಲಿ ಕಾನೂನು ಪಾಲನೆ ಜತೆಗೆ ರಾಜ್ಯಪಾಲರು ತಮ್ಮ ವಿವೇಚನೆಯನ್ನೂ ಬಳಸಲು ಅವಕಾಶವಿದೆ. ಹೀಗಾಗಿ ವಿಜಯ್ ಪ್ರಕರಣ ಹಲವು ಚರ್ಚೆಗಳಿಗೆ ಎಡೆ ಮಾಡಿಕೊಟ್ಟಿರುವುದಂತೂ ಸುಳ್ಳಲ್ಲ. ತಮಿಳುನಾಡಿನಲ್ಲಿ ಈ ಬಿಕ್ಕಟ್ಟು ಸುಗಮವಾಗಿ ಬಗೆಹರಿಯಲಿ.

ಗೂಫ ಸರ್ಕಸ್ ಸ್ಟೋರಿ



ನಿತ್ಯಫಲ

- **ಮೇಷ**: ಹಠದಿಂದ ಎಲ್ಲವನ್ನೂ ಸಾಧಿಸಬಹುದು ಎಂಬ ಮೂಢ ನಂಬಿಕೆಯಿಂದ ಹೊರ ಬನ್ನಿ.
- **ವೃಷಭ**: ಹೊಸ ಅವಕಾಶವೊಂದು ಧುತ್ತನೆ ನಿಮ್ಮೆದುರಿಗೆ ತೆರೆದುಕೊಳ್ಳಲಿದೆ. ಶುಭದಿನ.
- **ಮಿಥುನ**: ಅನವಶ್ಯಕ ಚಿಂತೆಯಿಂದ ಮಾನಸಿಕ ತುಮುಲ ಹೆಚ್ಚಲಿದೆ. ಸಮಾಧಾನದಿಂದ ಚಿಂತಿಸಿ.
- **ಕಟಕ**: ದೂರ ಪ್ರಯಾಣ ಯೋಗ ನಿಮಗೆ ಕೂಡಿ ಬರಲಿದೆ. ಧೈರ್ಯದಿಂದ ಹೋಗಿ ಬನ್ನಿ.
- **ಸಿಂಹ**: ಕೌಟುಂಬಿಕ ಕಲಹ ಬೀದಿಗೆ ಬರುವಸಾಧ್ಯತೆಇದೆ. ಮಾತಿಗಿಂತ ಮೌನ ಒಳ್ಳೆಯದು.
- **ಕನ್ಯಾ**: ಹಲವು ದಿಗಳಿಂದ ಮಾಡಬೇಕು ಎಂದುಕೊಂಡ ಕೆಲಸ ಯಶಸ್ವಿಯಾಗಲಿದೆ. ಶುಭದಿನ.
- **ತುಲಾ**: ನಿಮ್ಮ ನಿರ್ಧಾರಕ್ಕೆ ಎಲ್ಲೆಡೆಯಿಂದಲೂ ಉತ್ತಮ ಸ್ಪಂದನೆ ಸಿಕ್ಕಿ ಶೀಘ್ರ ಗುರಿ ಮುಟ್ಟುವಿರಿ.
- **ವೃಶ್ಚಿಕ**: ಅಪರೂಪಕ್ಕೆ ಬಂಧು ಬಾಂಧವರೆಲ್ಲಾ ಒಟ್ಟಿಗೆ ಸೇರುವ ಅವಕಾಶ. ಜಗಳಕ್ಕೆ ಆಸ್ಪದ ಬೇಡ.
- **ಧನುಸ್ಸು**: ಷೇರು ವ್ಯವಹಾರದಲ್ಲಿ ತೊಡಗಿಸಿಕೊಂಡವರಿಗೆ ಮಧ್ಯಾಹ್ನದ ನಂತರ ನಷ್ಟ.
- **ಮಕರ**: ದೂರದ ಬಂಧುಗಳ ಆಗಮನದಿಂದ ಮನೆಯಲ್ಲಿ ಸಂತೋಷದ ವಾತಾವರಣ.
- **ಕುಂಭ**: ಎಲ್ಲರೂ ನಿಮ್ಮ ಮಾತನ್ನು ಕೇಳಬೇಕು ಎಂಬ ಹಠವನ್ನು ಬಿಟ್ಟು ವಿಶಾಲವಾಗಿ ಚಿಂತಿಸಿ.
- **ಮೀನ**: ಯಾರದ್ದೋ ಮಾತು ಕೇಳಿ ಆತ್ಮೀಯರನ್ನು ದೂರ ಮಾಡಿಕೊಳ್ಳುವ ಸಾಧ್ಯತೆ.

ಪಂಚಾಂಗ

ಸಂವತ್ಸರ: ಪರಾಭವ, ಉತ್ತರಾಯಣ, **ಋತು:** ವಸಂತ, **ಮಾಸ:** ವೈಶಾಖ
ಪಕ್ಷ: ಕೃಷ್ಣ, **ತಿಥಿ:** ಷಷ್ಠಿ, **ನಕ್ಷತ್ರ:** ಉತ್ತರಾಷಾಢ, **ರಾಹುಕಾಲ** 10:30-12:00
ಯಮಗಂಡಕಾಲ 03:00-04:30 **ಗುಳಿಕಕಾಲ** 07:30-09:00

ವೈರಲ್ ಚೆಕ್!

ಅಪ್ಪಿಕೊಂಡೇ ತಾಯಿ ಮಗು ಜಲಸಮಾಧಿ

ಕಳೆದ ಏ.30ರಂದು ಮಧ್ಯಪ್ರದೇಶದ ಜಬಲ್ಪುರ ಜಿಲ್ಲೆಯಲ್ಲಿ ನರ್ಮದಾ ನದಿಗೆ ಅಡ್ಡಲಾಗಿ ನಿರ್ಮಿಸಲಾಗಿದ್ದ ಬಾರ್ಗಿ ಅಣೆಕಟ್ಟನಲ್ಲಿ ಪ್ರವಾಸಿಗರಿದ್ದ ಬೋಟ್ ಮಗುಚಿ ದುರಂತ ಸಂಭವಿಸಿತ್ತು. ದುರಂತದಲ್ಲಿ 9 ಮಂದಿ ಸಾವನ್ನಪ್ಪಿದ್ದರೆ, ಹಲವರು ಗಾಯಗೊಂಡಿದ್ದರು. ಈ ಅನಾಹುತಕ್ಕೆ ಸಂಬಂಧಿಸಿದ ಫೋಟೋವೊಂದು ಜಾಲತಾಣದಲ್ಲಿ ವೈರಲ್ ಆಗಿತ್ತು. ಅದರಲ್ಲಿ ತಾಯಿಯೊಬ್ಬಳು ತನ್ನ 4 ವರ್ಷದ ಮಗುವನ್ನು ಅಪ್ಪಿಕೊಂಡೇ ಜಲ ಸಮಾಧಿ ಆಗುತ್ತಿರುವುದುನ್ನು ನೋಡಬಹುದು, ಕ್ಷಣಾರ್ಧದಲ್ಲೇ ಫೋಟೋ ಜಾಲತಾಣದಲ್ಲಿ ಸಿಕ್ಕಾಪಟ್ಟೆ ಹರಿದಾಡಲು ಆರಂಭಿಸಿತ್ತು. ಇದನ್ನು ಬಹುತೇಕ ಮಂದಿ ಸಾಮಾಜಿಕಮಾಧ್ಯಮಗಳಲ್ಲಿ ಹಂಚಿಕೊಂಡು ಆ ತಾಯಿ ಮಗುವಿನ ಬಾಂಧವ್ಯ, ದುರಂತ ಅಂತ್ಯಕ್ಕೆ ಕಂಬನಿ ಮಿಡಿದಿದ್ದರು.



ಆದರೆ ಫ್ಯಾಕ್ಟ್ ಚೆಕ್‌ನಲ್ಲಿ ಇದರ ಅಸಲಿಯತ್ತು ಬಯಲಾಗಿದೆ. ಇದು ನಿಜವಾದ ಫೋಟೋ ಅಲ್ಲ. ಅಂತಹಘಟನೆದೋಣಿದುರಂತವೇಳೆನಡೆದೇಇರಲಿಲ್ಲಎನ್ನುವುದು ಗೊತ್ತಾಗಿದೆ. ಇದೊಂದುಎಐಚಿತ್ರ ಎನ್ನುವುದುಬಯಲಾಗಿದೆ. ಈಬಗ್ಗೆಸ್ವತಃಜಬಲ್ಪುರ ಜಿಲ್ಲಾಧಿಕಾರಿಯೇ ತಮ್ಮ ಎಕ್ಸ್ ಖಾತೆಯಲ್ಲಿ ಖಚಿತಪಡಿಸಿದ್ದಾರೆ. ‘ಸಾಮಾಜಿಕ ಜಾಲತಾಣದಲ್ಲಿವ್ಯಾಪಕವಾಗಿ ಹರಿದಾಡುತ್ತಿರುವ ಚಿತ್ರ ಎಐ ರೂಪಿತವಾಗಿದ್ದು, ಅದು ನಿಜವಲ್ಲ’ ಎಂದಿದ್ದಾರೆ. ಹೀಗಾಗಿಈಗಂತೂಏನನ್ನಾದರೂಕಣ್ಮುಂಚಿನಂಬುವಬದಲು ಹತ್ತು ಸಲ ಪರಿಶೀಲಿಸಿದರೆ ಒಳಿತು.

ಕನ್ನಡಪ್ರಭ KANNADAPRABHA

ಪ್ರಧಾನ ಸಂಪಾದಕ: **ರವಿ ಹೆಗಡೆ** EDITOR IN CHIEF: **RAVI HEGDE**

ನಮ್ಮ ವಿಳಾಸ: ಸಂಪಾದಕರು, ಕನ್ನಡಪ್ರಭ, ನಂ.36, ಕ್ರೆಸೆಂಟ್ ರಸ್ತೆ, ಮಲ್ಲಿಗೆ ಆಸ್ಪತ್ರೆ ಎದುರು, ಶಿವಾನಂದ ವೃತ್ತ, ಬೆಂಗಳೂರು-560 001
PHONE: 080-68416300 FAX:080-68416354
email: editor@kannadaprabha.in epaper.kannadaprabha.in
facebook: SuvarnaNews twitter: @suvarnanewstv

ರಾಜ್ಯದಲ್ಲಿ ಬಿಜೆಪಿಗೆ ನೆಲೆ ಕಲ್ಪಿಸಿದ ಮುತ್ಸದ್ದಿ | ಎಂಥ ಕಠಿಣ ಪರಿಸ್ಥಿತಿಯಲ್ಲೂ ಕುಗ್ಗದೆ ಪಕ್ಷ ಕಟ್ಟಿದ ಕಟ್ಟಾಳು

ದಣಿವರಿಯದ ಅವಿಶ್ರಾಂತ ಚೇತನ ಯಡಿಯೂರಪ್ಪ



ಪ್ರಲ್ಹಾದ ಜೋಶಿ
ಕೇಂದ್ರ ಸಚಿವರು

> ಯಡಿಯೂರಪ್ಪ ಜೈಲಿಗೆ ಹೋಗಿ ಒಂದು ವಾರ ಕಳೆಯಿತು. ಅಷ್ಟೊತ್ತಿಗಾಗಲೆ ಅಲ್ಲಿನ ಅವ್ಯವಸ್ಥೆಯ ಅರಿವಾಗಿ ಉಪವಾಸ ಸತ್ಯಾಗ್ರಹಕ್ಕೆ ಕುಳಿತರು. ಇದರಿಂದಾಗಿ ಜೈಲಿನ ಅವ್ಯವಸ್ಥೆ ಸರಿದಾರಿಗೆ ಬಂತು. ಈ ಘಟನೆ ಬಳಿಕ ಕೇವಲ ಶಿಕಾರಿಪುರಕ್ಕೆ ಸೀಮಿತವಾಗಿದ್ದ ಯಡಿಯೂರಪ್ಪ ರಾಜ್ಯವ್ಯಾಪಿ ಗುರುತಿಸಿಕೊಂಡರು. ಸಂಘಟನೆ, ಹೋರಾಟ, ಸಾಧನೆಗಳಲ್ಲಿಯೇ ಬದುಕಿನ ಸಾರ್ಥಕ್ಯವನ್ನು ಕಂಡುಕೊಂಡಿರುವ ಯಡಿಯೂರಪ್ಪ ಅವರಲ್ಲಿ ಸಾಧಿಸಬೇಕೆಂಬ ಛಲ ಇನ್ನೂ ಇದೆ.

‘ಈ ಅರ್ಥಪೂರ್ಣಮಾತುಹುಟ್ಟುಹೋರಾಟಗಾರಹಾಗೂ ಕರ್ನಾಟಕ ಕಂಡ ಧೀಮಂತ ನಾಯಕ ಶ್ರೀ ಯಡಿಯೂರಪ್ಪ ಅವರಿಗೆ ಪೂರ್ತಿಯಾಗಿ ಅನ್ವಯಿಸುತ್ತದೆ.

ರಾಜಕೀಯವೆಂದರೆ ಕೇವಲ ಅಧಿಕಾರವಲ್ಲ, ಅದು ನಿರಂತರ ಹೋರಾಟ ಮತ್ತು ಜನರೊಂದಿಗಿನ ಅವಿನಾಭಾವ ಸಂಬಂಧ ಎಂಬುದನ್ನು ಸಾಬೀತುಪಡಿಸಿದವರು ಬಿ.ಎಸ್. ಯಡಿಯೂರಪ್ಪನವರು. ಅವರು ಸಾರ್ವಜನಿಕ ಜೀವನದಲ್ಲಿ 50 ವರ್ಷಗಳನ್ನು ಪೂರೈಸುತ್ತಿರುವುದು ಕೇವಲ ಒಬ್ಬ ವ್ಯಕ್ತಿಯ ಸಾಧನೆಯಲ್ಲ, ಅದು ಒಂದು ಸುದೀರ್ಘ ಕ್ರಾಂತಿಯ ಪಯಣ.

ಇವರನ್ನುರಾಜಕಾರಣಿಎನ್ನುವುದಕ್ಕಿಂತಜನಪರಚಿಂತನೆಗಳಿರೋ ಅಪ್ಪಟಹೋರಾಟಗಾರಎನ್ನುವುದುಸೂಕ್ತ. ಧರಣಿ, ಸತ್ಯಾಗ್ರಹದಿಂದ ಹಿಡಿದುಭಾರಿಬಹಿರಂಗಸಭೆಯವರೆಗೆ, ಜಿಲ್ಲಾಧಿಕಾರಿಕಚೇರಿಯಿಂದ ವಿಧಾನಸೌಧದವರೆಗೆ, ಮುತ್ತಿಗೆಯಿಂದ ಹಿಡಿದು ರಸ್ತೆತಡೆ, ರೈಲು ತಡೆ, ಮೆಕ್ಕೆಜೋಳದಿಂದ ಹಿಡಿದು ನಕಲಿ ಛಾಪಾ ಕಾಗದದವರೆಗೆ, ಕೆಪಿಟಿಸಿಎಲ್ ಮುತ್ತಿಗೆಯಿಂದ ಹಿಡಿದು ಬಗರ್‌ಹುಕುಂ ಸಾಗುವಳಿದಾರರಿಗೆ, ಬಡರೈತನಿಗೆ ವಿಮೆ ಕೊಡಿಸುವವರೆಗೆ. ಹೀಗೆ ಸಾಲು, ಸಾಲು ಹೋರಾಟಗಳು ಇವರ ದಾಖಲೆಯಲ್ಲಿವೆ. ಇದು ಕೇವಲ ದಾಖಲೆಗಾಗಿ ನಡೆಸಿದ ಹೋರಾಟವಲ್ಲ. ಬದಲಾಗಿ ನಮ್ಮನ್ನಾಳುವ ಮಂದಿ ಎಚ್ಚರ ತಪ್ಪಿದಾಗ, ಹಾದಿ ತೊರೆದಾಗ, ಅವರನ್ನು ಸದಾ ಎಚ್ಚರಿಸುತ್ತಾ ಸರಿದಾರಿಗೆ ತಂದ ಸಾಧನೆ ಇದಾಗಿದೆ.


ಹಗಲು ರಾತ್ರಿ ಧರಣಿ ಪ್ರವರ್ತಕ

ಹೀಗಾಗಿ ಯಡಿಯೂರಪ್ಪ ಯಾವುದೇ ಚಳವಳಿಗೆ ಧುಮುಕಿದರೂ ಆಡಳಿತ ಪಕ್ಷ ಥರಗುಟ್ಟುತ್ತದೆ. ಈ ಕಾರಣದಿಂದಾಗಿಯೇ ಯಡಿಯೂರಪ್ಪ ಅವರ ಚಳವಳಿಗೊಂದು ಮೌಲ್ಯ ಇರುವುದು. ಎಂಥಹ ಪ್ರತಿಕೂಲ ಪರಿಸ್ಥಿತಿಯನ್ನೂ ಅನುಕೂಲಕರವಾಗಿ ಪರಿವರ್ತಿಸಿಕೊಳ್ಳುವ ಚಾಣಕ್ಷ ವ್ಯಕ್ತಿಯ ಮನೋಭಾವ. ಅದೇ ರೀತಿಯಲ್ಲಿತಮ್ಮಜೀವನದಲ್ಲಿತಲೆದೋರಿದ ಪ್ರತಿಯೊಂದು ಕಷ್ಟಕಾರ್ಪಣ್ಯಗಳನ್ನೂ ಜೀರ್ಣಿಸಿಕೊಂಡುಅವುಗಳನ್ನುಜೀವನದ ಏಳ್ಗೆಯ ಮೆಟ್ಟಿಲುಗಳನ್ನಾಗಿ ಮಾಡಿಕೊಂಡು ಯಶಸ್ವಿನ ಶಿಖರಕ್ಕೆ ಏರಿದರು.



1975ರ ಹೊತ್ತಿಗೆ ಅದೇ ಶಿಕಾರಿಪುರ ಪುರಸಭಾ ಸದಸ್ಯರಾಗಿ, ಅಧ್ಯಕ್ಷರೂ ಆಗುತ್ತಾರೆ. ಶಿಕಾರಿಪುರದಲ್ಲಿ ಅವರ ಮೇಲೆ ಮಾರಣಾಂತಿಕ ಹಲ್ಲೆಯಾಗುತ್ತದೆ. ಯಾವುದಕ್ಕೂ ಜಗ್ಗದ-ಬಗ್ಗದ ಛಾತಿಯ ಯಡಿಯೂರಪ್ಪ ಮತ್ತಷ್ಟು ಪ್ರಖರ ಹೋರಾಟಗಾರರಾಗಿ ಹೊರಹೊಮ್ಮುತ್ತಾರೆ. 1977ರ ಎಮರ್ಜೆನ್ಸಿಯಲ್ಲಿ ಸೆರೆಮನೆ ವಾಸ. ಜನತಾರಂಗದೊಳಗೆ ವಿಲೀನವಾಗಿದ್ದ ಜನಸಂಘ 1980ರಲ್ಲಿ ಬಿಜೆಪಿಯಾಗಿ ರೂಪುಗೊಂಡ ನಂತರ 1983ರಲ್ಲಿ ಶಿವಮೊಗ್ಗ ಜಿಲ್ಲಾಧ್ಯಕ್ಷ ಹಾಗೂ ಆ ನಂತರದ ಮೂರೇ ವರ್ಷಗಳಲ್ಲಿ ರಾಜ್ಯಾಧ್ಯಕ್ಷರೂ ಆಗಿ ಬಿಡುತ್ತಾರೆ. ಹೀಗೆ ಹಿಂದಿರುಗಿ ನೋಡದ ರಾಜಕೀಯ ಪಯಣದಲ್ಲಿ ವಿಧಾನ ಸಭೆ, ವಿಧಾನ ಪರಿಷತ್, ಲೋಕಸಭೆಗಳಲ್ಲಿ ಸದಸ್ಯರಾಗಿ, ಮೂರು ಸಲ ವಿರೋಧ ಪಕ್ಷದ ನಾಯಕರಾಗುತ್ತಾರೆ. ಜೆಡಿಎಸ್ ಸಮ್ಮಿಶ್ರ ಸರ್ಕಾರದಲ್ಲಿ ಉಪಮುಖ್ಯಮಂತ್ರಿಯೂ ಆಗುತ್ತಾರೆ.

ತುರ್ತು ಪರಿಸ್ಥಿತಿ ಸಂದರ್ಭ ಜೈಲಿನಲ್ಲಿದ್ದಾಗಲೂ ಅವರು ತಮ್ಮ ಚಳುವಳಿ ಬಿಡಲಿಲ್ಲ. ಜೈಲಿನಲ್ಲಿ ಕೊಡುತ್ತಿದ್ದ ಚಪಾತಿ ಮತ್ತು ಅನ್ನದಲ್ಲಿ ಹುಳು ಕಲ್ಲುಗಳು, ಸರಿಯಾಗಿ ಬೇಯಿಸದಿರುವುದರಿಂದ ಅವರು ರೋಸಿ ಹೋಗಿದ್ದರು. ಕೈದಿಗಳು ಕಣ್ಣು ಮುಚ್ಚಿಕೊಂಡು ಅದನ್ನೇ ತಿನ್ನುತ್ತಿದ್ದರು. ಯಡಿಯೂರಪ್ಪ ಜೈಲಿಗೆ ಹೋಗಿ ಒಂದು ವಾರ ಕಳೆಯಿತು. ಅಷ್ಟೊತ್ತಿಗಾಗಲೆ ಅಲ್ಲಿನ ಅವ್ಯವಸ್ಥೆಯ ಅರಿವಾಗಿ ಉಪವಾಸ ಸತ್ಯಾಗ್ರಹಕ್ಕೆ ಕುಳಿತರು. ಇದರಿಂದಾಗಿ ಜೈಲಿನ ಅವ್ಯವಸ್ಥೆ ಸರಿದಾರಿಗೆ ಬಂತು. ಈ ಘಟನೆ ಬಳಿಕ ಕೇವಲ ಶಿಕಾರಿಪುರಕ್ಕೆ ಸೀಮಿತವಾಗಿದ್ದಯಡಿಯೂರಪ್ಪರಾಜ್ಯವ್ಯಾಪಿಗುರುತಿಸಿಕೊಂಡರು. ಸಂಘಟನೆ, ಹೋರಾಟ, ಸಾಧನೆಗಳಲ್ಲಿಯೇಬದುಕಿನಸಾರ್ಥಕ್ಯವನ್ನು ಕಂಡುಕೊಂಡಿರುವಯಡಿಯೂರಪ್ಪಅವರಲ್ಲಿಸಾಧಿಸಬೇಕೆಂಬಛಲ ಇನ್ನೂ ಇದೆ. 83ರ ಇಳಿವಯಸ್ಸಿನಲ್ಲೂ 20ರ ಯುವಕನಂತೆ ಕೆಲಸ ಮಾಡುವ, ಮುಂಜಾನೆ ಬೇಗನೆ ಎದ್ದು ವಾಕಿಂಗ್ ಮಾಡಿ ಬೆಳಗ್ಗೆ 8ಕ್ಕೆ ಮುನ್ನ ಕೆಲಸದಲ್ಲಿ ತೊಡಗಿಸಿಕೊಳ್ಳುವ ಅವರ ಗುಣ ಇತರರಿಗೆ ಅನುಕರಣೀಯ. ತಾನೂ ಬೆಳೆದು, ತನ್ನವರನ್ನೂ ಬೆಳೆಸುವ ತನ್ಮೂಲಕ



ಸಮಾಜವನ್ನು ಬಲಪಡಿಸುವ ಅವರ ಆಶಯ ಇತರರಿಗೆ ಮಾದರಿ. ಹಲವಾರು ಹೋರಾಟಗಳನ್ನು ಕಂಡಿರುವ ಧೀಮಂತ ನಾಯಕ ಯಡಿಯೂರಪ್ಪ ಶಿಸ್ತಿನ ಸಿಪಾಯಿಯಂತೆ, ದಣಿವರಿಯದ ನಾಯಕನಂತೆ ಪಕ್ಷಕ್ಕೆ ದುಡಿದಿದ್ದಾರೆ.

ಯಡಿಯೂರಪ್ಪನವರು ಮುಖ್ಯಮಂತ್ರಿ ಆಗಿದ್ದಾಗ ದಾಸಶ್ರೇಷ್ಠ ಕನಕದಾಸರ ಜನ್ಮದಿನವನ್ನು ಸರ್ಕಾರಿ ಹಬ್ಬವನ್ನಾಗಿ ಆಚರಿಸಲು ಆದೇಶಿಸಿ, ಅಂದು ಸಾರ್ವಜನಿಕ ರಜೆಯನ್ನು ಘೋಷಿಸಿದರಲ್ಲದೇ, ರಾಮಾಯಣ ರಚಿಸಿದ ಆದಿಕವಿ ಮಹರ್ಷಿ ವಾಲ್ಮೀಕಿ ಅವರ ಜಯಂತಿಯನ್ನು ಸಹ ಸರ್ಕಾರಿ ಮಟ್ಟದಲ್ಲಿ ಆಚರಿಸಲು ಮತ್ತು ಸಾರ್ವಜನಿಕ ರಜೆ ನೀಡಲು ಯಡಿಯೂರಪ್ಪ ಅವರ ಸರ್ಕಾರವೇ ಆದೇಶಹೊರಡಿಸಿತ್ತು. ಹಿಂದೂಧರ್ಮಮತ್ತುಸ್ವರಾಜ್ಯದರಕ್ಷಣೆಗಾಗಿ ಹೋರಾಡಿದ ಛತ್ರಪತಿ ಶಿವಾಜಿ ಮಹಾರಾಜರ ಕೊಡುಗೆಯನ್ನುಸ್ಮರಿಸಲುಕರ್ನಾಟಕದಲ್ಲಿಸರ್ಕಾರಿ ಮಟ್ಟದಜಯಂತಿಆಚರಣೆಗೆಯಡಿಯೂರಪ್ಪ ಅವರು ಚಾಲನೆ ನೀಡಿದ್ದರು.

ಶೂನ್ಯದಿಂದ ಸೃಷ್ಟಿಸಿದ ಸಾಮ್ರಾಜ್ಯ: ಯಡಿಯೂರಪ್ಪನವರು ಪಕ್ಷ ಕಟ್ಟಲು ಜಾಥಾ, ಕಾಲ್ನಡಿಗೆ, ಪಾದಯಾತ್ರೆ, ಸೈಕಲ್ ಮೇಲೆ ಊರೂರು ಸುತ್ತಿದ ದಿನಗಳನ್ನು ನಾವು ಮರೆಯಲು ಸಾಧ್ಯವಿಲ್ಲ. ಅಂದುಅವರುಬಿತ್ತಿದಸಣ್ಣ ಸಸಿ ಇಂದು ನಾಡಿನಲ್ಲಿ ಬಿಜೆಪಿಯೆಂಬ ಹೆಮ್ಮರವಾಗಿ ಬೆಳೆದು ನಿಂತಿದೆ. ಬಿಜೆಪಿಯನ್ನುದಕ್ಷಿಣಭಾರತದಹೆಬ್ಬಾಗಿಲಾದ ಕರ್ನಾಟಕದಲ್ಲಿ ಅಧಿಕಾರಕ್ಕೆ ತರುವ ಮೂಲಕ ಅವರು ಇತಿಹಾಸ ನಿರ್ಮಿಸಿದರು.

ಧೀಮಂತ ಹೋರಾಟಗಾರ: ಅವರು ಕೇವಲ ಅಧಿಕಾರಕ್ಕಾಗಿ ರಾಜಕಾರಣ ಮಾಡಿದವರಲ್ಲ. ಹುಬ್ಬಳ್ಳಿಯ ಈದ್ಗಾ ಮೈದಾನದಲ್ಲಿ ತ್ರಿವರ್ಣ ಧ್ವಜ ಹಾರಿಸುವ ಹೋರಾಟದಿಂದ ಹಿಡಿದು ಅಯೋಧ್ಯೆ ರಾಮಮಂದಿರಚಳವಳಿಯವರೆಗೆಅವರಪಾತ್ರದೊಡ್ಡದು. ಎಂತಹ ಕಠಿಣ ಪರಿಸ್ಥಿತಿಯಲ್ಲೂ ಕಾರ್ಯಕರ್ತರಿಗೆ ಧೈರ್ಯ ತುಂಬುವ ಹೋರಾಟಕ್ಕಿಳಿಯುವ ಅವರ ಗುಣ ಅನನ್ಯ.

ಮಾರ್ಗದರ್ಶಕ ಶಕ್ತಿ ಯಡಿಯೂರಪ್ಪ

‘ಶೀಘ್ರ ಕೋಪಿ ಆದರೆ ದೀರ್ಘ ದ್ವೇಷಿಯಂತೂ ಅಲ್ಲ’ ಎಂಬ ಮಾತು ಯಡಿಯೂರಪ್ಪನವರಿಗೆ ಅನ್ವಯಿಸುತ್ತದೆ. ಒಮ್ಮೊಮ್ಮೆ ಭಿನ್ನಾಭಿಪ್ರಾಯಗಳು ಮೂಡಿದರೂ, ಪಕ್ಷದ ಹಿತದೃಷ್ಟಿಯಿಂದ ಎಲ್ಲವನ್ನೂ ಮರೆತು ಒಗ್ಗೂಡಿ ಕೆಲಸ ಮಾಡುವ ಅವರ ದೊಡ್ಡಗುಣ ನಮಗೆಲ್ಲರಿಗೂ ಆದರ್ಶ. ಕರ್ನಾಟಕದ ರಾಜಕೀಯ ಭೂಪಟದಲ್ಲಿ ಬಿ.ಎಸ್. ಯಡಿಯೂರಪ್ಪ ಎಂಬ ಹೆಸರು ಒಂದು ಶಕ್ತಿ. ಶೂನ್ಯದಿಂದ ಅಧಿಕಾರದ ಶಿಖರದವರೆಗೆ ಅವರು ನಡೆದು ಬಂದ ಹಾದಿ ಅಸಾಧಾರಣವಾದುದು. ಶಿಕಾರಿಪುರದ ಪುರಸಭೆ ಅಧ್ಯಕ್ಷರಾಗಿ ರಾಜಕೀಯ ಯಾನ ಆರಂಭಿಸಿ, ಇಂದು ದೇಶದ ಪ್ರಭಾವಿ ನಾಯಕರಾಗಿ ಬೆಳೆದಿದ್ದಾರೆ.

ಉದ್ಯಮಃ ಸಾಹಸಂ ಧೈರ್ಯಂ ಬುದ್ಧಿಃ ಶಕ್ತಿಃ ಪರಾಕ್ರಮಃ
ಷಡೇತೇ ಯತ್ರ ವರ್ತಂತೇ ತತ್ರ ದೇವಃ ಸಹಾಯಕೃತ್ ॥

(ಉದ್ಯೋಗ, ಸಾಹಸ, ಧೈರ್ಯ, ಬುದ್ಧಿ, ಶಕ್ತಿ ಮತ್ತು ಪರಾಕ್ರಮ, ಈ ಆರು ಗುಣಗಳು ಯಾರಲ್ಲಿ ಇರುತ್ತವೆಯೋ ಅವರಿಗೆ ದೈವವು ಸಹಾಯ ಮಾಡುತ್ತದೆ.)

ಯಡಿಯೂರಪ್ಪನವರು ಹಳ್ಳಿ ಹಳ್ಳಿಗಳನ್ನು ಸುತ್ತಿ ಪಕ್ಷ ಸಂಘಟಿಸಿದ ರೀತಿ ಅವರ ‘ಉದ್ಯಮ’ ಮತ್ತು ‘ಸಾಹಸ’ಕ್ಕೆ ಸಾಕ್ಷಿ. 2021ರಲ್ಲಿ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದನಂತರವೂ, ಅವರನ್ನು ಬಿಜೆಪಿಯ ಅತ್ಯುನ್ನತ ನಿರ್ಧಾರ ತೆಗೆದುಕೊಳ್ಳುವ ಸಮಿತಿಯಾದ ಸಂಸದೀಯ ಮಂಡಳಿಗೆ (Parliamentary Board) ನೇಮಕ ಮಾಡಲಾಯಿತು. ಕರ್ನಾಟಕದಲ್ಲಿ ಬಿಜೆಪಿಯ ಅಸ್ತಿತ್ವಕ್ಕೆ ಆಧಾರವಾಗಿರುವ ‘ಧ್ರುವತಾರೆ’ ಎಂದೇ ಪರಿಗಣಿಸುತ್ತಾರೆ. ಒಟ್ಟಾರೆಯಾಗಿ, ಯಡಿಯೂರಪ್ಪ ಅವರು ಕೇವಲ ಒಬ್ಬ ಪ್ರಾದೇಶಿಕ ನಾಯಕರಾಗಿ ಉಳಿಯದೆ, ಕರ್ನಾಟಕದಲ್ಲಿ ಬಿಜೆಪಿಯ ಅಸ್ತಿತ್ವಕ್ಕೆ ಅಡಿಪಾಯ ಹಾಕಿದರು. ಕರ್ನಾಟಕದಲ್ಲಿ ಬಿಜೆಪಿ ಅಸ್ತಿತ್ವ ಬೇರೂರುವುದೇ ಎಂಬ ಪ್ರಶ್ನೆ ಇದ್ದ ಸಂದರ್ಭದಲ್ಲಿ ಹೋರಾಟ ಹಾಗೂ ರಾಜಕೀಯ ಚಾಣಕ್ಷರೇ ಆಗಿದ್ದ ಯಡಿಯೂರಪ್ಪ ಅವರ ಸಂಘಟಿತ ದುಡಿಮೆ ಇಲ್ಲದಿದ್ದರೆ ಇಂದು ಪಕ್ಷ ರಾಜ್ಯದಲ್ಲಿ ಉನ್ನತಸ್ಥಿತಿಯಲ್ಲಿ ಇರುತ್ತಿರಲಿಲ್ಲ ಎಂಬುದು ಸರ್ವವಿದಿತ.

ಮುಖಂಡರನ್ನು ಬೆಳೆಸಿದ ಬಿಎಸ್‌ವೈ

ಕರ್ನಾಟಕದಲ್ಲಿ ಮೊದಲು ಕಾಂಗ್ರೆಸ್ ಪಾರಮ್ಯವಿದ್ದರೆ ಎಂಬತ್ತರ ದಶಕದಿಂದಜನತಾಪರಿವಾರದಇನ್ನಿಂಗ್ಸ್‌ಪ್ರಾರಂಭವಾಗಿತ್ತು. ಇದರ ಮಧ್ಯೆ ಉತ್ತರ ಭಾರತದ ಕೆಲವು ರಾಜ್ಯಗಳಿಗೆ ಸೀಮಿತವಾಗಿದ್ದ ಬಿಜೆಪಿಗೆ ಕರ್ನಾಟಕದಲ್ಲಿ ನೆಲೆ ಕಲ್ಪಿಸಲು ಶ್ರಮ ವಹಿಸಿದವರು ಬಿ. ಎಸ್. ಯಡಿಯೂರಪ್ಪ. ಕರ್ನಾಟಕ ಬಿಜೆಪಿಗೆ ಅಂದಿನಿಂದ ಇಂದಿನ ವರೆಗೂ ಯಡಿಯೂರಪ್ಪ ಮಹಾರಥಿ. ಅವರಪರಿಶ್ರಮದಫಲವಾಗಿ ಹಲವುಮುಖಂಡರುಬೆಳೆದಿದ್ದಾರೆ. ಅವರನ್ನೆಲ್ಲಮುಂಬೆಳಕಿಗೆತಂದು ತಯಾರು ಮಾಡಿದವರು ಯಡಿಯೂರಪ್ಪ. ಹಾಗಾಗಿ ಕರ್ನಾಟಕ ಬಿಜೆಪಿ ಮತ್ತು ಬಿ.ಎಸ್.ವೈ ಎಂಬ ಹೆಸರುಗಳು ಅವಿನಾಭಾವದ ನಿದರ್ಶನ.

ಲೋಕಸಭೆ ಚುನಾವಣೆಯಲ್ಲಿ ಅತಿ ಹೆಚ್ಚು ಸಂಸದರನ್ನು ಗೆಲ್ಲಿಸಿ ದಿಲ್ಲಿಗೆ ಕಳುಹಿಸಿ ಕೊಡುವುದರಲ್ಲಿ ಯಡಿಯೂರಪ್ಪ ಯಶಸ್ವಿಯಾಗಿದ್ದಾರೆ. 2019ರಪಾರ್ಲಿಮೆಂಟ್ಎಲೆಕ್ಷನ್‌ನಲ್ಲಿರಾಜ್ಯ ಬಿಜೆಪಿಯಿಂದ25ಸಂಸದರುಆಯ್ಕೆಯಾಗಿರುವುದುಅಭೂತಪೂರ್ವ ಸಾಧನೆ. ಬಿಜೆಪಿ ಈ ಯಶೋಗಾಥೆಯಲ್ಲಿ ಯಡಿಯೂರಪ್ಪ ಅವರ ಯೋಗದಾನ ಬಹಳ ದೊಡ್ಡದು.

ಸುದೀರ್ಘ ರಾಜಕೀಯ ಹೋರಾಟದಲ್ಲಿ ಯಡಿಯೂರಪ್ಪ ಅವರುವಿರೋಧಪಕ್ಷದಲ್ಲೇಹೆಚ್ಚುಸಮಯವಿದ್ದರುಎಂದರೆತಪ್ಪಲ್ಲ. ರಾಜ್ಯದಲ್ಲಿಪಕ್ಷಅಧಿಕಾರದಲ್ಲಿಇಲ್ಲದಿದ್ದಾಗಲೂಲೋಕಸಭೆಗೆಹೆಚ್ಚಿನ ಸಂಸದರನ್ನು ಕಳುಹಿಸುವ ದಿಸೆಯಲ್ಲಿ ಸಂಘಟನೆ ಕೈಗೊಂಡಿದ್ದು ಸಣ್ಣ ಸಾಧನೆಯಲ್ಲ. ಈಗಲೂ ಪಕ್ಷಕ್ಕಾಗಿ ಅವರು ಅವಿರತವಾಗಿ ದುಡಿಯುತ್ತಿದ್ದಾರೆ. ಯಡಿಯೂರಪ್ಪ ಅವರ ಈ ಕಾರ್ಯ ನಿಷ್ಠೆ ಕೆಳ ಹಂತದ ಕಾರ್ಯಕರ್ತನಿಂದ ಉನ್ನತ ಮಟ್ಟದ ನಾಯಕರವರೆಗೂ ಮಾದರಿಯಾಗಿದೆ ಎಂದು ಧಾರಾಳವಾಗಿ ಹೇಳಬಹುದು.

ಭಾಗ್ಯಲಕ್ಷ್ಮಿ ಯೋಜನೆ, ಸಂಧ್ಯಾ ಸುರಕ್ಷಾ ಮತ್ತು ರೈತರಿಗೆ ಶೂನ್ಯ ಬಡ್ಡಿದರದಲ್ಲಿ ಸಾಲ ನೀಡುವ ಮೂಲಕ ಅವರು ಈ ಶ್ಲೋಕದ ಆಶಯವನ್ನು ಜಾರಿಗೆ ತಂದರು.

ಭಗವದ್ಗೀತೆಯಲ್ಲಿ ಹೇಳಿದಂತೆ...

ಯದ್ಯದಾಚರತಿ ಶ್ರೇಷ್ಠಸ್ತತ್ತದೇವೇತರೋ ಜನಃ
ಸ ಯತ್ಪ್ರಮಾಣಂ ಕುರುತೇ ಲೋಕಸ್ತದನುವರ್ತತೇ ॥

(ಶ್ರೇಷ್ಠವ್ಯಕ್ತಿಯು ಏನನ್ನು ಆಚರಿಸುತ್ತಾನೋ, ಇತರರು ಅದನ್ನೇ ಅನುಸರಿಸುತ್ತಾರೆ. ಅವನು ಏನನ್ನು ಪ್ರಮಾಣವೆಂದು ಒಪ್ಪುತ್ತಾನೋ, ಲೋಕವು ಅದನ್ನೇ ಪಾಲಿಸುತ್ತದೆ.)

ಸಮಾಜದಲ್ಲಿ ಗೌರವಾನ್ವಿತ ಸ್ಥಾನದಲ್ಲಿರುವವರು ತಮ್ಮ ನಡವಳಿಕೆಯ ಮೂಲಕ ಸಾಮಾನ್ಯ ಜನರಿಗೆ ಮಾದರಿಯಾಗುತ್ತಾರೆ. ಇಂದು ಕರ್ನಾಟಕ ಬಿಜೆಪಿಯ ಪ್ರತಿಯೊಬ್ಬ ಕಾರ್ಯಕರ್ತನಿಗೂ ಯಡಿಯೂರಪ್ಪನವರೇಅತಿದೊಡ್ಡಪ್ರೇರಣೆ. ಯಡಿಯೂರಪ್ಪನವರ ಜೀವನವು ‘ಸೇವೆಯೇ ಪರಮೋಚ್ಚ’ ಎಂಬ ತತ್ವಕ್ಕೆ ಸಾಕ್ಷಿಯಾಗಿದೆ. ಅವರ ಅನುಭವ ಮತ್ತು ಮಾರ್ಗದರ್ಶನ ಮುಂದಿನ ಪೀಳಿಗೆಗೂ ಪಕ್ಷಕ್ಕೆ ದಾರಿದೀಪವಾಗಿದೆ. ಈ ಐತಿಹಾಸಿಕ ಸಮಾರಂಭವು ಅತ್ಯಂತ ಯಶಸ್ವಿಯಾಗಿ ನಡೆಯಲಿ ಮತ್ತು ನಾಡಿನ ಶ್ರೇಯೋಭಿವೃದ್ಧಿಗೆ ಶ್ರಮಿಸಿದ ಮಹಾನ್ ನಾಯಕನಿಗೆ ಗೌರವ ಸಲ್ಲಿಸುವ ಈ ಕ್ಷಣ ಎಲ್ಲರಿಗೂ ಸ್ಫೂರ್ತಿಯಾಗಲಿ ಎಂದು ಹಾರೈಸೋಣ.

ಚಿತ್ರದುರ್ಗದ ಈ ‘ಅಭಿಮಾನೋತ್ಸವ’ ಕೇವಲ ಒಂದು ಸಮಾವೇಶವಲ್ಲ, ಇದು ಐದು ದಶಕಗಳ ಕಾಲ ನಾಡಿಗಾಗಿ ಮಿಡಿದ ಹೃದಯಕ್ಕೆ ಜನತೆ ಸಲ್ಲಿಸುತ್ತಿರುವ ಗೌರವ ಸಮರ್ಪಣೆ. ಯಡಿಯೂರಪ್ಪನವರು ಹಾಕಿಕೊಟ್ಟ ಜನಸೇವೆಯ ಹಾದಿ ಮುಂದಿನ ತಲೆಮಾರಿನ ರಾಜಕಾರಣಿಗಳಿಗೆ ದಾರಿದೀಪ.

ಹೆನ್ರಿ ಎಂಬ ವ್ಯಾಪಾರಿಯ ಬದುಕಿನ ದಿಕ್ಕನ್ನೇ ಬದಲಿಸಿದ ಕದನ | ಗಾಯಾಳು ಯೋಧರ ಚಿಕಿತ್ಸೆಗೆ ಹುಟ್ಟಿದ ಸಂಸ್ಥೆ

ಸಲ್ಫರಿನೋ ಯುದ್ಧದಿಂದಾಗಿ ಹುಟ್ಟಿದ ರೆಡ್‌ಕ್ರಾಸ್!



ಡಾ. ಮುರಲಿ ಮೋಹನ್ ಚೂಂತಾರು
ಕಾರ್ಯಕಾರಿ ಸಮಿತಿ ಸದಸ್ಯರು
ಭಾರತೀಯ ರೆಡ್ ಕ್ರಾಸ್ ಸೊಸೈಟಿ ಬೆಂಗಳೂರು.

> ಸ್ವಿಜರ್ಲೆಂಡ್ ದೇಶದ ವ್ಯಾಪಾರಿ ಹೆನ್ರಿ ಡ್ಯೂನಾಂಟ್ ಯುದ್ಧರಂಗದ ಬಳಿ ಹಾದು ಹೋಗುತ್ತಿದ್ದಾಗ ಈ ಭಯಾನಕ ರಣರಂಗದ ರಕ್ತದೋಕುಳಿ, ನೋವು, ಕಿರುಚಾಟ ಕಂಡು ಮಮ್ಮಲ ಮರುಗಿದನು.

ಜಗತ್ತಿನಾದ್ಯಂತಮೇ8 ರಂದು ‘ವಿಶ್ವರೆಡ್‌ಕ್ರಾಸ್ ದಿನ’ ಎಂದು ಆಚರಿಸಲಾಗುತ್ತದೆ. ‘ಮಾನವೀಯತೆಯಿಂದ ಶಾಂತಿಯ ಕಡೆಗೆ’ ಧ್ಯೇಯ ವಾಕ್ಯದೊಂದಿಗೆ ಕಾರ್ಯಾಚರಿಸುವ ವಿಶ್ವ ರೆಡ್ ಕ್ರಾಸ್ ಸಂಸ್ಥೆಯನ್ನು ಹುಟ್ಟು ಹಾಕಿದ ಮಹಾನ್ ವ್ಯಕ್ತಿ ಹೆನ್ರಿ ಡ್ಯೂನಾಂಟ್, ಇವರು ಹುಟ್ಟಿದ ದಿನ ಮೇ 8. 1859ರ ಜೂನ್ 24ರಂದು ‘ಸಲ್ಫರಿನೋ’ ಕದನದ ಗಾಯಳುಗಳ ಮನ ಕಲುಕುವ ದೃಶ್ಯವನ್ನು ಕಂಡ ಹೆನ್ರಿ ಡ್ಯೂನಾಂಟ್ ಜನರಿಂದ ಜನರಿಗೆ ನೆರವು ಎಂಬ ಕಲ್ಪನೆಯೊಂದಿಗೆ 1863ರಲ್ಲಿ ರೆಡ್ ಕ್ರಾಸ್ ಸಂಸ್ಥೆಯನ್ನು ಹುಟ್ಟುಹಾಕಿದರು. ಭಾರತದಲ್ಲಿ ಕೂಡಾ 1920ರಲ್ಲಿ ರೆಡ್ ಕ್ರಾಸ್ ಸಂಸ್ಥೆಯ ಉದಯವಾಯಿತು ಮತ್ತು ಕರ್ನಾಟಕದಲ್ಲಿ 1921ರಲ್ಲಿ ರೆಡ್ ಕ್ರಾಸ್ ಸಂಸ್ಥೆ ಹುಟ್ಟಿಕೊಂಡಿತು. ಭಾರತೀಯ ರೆಡ್ ಕ್ರಾಸ್ ಸಂಸ್ಥೆಯುಅತ್ಯಂತವಿಶಾಲವಾದಹಾಗೂದೇಶೀಯ ಮಾನವೀಯ ಸೇವಾ ಸಂಘಟನೆಯಾಗಿದೆ. ಈ ಸಂಸ್ಥೆಯುವಿಕೋಪಗಳಲ್ಲಿಪಾಲ್ಗೊಳ್ಳುವಿಕೆ, ಆರೋಗ್ಯ ಆರೈಕೆ ಸೇವೆಗಳು, ರಕ್ತ ಸಂಗ್ರಹಣ ಸೇವೆಗಳು ಮತ್ತು ಕಿರಿಯ ಹಾಗೂ ಯುವ ರೆಡ್ ಕ್ರಾಸ್ ಚಟುವಟಿಕೆಗಳು, ಇತ್ಯಾದಿ ಸೇವಾ ಕಾರ್ಯಗಳಿಗೆ ಪ್ರಸಿದ್ಧವಾಗಿದೆ.



ರೆಡ್ ಕ್ರಾಸ್ ಸಂಸ್ಥೆಯ ಉಗಮ

ರೆಡ್ ಕ್ರಾಸ್ ಸಂಸ್ಥೆಯ ಉಗಮ ಮಾನವ ಇತಿಹಾಸದಲ್ಲಿ ಒಂದು ಕುತೂಹಲಕಾರಿ ಅಧ್ಯಾಯ. ಒಂದೆಡೆ ಫ್ರಾನ್ಸ್ ಮತ್ತು ಇಟಲಿಯ ಸಂಯುಕ್ತ ಸೈನ್ಯ, ಇನ್ನೊಂದೆಡೆ ಆಸ್ಟ್ರೀಯಾ ಸೈನ್ಯ ಆ ರಣರಂಗದಲ್ಲಿ ಇದ್ದವು. ಮೂರು ಲಕ್ಷಕ್ಕೂ ಹೆಚ್ಚಿನ ಸೈನಿಕರು ಆ ರಣರಂಗದಲ್ಲಿ ಕಾದಾಡುತ್ತಿದ್ದರು. 1859ರ ಜೂನ್ 24 ರಂದು ‘ಸಲ್ಫೆರಿನೋ’ದಲ್ಲಿ ನಡೆದ ಈ ಯುದ್ಧ 15 ಗಂಟೆ ನಡೆದಿತ್ತು. ಯುದ್ಧ ಮುಗಿದಾಗ ರಣರಂಗದ ತುಂಬಾ ಸತ್ತ ಹಾಗೂ ಗಾಯಗೊಂಡ ದೇಹಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಸೈನಿಕರು ನೋವಿನಿಂದ ಚೀರಾಡುತ್ತಿದ್ದರೂ, ಸಹಾಯ ಹಸ್ತ ನೀಡಲು ಕೈಗಳೇ ಇರಲಿಲ್ಲ. ಸ್ವಿಜರ್ಲೆಂಡ್‌ದೇಶದವ್ಯಾಪಾರಿಹೆನ್ರಿಡ್ಯೂನಾಂಟ್‌ಯುದ್ಧರಂಗದ ಬಳಿ ಹಾದು ಹೋಗುತ್ತಿದ್ದಾಗ ಈ ಭಯಾನಕ ರಣರಂಗದ ರಕ್ತದೋಕುಳಿ, ನೋವು, ಕಿರುಚಾಟಕಂಡುಮಮ್ಮಲಮರುಗಿದನು. ಸೂರ್ಯ ಮುಳುಗುವ ಹೊತ್ತಲ್ಲಿ ಅಲ್ಲಿ ಬಂದಿದ್ದ ‘ಡ್ಯೂನಾಂಟ್’ ಮರುದಿನ ಸೂರ್ಯ ಉದಯಿಸುವವರೆಗೆ ಸ್ಥಳೀಯ ಗ್ರಾಮಸ್ಥರ ಸಹಕಾರಪಡೆದುಗಾಯಾಳುಗಳನ್ನುಎತ್ತಿನಗಾಡಿಗಳಲ್ಲಿಹಾಕಿಕೊಂಡು ಕ್ರಾಸ್ಟೆಗ್ಲಿಯನ್ ಪ್ರದೇಶಕ್ಕೆ ಸಾಗಿಸಿದನು. ಯುದ್ಧ ಗಾಯಾಳುಗಳನ್ನು



ಖಾಸಗಿ ಮನೆಗಳಲ್ಲಿ, ಚರ್ಚ್‌ಗಳಲ್ಲಿ, ಆಶ್ರಮಗಳಲ್ಲಿ, ಮಸೀದಿಗಳಲ್ಲಿಸೇನಾಸ್ಥಳಗಳಲ್ಲಿ ಇರಿಸಿ ಉಪಚರಿಸಿದನು.

ಕಾಲಚಕ್ರ ಉರುಳುತ್ತಿತ್ತು, ಜನ ಎಲ್ಲವನ್ನೂ ಮರೆತರೂ, ಹೆನ್ರಿ ಡ್ಯೂನಾಂಟ್ ಕನಸಲ್ಲೂ ಬೆಚ್ಚಿ ಬೀಳುತ್ತಿದ್ದ. ಯುದ್ಧದ ಭೀಕರತೆ ಹೆನ್ರಿಯ ಮನದಲ್ಲಿ ಆಳವಾಗಿ ಬೇರೂತ್ತಿತ್ತು. ಹಗಲೂ ರಾತ್ರಿ ಯುದ್ಧದ ಬಗ್ಗೆಯೇ ಯೋಚಿಸುತ್ತಿದ್ದ ಆತ, ಇದಕ್ಕೊಂದು ಶಾಶ್ವತ ಪರಿಹಾರ ಪಡೆಯಲೇ ಬೇಕೆಂಬ ದೃಢ ಚಿತ್ತದಿಂದ ಕಾರ್ಯಪ್ರವತ್ತವಾದ. ಯುದ್ಧಕಾಲದಲ್ಲಿ ಮಾನವ ಜನಾಂಗ ಎದುರಿಸುವ ಭಯಂಕರ ಯಾತನೆಯನ್ನು ತಪ್ಪಿಸಲು ಹೆನ್ರಿ ಡ್ಯೂನಾಂಟ್ ತನ್ನದೇ ಆದ ಎರಡು ಅಂಶಗಳನ್ನು ಮನದಟ್ಟು ಮಾಡಿಕೊಂಡ. ಆನಿಟ್ಟಿನಲ್ಲಿ ಹೆನ್ರಿ ಡ್ಯೂನಾಂಟ್ ‘ದಿ ಮೆಮಾರಿ ಆಫ್ ಸಾಲ್ಫರಿನೋ’ ಪುಸ್ತಕವನ್ನುಪ್ರಕಟಿಸಿ, ಅದರಪ್ರತಿಗಳನ್ನುವಿಶ್ವದಾದ್ಯಂತ ಹಂಚಿದ. ಆ ಪುಸ್ತಕದಲ್ಲಿ ಯುದ್ಧ ಕಾಲದಲ್ಲಿ ಮಾನವೀಯತೆಯನ್ನು ಮರೆಯಲು ಎರಡು ಕಾರ್ಯಸೂಚಿಯನ್ನು ಜಾರಿಗೆ ತರಬೇಕೆಂದು ಜಗತ್ತಿನ ಎಲ್ಲಾ ರಾಷ್ಟ್ರಗಳಿಗೆ ಕರೆ ನೀಡಿದ. ಆ ಎರಡು ಅಂಶಗಳು ಯಾವುದೆಂದರೆ,

ಅಂತಾರಾಷ್ಟ್ರೀಯ ಸ್ವಯಂಸೇವಕರ ಸಂಘಟನೆಯನ್ನು ಎಲ್ಲಾ ರಾಷ್ಟ್ರಗಳಲ್ಲೂಶಾಂತಿಕಾಲದಲ್ಲಿಪ್ರತಿಷ್ಠಾಪಿಸಬೇಕು. ಇದರಲ್ಲಿಸ್ವಯಂ ಸೇವಕ ತಂಡವು ಯುದ್ಧ ಮುಕ್ತಾಯವಾದ ಬಳಿಕ ಅಲ್ಲಿನ ಗಾಯಾಳುಗಳನ್ನು ಅವರ ಜಾತಿ, ಮತ, ಧರ್ಮ ಮತ್ತು ರಾಷ್ಟ್ರೀಯತೆಯನ್ನು ಗಮನಿಸದೇ ಉಪಚರಿಸಬೇಕು.

ಗಾಯಾಳು ಸೈನಿಕರನ್ನು ಉಪಚರಿಸಲು ಸಾಧ್ಯವಾಗುವಂತೆ ರಾಷ್ಟ್ರಗಳು ಗಾಯಾಳು ಸೈನಿಕರನ್ನು, ವೈದ್ಯರನ್ನು ಹಾಗೂ ಇತರ ಸಹಾಯಕರನ್ನು ತಟಸ್ಥರೆಂದು, ಯಾವ ಪಕ್ಷಕ್ಕೂ ಸೇರದವರೆಂದು ಘೋಷಿಸಿ, ಅಂತಾರಾಷ್ಟ್ರೀಯ ಒಪ್ಪಂದಕ್ಕೆ ಸಹಿ ಹಾಕಬೇಕು.

ಈ ಅದ್ಭುತವಾದ ಪುಸ್ತಕವನ್ನು ಓದಿದ ಬಳಿಕ ಜಿನಿವಾದ ಸಮಾಜಕಲ್ಯಾಣ ಸಂಸ್ಥೆಯೊಂದು, ಹೆನ್ರಿ ಡ್ಯೂನಾಂಟ್‌ನ ಸಂಕಲ್ಪಗಳನ್ನು ಸಾಕಾರಗೊಳಿಸಲು ಸಹಾಯ ಮಾಡಲು ಮುಂದೆ ಬಂದಿತು. 5 ಮಂದಿಯ ಒಂದು ಸಮಿತಿ ಮಾಡಿ, ಹೆನ್ರಿ ಡ್ಯೂನಾಂಟ್ ಅವರನ್ನು ಕಾರ್ಯದರ್ಶಿಯಾಗಿ ನೇಮಕ ಮಾಡಲಾಯಿತು. ಈ ಸಮಿತಿಯು ಒಬ್ಬ ಸೇನೆಯ ನಿವೃತ್ತ ಕಮಾಂಡರ್, ಒಬ್ಬ ವೈದ್ಯ, ಒಬ್ಬ ಸಮಾಜ ಸೇವಕ, ಒಬ್ಬ ವ್ಯಾಪಾರಿ ಹಾಗೂ ಮತ್ತೊಬ್ಬ ನಿವೃತ್ತ ಅಧ್ಯಾಪಕರನ್ನು ಒಳಗೊಂಡಿತ್ತು. ಇವರ ಶ್ರಮದ ಫಲವಾಗಿ 1863, ಅಕ್ಟೋಬರ್ 26ರಂದು ಜಿನೇವಾದಲ್ಲಿ ಅಂತಾರಾಷ್ಟ್ರೀಯ ಸಮ್ಮೇಳನ ನಡೆದು, 16 ರಾಷ್ಟ್ರಗಳ ವಿವಿಧ ಆಮಂತ್ರಿಕರು ಇದರಲ್ಲಿ ಪಾಲ್ಗೊಂಡಿದ್ದರು. ‘ಗಾಯಗೊಂಡಸೈನಿಕರಸಹಕಾರಸಂಸ್ಥೆ’ ಹೆಸರಿನ ಅಂತಾರಾಷ್ಟ್ರೀಯ ಸಂಸ್ಥೆಯನ್ನು ಸ್ಥಾಪಿಸಲು ಈ ಸಮ್ಮೇಳನದಲ್ಲಿ ತೀರ್ಮಾನಿಸಲಾಯಿತು. ಮುಂದೆ ಇದೇ ಸಂಸ್ಥೆ ‘ರೆಡ್ ಕ್ರಾಸ್ ಸಂಸ್ಥೆ’ ಎಂಬ ಹೆಸರಿನಿಂದ ಕರೆಯಲ್ಪಟ್ಟಿತು.

‘ನೋಬೆಲ್ ಶಾಂತಿ ಪುರಸ್ಕಾರ’

1901ರಲ್ಲಿ ಹೆನ್ರಿ ಡ್ಯೂನಾಂಟ್ ವಿಶ್ವದ ಅತ್ಯುನ್ನತ ಗೌರವವಾದ ‘ನೋಬೆಲ್ ಶಾಂತಿ ಪುರಸ್ಕಾರ’ ಪ್ರಪ್ರಥಮವಾಗಿ ದೊರಕಿತು. ರೆಡ್ ಕ್ರಾಸ್ ಸಂಸ್ಥೆಯ ಅಂತಾರಾಷ್ಟ್ರೀಯ ಸಮಿತಿಯು ಹೆನ್ರಿ ಡ್ಯೂನಾಂಟ್ ಬಗ್ಗೆಜಿನೀವಾದಿಂದಲೇಕಳಿಸಿದಸಂದೇಶಈರೀತಿಯಾಗಿತ್ತು. ‘ಇಂಥ ಘನತ್ತರವಾದ ಗೌರವಕ್ಕೆ ನಿಮ್ಮಂತೆ ಪಾತ್ರರಾದವರು ಬೇರೆ ಯಾರೊಬ್ಬರೂ ಇಲ್ಲ. 40 ವರ್ಷಗಳ ಸತತ ಪರಿಶ್ರಮದಿಂದ ಈ ಅಂತಾರಾಷ್ಟ್ರೀಯ ಸಂಘಟನೆಯನ್ನು ಯುದ್ಧರಂಗದಲ್ಲಿನ ಗಾಯಾಳುಗಳಪರಿಹಾರಕ್ಕಾಗಿನೀವುಆರಂಭಿಸಿದಿರಿ. ನೀವಿಲ್ಲದಿದ್ದರೆ 19ನೇ ಶತಮಾನದ ಸರ್ವೋಚ್ಚಮಾನವೀಯ ಸಾಧನೆಯಾದ ರೆಡ್ ಕ್ರಾಸ್ ಸಂಸ್ಥೆ ಉದಯಿಸುತ್ತಿರಲಿಲ್ಲ’. ಹೆನ್ರಿ ಡ್ಯೂನಾಂಟ್ 30ನೇ ಅಕ್ಟೋಬರ್1910ರಂದು ಹೈಡನ್ ನಗರದಲ್ಲಿ ಮರಣ ಹೊಂದಿದ. ಹೆನ್ರಿ ಡ್ಯೂನಾಂಟ್‌ನ ಜನ್ಮದಿನವಾದ ಮೇ 8 ಅನ್ನು ಪ್ರತಿ ವರ್ಷ ‘ವಿಶ್ವ ರೆಡ್ ಕ್ರಾಸ್’ ದಿನ ಎಂದು ಜಗತ್ತಿನಾದ್ಯಂತ ಆಚರಿಸಲಾಗುತ್ತದೆ.

ಹೆನ್ರಿ ಡ್ಯೂನಾಂಟ್ ತನ್ನ ಜೀವನದ ಉದ್ದೇಶವನ್ನು ತುಂಬಾ ಸರಳವಾದ 3 ಶಬ್ದಗಳಲ್ಲಿ ಬರೆದಿದ್ದಾನೆ. ‘ಜನತೆಯಿಂದ, ಜನತೆಗೆ ನೆರವು’ ರೆಡ್ ಕ್ರಾಸ್ ಸಂಸ್ಥೆಯ ಧ್ಯೇಯಗಳನ್ನು ಈ ಶಬ್ದಗಳೇ ವಿವರಿಸುತ್ತದೆ.

Editor: RAVI HEGDE, Printed and Published by **B.V. MALLIKARJUNAIAH** on behalf of Kannada Prabha Publications Ltd., 'Vijaya Laxmi Nivas' 1-1165/12A,B Aiwan-E-Shahi Road, Kalaburagi-585 102
Printed at Manipal Media Networks Ltd., Sy. No. 7/2, Plot No. CA-3/1, 28(P) & 29(P), Kapnoor Industrial Area, 2nd Stage, Kapnoor, Kalaburagi-585 104. **Registered No. KA/BGGPO/2559/10-12**

Kalaburagi
Vol.19, No. 127
RNI Reg.No.KARKAN/2008/24487

ಸುದ್ದಿ ಸಿಂಚನ

‘ವಂದೇ’ಗೆ ಶಾಸನಬದ್ಧ ರಕ್ಷಣೆ ಸಂವಿಧಾನ ಬಾಹಿರ: ಮುಸ್ಲಿಂ ಮಂಡಳಿ ಆಕ್ಷೇಪ

ನವದೆಹಲಿ: ರಾಷ್ಟ್ರೀಯ ಗೀತೆ ‘ವಂದೇ ಮಾತರಂ’ಗೆ ರಾಷ್ಟ್ರಗೀತೆ ‘ಜನ ಗಣ ಮನ’ದಂತೆ ಶಾಸನಬದ್ಧ ಸ್ಥಾನಮಾನ ಕೊಡಲು ಮುಂದಾಗಿರುವ ಕೇಂದ್ರ ಸರ್ಕಾರದ ಕ್ರಮಕ್ಕೆ ಅಖಿಲ ಭಾರತ ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿ ಗುರುವಾರ ಆಕ್ಷೇಪ ವ್ಯಕ್ತಪಡಿಸಿದೆ. ಸರ್ಕಾರದ ಕ್ರಮವು ಧಾರ್ಮಿಕ ಸ್ವಾತಂತ್ರ್ಯ ಸೇರಿದಂತೆ ಸಾಂವಿಧಾನಿಕ ಹಕ್ಕುಗಳ ನೇರ ಉಲ್ಲಂಘನೆಯಾಗಿದೆ. ಹಾಗಾಗಿ ಅದನ್ನು ಹಿಂತೆಗೆದುಕೊಳ್ಳಬೇಕೆಂದು ಒತ್ತಾಯಿಸಿದೆ. ಬುಧವಾರ ಕೇಂದ್ರ ಸಚಿವ ಸಂಪುಟ ಸಭೆಯು ರಾಷ್ಟ್ರೀಯ ಗೌರವಕ್ಕೆ ಅವಮಾನ ತಡೆ ಕಾಯ್ದೆ 1971ಕ್ಕೆ ಅನುಮೋದನೆ ನೀಡಿತ್ತು. ಇದು ಜಾರಿಯಾದರೆ ‘ಜನ ಗಣ ಮನ’ದಂತೆಯೇ ‘ವಂದೇ ಮಾತರಂ’ ಅನ್ನು ಅಪಮಾನಿಸಿದರೆ ಜೈಲುಶಿಕ್ಷೆ ವಿಧಿಸಬಹುದು.

ಪ್ರೇಮ್ ನಿರ್ದೇಶನದ ‘ಕೆಡಿ’ ಚಿತ್ರದ ಹಾಡಿನ ವಿವಾದ ಬಗ್ಗೆ ನಟಿ ನೋರಾ ಕ್ಷಮೆ

ನವದೆಹಲಿ: ಪ್ರೇಮ್ ನಿರ್ದೇಶನದ ‘ಕೆಡಿ: ದ ಡೆವಿಲ್’ ಚಿತ್ರದ ಹಿಂದಿನ ಅವತರಣಿಕೆಯ ಸರ್ಕೆ ಚುನರ್ ವಿವಾದಕ್ಕೆ



ಸಂಬಂಧಿಸಿದಂತೆ ಆ ಹಾಡಿಗೆ ಹೆಜ್ಜೆ ಹಾಕಿದ್ದ ನಟಿ ನೋರಾ ಫತೇಹಿ ಗುರುವಾರ ರಾಷ್ಟ್ರೀಯ ಮಹಿಳಾ ಆಯೋ ಗದ ಮುಂದೆ ಹಾಜರಾಗಿ ಕ್ಷಮೆ ಯಾಚಿಸಿದ್ದಾರೆ. ವಿಚಾರಣೆ ಬಳಿಕ ಮಾತನಾಡಿದ ನೋರಾ, ‘ಯಾರನ್ನೂ ನೋಯಿಸುವ ಉದ್ದೇಶ ನನಗಿರಲಿಲ್ಲ. ಆದರೂ ಇಂತಹ ಸಂದಿಗ್ಧ ಸ್ಥಿತಿಯಲ್ಲಿ ಸಿಲುಕಿದ್ದೇನೆ. ಇದು ಕಲಾವಿದೆಯಾದ ನನ್ನ ಜವಾಬ್ದಾರಿಯಾಗಿರುವ ಕಾರಣ ಕ್ಷಮೆ ಕೇಳಿದ್ದೇನೆ’ ಎಂದಿದ್ದಾರೆ. ಜತೆಗೆ, ಕೆಲ ಅನಾಥ ಹುಡುಗಿಯರ ಶಿಕ್ಷಣಕ್ಕೆ ಆರ್ಥಿಕವಾಗಿ ನೆರವಾಗುವುದಾಗಿ ಅವರು ಹೇಳಿದ್ದಾರೆ.

ಖಲಿಸ್ತಾನಿ ಧ್ವಜಕ್ಕೆ ಆಕ್ಷೇಪ: ಗಾಯಕ ದಿಲ್ಜೀತ್‌ಗೆ ಎಸ್‌ಎಫ್‌ಜೆ ಬೆದರಿಕೆ

ನವದೆಹಲಿ: ಇತ್ತೀಚೆಗೆ ಕೆನಡಾದಲ್ಲಿ ನಡೆದ ಸಂಗೀತ ಕಾರ್ಯಕ್ರಮದ ವೇಳೆ ಖಲಿಸ್ತಾನಿ ಧ್ವಜ ಪ್ರದರ್ಶನಕ್ಕೆ ವಿರೋಧಿಸಿದ್ದ ಗಾಯಕ ದಿಲ್ಜೀತ್ ದೋಸಾಂಜ್ ವಿರುದ್ಧ ಖಲಿಸ್ತಾನಿ ಸಂಘಟನೆ ಎಸ್‌ಎಫ್‌ಜೆ ಕಿಡಿಕಾರಿದ್ದು, ಅವರ ಮುಂದಿನ ಕಾರ್ಯಕ್ರಮಗಳಿಗೆ ತಡೆಯೊಡ್ಡುವುದಾಗಿ ಬೆದರಿಕೆ ಹಾಕಿದೆ. ಕೆನಡಾದಲ್ಲಿ ನಡೆದ ಸಂಗೀತ ಕಾರ್ಯಕ್ರಮದಲ್ಲಿ ಖಲಿಸ್ತಾನಿ ಹೋರಾಟಗಾರರು ಧ್ವಜ ಪ್ರದರ್ಶಿಸಿ ಅಡ್ಡಿಪಡಿಸಲು ಯತ್ನಿಸಿದರು. ಆಗ ದಿಲ್ಜೀತ್ ಅಲ್ಲಿಯೇ ಇದಕ್ಕೆ ಆಕ್ಷೇಪಿಸಿದ್ದರು. ಇದು ಸಿಖ್ ಫಾರ್ ಜಸ್ಟೀಸ್ ಸಂಘಟನೆಯ ಕೆಂಗಣ್ಣಿಗೆ ಗುರಿಯಾಗಿದೆ.

16 ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಮೇ 25, 26ಕ್ಕೆ ಎಸ್‌ಬಿಐ ಸಿಬ್ಬಂದಿ ಮುಷ್ಕರ

ನವದೆಹಲಿ: 16 ವಿವಿಧ ಬೇಡಿಕೆ ಈಡೇರಿಕೆಗಳಿಗೆ ಆಗ್ರಹಿಸಿ ಭಾರತೀಯ ಸ್ಟೇಟ್ ಬ್ಯಾಂಕ್ ನೌಕರರು ಮೇ 25, 26 ರಂದು ದೇಶವ್ಯಾಪಿ ಮುಷ್ಕರಕ್ಕೆ ಕರೆ ನೀಡಿದ್ದಾರೆ. ಅಖಿಲ ಭಾರತ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾಸಿಬ್ಬಂದಿಒಕ್ಕೂಟ (ಎಐಎಸ್‌ಬಿಐಎಸ್‌ಎಫ್) ಈ ಘೋಷಣೆ ಮಾಡಿದೆ. ಬ್ಯಾಂಕುಗಳಲ್ಲಿ ಸಂದೇಶವಾಹಕ ನೇಮಕಾತಿ, ಸಶಸ್ತ್ರಗಾರ್ಡ್‌ಗಳ ಹೊಸ ನೇಮಕಾತಿ, ಸಿಬ್ಬಂದಿ ನೇಮಕ, ಪಿಂಚಣಿ ಸೌಲಭ್ಯ ಸೇರಿದಂತೆ 16 ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಪ್ರತಿಭಟನೆಗೆ ಮುಂದಾಗಿದ್ದಾರೆ. ಇದರ ಪರಿಣಾಮ ಎಸ್‌ಬಿಐ ಶಾಖೆಗಳಲ್ಲಿ ಸತತ 4 ದಿನ ಸೇವೆಯಲ್ಲಿ ವ್ಯತ್ಯಯವಾಗಲಿದೆ. ಕಾರಣ 23 ನಾಲ್ಕನೇ ಶನಿವಾರ, 24 ಭಾನುವಾರ ಆಗಿರಲಿದೆ.

ಪಂಚರಾಜ್ಯ ಚುನಾವಣೆ: ₹1444 ಕೋಟಿ ಮೌಲ್ಯದ ಅಕ್ರಮ ವಸ್ತುಗಳು ಜಪ್ತಿ

ನವದೆಹಲಿ: ಇತ್ತೀಚೆಗೆ ಮುಕ್ತಾಯಗೊಂಡ ಪಂಚ ರಾಜ್ಯ ಚುನಾವಣೆಗಳಲ್ಲಿ ಮತದಾರರ ಆಮಿಷಕ್ಕಾಗಿ ಬಳಸಲು ಉದ್ದೇಶಿಸುತ್ತಿದ್ದ ಹಣ, ಮದ್ಯ ಸೇರಿದಂತೆ ಸುಮಾರು 1444 ಕೋಟಿ ರು. ಮೌಲ್ಯದ ವಸ್ತುಗಳನ್ನು ಚುನಾವಣಾ ಆಯೋಗ ವಶಪಡಿಸಿಕೊಂಡಿದೆ. ಇದರಲ್ಲಿ ತಮಿಳುನಾಡು ನಂ.1 ಸ್ಥಾನದಲ್ಲಿದೆ. ಇಲ್ಲಿ ಒಟ್ಟು 662 ಕೋಟಿ ರು. ಹಣ ಸೇರಿದಂತೆ ಅಕ್ರಮ ಬಳಕೆಗೆ ಉದ್ದೇಶಿಸಿದ್ದ ಇತರ ವಸ್ತುಗಳು ಜಪ್ತಿಯಾಗಿವೆ. ಬಂಗಾಳದಲ್ಲಿ 573 ಕೋಟಿ ರು., ಅಸ್ಸಾಂನಲ್ಲಿ 117 ಕೋಟಿ ರು., ಕೇರಳದಲ್ಲಿ 81 ಕೋಟಿ ರು., ಪುದುಚೇರಿಯಲ್ಲಿ 10 ಕೋಟಿ ರು. ಮೌಲ್ಯದ ವಸ್ತು ಜಪ್ತಿ ಮಾಡಲಾಗಿದೆ. ಇದು ಹಿಂದಿನ ಚುನಾವಣೆಗಿಂತ ಶೇ.40.14ರಷ್ಟು ಅಧಿಕ.

ತಾಳ್ಮೆಯಿಂದಿರಿ ಶೀಘ್ರ ಒಳ್ಳೆ ಟೈಂ ಬರುತ್ತೆ: ಪಳನಿ

ಪುದುಚೇರಿಯಲ್ಲಿ ಬೀಡುಬಿಟ್ಟ 40 ಅಣ್ಣಾ ಶಾಸಕರ ಜತೆಗೆ ಮಾತುಕತೆ | ಗರಿಗೆದರಿದ ದ್ರಾವಿಡ ಪಕ್ಷಗಳ ಐತಿಹಾಸಿಕ ಮೈತ್ರಿ ವದಂತಿ

ಪುದುಚೇರಿ: ವಿಜಯ್ ಪಕ್ಷವನ್ನು ಬೆಂಬಲಿಸಲು ಅಣ್ಣಾಡಿಎಂಕೆಯ ಒಂದು ಬಣ ಮುಂದಾಗಿದೆ ಎಂಬ



ವರದಿಗಳ ಬೆನ್ನಲ್ಲೇ, ಪುದುಚೇರಿಯ ರೆಸಾರ್ಟ್‌ನಲ್ಲಿ ಬೀಡು ಬಿಟ್ಟಿರುವ 40ಕ್ಕೂ ಹೆಚ್ಚು ಶಾಸಕರಜೊತೆಪಕ್ಷದನಾಯಕ ಎಡಪ್ಪಾಡಿ ಪಳನಿಸ್ವಾಮಿ ಮಾತುಕತೆ ನಡೆಸಿದ್ದಾರೆ.

ಆದರಲ್ಲಿ, ‘ನೀವ್ಯಾರು ಆತಂಕಕ್ಕೆ ಒಳಗಾಗಬೇಡಿ, ಒಗ್ಗಟ್ಟಾಗಿ ಇರಿ. ಶೀಘ್ರವೇ ಒಳ್ಳೆಯ ಸಮಯ ಬರುತ್ತದೆ’ ಎಂದು ಅಭಯ ನೀಡಿದ್ದಾರೆ. ಇದು ಯಾವುದಾದರೂ ಒಂದು ಪಕ್ಷದ ಜೊತೆಗೆ ಸೇರಿ ಅಣ್ಣಾಡಿಎಂಕೆ ಸರ್ಕಾರ ರಚನೆಯ ಸುಳಿವು ಇರಬಹುದು ಎಂದು ವಿಶ್ಲೇಷಿಸಲಾಗಿದೆ.

ಸದ್ಯ ಟಿವಿಕೆ 108, ಡಿಎಂಕೆ 59, ಅಣ್ಣಾಡಿಎಂಕೆ 47, ಕಾಂಗ್ರೆಸ್ 5, ಪಿಎಂಕೆ 4, ಐಯುಎಂಎಲ್ 2, ಸಿಪಿಐ 2, ಸಿಪಿಎಂ 2, ವಿಸಿಕೆ 2, ಬಿಜೆಪಿ, ಡಿಎಂಡಿಕೆ ಮತ್ತು ಎಎಂಎಂಕೆ ತಲಾ 1 ಸ್ಥಾನ ಹೊಂದಿವೆ.

ಅಣ್ಣಾಡಿಎಂಕೆಗೆ ಡಿಎಂಕೆ ಬೆಂಬಲ?

ಕುತೂಹಲ ಮೂಡಿಸಿದ ದ್ರಾವಿಡ ಪಕ್ಷಗಳ ಉಳಿಸುವ ನಿರ್ಣಯ

ಚೆನ್ನೈ: 59 ವರ್ಷಗಳ ದ್ರಾವಿಡ ಪಕ್ಷಗಳ ಆಡಳಿತವನ್ನು ಕೊನೆಗಾಣಿಸಿ, ವಿಜಯ್ ತಮಿಳ್ನಾಡು ರಾಜಕೀಯದಲ್ಲಿ ಹೊಸ ಶಕ್ತಿಯಾಗಿ ಉದಯಿಸಿದ ಹೊತ್ತಿನಲ್ಲೇ, ದ್ರಾವಿಡ ಪರಂಪರೆ ಉಳಿಸಲು ಡಿಎಂಕೆ ಮತ್ತು ಅಣ್ಣಾಡಿಎಂಕೆ ಪಕ್ಷಗಳು ಒಂದಾಗಿ ಸರ್ಕಾರ ರಚಿಸಲಿವೆಯೇ? ಗುರುವಾರ ನಡೆದ ಡಿಎಂಕೆ ಶಾಸಕಾಂಗ ಪಕ್ಷದ ಸಭೆಯಲ್ಲಿ ಡಿಎಂಕೆ ಕೈಗೊಂಡ 4 ನಿರ್ಣಯಗಳ ಪೈಕಿ ಒಂದು ನಿರ್ಣಯ ಮೇಲ್ಕಂಡ ಅನುಮಾನಗಳಿಗೆ ಕಾರಣವಾಗಿದೆ.



ಪಕ್ಷ ಅಂಗೀಕರಿಸಿದ 4 ನಿರ್ಣಯಗಳ ಪೈಕಿ 3ನೇ ನಿರ್ಣಯದಲ್ಲಿ, ‘ತಮಿಳುನಾಡು ಮತ್ತೊಂದು ಚುನಾವಣೆಗೆ ಸಿದ್ಧವಾಗಿಲ್ಲ ಮತ್ತು ಸದ್ಯಕ್ಕೆ ರಾಜ್ಯಕ್ಕೀಗ ಸ್ಥಿರ ಸರ್ಕಾರದ ಅವಶ್ಯಕತೆ ಇದೆ. ಜೊತೆಗೆ ದ್ರಾವಿಡ ಆಂದೋಲನದತತ್ವಗಳನ್ನುವಿರೋಧಿಸುವವರು ಈ ಸ್ಥಾನಕ್ಕೆ ಬಂದು ಕೂರಲು ಬಿಡಬಾರದು. ಹೀಗಾಗಿ ಸದ್ಯದ ರಾಜಕೀಯ ಮತ್ತು ಆಡಳಿತಾತ್ಮಕ ಪರಿಸ್ಥಿತಿ ಅವಲೋಕಿಸಿದ ಬಳಿಕ, ಮುಂದಿನ ಯಾವುದೇ ಅಗತ್ಯ ರಾಜಕೀಯ ನಿಲುವು ಕೈಗೊಳ್ಳುವ ನಿರ್ಧಾರವನ್ನು ಪಕ್ಷದ ಅಧ್ಯಕ್ಷ ಎಂ.ಕೆ.ಸ್ಟಾಲಿನ್ ಅವರಿಗೆ ಬಿಡಲಾಗುತ್ತಿದೆ’ ಎಂದು ಹೇಳಲಾಗಿದೆ.

ಇದು ವಿಜಯ್ ಪಕ್ಷ ಅಧಿಕಾರಕ್ಕೆ ಬರದಂತೆ ತಡೆಯಲು ಡಿಎಂಕೆ- ಅಣ್ಣಾಡಿಎಂಕೆ ಮಾತುಕತೆ ನಡೆಸುತ್ತಿರುವ ಸುಳಿವಾಗಿರಬಹುದು ಎಂದು ವಿಶ್ಲೇಷಿಸಲಾಗಿದೆ.

ಡಿಎಂಕೆ, ಅಣ್ಣಾಡಿಎಂಕೆ ಮೈತ್ರಿ ಆದರೆ ಟಿವಿಕೆ 108 ಶಾಸಕರ ರಾಜೀನಾಮೆ?

ಚೆನ್ನೈ: ತಮ್ಮ ಪಕ್ಷ ಅಧಿಕಾರಕ್ಕೆ ಬರುವುದನ್ನು ತಡೆಯಲು ಡಿಎಂಕೆ ಮತ್ತು ಅಣ್ಣಾಡಿಎಂಕೆ ಜಂಟಿಯಾಗಿ ಸರ್ಕಾರ ರಚನೆಗೆ ರಹಸ್ಯ ಮಾತುಕತೆ ನಡೆಸುತ್ತಿವೆ ಎಂಬ ವರದಿಗಳ ಬಗ್ಗೆ ಟಿವಿಕೆ ನಾಯಕ ವಿಜಯ್ ಆಕ್ಷೇಪ ವ್ಯಕ್ತಪಡಿಸಿದ್ದಾರೆ ಎನ್ನಲಾಗಿದೆ. ತಮಗೆ ಸರ್ಕಾರ ರಚನೆಗೆ ಅವಕಾಶ ನಿರಾಕರಿಸಿರುವ ರಾಜ್ಯಪಾಲರ ನಡೆಯ ನಡುವೆಯೇ, 2 ಮತ್ತು 3ನೇ ಬಹುದೊಡ್ಡ ಪಕ್ಷಗಳಾದ ಡಿಎಂಕೆ ಮತ್ತು ಅಣ್ಣಾಡಿಎಂಕೆಗೆ ರಾಜ್ಯಪಾಲರು ಸರ್ಕಾರ ರಚನೆಗೆ ಅವಕಾಶ ನೀಡಿದರೆ ಆಗ ತಮ್ಮ ಪಕ್ಷದ ಎಲ್ಲಾ 108 ಶಾಸಕರು ರಾಜೀನಾಮೆ ನೀಡೋಣ ಎಂದು ವಿಜಯ್ ಆಪ್ತರ ಬಳಿ ಹೇಳಿಕೊಂಡಿದ್ದಾರೆ ಎಂದು ವರದಿಗಳು ತಿಳಿಸಿವೆ.

6 ತಿಂಗಳು ಟಿವಿಕೆಗೆ ಅಡ್ಡಿ ಮಾಡಲ್ಲ: ಸ್ಟಾಲಿನ್

ಚೆನ್ನೈ: ಇನ್ನು 6 ತಿಂಗಳು ಟಿವಿಕೆ ಸರ್ಕಾರ ಮಾಡಲಿ. ನಾವು ಅದಕ್ಕೆ ಅಡ್ಡಿ ಮಾಡುವುದಿಲ್ಲ. ಜೊತೆಗೆ ನಮ್ಮ ಮೈತ್ರಿಕೂಟದಲ್ಲಿದ್ದ ಸಣ್ಣಪಕ್ಷಗಳು ಟಿವಿಕೆಯನ್ನು ಬೆಂಬಲಿಸಬಹುದು. ಅದಕ್ಕೆ ನಮ್ಮ ಅಭ್ಯಂತರ ಇಲ್ಲ ಎಂದು ಡಿಎಂಕೆ ನಾಯಕ್ ಸ್ಟಾಲಿನ್ ಮಾಧ್ಯಮವೊಂದಕ್ಕೆ ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ.

ಸೋತ ಪಕ್ಷಗಳಿಂದ ವಿಜಯ್ ಪರ ಸೀಟಿ: ಬಲು ಅಪರೂಪ

ಗೌರ್ನರ್ ನಡೆ ಜನಾದೇಶಕ್ಕೆ ಅಗೌರವ: ದ್ರಾವಿಡ ಪಕ್ಷ ಕಿಡಿ | ರಾಜ್ಯಪಾಲರ ಕ್ರಮ ಸಂವಿಧಾನಬದ್ಧವಾಗಿಯೇ ಇದೆ: ಬಿಜೆಪಿ

ಚೆನ್ನೈ: ಅಪರೂಪದ ಬೆಳವಣಿಗೆಯೊಂದರಲ್ಲಿ ತಮಿಳುನಾಡಿನಲ್ಲಿ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿರುವ ವಿಜಯ್ ನೇತೃತ್ವದ ಟಿವಿಕೆ ಪಕ್ಷಕ್ಕೆ ಸರ್ಕಾರ ರಚನೆಗೆ ಆಹ್ವಾನ ನೀಡದ ರಾಜ್ಯಪಾಲ ಆರ್.ವಿ.ಅರ್ಲೇಕರ್ ಅವರ ಕ್ರಮಕ್ಕೆ ಡಿಎಂಕೆ, ಎಂಎನ್‌ಎಂ, ವಿಸಿಕೆ, ಸಿಪಿಐ ಪಕ್ಷಗಳು ತೀವ್ರ ಅಸಮಾಧಾನ ವ್ಯಕ್ತಪಡಿಸಿವೆ.

ಇದು ರಾಜ್ಯದಲ್ಲಿ ಕಳೆದೊಂದು ದಶಕದಿಂದ ರಾಜ್ಯಪಾಲರು ಮತ್ತು ಸರ್ಕಾರದ ನಡುವೆ ನಡೆಯುತ್ತಿರುವ ಸಂಘರ್ಷಕ್ಕೆ ಮತ್ತೊಂದು ಉದಾಹರಣೆ ಎಂದು ವಿಶ್ಲೇಷಿಸಲಾಗಿದೆ.

ಸರ್ಕಾರ ರಚನೆಗೆ ಅವಕಾಶ ನೀಡದ ರಾಜ್ಯಪಾಲರ ಕ್ರಮ ತಮಿಳುನಾಡಿಗೆ ಮತ್ತು ಜನಾದೇಶಕ್ಕೆ ತೋರಿದ ಅಗೌರವ ಎಂದು ವಿಪಕ್ಷಗಳು ಕಿಡಿಕಾರಿವೆ. ಮಕ್ಕಳ್ ನೀಧಿ ಮಯ್ಯಂ ಪಕ್ಷದ ಮುಖ್ಯಸ್ಥ, ನಟ ಕಮಲ್ ಹಾಸನ್ ಅವರು ವಿಜಯ್ ಅವರಿಗೆ ಸರ್ಕಾರ ರಚನೆಗೆ ಆಹ್ವಾನ ನೀಡದೆ ರಾಜ್ಯಪಾಲರು ಜನಾದೇಶಕ್ಕೆ ಅವಮಾನ ಮಾಡಿದ್ದಾರೆ ಎಂದು ಆರೋಪಿಸಿದ್ದಾರೆ. ಆದರೆ ಬಿಜೆಪಿ ವಕ್ತಾರ ನಾರಾಯಣನ್ ತಿರುಪತಿ ಮಾತನಾಡಿ,



ರಾಜ್ಯಪಾಲ ಆರ್.ವಿ. ಅರ್ಲೇಕರ್ ಜತೆ ವಿಜಯ್

ರಾಜ್ಯಪಾಲರು ಸಂವಿಧಾನಬದ್ಧವಾಗಿ ನಡೆದುಕೊಳ್ಳುತ್ತಿದ್ದಾರೆ. ಟಿವಿಕೆಯು ಶಾಸಕರ ಬೆಂಬಲ ತೋರಿಸಿದರೆ ಸಂವಿಧಾನದಲ್ಲಿ ತಿಳಿಸಿದಂತೆ ಸರ್ಕಾರ ರಚನೆಗೆ ಅವಕಾಶ ಸಿಗಲಿದೆ ಎಂದು ಹೇಳಿದ್ದಾರೆ. ಜತೆಗೆ ವಿಜಯ್ ಅವರ ಮೇಲೆ ಬಿಜೆಪಿ ಒತ್ತಡಹೇರುವ ಕೆಲಸ ಮಾಡುತ್ತಿದೆ ಎಂಬ ಆರೋಪವನ್ನು ತಳ್ಳಿಹಾಕಿದ್ದಾರೆ.

ವಾಟ್ಸಪ್ ಮೂಲಕ ಸಣ್ಣ ಪುಟ್ಟ ಪಕ್ಷಗಳ ಬೆಂಬಲ ಕೇಳಿದ ಟಿವಿಕೆ!

ಚೆನ್ನೈ: ಸರ್ಕಾರ ರಚನೆಗೆ ಅಗತ್ಯ ಸಂಖ್ಯಾ ಬಲದ ಕೊರತೆ ಎದುರಿಸುತ್ತಿರುವ ಅವರ ಟಿವಿಕೆ ಸಣ್ಣ ಪುಟ್ಟ ಪಕ್ಷಗಳ ಬೆಂಬಲ ಪಡೆವ ಪ್ರಯತ್ನ ಚುರುಕುಗೊಳಿಸಿದೆ. ಆದರೆ ಮೊದಲ ಹಂತದಲ್ಲಿ ಪಕ್ಷವು ಬೆಂಬಲ ಯಾಚಿಸಿ ಮಾತುಕತೆಗೆ ಆಹ್ವಾನಿಸಿದ ವೇಳೆ ವಾಟ್ಸಪ್ ಮೂಲಕ ಸಂದೇಶ ರವಾನಿಸಿದ್ದು ಎಡಪಕ್ಷಗಳನ್ನು ಕಸಿವಿಸಿಗೆ ಒಳಪಡಿಸಿತ್ತು ಎಂದು ವರದಿಗಳು ತಿಳಿಸಿವೆ.



ಸರ್ಕಾರ ರಚನೆಯಂಥ ಮಹತ್ವದ ಪ್ರಕ್ರಿಯೆಗೆ ಖುದ್ದು ಆಗಮಿಸಿ ಬೆಂಬಲ ಕೋರುವ ಬದಲು ವಾಟ್ಸಪ್ ಮೂಲಕ ಸಭೆಗೆ ಆಹ್ವಾನಿಸಲಾಗಿತ್ತು. ಇಂಥ ಅನನುಭವಿಗಳ ಜತೆ ಮಾತುಕತೆ ಸೂಕ್ತವೇ ಎಂಬ ಆಲೋಚನೆ ಎಡಪಕ್ಷಗಳನ್ನು ಕಾಡಿತ್ತು ಎನ್ನಲಾಗಿದೆ.

ಆದರೆ ಬಳಿಕ ಟಿವಿಕೆ ನಾಯಕರೇ ಎಡ ಪಕ್ಷಗಳು, ವಿಸಿಕೆ ಹಾಗೂ ಐಯುಎಂಎಲ್ ನಾಯಕರನ್ನು ಭೇಟಿ ಮಾಡಿ ಮಾತುಕತೆ ನಡೆಸಿದ್ದಾರೆ. ಟಿವಿಕೆ ಮನವಿಗೆ ಪ್ರತಿಕ್ರಿಯೆ ನೀಡಲು ಪಕ್ಷಗಳು ಕಾಲಾವಕಾಶ ಕೇಳಿವೆ.

ಎಡಿಎಂಕೆಗೆ ಡಿಸಿಎಂ, ಹುದ್ದೆ: ಟಿವಿಕೆ ಆಫರ್

ಚೆನ್ನೈ: ಎನ್‌ಡಿಎ ಮಿತ್ರಪಕ್ಷವಾದ ಎಐಎಡಿಎಂಕೆಯ 28 ಶಾಸಕರ ಗುಂಪೊಂದು ಪುದುಚೇರಿ ರೆಸಾರ್ಟ್‌ಗೆ ತೆರಳಿದ್ದು, ಟಿವಿಕೆ ಸರ್ಕಾರಕ್ಕೆ ಬೆಂಬಲ ನೀಡುವ ಸಾಧ್ಯತೆ ಇದೆ



ಎನ್ನಲಾಗಿದೆ. ಮೂಲಗಳ ಪ್ರಕಾರ ಈಗಾಗಲೇ ಟಿವಿಕೆ ಮುಖಂಡರು ಈ 28 ಶಾಸಕರ ಜತೆಗೆ ಸಂಪರ್ಕದಲ್ಲಿದ್ದಾರೆ. ಈ ಗುಂಪಿನ ನಾಯಕ ಸಿ.ವಿ.ಷಣ್ಮುಗಂ ಅವರಿಗೆ ಉಪಮುಖ್ಯಮಂತ್ರಿ ಹುದ್ದೆ ಮತ್ತು ಇತರೆ ಕೆಲವರಿಗೆ ಸಚಿವ ಹುದ್ದೆಯ ಆಫರ್ ಅನ್ನು ಟಿವಿಕೆ ನೀಡಿದೆ ಎನ್ನಲಾಗಿದೆ. ಒಂದು ವೇಳೆ ಇದು ಖಚಿತವಾದರೆ ಎಂ.ಜಿ.ರಾಮಚಂದ್ರನ್ ಕಟ್ಟಿದ, ಮಾಜಿ ಸಿಎಂ ಜಯಲಲಿತಾ ಬೆಳೆಸಿದ ಎಐಎಡಿಎಂಕೆ ಪಕ್ಷ ಎರಡು ಹೋಳಾಗುವುದು ಖಚಿತ.

ರೆಸಾರ್ಟ್ ರಾಜಕೀಯ: ಎಐಎಡಿಎಂಕೆಯ ಸಿ.ವಿ.ಷಣ್ಮುಗಂ ಮತ್ತು ಒ.ಎಸ್.ಮಣಿಯನ್ ಅವರ ನೇತೃತ್ವದಲ್ಲಿ ಈ ಶಾಸಕರು ಪುದುಚೇರಿ ರೆಸಾರ್ಟ್‌ಗೆ ತೆರಳಿದ್ದು, ಟಿವಿಕೆ ಬೆಂಬಲಿಸುವ ಪರವಾಗಿದ್ದಾರೆ.

ರಥ್ ಹತ್ಯೆ ಬೆನ್ನಲ್ಲೇ ಬಂಗಾಳ ಉದ್ವಿಗ್ನ

ಟಿಎಂಸಿ ವಿರುದ್ಧ ಭುಗಿಲೆದ್ದ ಬಿಜೆಪಿ ಆಕ್ರೋಶ | ರಾಜ್ಯಾದ್ಯಂತ ಉದ್ವಿಗ್ನತೆ ಹಬ್ಬುವ ಆತಂಕ

ಕೋಲ್ಕತಾ: ಬಿಜೆಪಿ ಸಂಭಾವ್ಯ ಮುಖ್ಯಮಂತ್ರಿ ಅಭ್ಯರ್ಥಿ ಸುವೇಂದು ಅಧಿಕಾರಿ ಆಪ್ತ ಸಹಾಯಕನ



ಭೀಕರ ಹತ್ಯೆ ಪ್ರಕರಣ ಬಂಗಾಳದಲ್ಲಿ ಉದ್ವಿಗ್ನತೆ ಪರಿಸ್ಥಿತಿ ಸೃಷ್ಟಿಸಿದೆ. ಜೊತೆಗೆ ರಾಜಕೀಯ ವೈಷಮ್ಯವು ರಾಜ್ಯಾದ್ಯಂತ ಸಂಘರ್ಷ, ರಕ್ತಪಾತಕ್ಕೆ ನಾಂದಿ ಹಾಡಬಹುದಾದ ಕಳವಳ ಉಂಟುಮಾಡಿದೆ. ಹೀಗಾಗಿ ಎಲ್ಲೆಡೆ ಬಿಗಿ ಭದ್ರತೆ ಹೆಚ್ಚಿಸಲಾಗಿದೆ.

ಬುಧವಾರ ರಾತ್ರಿ ಚಂದ್ರನಾಥ್ ರಥ್ ಹತ್ಯೆ ನಡೆದ ಮಧ್ಯಮಗ್ರಾಮದಲ್ಲಿ ಸದ್ಯ ಬಿಜೆಪಿ ಮುಖಂಡರು ಬೀಡುಬಿಟ್ಟಿದ್ದು, ಪರಿಸ್ಥಿತಿ ಶಾಂತವಾಗಿದೆ. ಆದರೆ ಮುನ್ನೆಚ್ಚರಿಕೆ ದೃಷ್ಟಿಯಿಂದ ಪೊಲೀಸರು ಮತ್ತು ಕೇಂದ್ರ ಪಡೆಗಳು ಹೆಚ್ಚಿನ ನಿಗಾ ಇಟ್ಟಿವೆ.

ರಥ್ ಹತ್ಯೆಯನ್ನು ಖಂಡಿಸಿ ಸುಮಾರು 200 ಬಿಜೆಪಿ ಕಾರ್ಯಕರ್ತರು ಸಾಲ್‌ಬೋನಿ ಮತ್ತು ಪಶ್ಚಿಮ ಮೇದಿನಿಪುರದಲ್ಲಿ ರಸ್ತೆಯನ್ನು ಬಂದ್ ಮಾಡಿ ಬೃಹತ್ ಪ್ರತಿಭಟನೆ ನಡೆಸಿದ್ದಾರೆ. ‘ಇದು ಪ್ರತ್ಯೇಕ ಕೊಲೆ ಘಟನೆಯಲ್ಲ. ರಾಜಕೀಯ ಭಯೋತ್ಪಾದನೆ. ಟಿಎಂಸಿ ಕಡೆಯವರೇ ಹತ್ಯೆ ನಡೆಸಿದ್ದಾರೆ’ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸೇನೆ, ಅಧ್ಯಾತ್ಮದ ಬಳಿಕ ರಥ್ ರಾಜಕೀಯಕ್ಕೆ

ಕೋಲ್ಕತಾ: ಚಂದ್ರನಾಥ್ ರಥ್, ಸುವೇಂದು ಅವರ ಆಪ್ತ ಸಹಾಯಕನಾಗುವ ಮುನ್ನ 2 ದಶಕಗಳ ಕಾಲ ಭಾರತೀಯ ವಾಯುಪಡೆಯಲ್ಲಿ ಸೇವೆ ಸಲ್ಲಿಸಿದ್ದರು. ವಾಯುಪಡೆಯಿಂದ ನಿವೃತ್ತಿ ಬಳಿಕ ಕೆಲ ಕಾಲ ಕಾರ್ಪೊರೆಟ್ ಕಂಪನಿಯಲ್ಲೂ ಕೆಲಸ ಮಾಡಿದ್ದರು. ಈ ನಡುವೆ ಅಧ್ಯಾತ್ಮದತ್ತಲೂ ಒಲವು ತೋರಿದ್ದರು. ಇಂತಿದ್ದ ಅವರು, 2019ರಲ್ಲಿ ಸುವೇಂದು ಟಿಎಂಸಿ ಸರ್ಕಾರದಲ್ಲಿ ಮಂತ್ರಿಯಾಗಿದ್ದಾಗ ಅವರ ತಂಡ ಸೇರಿಕೊಂಡಿದ್ದರು. ಅಧಿಕಾರಿ ಬಿಜೆಪಿಗೆ ಬಂದಬಳಿಕವೂ ಅವರ ಜತೆಗೇ ಇದ್ದರು. ಕಾಲಕ್ರಮೇಣ ಅವರ ಕೆಲಸಗಳನ್ನೆಲ್ಲಾ ನಿಭಾಯಿಸಲು ಶುರು ಮಾಡಿ, ಸುವೇಂದು ಅಧಿಕಾರಿಯ ನಂಬಿಕಸ್ಥನಾದರು. ಈ ಬಾರಿಯ ಚುನಾವಣೆಯಲ್ಲಿ ಮಮತಾ ಬ್ಯಾನರ್ಜಿ ವಿರುದ್ಧ ಅಧಿಕಾರಿ ಗೆಲ್ಲುವಲ್ಲಿ ರಥ್ ಮಹತ್ವದ ಪಾತ್ರ ವಹಿಸಿದ್ದರು ಎಂದು ಮೂಲಗಳು ತಿಳಿಸಿವೆ.

ಬಿಜೆಪಿ ಗುಂಪಿನ ಮೇಲೆ ಕಚ್ಚಾ ಬಾಂಬ್ ದಾಳಿ, 5 ಕಾರ್ಯಕರ್ತರಿಗೆ ಗಾಯ

ಕೋಲ್ಕತಾ: ಸುವೇಂದು ಅಧಿಕಾರಿ ಆಪ್ತನನ್ನು ದುಷ್ಕರ್ಮಿಗಳು ಗುಂಡಿಕ್ಕಿ ಹತ್ಯೆ ಮಾಡಿದ ಕೆಲವೇ ಗಂಟೆಗಳ ಬಳಿಕ ಉತ್ತರ 24 ಪರಗಣ ಜಿಲ್ಲೆಯಲ್ಲಿ ಬಿಜೆಪಿ ಕಾರ್ಯಕರ್ತರ ಗುಂಪಿನ ಮೇಲೆ ಕಚ್ಚಾ ಬಾಂಬ್ ದಾಳಿಯಾಗಿದೆ. ಘಟನೆಯಲ್ಲಿ ಐವರು ಕಾರ್ಯಕರ್ತರು ಗಾಯಗೊಂಡಿದ್ದಾರೆ. ಟಿಎಂಸಿಯೇ ದಾಳಿ ನಡೆಸಿದೆ ಎಂದು ಬಿಜೆಪಿ ಆರೋಪಿಸಿದೆ.

ಪಾಣಿಹಾಟಿಯ ಸೇಂಟ್ ಕ್ಸೇವಿಯರ್ ಇನ್ಸ್ಟಿಟ್ಯೂಟ್ ಬಳಿಯ ವಾರ್ಡ್ ನಂ.2ರ ದತ್ತಾ ರೋಡ್‌ನಲ್ಲಿ ಸ್ಥಳೀಯರ ಜತೆ ಬಿಜೆಪಿ ಕಾರ್ಯಕರ್ತರು ಚರ್ಚೆ ನಡೆಸುತ್ತಿದ್ದರು. ಈ ವೇಳೆ ಬೈಕ್‌ನಲ್ಲಿ ಬಂದ ದುಷ್ಕರ್ಮಿಗಳ ತಂಡವು ಗುಂಪಿನ ಮೇಲೆ ಕಚ್ಚಾ ಬಾಂಬ್ ಎಸೆದು ಪರಾರಿಯಾಗಿದೆ. ಈ ವೇಳೆ ಐವರು ಬಿಜೆಪಿ ಕಾರ್ಯಕರ್ತರಿಗೆ ಗಾಯಗಳಾಗಿದ್ದು, ಅವರನ್ನು ಆರ್‌ಜಿ ಕರ್ ಆಸ್ಪತ್ರೆಗೆ ಸಾಗಿಸಲಾಗಿದೆ.

ಬಂಗಾಳದಲ್ಲೀಗ ಕೆರೆಗಳ ನಿಯಂತ್ರಣಕ್ಕಾಗಿ ಹಿಂಸೆ!

ಟಿಎಂಸಿ ನಿಯಂತ್ರಣದಲ್ಲಿದ್ದ ಕೆರೆಗಳ ಮುಕ್ತಿಗೆ ಕೂಗು | ಚುನಾವಣೆ ಬಳಿಕ ಭುಗಿಲೆದ್ದ ಹಿಂಸೆ | 5 ಸಾವು, 400 ಜನ ಸೆರೆ

ಕೋಲ್ಕತಾ: ಚುನಾವಣೆ ಬೆನ್ನಲ್ಲೇ ಪ.ಬಂಗಾಳ ಭಾರೀ ಹಿಂಸಾಚಾರಕ್ಕೆ ಸಾಕ್ಷಿಯಾಗಿದೆ. ಟಿಎಂಸಿ ಆಡಳಿತದಲ್ಲಿ ಶೋಷಣೆಗೊಳಗಾದವರೆಲ್ಲ ಈಗ ಅವರ ವಿರುದ್ಧ ತಿರುಗಿಬಿದ್ದಿದ್ದು, ಕಳೆದ 48 ಗಂಟೆಗಳಲ್ಲಿ, ಚಂದ್ರನಾಥ್ ರಥ್ ಸೇರಿ 5 ಜನ ಹಿಂಸಾಚಾರಕ್ಕೆ ಬಲಿಯಾಗಿದ್ದಾರೆ. ಮತ್ತೊಂದೆಡೆ ರಾಜ್ಯದಲ್ಲಿ ಕೆರೆಗಳ ಮೇಲಿನ ನಿಯಂತ್ರಣಕ್ಕಾಗಿ ಕಾದಾಟ ಶುರುವಾಗಿದೆ.

‘ಮೇ 4ರಂದು ಫಲಿತಾಂಶ ಘೋಷಣೆಯಾಗುತ್ತಿದ್ದಂತೆ ರಾಜ್ಯಾದ್ಯಂತ ಸುಮಾರು 400 ಜನರನ್ನು ಬಂಧಿಸಲಾಗಿದೆ. 1000ಕ್ಕೂ ಹೆಚ್ಚು ಮಂದಿಯನ್ನು ವಶಕ್ಕೆ ಪಡೆಯಲಾಗಿದೆ. 200 ಎಫ್‌ಐಆರ್‌ಗಳು ದಾಖಲಾಗಿವೆ’ ಎಂದು ಹಂಗಾಮಿ ಪೊಲೀಸ್ ಮಹಾನಿರ್ದೇಶಕ ಸಿದ್ಧನಾಥ್ ಗುಪ್ತಾ ಹೇಳಿದ್ದಾರೆ.

2021ರ ವಿಧಾನಸಭೆ ಚುನಾವಣೆ ವೇಳೆ 1900 ಹಿಂಸಾಚಾರ ಪ್ರಕರಣ ನಡೆದು 29 ಮಂದಿ ಸಾವನ್ನಪ್ಪಿದ್ದರು. 345 ಜನರ ಬಂಧನವಾಗಿತ್ತು. ಈ ಭಾರಿ ಭದ್ರತೆ ಹೆಚ್ಚಿದ್ದ ಕಾರಣ ಹಿಂಸೆ, ಸಾವು, ನೋವಿನಲ್ಲಿ ಇಳಿಕೆ ಕಂಡುಬಂದಿದೆ.

ಕೆರೆಗಾಗಿ ಹೊಡೆದಾಟ: ಮೀನುಗಾರಿಕೆ ಬಂಗಾಳಿಗರ ಆದಾಯದ ಮೂಲಗಳಲ್ಲಿ ಒಂದು. ಹೀಗಾಗಿ ರಾಜ್ಯದಲ್ಲಿ ಪಿಎಂ ಮತ್ಸ್ಯ ಸಂಪದ ಯೋಜನೆಯಡಿ ಸಾವಿರಾರು ಕೆರೆ ನಿರ್ಮಿಸಲಾಗಿದೆ. ಇವು 2.6 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ವಿಸ್ತರಿಸಿವೆ. ಕಳೆದ 15 ವರ್ಷಗಳಿಂದ ರಾಜ್ಯದಲ್ಲಿ ಟಿಎಂಸಿ ಆಡಳಿತ ಇದ್ದಕಾರಣ, ಅವುಗಳ ನಿಯಂತ್ರಣವು ಸಂಪೂರ್ಣವಾಗಿ ಟಿಎಂಸಿ ಕಡೆಯವರ ಕೈಲಿತ್ತು ಹಾಗೂ ಬೇರಾರಿಗೂ ಅವುಗಳ ಬಳಕೆಗೆ ಅವಕಾಶ ಇರಲಿಲ್ಲ. ಇದೀಗ ಪಕ್ಷವು ಅಧಿಕಾರ ಕಳೆದುಕೊಳ್ಳುತ್ತಿದ್ದಂತೆ ಆ ಕೊಳಗಳನ್ನು ಸಾರ್ವಜನಿಕರಿಗೆ ಮುಕ್ತ ಮಾಡಬೇಕೆಂಬ ಆಗ್ರಹ ಜೋರಾಗಿದೆ.

ಇದೇ ವಿಷಯಕ್ಕೆ ಸಂದೇಶ್‌ಖಾಲಿಯಲ್ಲಿ ಟಿಎಂಸಿ ಮತ್ತು ಬಿಜೆಪಿ ಕಾರ್ಯಕರ್ತರ ನಡುವೆ ಸಂಘರ್ಷ ನಡೆದಿದೆ. ಆ ವೇಳೆ ನಡೆದ ಗುಂಡಿನ ಚಕಮಕಿಯಿಂದಾಗಿ 5 ಭದ್ರತಾ ಸಿಬ್ಬಂದಿಗೆ ಗಾಯವಾಗಿದೆ.

ಕಾರ್ಯಕರ್ತರಿಗೆ ಬಿಜೆಪಿ ಎಚ್ಚರಿಕೆ: ಟಿಎಂಸಿ ಕಾರ್ಯಕರ್ತರ ಮೇಲೆ ಬಿಜೆಪಿಯವರು ಹಲ್ಲೆ ನಡೆಸುತ್ತಿದ್ದಾರೆ ಎಂಬ ಆರೋಪಗಳ ನಡುವೆಯೇ, ‘ಯಾರಾದರೂ ಇಂತಹ ಕೃತ್ಯದಲ್ಲಿ ಭಾಗಿಯಾದಲ್ಲಿ ಪಕ್ಷದಿಂದ ತೆಗೆದುಹಾಕಲಾಗುವುದು’ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಸಮೀಕ್ ಭಟ್ಟಾಚಾರ್ಯ ಎಚ್ಚರಿಸಿದ್ದಾರೆ.

ಇಂದು ಬಂಗಾಳ ಸಿಎಂ ಆಯ್ಕೆ, ನಾಳೆ ಪ್ರಮಾಣ ವಚನ ಸ್ವೀಕಾರ


ಸುವೇಂದು, ಘೋಷ್, ಅಗ್ನಿಮಿತ್ರಾ, ರೂಪಾ ರೇಸಲ್ಲಿ ಚೊಚ್ಚಲ ಅಧಿಕಾರ ಸ್ವೀಕಾರದಲ್ಲಿ ಮೋದಿ ಭಾಗಿ

ಕೋಲ್ಕತಾ: ಪಶ್ಚಿಮ ಬಂಗಾಳದಲ್ಲಿ ಇದೇ ಮೊದಲ ಸಲ ಅಧಿಕಾರಕ್ಕೆ ಬರುವಲ್ಲಿ ಯಶಸ್ವಿಯಾಗಿರುವ ಬಿಜೆಪಿ, ಶುಕ್ರವಾರ ತನ್ನ ನೂತನ ಶಾಸಕಾಂಗ ಪಕ್ಷದ ನಾಯಕನನ್ನು ಆಯ್ಕೆ ಮಾಡಲಾಗಿದೆ. ಈ ಹಿನ್ನೆಲೆಯಲ್ಲಿ ವೀಕ್ಷಕರಾಗಿ ನೇಮಕವಾಗಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ ಶುಕ್ರವಾರ ಕೋಲ್ಕತಾಗೆ ಆಗಮಿಸಲಿದ್ದಾರೆ. ಸಂಜೆ 4 ಗಂಟೆಗೆ ಶಾಸಕಾಂಗ ಪಕ್ಷದ ಸಭೆ ನಡೆಯಲಿದೆ. ಆ ಬಳಿಕ ಹೊಸ ಸಿಎಂ ಹೆಸರು ಘೋಷಣೆಯಾಗಲಿದೆ.

ಪ. ಬಂಗಾಳ ಸಿಎಂ ಮಮತಾ ಬ್ಯಾನರ್ಜಿ ಅವರನ್ನು ಸತತ 2ನೇ ಬಾರಿ ಮಣಿಸಿರುವ ಸುವೇಂದು ಅಧಿಕಾರಿ, ಬಿಜೆಪಿ ಮಾಜಿ ರಾಜ್ಯಾಧ್ಯಕ್ಷ ದಿಲೀಪ್ ಘೋಷ್, ಮಹಿಳಾ ನಾಯಕರಾದ ಅಗ್ನಿಮಿತ್ರಾ ಪೌಲ್ ಮತ್ತು ‘ಮಹಾಭಾರತ’ ಧಾರಾವಾಹಿಯ ದ್ರೌಪದಿ ಖ್ಯಾತಿಯ ರೂಪಾ ಗಂಗೂಲಿ ಹೆಸರು ಸಿಎಂ ಸ್ಥಾನಕ್ಕೆ ಕೇಳಿಬರುತ್ತಿದೆ.



ಸುವೇಂದು



ದಿಲೀಪ್ ಘೋಷ್



ಅಗ್ನಿಮಿತ್ರಾ ಪೌಲ್



ರೂಪಾ ಗಂಗೂಲಿ

ಮೋದಿ ಭಾಗಿ: ನೂತನ ಸರ್ಕಾರದ ಪ್ರಮಾಣ ವಚನ ಸ್ವೀಕಾರ ಸಮಾರಂಭ ಮೇ 9ರಂದು ನಡೆಯಲಿದೆ. ಇದರಲ್ಲಿ ಪ್ರಧಾನಿ ಮೋದಿ ಆದಿಯಾಗಿ ಕೇಂದ್ರ ಸರ್ಕಾರದ ಹಲವು ಸಚಿವರು, ಬಿಜೆಪಿ, ಎನ್‌ಡಿಎ ಆಡಳಿತದ ಸರ್ಕಾರದ ಮುಖ್ಯಮಂತ್ರಿಗಳು, ಹತ್ತಾರು ಸಚಿವರು ಭಾಗಿಯಾಗಲಿದ್ದಾರೆ.

ಮೇ 12ಕ್ಕೆ ಅಸ್ಸಾಂ ಬಿಜೆಪಿ ಸರ್ಕಾರ ಪ್ರಮಾಣ: ಹಿಮಂತ ಮತ್ತೆ ಸಿಎಂ?

ಗುವಾಹಟಿ: ಅಸ್ಸಾಂನಲ್ಲಿ ಸತತ 3ನೇ ಬಾರಿಗೆ ಅಧಿಕಾರಕ್ಕೆ ಬಂದಿರುವ ನೂತನ ಬಿಜೆಪಿ ಸರ್ಕಾರದ ಪ್ರಮಾಣ ವಚನ ಸ್ವೀಕಾರ ಸಮಾರಂಭ ಮೇ 12ರಂದು ಖಾನಪರದ ಪಶು ವೈದ್ಯಕೀಯ ಮೈದಾನದಲ್ಲಿ ನಡೆಯಲಿದೆ. ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಸಚಿವರು, ಬಿಜೆಪಿ ಆಡಳಿತದ ರಾಜ್ಯಗಳ ಮುಖ್ಯಮಂತ್ರಿಗಳು ಮತ್ತು ಉಪ ಮುಖ್ಯಮಂತ್ರಿಗಳು, ಕೈಗಾರಿಕಾ ಪ್ರತಿನಿಧಿಗಳು ಸಮಾರಂಭದಲ್ಲಿ ಭಾಗವಹಿಸುವ ನಿರೀಕ್ಷೆಯಿದೆ.

ಹಾಲಿ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಅವರೇ ಹೊಸ ಸರ್ಕಾರದ ಚುಕ್ಕಾಣಿ ಹಿಡಿಯುವುದು ಖಚಿತವಾಗಿದೆ. ಈ ನಡುವೆ ಈ ಹಿಂದಿನ ಸರ್ಕಾರದ ಅವಧಿ ಮುಗಿದ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಹಿಮಂತ್ ಬಿಸ್ವಾ ಶರ್ಮಾ, ರಾಜ್ಯಪಾಲ ಲಕ್ಷ್ಮಣ್ ಪ್ರಸಾದ್ ಆಚಾರ್ಯ ಅವರಿಗೆ ರಾಜೀನಾಮೆ ಸಲ್ಲಿಸಿದರು. ಆದರೆ ರಾಜ್ಯಪಾಲರು ಉಸ್ತುವಾರಿ ಸರ್ಕಾರದ ಮುಖ್ಯಸ್ಥರಾಗಿ ಮುಂದುವರಿಯುವಂತೆ ಕೇಳಿಕೊಂಡರು.

ಪ್ರತೀಕಾರ | ಪಾಕ್ ಪೋಷಣೆಯ ಯಾವ ಉಗ್ರತಾಣವೂ ಸುರಕ್ಷಿತವಲ್ಲ | ಆಪರೇಷನ್ ಸಿಂದೂರ ವರ್ಷಾಚರಣೆ ಹಿನ್ನೆಲೆಯಲ್ಲಿ ಭಾರತೀಯ ಸೇನೆ ಗುಡುಗು

ಸಿಂದೂರಕ್ಕೆ ಪಾಕ್‌ನ 11 ನೆಲೆ, 13 ವಿಮಾನ ನಾಶ: ಸೇನೆ

ಜೈಪುರ: ಪಾಕಿಸ್ತಾನಕ್ಕೆ ಮರ್ಮಾಘಾತ ನೀಡಿ ವಿಶ್ವದೆದುರು ಭಾರತ ತನ್ನ ಸೇನಾಶಕ್ತಿ ಅನಾವರಣ ಮಾಡಿದ ಆಪರೇಷನ್ ಸಿಂದೂರಕ್ಕೆ ವರ್ಷ ತುಂಬಿದ ಹಿನ್ನೆಲೆಯಲ್ಲಿ ದೇಶವು ಮತ್ತೊಮ್ಮೆ ವೈರಿರಾಷ್ಟ್ರ ಮತ್ತು ಅದು ಸೆರಗಲ್ಲಿಟ್ಟುಕೊಂಡು ಸಲಹುತ್ತಿರುವ ಉಗ್ರರಿಗೆ ಉಗ್ರ ಎಚ್ಚರಿಕೆ ನೀಡಿದೆ.

ಮಾಧ್ಯಮ ಸಂವಾದದಲ್ಲಿ ಮಾತನಾಡಿದ ಏರ್ ಮಾರ್ಷಲ್ ಎ.ಕೆ. ಭಾರ್ತಿ, ‘ಪಾಕ್‌ನ 11 ವಾಯುನೆಲೆ, 13 ಯುದ್ಧವಿಮಾನ ಹೊಡೆದುರುಳಿಸಲಾಯಿತು. 300 ಕಿ.ಮೀ. ದೂರದಲ್ಲಿದ್ದ ಒಂದು ವಿಮಾನವೂ ನಾಶವಾಗಿದೆ. ಈಗಲೂ ಭಾರತೀಯ ವಾಯುಪಡೆಯ ಕಣ್ಣು ಚೀನಾ, ಪಾಕಿಸ್ತಾನದ ಮೇಲಿದೆ. ಕಳೆದುಹೋಗಿರುವ ಪ್ರಾಣವನ್ನು ಮರಳಿ ತರಲಾಗದಿದ್ದರೂ ಅಂತಹ ಘಟನೆ ನಡೆಯದಂತೆ ತಡೆಯಬಹುದು’ ಎಂದರು.

ಅಲ್ಪಾವಧಿಯಲ್ಲೇ ಯುದ್ಧ ಅಂತ್ಯ: ‘ಗಡಿ ನಿಯಂತ್ರಣ ರೇಖೆಯುದ್ದಕ್ಕೂ ಹರಡಿರುವ ಯಾವ ಉಗ್ರತಾಣಗಳೂ ಸುರಕ್ಷಿತವಲ್ಲ’ ಎಂದು ಡಿಜಿಎಂಒ ರಾಜೀವ್ ಘಾಯ್ ಹೇಳಿದ್ದಾರೆ. ‘ಉಗ್ರರ ನಾಶವು ಈಗಿನ ನ್ಯೂ ನಾರ್ಮಲ್ ಆಗಿದ್ದು, ಅದನ್ನು ಹೇಗೆ, ಯಾವಾಗ ಮಾಡಬೇಕೆಂಬುದು ನಮ್ಮ ನಿರ್ಧಾರವಾಗಿರುತ್ತದೆ. ಸಿಂದೂರವು ಕೇವಲ ಆರಂಭ. ಉಗ್ರನೆಲೆಗಳನ್ನು ಗಡಿಯಿಂದ ದೂರಕ್ಕೆ ಸ್ಥಳಾಂತರಿಸಲಾಗಿದೆಯಾದರೂ ಅವು ನಮ್ಮ ದಾಳಿಯ ವ್ಯಾಪ್ತಿಯಲ್ಲೇ ಇವೆ’ ಎಂದು, ಸಿಂದೂರ ಕಾರ್ಯಾಚರಣೆ ನಿಲ್ಲಿಸುವಂತೆ ಪಾಕ್ ತನ್ನ ಡಿಜಿಎಂಒ ಮೂಲಕ ಮನವಿ ಮಾಡಿದ ಸಂದರ್ಭದಲ್ಲಿ ಅವರೊಂದಿಗೆ ಮಾತುಕತೆ ನಡೆಸಿದ್ದ ಘಾಯ್ ಹೇಳಿದ್ದಾರೆ.

ಇದೇ ವೇಳೆ ಮಾತಾಡಿದ ವಿದೇಶಾಂಗ ಇಲಾಖೆ ವಕ್ತಾರ ರಣಧೀರ್ ಜೈಸ್ವಾಲ್, ‘ಪಾಕ್ ಹಲವು ವರ್ಷಗಳಿಂದ ಉಗ್ರವಾದವನ್ನು ಪೋಷಿಸುತ್ತಲೇ ಬಂದಿದೆ. ಅದರಿಂದ ರಕ್ಷಿಸಿಕೊಳ್ಳುವ ಹಕ್ಕು ಭಾರತಕ್ಕಿದೆ. ಉಗ್ರವಾದದ ವಿರುದ್ಧ ಹೋರಾಟ ಮುಂದುವರಿಯುತ್ತದೆ’ ಎಂದರು.

ಮೋದಿ, ಶಾ ಜಾಲತಾಣದಲ್ಲಿ ಸಿಂದೂರ ಲೋಗೋ

ನವದೆಹಲಿ: ಪಹಲ್ಗಾಂ ಉಗ್ರ ದಾಳಿಗೆ ಪ್ರತೀಕಾರವಾಗಿ, ಪಾಕಿಸ್ತಾನದ ವಿರುದ್ಧ ಭಾರತ ನಡೆಸಿದ ಆಪರೇಷನ್ ಸಿಂದೂರಕ್ಕೆ 1 ವರ್ಷ ಪೂರ್ಣಗೊಂಡ ಹಿನ್ನೆಲೆಯಲ್ಲಿ ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ರಕ್ಷಣಾ ಸಚಿವ ರಾಜನಾಥ್ ಸಿಂಗ್ ಸೇರಿದಂತೆ ಹಲವು ನಾಯಕರು ತಮ್ಮ ಸಾಮಾಜಿಕ ಜಾಲತಾಣಗಳ ಮುಖಚಿತ್ರಗಳನ್ನು ಆಪರೇಷನ್ ಸಿಂದೂರದ ಲೋಗೋಗೆ ಬದಲಿಸಿದ್ದಾರೆ. ಪ್ರಧಾನಿ ಮೋದಿ ತಮ್ಮ ಫೇಸ್ಬುಕ್, ಇನ್‌ಸ್ಟಾಗ್ರಾಂ, ಎಕ್ಸ್, ವಾಟ್ಸಾಪ್ ಚಾನೆಲ್ ಸೇರಿದಂತೆ ಇತರ ಸಾಮಾಜಿಕ ಮಾಧ್ಯಮಗಳಲ್ಲಿ



ಸಿಂದೂರದ ಲೋಗೊವನ್ನು ಮುಖಚಿತ್ರವನ್ನಾಗಿ ಅಳವಡಿಸಿದ್ದಾರೆ. ಬಳಿಕ ಟ್ವೀಟ್ ಮಾಡಿರುವ ಅವರು, ‘ಸಿಂದೂರದ ಸಮಯದಲ್ಲಿ ಹೋರಾಡಿದ ನಮ್ಮ ಪಡೆಗಳು ಮತ್ತು ಅವರ ಯಶಸ್ಸಿಗೆ ಗೌರವದ ಸಂಕೇತವಾಗಿ, ನಾವೆಲ್ಲರೂ ಸಾಮಾಜಿಕ ಮಾಧ್ಯಮಗಳಲ್ಲಿ ನಮ್ಮ ಚಿತ್ರಗಳನ್ನು ಸಿಂದೂರದ ಲೋಗೊಗೆ ಬದಲಾಯಿಸೋಣ’ ಎಂದು ಕರೆ ನೀಡಿದ್ದಾರೆ.

ಸಮರ ಸಂಧಾನ ಪ್ರಯತ್ನ

ಅಮೆರಿಕ ಪ್ರಸ್ತಾವನೆ ಪರಿಶೀಲನೆ: ಇರಾನ್

ದುಬೈ: ಹಲವು ವಿಫಲ ಮಾತುಕತೆಗಳು, ತಿರಸ್ಕೃತ ಪ್ರಸ್ತಾವನೆಗಳ ಬಳಿಕ ಇದೀಗ ಅಮೆರಿಕದ ಕಡೆಯಿಂದ ಬಂದಿರುವ ಯುದ್ಧ ಸ್ಥಗಿತ ಪ್ರಸ್ತಾವನೆಯನ್ನು ಪರಿಶೀಲಿಸುತ್ತಿರುವುದಾಗಿ ಇರಾನ್ ಹೇಳಿದೆ. ಹೋರ್ಮುಜ್ ಜಲಸಂಧಿಯನ್ನು ಹಡಗುಗಳ ಓಡಾಟಕ್ಕೆ ಮುಕ್ತ ಮಾಡುವುದು ಸೇರಿದಂತೆ ಹಲವು ಷರತ್ತುಗಳಿರುವ ಈ ಪ್ರಸ್ತಾವನೆಗಳನ್ನು ಒಪ್ಪಿಕನದಕ್ಕೆ ಅಂತ್ಯ ಹಾಡದಿದ್ದರೆ ಇರಾನ್ ಮೇಲೆ ಬಾಂಬ್‌ಗಳ ಮಳೆಗರೆಯುವ ಬೆದರಿಕೆ ಒಡ್ಡಿದ್ದರು. ಅದರ ಬೆನ್ನಲ್ಲೇ ಈ ಬೆಳವಣಿಗೆಯಾಗಿದೆ. ಇತ್ತೀಚೆಗಷ್ಟೇ ಯುದ್ಧ ನಿಲ್ಲಿಸುವ ನಿಟ್ಟಿನಲ್ಲಿ ಅಮೆರಿಕ ಮತ್ತು ಇರಾನ್ ಒಂದು ಪುಟದ ತಿಳಿವಳಿಕೆ ಪತ್ರಕ್ಕೆ ಸಹಿ ಹಾಕಲು ಮುಂದಾಗಿವೆ ಎನ್ನಲಾಗಿತ್ತು.

8 ವಾರ ಹಿಂದಷ್ಟೇ ಪಕ್ಷಕ್ಕೆ

ನಿತೀಶ್ ಪುತ್ರ ಈಗ ಬಿಹಾರದ ಸಚಿವ

ಪಟನಾ: ಬಿಹಾರದ ನಿರ್ಗಮಿತ ಸಿಎಂ, ರಾಜ್ಯಸಭಾ ಸಂಸದ ನಿತೀಶ್ ಕುಮಾರ್ ಅವರ ಪುತ್ರ ನಿಶಾಂತ್ ಕುಮಾರ್, ಮಾಜಿ ಉಪಮುಖ್ಯಮಂತ್ರಿ ವಿಜಯ್ ಕುಮಾರ್



ಸಿನ್ಹಾ, ಮಾಜಿ ಸಚಿವ ಅಶೋಕ್ ಚೌಧರಿ ಸೇರಿದಂತೆ 31 ಶಾಸಕರು ಸಾಮ್ರಾಟ್ ಚೌಧರಿ ನೇತೃತ್ವದ ಸಂಪುಟಕ್ಕೆ ಸಚಿವರಾಗಿ ಗುರುವಾರ ಪ್ರಮಾಣ ವಚನ ಸ್ವೀಕರಿಸಿದರು.

ವಿಶೇಷವೆಂದರೆ ನಿತೀಶ್ ಕುಮಾರ್ ಅವರ ಪುತ್ರ ಕೇವಲ 8 ವಾರಗಳ ಹಿಂದಷ್ಟೇ ಜೆಡಿಯು ಪಕ್ಷ ಸೇರಿದ್ದರು.

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

ಬೆವಿಕಂ BESCOM

(ಸಂಪೂರ್ಣವಾಗಿ ಕರ್ನಾಟಕ ರಾಜ್ಯ ಸರ್ಕಾರ ಸ್ವಾಮ್ಯಕ್ಕೆ ಒಳಪಟ್ಟಿದೆ)

(CIN-U04010KA2002SGC030438)

ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ)

ಮುಖ್ಯ ಇಂಜಿನಿಯರ್ (ವಿ), ಬೆಂಗಳೂರು ಗ್ರಾಮಾಂತರ ಪ್ರದೇಶ ವಲಯ, ಬೆಸ್ಕಾಂ, ಬೆಂಗಳೂರು ಇವರು ಕೆಪಿಪಿಪಿ ಪೋರ್ಟಲ್ ಮೂಲಕ ದ್ವಿ ಲಕೋಟೆ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಿದೆ: Enq No & Date: CEE/BRAZ/SEE(O)/AEE-1/Enq No.ET 01/2026-27 dated: 05-05-2026. ವಿವರ: **ಬೆಂಗಳೂರು ಗ್ರಾಮಾಂತರ ವೃತ್ತ ಮತ್ತು ಕೋಲಾರ ವೃತ್ತ, ಬೆಸ್ಕಾಂನ ಸಿ,ಒ&ಎಂ, ಉಪವಿಭಾಗಗಳಿಗೆ ಒಂದು ವರ್ಷದ ಅವಧಿಗೆ ಅಂದರೆ ಏಜೆನ್ಸಿಯ ಮೂಲಕ ಗುತ್ತಿಗೆ ನೀಡಲಾದ ದಿನಾಂಕ ದಿಂದ 81 ಸಂಖ್ಯೆಯ ತಾತ್ಕಾಲಿಕ ಭದ್ರತಾ ಸಿಬ್ಬಂದಿ ಸೇವೆಗಳನ್ನು (ಬಂದೂಕು ಇಲ್ಲದೆ) ಒದಗಿಸುವುದು.** ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತ : **ರೂ.2,24,37,825/-**. ಒಪ್ಪಂದದ ಅವಧಿ: **ಒಂದು ವರ್ಷ.**

ಎ) ಬಿಡ್ ದಾಖಲಾತಿಗಳ ಲಭ್ಯತೆ **ದಿನಾಂಕ: 08-05-2026 ಅಥವಾ ನಂತರ.** ಬಿ) ಪೂರ್ವ ಬಿಡ್ ಸಭೆ: **20-05-2026 ಬೆಳಗ್ಗೆ 11:00 ಗಂಟೆಗೆ.** ಸಿ) ವಿವರಗಳನ್ನು ಸಲ್ಲಿಸಲು ಕೊನೆಯ **ದಿನಾಂಕ: 21-05-2026 ಸಂಜೆ 5:00 ಗಂಟೆಯವರೆಗೆ. ಡಿ)** ಬಿಡ್ ದಾಖಲೆಗಳನ್ನು ಸಲ್ಲಿಸಲು ಕೊನೆಯ **ದಿನಾಂಕ: 06-06-2026 ಸಂಜೆ 5:00 ಗಂಟೆಗೆ.** ಇ) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ ಮತ್ತು ಸಮಯ: 08-06-2026 ಸಂಜೆ 5:00 ಗಂಟೆಯವರೆಗೆ.** ಇಎಂಡಿ ಮೊತ್ತ: **ರೂ.3,36,567/-.**

ಟೆಂಡರ್ ಅನ್ನು ಕೆಪಿಪಿ ಪೋರ್ಟಲ್ ವೆಬ್‌ಸೈಟ್ **http://kppp.karnataka.gov.in** ಮೂಲಕ **08-05-2026 ರಂದು** ಅಥವಾ ನಂತರ ಪಡೆಯಬಹುದು. ಇಚ್ಛೆಯುಳ್ಳ ಬಿಡ್ಡರ್‌ಗಳು ಕೆಪಿಪಿ ಪೋರ್ಟಲ್‌ನಲ್ಲಿ ನೊಂದಾಯಿಸಿಕೊಳ್ಳಬಹುದು ಹಾಗೂ ಬಿಡ್ಡರ್‌ಗಳು ಕೆಪಿಪಿಪಿ ಸಹಾಯವಾಣಿ ಕೇಂದ್ರದ ದೂರವಾಣಿ ಸಂಖ್ಯೆ **+91-8046010000 +91-8068948777** ದಿಂದ ಮಾರ್ಗದರ್ಶನ ಪಡೆಯಬಹುದು. ಇ-ಮೇಲ್: **support@eprochelpdesk.com**

ಸಹಿ/- ಮುಖ್ಯ ಇಂಜಿನಿಯರ್ (ವಿ)
ಬಿಆರ್‌ಎಜಡ್,
ಬೆವಿಕಂ, ಬೆಂಗಳೂರು-44.

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆ ಮಾಡಿ: 1912
ಬೆಸ್ಕಾಂ ಮಿತ್ರ Mobile APP ಡೌನ್‌ಲೋಡ್ ಮಾಡಿಕೊಳ್ಳಿ.

ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ

ಕಹಾಮ ಸಂಕೀರ್ಣ, ಡಾ|| ಎಂ.ಹೆಚ್.ಮರಿಗೌಡ ರಸ್ತೆ, ಬೆಂಗಳೂರು–560029.
ದೂರವಾಣಿ ಸಂಖ್ಯೆ: 080–25536625 / 25536789 ಫ್ಯಾಕ್ಸ್: 080–25536105 ಇಮೇಲ್: kmfengg@gmail.com

ಸಂಖ್ಯೆ:-ಕಹಾಮ/ಅಭಿ/ಪ.ಆ.ಘ-ಗುಬ್ಬಿ/ಕಟ್ಟಡಗಳ ವಿಸ್ತರಣೆ ಮತ್ತಿತ್ತರೆ ಕೆಲಸಗಳು/02302/26–27 ದಿನಾಂಕ: 07.05.2026

ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಅಡಿಯಲ್ಲಿ ಟೆಂಡರ್ ಪ್ರಕಟಣೆ

ಕರ್ನಾಟಕ ಸಹಕಾರ ಹಾಲು ಮಹಾಮಂಡಳವು ಕೆ.ಪಿ.ಡಬ್ಲ್ಯೂಡಿ/ಸಿ.ಪಿ.ಡಬ್ಲ್ಯೂಡಿ/ಎಂ.ಇ.ಎಸ್ ಅಡಿಯಲ್ಲಿ ನೋಂದಾಯಿಸಿದ ಅರ್ಹ ಗುತ್ತಿಗೆದಾರರು / ಸಂಸ್ಥೆಗಳಿಂದ ಈ ಕೆಳಗಿನ ಕೋಷ್ಠಕದಲ್ಲಿ ನೀಡಿರುವ ಕೆಲಸಕ್ಕಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮುಖೇನ ದ್ವಿಲಕೋಟೆ ಪದ್ಧತಿಯ ಟೆಂಡರ್‌ನ್ನು (Technical and Financial) ಆಹ್ವಾನಿಸಲಾಗಿದೆ. ಆಸಕ್ತರು ವೆಬ್ ಸೈಟ್ **http://kppp.karnataka.gov.in** ಮೂಲಕ ಟೆಂಡರನ್ನು ಸಲ್ಲಿಸಬಹುದಾಗಿದೆ. **(Help desk e-mail: support@eprochelpdesk.com and helpline No: +91-804601000, +91-8068948777).**

ಕ್ರ. ಸಂ.	ಕಾಮಗಾರಿಯ ಹೆಸರು	ಅಂದಾಜು ಮೊತ್ತ ರೂ.	ಇ.ಎಂ.ಡಿ. ರೂ.	ಮುಕ್ತಾಯದ ಅವಧಿ
1	ಕಹಾಮದ ಗುಬ್ಬಿ ಪಶು ಆಹಾರ ಘಟಕದಲ್ಲಿ ಆಡಳಿತ ಕಟ್ಟಡದ ವಿಸ್ತರಣೆ/1ನೇ ಮಹಡಿ ನಿರ್ಮಾಣ ಮತ್ತು ಮಾಡ್ಯುಲರ್ ಲ್ಯಾಬ್ ಕೆಲಸಗಳು, ಸ್ಥಾವರ-1 ರಲ್ಲಿ ಎಫ್.ಜಿ.ಎಸ್, ಇಂಜಿನಿಯರಿಂಗ್ ಸ್ಟೋರ್, ಡಾಕ್ ರೂಫಿಂಗ್‌ಗಳ ವಿಸ್ತರಣೆ/ನಿರ್ಮಾಣ, M.M.C.F ವಿಭಾಗದಲ್ಲಿ ಪಾರ್ಟಿಷನ್ಸ್ ಮತ್ತಿತ್ತರೆ ಅಗತ್ಯ ಸಿವಿಲ್ ಕೆಲಸಗಳು–ಗುಬ್ಬಿ, ತುಮಕೂರು ಜಿಲ್ಲೆ.	593.68 ಲಕ್ಷಗಳು (ಜಿ.ಎಸ್.ಟಿ. ಪ್ರತ್ಯೇಕ)	9,00,000/-	10 ತಿಂಗಳು

1. ಟೆಂಡರ್ ಷೆಡ್ಯೂಲ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ: **11.05.2026 ರಿಂದ 11.06.2026ರ ಸಾಯಂಕಾಲ 4:00 ಗಂಟೆಯವರೆಗೆ.** 2. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **11.06.2026 ರ ಸಾಯಂಕಾಲ 4:00 ಗಂಟೆಯವರೆಗೆ.** 3. ಟೆಂಡರ್ (Cover-1) ತೆರೆಯುವ ದಿನಾಂಕ: **12.06.2026 ರಂದು ಸಾಯಂಕಾಲ 04:30 ಗಂಟೆಗೆ.** ಇನ್ನಿತರೆ ನಿಬಂಧನೆಗಳು, ಷರತ್ತುಗಳು ಹಾಗೂ ಟೆಂಡರ್‌ನ ತಿದ್ದುಪಡಿ/ಬದಲಾವಣೆಗಳನ್ನು ವೆಬ್‌ಸೈಟ್ **http://kppp.karnataka.gov.in** ನಲ್ಲಿ ಪಡೆಯಬಹುದಾಗಿದೆ.

ಕರ್ನಾಟಕ ಸಹಕಾರ ಹಾಲು ಮಹಾಮಂಡಳದ ಪರವಾಗಿ
ಸಹಿ/- ನಿರ್ದೇಶಕರು (ಅಭಿಯಂತರ-1)

ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ

ನಮ್ಮ ಮೆಟ್ರೋ namma metro

(ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರದ ಸಹಭಾಗಿತ್ವದ ಒಂದು ಉದ್ಯಮ)
3ನೇ ಮಹಡಿ, ಬಿಎಂಟಿಸಿ ಕಾಂಪ್ಲೆಕ್ಸ್, ಕೆಂಗಲ್ ಹನುಮಂತಯ್ಯ ರಸ್ತೆ,
ಶಾಂತಿನಗರ, ಬೆಂಗಳೂರು–560 027. ದೂ.080–22969274
ಇ-ಮೇಲ್:**contactus@bmrc.co.in** ವೆಬ್‌ಸೈಟ್:**www.bmrc.co.in**
ಸಂ.: ಹಂತ 2ಎ–2ಬಿ/ಸಿಟಿ–01 ದಿನಾಂಕ: 08.05.2026

ಟೆಂಡರ್ ಪ್ರಕಟಣೆ

ಬಿಎಂಆರ್‌ಸಿಎಲ್ **"ಹಂತ-2ಎ ಮತ್ತು ಹಂತ -2ಬಿ ರ ಅಡಿಯಲ್ಲಿ ಹೊರ ವರ್ತುಲ ರಸ್ತೆ ಮತ್ತು ವಿಮಾನ ನಿಲ್ದಾಣ ಮಾರ್ಗಕ್ಕಾಗಿ (ಹೊಸ ಮಾರ್ಗ) ಆರ್‌ಸಿಸಿ ಕೇಬಲ್ ಟ್ರಫ್‌ಗಳ ತಯಾರಿಕೆ, ಸರಬರಾಜು ಮತ್ತು ಅಳವಡಿಕೆ"** ಗಾಗಿ ಅರ್ಹತೆಹೊಂದಿರುವ, ಪ್ರತಿಷ್ಠಿತ ಮತ್ತು ಅನುಭವ ಹೊಂದಿರುವ ಬಿಡ್‌ದಾರರಿಂದ ಸ್ಥಳೀಯ ಸ್ಪರ್ಧಾತ್ಮಕ ಬಿಡ್ಡಿಂಗ್ ಮೂಲಕ ಮೊಹರುಮಾಡಿದ ಟೆಂಡರ್‌ಅನ್ನು ಏಕಹಂತ, ದ್ವಿಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಿದೆ.

ಟೆಂಡರ್ ದಸ್ತಾವೇಜುಗಳ ಬೆಲೆ: **ರೂ. 11,800 (10,000+1,800 (ಜಿಎಸ್‌ಟಿ at 18%)**. ಆನ್‌ಲೈನ್‌ನಲ್ಲಿ ದಸ್ತಾವೇಜುಗಳ ಮಾರಾಟ: **11.05.2026, 11.00 ಗಂಟೆ ಯಿಂದ 10.06.2026 at 11.00 ಗಂಟೆ** ವರೆಗೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **05.06.2026 11.00 ಗಂಟೆ ಯಿಂದ 10.06.2026 at 11.00 ಗಂಟೆ** ವರೆಗೆ. ಟೆಂಡರ್ ತೆರೆಯುವ ದಿನಾಂಕ ಮತು ಸಮಯ: **11.06.2026 11.00 ಗಂಟೆಗೆ.** ಇತರೆ ವಿವರಗಳಿಗೆ ದಯವಿಟ್ಟು ಸಿಪಿಪಿ ಪೋರ್ಟಲ್ **(https://etenders.gov.in/eprocure/app)** ಗೆ ದಿನಾಂಕ: **11.05.2026** ರಿಂದ ಭೇಟಿ ನೀಡುವುದು.

ಸಹಿ/- ಕಾರ್ಯನಿರ್ವಾಹಕ ನಿರ್ದೇಶಕರು (ಟ್ರಾಕ್ಷನ್) ಬಿಎಂಆರ್‌ಸಿಎಲ್

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಕೃಭಾಜನಿನಿ,
ಆಣೆಕಟ್ಟು ಸುರಕ್ಷತಾ ಘಟಕ–2, ಆಲಮಟ್ಟಿ. ದೂರವಾಣಿ: 08426–281027.
ಇ-ಮೇಲ್: **dam_division@rediffmail.com**
ಸಂ:ಕೃಭಾಜನಿನಿ/ಆಆವಿ/ಡಿಬಿ/ಟೆಂಡರ್/2026–27/178
ದಿನಾಂಕ:06.05.2026

ಟೆಂಡರ ಪ್ರಕಟಣೆ

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ. ಬೆಂಗಳೂರು, ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ. ಆಣೆಕಟ್ಟು ವಿಭಾಗ ಆಲಮಟ್ಟಿ. ತಾ: ನಿಡಗುಂದಿ ಇವರು ಅರ್ಹ ಗುತ್ತಿಗೆದಾರರಿಗೆ ಇಂಡೆಂಟ್ ಸಂಖ್ಯೆಗಳು Percentage basis tenders from the eligible contractors for the work indents of **Two Cover** –I .No. **KBJNL/2026-27/CN/WORK_INDENT2792–332.58 Lakhs** ಕೆ.ಟಿ.ಪಿ.ಟಿ. ನಿಯಮಗಳನ್ವಯ, ಅರ್ಹ ಬಿಡ್ಡುದಾರರುಗಳಿಂದ KW ಟೆಂಡರ್ ಅಹ್ವಾನಿಸಿದ್ದು, ಗುತ್ತಿಗೆದಾರರುಗಳು ಭದ್ರತಾ ಠೇವಣಿಯನ್ನು ಇ–cash ನಲ್ಲಿತುಂಬಿ ತಮ್ಮ ಬಿಡ್ಡುಗಳನ್ನು ಭರ್ತಿಗೊಳಿಸಿದ ಟೆಂಡರನ್ನು ಸಲ್ಲಿಸುವದು.


1. ಟೆಂಡರ ಡಾಕುಮೆಂಟ್ಸಗಳನ್ನು ವೆಬ್‌ಸೈಟನಲ್ಲಿ ನೋಡಿಕೊಳ್ಳುವ / ಡೌನಲೋಡ್ ಮಾಡಿಕೊಳ್ಳುವ ದಿನಾಂಕ ಹಾಗೂ ಸ್ವಿಕರಿಸುವ ಕೊನೆಯ ದಿನಾಂಕ: **07.05.2026 ರಿಂದ 15.05.2026** ಸಾಯಂಕಾಲ 5.00 ಘಂಟೆಯವರೆಗೆ.
2. ಪೂರ್ವಭಾವಿ ಸಭೆ **:13.05.2026 ಮುಂಜಾನೆ 11.00 ಘಂಟೆಗೆ. ಮಾನ್ಯ ಮುಖ್ಯ ಅಭಿಯಂತರರ ಕಛೇರಿ, ಕೃಭಾಜನಿನಿ, ಆಣೆಕಟ್ಟು ವಲಯ ಆಲಮಟ್ಟಿ**
3. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **18.05.2026 ಮುಂಜಾನೆ 11.00 ಘಂಟೆಗೆ.**
4. ಆರ್ಥಿಕ ಬಿಡ್ ತೆರೆಯುವ ದಿನಾಂಕ **: 21.05.2026 ಮುಂಜಾನೆ 11.00 ಘಂಟೆಗೆ.**

ಟೆಂಡರಗೆ ಸಂಬಂಧಿಸಿದ ಮಾಹಿತಿಗಳನ್ನು ಈ ಕಛೇರಿಯಿಂದ ಕಛೇರಿ ಅವಧಿಯಲ್ಲಿ ಅಥವಾ ಉಳಿದಂತೆ ಟೆಂಡರನಲ್ಲಿ ಯಾವುದೇ ಬದಲಾವಣೆಗಳನ್ನು ಈ ವೆಬ್‌ಸೈಟನ್ನು ಸಂಪರ್ಕಿಸಿ ಪಡೆಯಬಹುದು. kppp.karnataka.gov.in ಸಂಪರ್ಕಿಸಬೇಕಾದ ಕಛೇರಿ ದೂರವಾಣಿ ಸಂಖ್ಯೆ: 08426–281027.

ಸಹಿ/- (ಟಿ.ವ್ಹಿ. ದೊಡ್ಡಮನಿ) ಕಾರ್ಯನಿರ್ವಾಹಕ ಅಭಿಯಂತರರು,
ಕೃಭಾಜನಿನಿ, ಆಣೆಕಟ್ಟು ಸುರಕ್ಷತಾ ಘಟಕ–2, ಆಲಮಟ್ಟಿ.

ವಾಸಾಸಂಇ/ವಿಜಯಪುರ/84/ಕೆಎಸ್‌ಎಂಸಿಎ/2026–27





TATA IPL ಮಾರ್ಚ್ 28ರಿಂದ ಮೇ 31

ಐಪಿಎಲ್ ವಾರ್ 2026

ಆರೆಂಜ್ ಕ್ಯಾಪ್: ಹೆನ್ರಿಚ್ ಕ್ಲಾಸೆನ್ (ಸನ್‌ರೈಸರ್ಸ್ ಹೈದ್ರಾಬಾದ್) 494 ರನ್

ಪರ್ಪಲ್ ಕ್ಯಾಪ್: ಭುವನೇಶ್ವರ್ (ಆರ್‌ಸಿಬಿ) 17 ವಿಕೆಟ್


ಐಪಿಎಲ್-2026 ಅಂಕಪಟ್ಟಿ

ತಂಡಗಳು	ಪಂದ್ಯ	ಗೆಲುವು	ಸೋಲು	ರದ್ದು	ನೆಟ್ ರನ್‌ರೇಟ್	ಅಂಕ
ಹೈದ್ರಾಬಾದ್	11	07	04	00	+0.737	14
ಪಂಜಾಬ್	10	06	03	01	+0.571	13
ಆರ್‌ಸಿಬಿ	09	06	03	00	+1.420	12
ರಾಜಸ್ಥಾನ	10	06	04	00	+0.510	12
ಗುಜರಾತ್	10	06	04	00	-0.147	12
ಚೆನ್ನೈ	10	05	05	00	+0.151	10
ಡೆಲ್ಲಿ	10	04	06	00	-0.949	08
ಕೋಲ್ಕತಾ	09	03	05	01	-0.539	07
ಮುಂಬೈ	10	03	07	00	-0.649	06
ಲಖನೌ	09	02	07	00	-1.076	04

ಸುದ್ದಿ ಸಿಂಚನ

ಕೊಹ್ಲಿಯ ಜೊತೆ ಆಡಿದ್ದ ಅಮನ್‌ಪ್ರೀತ್ ಗಿಲ್ ನಿಧನ

ನವದೆಹಲಿ: ಕ್ರಿಕೆಟ್ ತಾರೆ ವಿರಾಟ್ ಕೊಹ್ಲಿ ಜೊತೆ ಅಂಡರ್-19 ಕ್ರಿಕೆಟ್ ತಂಡದಲ್ಲಿ ಆಡಿದ್ದ ಪಂಜಾಬ್‌ನ



ಬೌಲರ್ ಅಮನ್‌ಪ್ರೀತ್ ಸಿಂಗ್ ಗಿಲ್(36) ಬುಧವಾರ ಸಾವನ್ನಪ್ಪಿದ್ದಾರೆ. ಆದರೆ ಅವರ ಸಾವಿನ ಕಾರಣ ಇನ್ನೂ ಬಹಿರಂಗಗೊಂಡಿಲ್ಲ. ಅಮನ್‌ಪ್ರೀತ್ ಅವರು ಪಂಜಾಬ್ ಪರ ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ ಆಡಿದ್ದರು. 6 ಪಂದ್ಯಗಳಲ್ಲಿ 11 ವಿಕೆಟ್ ಕಬಳಿಸಿದ್ದಾರೆ. ಅಲ್ಲದೆ, ಐಪಿಎಲ್‌ನ ಚೊಚ್ಚಲ ಆವೃತ್ತಿಯಲ್ಲಿ ಕಿಂಗ್ಸ್ ಇಲೆವೆನ್ ಪಂಜಾಬ್(ಈಗಿನ ಪಂಜಾಬ್ ಕಿಂಗ್ಸ್) ಪರ ಆಡಿದ್ದರು. ಆ ಬಳಿಕ ಪಂಜಾಬ್ ತಂಡದ ಆಯ್ಕೆ ಸಮಿತಿಯ ಹಿರಿಯ ಸದಸ್ಯರಾಗಿದ್ದರು. ಅಮನ್‌ಪ್ರೀತ್ ಸಾವಿಗೆ ವಿರಾಟ್ ಕೊಹ್ಲಿ, ಯುವರಾಜ್ ಸಿಂಗ್ ಸೇರಿ ಹಲವರು ಸಂತಾಪ ಸೂಚಿಸಿದ್ದಾರೆ.

ಸೂರ್ಯ ದಂಪತಿಗೆ ಹೆಣ್ಣು ಮಗು ಜನನ

ಮುಂಬೈ: ಟೀಂ ಇಂಡಿಯಾದ ಟಿ20 ನಾಯಕ ಸೂರ್ಯಕುಮಾರ್ ಯಾದವ್ ಅವರ ಪತ್ನಿ ದೇವಿಶಾ ಶೆಟ್ಟಿ



ಹೆಣ್ಣು ಮಗುವಿಗೆ ಜನ್ಮ ನೀಡಿದ್ದಾರೆ. ಈ ಬಗ್ಗೆ ಸೂರ್ಯ ಇನ್‌ಸ್ಟಾಗ್ರಾಮ್‌ನಲ್ಲಿ ಸಂತಸ ಹಂಚಿಕೊಂಡಿದ್ದು, 'ನಗು, ಕನಸುಗಳೊಂದಿಗೆ ನಾವು ನಮ್ಮ ಹೆಣ್ಣು ಮಗುವನ್ನು ಸ್ವಾಗತಿಸುತ್ತೇವೆ' ಎಂದು ಬರೆದುಕೊಂಡಿದ್ದಾರೆ. ಈ ಜೋಡಿ ಕಾಲೇಜು ದಿನಗಳಿಂದ ಪ್ರೀತಿಯಲ್ಲಿದ್ದರು. 2016ರಲ್ಲಿ ವಿವಾಹವಾಗಿದ್ದರು.

49 ಎಸೆತಗಳಲ್ಲಿ 100: ಲಖನೌ ಪರ ಮಾರ್ಷ್ ಅತಿವೇಗದ ಶತಕ ದಾಖಲೆ

ಆರ್‌ಸಿಬಿ ವಿರುದ್ಧ ಮಾರ್ಷ್ 56 ಎಸೆತಕ್ಕೆ 111 ರನ್ | ಲಖನೌ ಪರ 5ನೇ ಗರಿಷ್ಠ

ಲಖನೌ: ಗುರುವಾರ ಆರ್‌ಸಿಬಿ ವಿರುದ್ಧ ಪಂದ್ಯದಲ್ಲಿ ಲಖನೌ ಸೂಪರ್‌ಜೈಂಟ್ಸ್ ಬ್ಯಾಟರ್ ಮಿಚೆಲ್ ಮಾರ್ಷ್ ಸ್ಫೋಟಕ ಶತಕ ಸಿಡಿಸಿದ್ದು, ಐಪಿಎಲ್‌ನಲ್ಲಿ ಲಖನೌ ಪರ ಅತಿವೇಗದ ಶತಕದ ದಾಖಲೆ ಬರೆದಿದ್ದಾರೆ.

ಮಳೆಬಾಧಿತ ಪಂದ್ಯದಲ್ಲಿ ಮಾರ್ಷ್ 56 ಎಸೆತಗಳಲ್ಲಿ 9 ಬೌಂಡರಿ, 9 ಸಿಕ್ಸರ್‌ನೊಂದಿಗೆ 111 ರನ್ ಸಿಡಿಸಿದರು. ಅವರು ತಮ್ಮ ಶತಕ ಪೂರೈಸಲು 49 ಎಸೆತಗಳನ್ನು ತೆಗೆದುಕೊಂಡರು. ಕಳೆದ ವರ್ಷ ಇದೇ ಕ್ರೀಡಾಂಗಣದಲ್ಲಿ ಆರ್‌ಸಿಬಿ ವಿರುದ್ಧ ರಿಷಭ್ ಪಂತ್ 54 ರನ್ ಗಳಿಸಿದ್ದು ಈವರೆಗೂ ಲಖನೌ ಪರ ವೇಗದ ಶತಕ ಎನಿಸಿಕೊಂಡಿತ್ತು. ಅದನ್ನು ಮಾರ್ಷ್ ಹಿಂದಿಕ್ಕಿದರು.

5ನೇ ಗರಿಷ್ಠ: ಮಾರ್ಷ್ ಗಳಿಸಿದ 111 ರನ್ ಲಖನೌ ಪರ ಐಪಿಎಲ್‌ನಲ್ಲಿ 5ನೇ ಗರಿಷ್ಠ ಸ್ಕೋರ್. 2022ರಲ್ಲಿ ಕೆಕೆಆರ್ ವಿರುದ್ಧ ಕ್ವಿಂಟನ್ ಡಿಕಾಕ್ ಔಟಾಗದೆ 140 ರನ್ ಸಿಡಿಸಿದ್ದು ತಂಡದ ಪರ ಗರಿಷ್ಠ ರನ್. ಉಳಿದಂತೆ 2024ರಲ್ಲಿ ಸಿಎಸ್‌ಕೆ ವಿರುದ್ಧ ಮಾರ್ಕಸ್ ಸ್ಟೋಯ್ನಿಸ್ ಔಟಾಗದೆ 124 ರನ್, 2025ರಲ್ಲಿ ಆರ್‌ಸಿಬಿ ವಿರುದ್ಧ ರಿಷಭ್ ಪಂತ್ ಔಟಾಗದೆ 118 ರನ್, ಗುಜರಾತ್ ವಿರುದ್ಧ ಮಿಚೆಲ್ ಮಾರ್ಷ್ 117 ರನ್ ಸಿಡಿಸಿದ್ದಾರೆ.



ಐಪಿಎಲ್‌ನಲ್ಲಿ 200 ಪಂದ್ಯ ಆಡಿದ ಮೊದಲ ವೇಗದ ಬೌಲರ್ ಭುವಿ

ಗುರುವಾರ ಲಖನೌ ವಿರುದ್ಧ ಪಂದ್ಯದಲ್ಲಿ ಕಣಕ್ಕಿಳಿಯುವ ಮೂಲಕ ಆರ್‌ಸಿಬಿ ವೇಗಿ ಭುವನೇಶ್ವರ್ ಕುಮಾರ್ ಹೊಸ ಮೈಲುಗಲ್ಲು ಸಾಧಿಸಿದ್ದಾರೆ. ಐಪಿಎಲ್‌ನಲ್ಲಿ 200ಕ್ಕೂ ಹೆಚ್ಚು ಪಂದ್ಯ ಆಡಿದ 12ನೇ ಆಟಗಾರ ಹಾಗೂ ಮೊದಲ ವೇಗದ ಬೌಲರ್ ಎನಿಸಿಕೊಂಡಿದ್ದಾರೆ. ಎಂ.ಎಸ್.ಧೋನಿ 278 ಪಂದ್ಯಗಳನ್ನಾಡಿದ್ದು, ಅತಿ ಹೆಚ್ಚು ಪಂದ್ಯವಾಡಿದ ಆಟಗಾರ ಎನಿಸಿಕೊಂಡಿದ್ದಾರೆ. ವಿರಾಟ್ ಕೊಹ್ಲಿ ಹಾಗೂ ರೋಹಿತ್ ಶರ್ಮಾ ತಲಾ 277 ಪಂದ್ಯಗಳಲ್ಲಿ ಕಣಕ್ಕಿಳಿದಿದ್ದಾರೆ.

ಪಂದ್ಯಕ್ಕೆ ಪದೇ ಪದೇ ಮಳೆ ಕಾಟ

ಗುರುವಾರದ ಪಂದ್ಯಕ್ಕೆ ಪದೇ ಪದೇ ಮಳೆ ಅಡ್ಡಿಪಡಿಸಿತು. ಹೀಗಾಗಿ ಮೊದಲ ಇನ್ನಿಂಗ್ಸ್ ನಿಗದಿತ ಸಮಯಕ್ಕಿಂತ ಒಂದು ಗಂಟೆಗೂ ಹೆಚ್ಚು ಸಮಯ ವಿಳಂಬವಾಗಿ ಮುಕ್ತಾಯಗೊಂಡಿತು. ಅಲ್ಲದೆ, ಇನ್ನಿಂಗ್ಸ್‌ನ ಓವರ್ ಕೂಡಾ ಕಡಿತಗೊಳಿಸಲಾಗಿದ್ದು, ತಲಾ 19 ಓವರ್ ಆಡಿಸಲಾಯಿತು.

ಪಾಕ್ ಸರಣಿಯ ಬದಲು ಐಪಿಎಲ್‌ನಲ್ಲೇ ಆಡ್ತಾರೆ ಆಸ್ಟ್ರೇಲಿಯಾ ಕ್ರಿಕೆಟಿಗರು

ಮೆಲ್ಬರ್ನ್: ಮೇ 30ರಿಂದ ಪಾಕಿಸ್ತಾನ ಮತ್ತು ಆಸ್ಟ್ರೇಲಿಯಾ ನಡುವೆ ಏಕದಿನ ಸರಣಿ ಆರಂಭವಾಗಲಿದೆ. ಆದರೆ ಇತ್ತ ಆಸೀಸ್ ನಾಯಕ ಪ್ಯಾಟ್ ಕಮಿನ್ಸ್ ಸೇರಿದಂತೆ ಕೆಲ ಆಟಗಾರರು ಐಪಿಎಲ್‌ನಲ್ಲಿ ಆಡುತ್ತಿದ್ದಾರೆ. ಹೀಗಾಗಿ ಕ್ರಿಕೆಟ್ ಆಸ್ಟ್ರೇಲಿಯಾ ತನ್ನ ಆಟಗಾರರಿಗೆ ಐಪಿಎಲ್‌ನಲ್ಲೇ ಮುಂದುವರಿಯಲು ಅನುಮತಿ ನೀಡಿದೆ.

ಐಪಿಎಲ್‌ನ ಲೀಗ್ ಪಂದ್ಯಗಳು ಮೇ 24ಕ್ಕೆ ಮುಗಿಯಲಿದೆ. ಆದರೆ ಫೈನಲ್ ಮೇ 31ಕ್ಕೆ ನಿಗದಿಯಾಗಿದೆ. ಇದಕ್ಕೂ ಒಂದು ದಿನ ಮುನ್ನ ಪಾಕ್ ವಿರುದ್ಧ ಸರಣಿ ಆರಂಭವಾಗಲಿದೆ. ಆದರೆ ಪ್ಲೇ-ಆಫ್, ಫೈನಲ್‌ನಲ್ಲಿ ಆಡಲಿರುವ ಆಟಗಾರರು ಭಾರತದಲ್ಲೇ ಉಳಿಯಬಹುದು ಎಂದು ಕ್ರಿಕೆಟ್ ಆಸ್ಟ್ರೇಲಿಯಾ ತಿಳಿಸಿದೆ. ಪ್ಲೇ-ಆಫ್ ಪ್ರವೇಶ ಸಾಧ್ಯತೆಯಿರುವ ತಂಡಗಳಲ್ಲಿರುವ ಜೋಶ್ ಹೇಜಲ್‌ವುಡ್, ಟಿಮ್ ಡೇವಿಡ್, ಕಮಿನ್ಸ್, ಹೆಡ್, ಸ್ಟೋಯಿನ್ಸ್ ಸೇರಿ ಪ್ರಮುಖರು ಪಾಕ್ ಸರಣಿಯ ಕೆಲ ಪಂದ್ಯಗಳಿಗೆ ಗೈರಾಗುವ ಸಾಧ್ಯತೆಯಿದೆ.

ಗ್ಲಾಸ್ಗೋ ಕಾಮನ್‌ವೆಲ್ತ್ ಗೇಮ್ಸ್ ಸಮಾರೋಪದಲ್ಲಿ ಪ್ರಧಾನಿ ಮೋದಿ ಭಾಗಿ?

ನವದೆಹಲಿ: ಆಗಸ್ಟ್ 2ರಂದು ಸ್ಕಾಟ್ಲೆಂಡ್‌ನ ನಗರ ಗ್ಲಾಸ್ಗೋದಲ್ಲಿ ನಡೆಯಲಿರುವ 2026ರ ಕಾಮನ್



ವೆಲ್ತ್ ಗೇಮ್ಸ್ ಸಮಾರೋಪ ಸಮಾರಂಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಪಾಲ್ಗೊಳ್ಳುವ ಸಾಧ್ಯತೆಯಿದೆ ಎಂದು ಅಧಿಕೃತ ಮೂಲಗಳು ತಿಳಿಸಿದ್ದಾಗಿ ಮಾಧ್ಯಮಗಳಲ್ಲಿ ವರದಿಯಾಗಿದೆ.

2030ರ ಕಾಮನ್‌ವೆಲ್ತ್ ಗೇಮ್ಸ್‌ಗೆ ಭಾರತ ಆತಿಥ್ಯ ವಹಿಸಲಿದೆ. ಹೀಗಾಗಿ ಗ್ಲಾಸ್ಗೋ ಕ್ರೀಡಾಕೂಟದ ಸಮಾರೋಪದಲ್ಲಿ ಭಾರತಕ್ಕೆ ಧ್ವಜ ಹಸ್ತಾಂತರ ಮಾಡಲಾಗುತ್ತದೆ. ಸಮಾರಂಭದಲ್ಲಿ ಸ್ಕಾಟ್ಲೆಂಡ್‌ನ ಮೊದಲ ಮಂತ್ರಿ ಜಾನ್ ಸ್ವಿನ್ನಿ ಹಾಗೂ ಇತರರು ಪಾಲ್ಗೊಳ್ಳಲಿದ್ದಾರೆ. ಇದೇ ಸಮಾರಂಭದಲ್ಲಿ ಮೋದಿ ಉಪಸ್ಥಿತರಿದ್ದು, 2030ರ ಗೇಮ್ಸ್ ಆತಿಥ್ಯಕ್ಕೆ ಔಪಚಾರಿಕವಾಗಿ ಧ್ವಜ ಸ್ವೀಕರಿಸುವ ಸಾಧ್ಯತೆಯಿದೆ ಎಂದು ವರದಿಯಾಗಿದೆ.

ಇಂದು ಕೆಕೆಆರ್ vs ಡೆಲ್ಲಿ ಕ್ಯಾಪಿಟಲ್ಸ್ ಟೀಂ ನಡುವೆ ಮಾಡು ಇಲ್ಲ ಮಡಿ ಪಂದ್ಯ

ನವದೆಹಲಿ: ಐಪಿಎಲ್‌ನಲ್ಲಿ ಶುಕ್ರವಾರ ಡೆಲ್ಲಿ ಕ್ಯಾಪಿಟಲ್ಸ್ ಹಾಗೂ ಕೋಲ್ಕತಾ ನೈಟ್ ರೈಡರ್ಸ್ ನಡುವೆ ಮಾಡು ಇಲ್ಲವೇ ಮಡಿ ಪಂದ್ಯ ನಡೆಯಲಿದೆ. ಪ್ಲೇ-ಆಫ್ ರೇಸ್‌ನಲ್ಲಿ ಉಳಿಯಲು 2 ತಂಡಕ್ಕೂ ಗೆಲುವು ಅಗತ್ಯ. ಡೆಲ್ಲಿ ತಂಡ ಆಡಿರುವ 10 ಪಂದ್ಯಗಳ ಪೈಕಿ 4ರಲ್ಲಿ ಗೆದ್ದಿದೆ. ತಂಡ ಕೊನೆ 5 ಪಂದ್ಯಗಳ ಪೈಕಿ 4ರಲ್ಲಿ ಪರಾಭವಗೊಂಡಿದೆ. ಅಲ್ಲದೆ, ತನ್ನ ತವರು ಕ್ರೀಡಾಂಗಣದಲ್ಲಿ ಆಡಿರುವ 5 ಪಂದ್ಯಗಳ ಪೈಕಿ ಕೇವಲ ಒಂದರಲ್ಲಿ ಮಾತ್ರ ಜಯಗಳಿಸಿದೆ. ಹೀಗಾಗಿ ಕೆಕೆಆರ್ ವಿರುದ್ಧ ಯಾವ ರೀತಿ ಪ್ರದರ್ಶನ ನೀಡಲಿದೆ ಎಂಬ ಕುತೂಹಲವಿದೆ. ಮತ್ತೊಂದೆಡೆ 3 ಬಾರಿ ಚಾಂಪಿಯನ್ ಕೋಲ್ಕತಾ ತಂಡ 9 ಪಂದ್ಯಗಳನ್ನಾಡಿದ್ದು, 3ರಲ್ಲಿ ಗೆದ್ದು ಒಟ್ಟು 7 ಅಂಕ ಪಡೆದುಕೊಂಡಿದೆ. ತಂಡ ಪ್ಲೇ-ಆಫ್ ರೇಸ್‌ನಲ್ಲಿ ಉಳಿದುಕೊಳ್ಳಬೇಕಿದ್ದರೆ ಎಲ್ಲಾ 5 ಪಂದ್ಯಗಳಲ್ಲೂ ಗೆಲ್ಲಬೇಕು. ಆರಂಭಿಕ 6 ಪಂದ್ಯಗಳಲ್ಲೂ ಗೆಲುವಿನಿಂದ ವಂಚಿತವಾಗಿದ್ದ ತಂಡ ತನ್ನ ಕೊನೆ 3 ಪಂದ್ಯಗಳಲ್ಲೂ ಜಯಗಳಿಸಿದೆ.

ಪಂದ್ಯ: ಸಂಜೆ 7.30ಕ್ಕೆ

ಐಪಿಎಲ್ ಫ್ರಾಂಚೈಸಿ, ಆಟಗಾರರ ಅಶಿಸ್ತು ವರ್ತನೆಗೆ ಬಿಸಿಸಿಐ ಕೆಂಡ

ಆಟಗಾರರ ಬಸ್, ರೂಮ್‌ನಲ್ಲಿ ಅನಧಿಕೃತ ವ್ಯಕ್ತಿಗಳು
ಶೀಘ್ರವೇ ಕಠಿಣ ಮಾರ್ಗಸೂಚಿ ಬಿಡುಗಡೆ: ಸೈಕಿಯಾ

ನವದೆಹಲಿ: ಐಪಿಎಲ್ ವೇಳೆ ಫ್ರಾಂಚೈಸಿಗಳು ಮತ್ತು ಆಟಗಾರರ ಅಶಿಸ್ತಿನ ನಡವಳಿಕೆ ವಿರುದ್ಧ ಬಿಸಿಸಿಐ ಕಿಡಿಕಾರಿದ್ದು, ಈ ಬಗ್ಗೆ ಕಠಿಣ ಮಾರ್ಗಸೂಚಿ ಬಿಡುಗಡೆ ಮಾಡುವುದಾಗಿ ತಿಳಿಸಿದೆ. 'ತಂಡದ ಬಸ್, ಆಟಗಾರರ ಕೋಣೆಗಳಿಗೆ ಅನಧಿಕೃತ ವ್ಯಕ್ತಿಗಳು ಪ್ರವೇಶಿಸುತ್ತಿರುವುದನ್ನು ಬಿಸಿಸಿಐ ಗಮನಿಸಿದೆ. ಇದರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುತ್ತೇವೆ' ಎಂದು ಮಂಡಳಿಯ ಕಾರ್ಯದರ್ಶಿ ದೇವಜಿತ್ ಸೈಕಿಯಾ ಎಚ್ಚರಿಕೆ ನೀಡಿದ್ದಾರೆ.



ಈ ಬಗ್ಗೆ ರಾಷ್ಟ್ರೀಯ ಮಾಧ್ಯಮವೊಂದಕ್ಕೆ ಪ್ರತಿಕ್ರಿಯೆ ನೀಡಿರುವ ಅವರು, 'ತಂಡದ ಸದಸ್ಯರೊಂದಿಗೆ ಅನಧಿಕೃತ ವ್ಯಕ್ತಿಗಳು ಹೋಟೆಲ್ ಪ್ರವೇಶಿಸುವುದು, ಆಟಗಾರರ ಅಥವಾ ಅಧಿಕಾರಿಗಳ ಕೊಠಡಿ ಪ್ರವೇಶಿಸುವುದು ಬಿಸಿಸಿಐನ ಭ್ರಷ್ಟಾಚಾರ ವಿರೋಧಿ ಮತ್ತು ಭದ್ರತಾ ಪ್ರೋಟೋಕಾಲ್ ಉಲ್ಲಂಘನೆ. ಫ್ರಾಂಚೈಸಿಗಳು, ಆಟಗಾರರ ವಿಚಾರದಲ್ಲಿ ಬಿಸಿಸಿಐ ಹಲವು ಅಶಿಸ್ತನ್ನು ಗಮನಿಸಿದೆ. ಇದನ್ನು ತಡೆಗಟ್ಟಲು ಮಾರ್ಗಸೂಚಿ ಸಿದ್ಧಗೊಳಿಸುತ್ತಿದ್ದೇವೆ' ಎಂದಿದ್ದಾರೆ.

ಪ್ರವೇಶ ನಿರಾಕರಿಸಿದ ಸ್ಥಳಗಳಲ್ಲಿ ಆಟಗಾರರ ಜೊತೆ ಕೆಲ ಮಾಲೀಕರು, ಅಧಿಕಾರಿಗಳು ಓಡಾಡುವುದನ್ನು ಗಮನಿಸಿದ್ದೇವೆ. ಇದರ ಬಗ್ಗೆಯೂ ನಾವು ನಿಯಮ ರೂಪಿಸುತ್ತೇವೆ ಎಂದು ಅವರು ತಿಳಿಸಿದ್ದಾರೆ.

ತುಮಕೂರು ಓಪನ್‌ನಲ್ಲಿ ಭಾರತದ ವೈದೇಹಿ, ಝೀಲ್ ಕ್ವಾರ್ಟರ್‌ಗೆ ಲಗ್ಗೆ

ತುಮಕೂರು: ತುಮಕೂರು ಓಪನ್ ಐಟಿಎಫ್ ಡಬ್ಲ್ಯು35 ಮಹಿಳಾ ಟೆನಿಸ್ ಟೂರ್ನಿಯಲ್ಲಿ ಭಾರತದ ವೈದೇಹಿ ಚೌಧರಿ, ಝೀಲ್ ದೇಸಾಯಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದಾರೆ. ಗುರುವಾರ ಸಿಂಗಲ್ಸ್‌ನಲ್ಲಿ 3ನೇ ಶ್ರೇಯಾಂಕಿತ ವೈದೇಹಿ ಭಾರತದವರೇ ಆದ ಮಧುರಿಮಾ ಸಾವಂತ್ ವಿರುದ್ಧ 6-2, 6-2 ಸೆಟ್‌ಗಳಲ್ಲಿ ಜಯಗಳಿಸಿದರು. 4ನೇ ಶ್ರೇಯಾಂಕಿತೆ ಝೀಲ್ ಅವರು ಜೆನಿಫರ್ ಲ್ಯುಕಾಮ್ ವಿರುದ್ಧ 6-2, 6-3 ಅಂತರದಲ್ಲಿ ಗೆದ್ದರು. ಡಬಲ್ಸ್‌ನಲ್ಲಿ ಶ್ರಾವ್ಯ ಶಿವಾನಿ-ಝೀಲ್ ದೇಸಾಯಿ ಸೆಮಿಫೈನಲ್ ಪ್ರವೇಶಿಸಿದರು.



ಆರ್ಚರಿ ವಿಶ್ವಕಪ್: ರೀಕರ್ವ್ ವನಿತಾ ತಂಡ ವಿಭಾಗದಲ್ಲಿ ಭಾರತಕ್ಕೆ ಪದಕ

ಶಾಂಘೈ: ಇಲ್ಲಿ ನಡೆಯುತ್ತಿರುವ ಆರ್ಚರಿ ವಿಶ್ವಕಪ್‌ನ ರೀಕರ್ವ್ ಮಹಿಳಾ ವಿಭಾಗದಲ್ಲಿ ಭಾರತ ಫೈನಲ್ ಪ್ರವೇಶಿಸಿದ್ದು, ಪದಕ ಖಚಿತಪಡಿಸಿಕೊಂಡಿದೆ.

ಗುರುವಾರ ನಡೆದ ಸೆಮಿಫೈನಲ್‌ನಲ್ಲಿ 10 ಬಾರಿ ಒಲಿಂಪಿಕ್ಸ್ ಚಾಂಪಿಯನ್ ದಕ್ಷಿಣ ಕೊರಿಯಾವನ್ನು ಮಣಿಸಿ ಭಾರತೀಯ ತಂಡ ಫೈನಲ್ ತಲುಪಿದೆ. ದೀಪಿಕಾ ಕುಮಾರಿ, ಅಂಕಿತಾ ಭಕತ್ ಹಾಗೂ ಕುಮ್ಕುಮ್ ಮೊಹೊದ್ ಅವರಿದ್ದ ತಂಡ ಕೊರಿಯಾವನ್ನು 5-1 ಅಂತರದಲ್ಲಿ ಸೋಲಿಸಿತು. ಆದರೆ ಪುರುಷರ ತಂಡ ಬಾಂಗ್ಲಾದೇಶ ವಿರುದ್ಧ ಕ್ವಾರ್ಟರ್ ಫೈನಲ್‌ನಲ್ಲಿ 2-6 ಅಂತರದ ಆಘಾತಕಾರಿ ಸೋಲನುಭವಿಸಿ ಹೊರಬಿದ್ದಿದೆ.

ಇತರೆ

ಐಪಿಎಲ್ ಫೈನಲ್ ಬೆಂಗಳೂರಿಂದ ಎತ್ತಂಗಡಿ

2ನೇ ಪುಟದಿಂದ

ಮೇ 2 ರಂದು ಕೆಎಸ್‌ಸಿಎ ನೀಡಿದ ಪ್ರತಿಕ್ರಿಯೆ ನೋಡಿ ನಿಜಕ್ಕೂ ಆಘಾತವಾಯಿತು. ಅದರಲ್ಲಿ, ಶೇ.15 ಉಚಿತ ಟಿಕೆಟ್ ಕೋಟಾದ ಜೊತೆಗೆ ಕೆಎಸ್‌ಸಿಎ ಸದಸ್ಯರು, ಕ್ಲಬ್‌ಗಳು ಮತ್ತು ಇತರರಿಗೆ ಹೆಚ್ಚುವರಿ ಟಿಕೆಟ್ ಅಗತ್ಯವಿದೆ ಎಂದು ತಿಳಿಸಿತ್ತು. ಇನ್ನೂ ಆಶ್ಚರ್ಯವೇನೆಂದರೆ, ಅಲ್ಲಿನ ಶಾಸಕರಿಗೂ ಉಚಿತ ಟಿಕೆಟ್‌ಗೆ ಮನವಿ ಮಾಡಲಾಗಿತ್ತು. ಕರ್ನಾಟಕ ಸರ್ಕಾರಕ್ಕೂ 700 ಟಿಕೆಟ್ ಕೇಳಲಾಗಿತ್ತು. ಒಟ್ಟಾರೆ ಶೇ.15 ಉಚಿತ ಟಿಕೆಟ್ ಜೊತೆಗೆ ಸುಮಾರು 10000 ಹೆಚ್ಚುವರಿ ಟಿಕೆಟ್‌ಗೆ ಕೆಎಸ್‌ಸಿಎ ಬೇಡಿಕೆ ಇಟ್ಟಿತ್ತು' ಎಂದು ಸೈಕಿಯಾ ತಿಳಿಸಿದ್ದಾರೆ. ಕಳೆದ ವರ್ಷ ಆರ್‌ಸಿಬಿ ಚಾಂಪಿಯನ್ ಆಗಿದ್ದರಿಂದ ನಿಯಮದಂತೆ ಈ ಬಾರಿ ಫೈನಲ್ ಪಂದ್ಯ ಬೆಂಗಳೂರಿನಲ್ಲಿ ನಡೆಯಕಿತ್ತು. ಆದರೆ ಫೈನಲ್ ಪಂದ್ಯ ಮೇ 31ಕ್ಕೆ ಅಹಮದಾಬಾದ್‌ನಲ್ಲಿ ನಡೆಸಲು ಬಿಸಿಸಿಐ ನಿರ್ಧರಿಸಿದೆ. ಚಿನ್ನಸ್ವಾಮಿ ಕ್ರೀಡಾಂಗಣ ಇತರ 3 ಪ್ಲೇ-ಆಫ್ ಪಂದ್ಯಗಳು ಧರ್ಮಶಾಲಾ, ಮುಲ್ಲಾನ್‌ಪುರದಲ್ಲಿ ನಡೆಯಲಿದೆ.

ತಮಿಳುನಾಡು ಥ್ರಿಲ್ಲರ್!

2ನೇ ಪುಟದಿಂದ

ಅಲ್ಲದೆ, ಈ ಹಿಂದೆ ಇದೇ ರೀತಿ ಸರ್ಕಾರ ರಚನೆಗೆ ಅವಕಾಶ ನೀಡಿದ ಪ್ರಕರಣಗಳಲ್ಲಿ ನ್ಯಾಯಾಲಯಗಳು ರಾಜ್ಯಪಾಲರ ಕಾರ್ಯ ಕುರಿತು ವಿವರಣೆ ಕೇಳಿದ ಪ್ರಸಂಗಗಳನ್ನು ರಾಜ್ಯಪಾಲರು ಟಿವಿಕೆ ನಿಯೋಗದ ಮುಂದೆ ಉಲ್ಲೇಖಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ. ಹೀಗಾಗಿ ಇದೀಗ ವಿಜಯ್ ಪಕ್ಷ ಸಣ್ಣಪುಟ್ಟ ಪಕ್ಷಗಳ ಬೆಂಬಲ ಯಾಚನೆಗೆ ಮುಂದಾಗಿದೆ. ಆದರೆ ಒಂದು ವೇಳೆ ಬಹುಮತಕ್ಕೆ ಅಗತ್ಯವಾದ 118 ಶಾಸಕರ ಬೆಂಬಲ ಪಡೆಯುವಲ್ಲಿ ವಿಫಲವಾದರೆ ಅತಿದೊಡ್ಡ ಪಕ್ಷವಾದ ತನಗೆ ಸರ್ಕಾರ ರಚನೆಗೆ ಅವಕಾಶ ಕೊಡಲು ರಾಜ್ಯಪಾಲರಿಗೆ ಸೂಚಿಸಬೇಕೆಂದು ಕೋರಿ ವಿಜಯ್ ಪಕ್ಷ ಸುಪ್ರೀಂಕೋರ್ಟ್ ಮೆಟ್ಟಿಲೇರುವ ಸಾಧ್ಯತೆ ಇದೆ ಎನ್ನಲಾಗಿದೆ. ತಮಿಳುನಾಡು ವಿಧಾನಸಭಾ ಚುನಾವಣೆಯಲ್ಲಿ ಟಿವಿಕೆ 108 ಸ್ಥಾನಗಳನ್ನು ಗೆದ್ದು ಅತೀ ದೊಡ್ಡ ಪಕ್ಷವಾಗಿ ಹೊರಹೊಮ್ಮಿದೆ. ಕಾಂಗ್ರೆಸ್‌ನ 5 ಶಾಸಕರ ಬೆಂಬಲ ಸಿಕ್ಕರೂ ಬಹುಮತ ಸಾಬೀತುಪಡಿಸಲು (118 ಸ್ಥಾನ) ಇನ್ನೂ 5 ಸ್ಥಾನದ ಕೊರತೆ ಎದುರಿಸುತ್ತಿದೆ.

ಮೈಸೂರು ಝೂ, ಬನ್ನೇರುಘಟ್ಟದಲ್ಲಿ ಇಮ್ಮರ್ಸಿವ್ ವನ್ಯಜೀವಿ ಕೊಠಡಿಗೆ ನಿರ್ಧಾರ

ಬೆಂಗಳೂರು: ಮೈಸೂರು, ಬನ್ನೇರುಘಟ್ಟ ಝೂಗಳಲ್ಲಿ ಇಮ್ಮರ್ಸಿವ್ ವನ್ಯಜೀವಿ ಕೊಠಡಿ ಮತ್ತು ಡಿಜಿಟಲ್ ಮೃಗಾಲಯ ಮಾರ್ಗದರ್ಶಿ ಸ್ಥಾಪನೆ ಮಾಡಲು ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಗಿದೆ. ಮೈಸೂರು ಝೂನಲ್ಲಿ 44.62 ಕೋಟಿ ರು. ಹಾಗೂ ಬನ್ನೇರುಘಟ್ಟದಲ್ಲಿ 35.22 ಕೋಟಿ ರು. ವೆಚ್ಚದಲ್ಲಿ ಯೋಜನೆ ಕೈಗೊಳ್ಳಲು ತೀರ್ಮಾನಿಸಲಾಗಿದೆ. ಇನ್ನು, ಕುಕ್ಕೆಸುಬ್ರಮಣ್ಯ ಕ್ಷೇತ್ರದ ಅಭಿವೃದ್ಧಿಗೆ 600 ಕೋಟಿ ರು. ಘಾಟಿ ಸುಬ್ರಹ್ಮಣ್ಯ ದೇಗುಲ ಅಭಿವೃದ್ಧಿಗೆ 23.76 ಕೋಟಿ ಹಂಚಿಕೆ ಮಾಡಲು ಒಪ್ಪಿಗೆ ಸಿಕ್ಕಿದೆ.

ಜಿ ರಾಮ್ ಜಿ ವಿರುದ್ಧ ಕೋರ್ಟ್‌ಗೆ ಮೊರೆ

2ನೇ ಪುಟದಿಂದ

ಜತೆಗೆ, ರಾಜ್ಯಗಳ ಜತೆ ಚರ್ಚಿಸದೆ ಏಕಪಕ್ಷೀಯವಾಗಿ ಮನರೇಗಾ ರದ್ದುಪಡಿಸಿ ವಿಬಿ ಜಿ ರಾಮ್ ಜಿ ಯೋಜನೆ ಜಾರಿ ಮಾಡಿರುವ ಕೇಂದ್ರದ ಧೋರಣೆ ವಿರುದ್ಧವೂ ಕಾನೂನು ಹೋರಾಟ ನಡೆಸಲು ನಿರ್ಧರಿಸಲಾಗಿದೆ.

ಆ ಮೂಲಕ ವಿಬಿ ಜಿ ರಾಮ್ ಜಿ ಯೋಜನೆ ಖಂಡಿಸಿ ವಿಧಾನಮಂಡಲ ಅಧಿವೇಶನದಲ್ಲಿ ನಿರ್ಣಯ ಕೈಗೊಂಡಿದ್ದ ಕಾಂಗ್ರೆಸ್ ಸರ್ಕಾರ ತನ್ನ ಹೋರಾಟವನ್ನು ಮತ್ತೊಂದು ಹಂತಕ್ಕೆ ಕೊಂಡೊಯ್ಯಲು ಸಜ್ಜಾಗಿದೆ.

ಸಚಿವ ಸಂಪುಟ ಸಭೆ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ್, ಪ್ರಸಕ್ತ ಸಾಲಿನಲ್ಲಿ ಮನರೇಗಾದಲ್ಲಿ ಯಥಾಸ್ಥಿತಿ ಮುಂದುವರಿಸುವ ಸಲುವಾಗಿ ಅಗತ್ಯ ಕ್ರಿಯಾಯೋಜನೆ ರೂಪಿಸಲು ಅವಕಾಶ ಕಲ್ಪಿಸುವಂತೆ ನ್ಯಾಯಾಲಯವನ್ನು ಕೋರಲು ತೀರ್ಮಾನಿಸಲಾಗಿದೆ. ಜತೆಗೆ ಮನರೇಗಾ ರದ್ದುಗೊಳಿಸಿ ವಿಬಿ ಜಿ ರಾಮ್ ಜಿ ಜಾರಿಗೊಳಿಸಲು ಕೇಂದ್ರ ಸರ್ಕಾರ ಏಕಪಕ್ಷೀಯವಾಗಿ ಕೈಗೊಂಡ ತೀರ್ಮಾನದ ಮೂಲಕ ರಾಜ್ಯ ಸರ್ಕಾರಗಳ ಸಾಂವಿಧಾನಿಕ ಹಕ್ಕುಗಳ ದಮನಗೊಳಿಸಿರುವುದನ್ನು ಸಹ ಪ್ರಶ್ನಿಸಲಾಗುವುದು ಎಂದರು.

ಪರ್ಯಾಯ ವ್ಯವಸ್ಥೆ ಮಾಡಿಲ್ಲ-ಎಚ್ಕೆಪಿ: 2005ರಲ್ಲಿ ಜಾರಿಗೆ ತಂದಿದ್ದ ಮನರೇಗಾ ಕಾಯ್ದೆ ರದ್ದುಗೊಳಿಸಿ, ವಿಬಿ ಜಿ ರಾಮ್ ಜಿ ಕಾಯ್ದೆಯನ್ನು ಕೇಂದ್ರ ಸರ್ಕಾರ ಜಾರಿಗೆ ತಂದಿದೆ.

ಆದರೆ, ವಿಬಿ ಜಿ ರಾಮ್ ಜಿ ಜಾರಿಗೊಳಿಸಲು ಈವರೆಗೆ ಅಧಿಸೂಚನೆ ಹೊರಡಿಸಿಲ್ಲ ಹಾಗೂ ಪರ್ಯಾಯ ಯಾವುದೇ ವ್ಯವಸ್ಥೆಯನ್ನೂ ಮಾಡಿಲ್ಲ. ಇದರಿಂದ ಗ್ರಾಮೀಣ ಜನರ ಉದ್ಯೋಗ ಹಕ್ಕು ಕಸಿದಂತಾಗಿದೆ ಎಂದು ಎಚ್.ಕೆ. ಪಾಟೀಲ್ ಹೇಳಿದರು.

ಕೇಂದ್ರ ಸರ್ಕಾರವು ವಿಬಿ ಜಿ ರಾಮ್ ಜಿ ಯೋಜನೆ ಜಾರಿ ಮಾಡಿಲ್ಲ. ಬದಲಿಗೆ ಮನರೇಗಾ ಯೋಜನೆ ಬಾಕಿ ಕಾಮಗಾರಿ ಪೂರ್ಣಗೊಳಿಸುವಂತೆ ರಾಜ್ಯಗಳಿಗೆ ಹೇಳಿದೆ. ಈ ವರ್ಷದ ಕಾಮಗಾರಿಗಳಿಗೆ ಅವಕಾಶ ನೀಡಿಲ್ಲ. ಹೀಗಾಗಿ ಮನರೇಗಾ ಮುಂದುವರಿಸುವುದು ಸಾರ್ವಜನಿಕ ಹಿತದೃಷ್ಟಿಯಿಂದ ಅನಿವಾರ್ಯ. ಈ ಕುರಿತು ಕ್ರಿಯಾಯೋಜನೆ ಸಿದ್ಧಪಡಿಸಲು ರಾಜ್ಯ ಸರ್ಕಾರಕ್ಕೆ ಅವಕಾಶ ಕಲ್ಪಿಸುವಂತೆ ಕೋರ್ಟ್ ಮೊರೆಹೋಗಲು ಸರ್ಕಾರ ತೀರ್ಮಾನಿಸಿದ್ದೇವೆ ಎಂದರು.

ಹಿಂದಿನ ಮನರೇಗಾಗೆ ಮನವಿ: ಮನರೇಗಾ ಎಂಬುದು ಕೇಂದ್ರ ಪುರಸ್ಕೃತ ಯೋಜನೆ. ಅದನ್ನು ಯಥಾವತ್ತಾಗಿ ಮುಂದುವರಿಸಲು ಅಗತ್ಯ ಕ್ರಿಯಾಯೋಜನೆ ರೂಪಿಸಲು ಕಾನೂನು ಮೊರೆಹೋಗುತ್ತಿದ್ದೇವೆ. ಆದಷ್ಟು ಬೇಗ ಕೋರ್ಟ್‌ನಲ್ಲಿ ಸರ್ಕಾರ ಪ್ರಶ್ನಿಸಲಿದೆ. ಅನುದಾನ ಹಂಚಿಕೆ ಕೂಡ ಮನರೇಗಾ ಅಡಿ ಜಾರಿಯಲ್ಲಿ ಇದ್ದಂತೆಯೇ ಇದಕ್ಕೂ ಅನ್ವಯ ಆಗಲಿದೆ ಎಂದು ಪ್ರಶ್ನೆಯೊಂದಕ್ಕೆ ಸಚಿವರು ಉತ್ತರಿಸಿದರು.

ರಾಜ್ಯದ ಸರ್ಕಾರದ ಆರೋಪವೇನು?: ಕೇಂದ್ರ ಸರ್ಕಾರವು ಮನರೇಗಾ ಅಡಿ 90:10 ರಷ್ಟಿದ್ದ ಕೇಂದ್ರ ಹಾಗೂ ರಾಜ್ಯದ ಅನುದಾನ ಹಂಚಿಕೆಯನ್ನು ವಿಬಿ ಜಿ ರಾಮ್ ಜಿ ಅಡಿ 60:40 ಅನುಪಾತಕ್ಕೆ ಬದಲಿಸಿದೆ. ಇದು ರಾಜ್ಯ ಸರ್ಕಾರಗಳ ಮೇಲೆ ಹೆಚ್ಚಿನ ಆರ್ಥಿಕ ಹೊರೆ ಹೇರಲಿದೆ. ಮನರೇಗಾ ಅಡಿ ವರ್ಷದ 365 ದಿನಗಳ ಕಾಲ ಕೆಲಸ ಕೇಳಬಹುದಿತ್ತು.

ಕಾರ್ಮಿಕರು ಅವರ ಊರಿನಲ್ಲೇ ಸ್ವಂತ ಜಮೀನಿನಲ್ಲೇ ಕೆಲಸ ಮಾಡಬಹುದಿತ್ತು. ಹೊಸ ಕಾಯ್ದೆ ಅಡಿ ಅದು ಸಾಧ್ಯವಿಲ್ಲ ಎಂಬುದು ಸೇರಿ ನೂತನ ಯೋಜನೆ ಬಗ್ಗೆ ರಾಜ್ಯ ಸರ್ಕಾರ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ.

ಕಾರ್ಮಿಕರ ಕಲ್ಯಾಣ ಮಂಡಳಿ ಇನ್ನು ಸಾರಿಗೆ ಇಲಾಖೆ ವ್ಯಾಪ್ತಿಗೆ

ಸಾರಿಗೆ ಕಾರ್ಮಿಕರ ಕಲ್ಯಾಣಕ್ಕಾಗಿ ಈ ತೀರ್ಮಾನ | ರಾಜ್ಯ ಸಚಿವ ಸಂಪುಟದಿಂದ ಮಹತ್ವದ ನಿರ್ಧಾರ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಸಾರಿಗೆ ವ್ಯಾಪ್ತಿಗೆ ಬರುವ ಕಾರ್ಮಿಕರ ಕಲ್ಯಾಣಕ್ಕಾಗಿ ಕಾರ್ಮಿಕ ಇಲಾಖೆಯಡಿ ರಚಿಸಿರುವ ಕರ್ನಾಟಕ ಮೋಟಾರು ಸಾರಿಗೆ ಮತ್ತು ಇತರೆ ಸಂಬಂಧಿತ ಕಾರ್ಮಿಕರ ಸಾಮಾಜಿಕ ಭದ್ರತೆ ಹಾಗೂ ಕಲ್ಯಾಣ ಮಂಡಳಿಯನ್ನು ಸಾರಿಗೆ ಇಲಾಖೆ ವ್ಯಾಪ್ತಿಗೆ ತರಲು ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಗಿದೆ.

'ಕರ್ನಾಟಕ ಮೋಟಾರು ಸಾರಿಗೆ ಮತ್ತು ಇತರ ಸಂಬಂಧಿತ ಕಾರ್ಮಿಕರ ಸಾಮಾಜಿಕ ಭದ್ರತೆ ಮತ್ತು ಕ್ಷೇಮಾಭಿವೃದ್ಧಿ (ತಿದ್ದುಪಡಿ) ವಿಧೇಯಕ- 2026' ಅಡಿ ಸಾರಿಗೆಯೇತರ ವಾಹನಗಳಿಂದ ಸಂಗ್ರಹಿಸುವ ನಿಧಿಯನ್ನು ಸಾರಿಗೆ ಇಲಾಖೆ ಮೂಲಕವೇ ಬಳಸಲು ಸಚಿವ ಸಂಪುಟ ತೀರ್ಮಾನಿಸಿದೆ. ಪ್ರಸ್ತುತ ವಿಧೇಯಕದಡಿ ಸಾರಿಗೆ ಇಲಾಖೆ ಸಾರಿಗೆ ಯೇತರ (ವಾಣಿಜ್ಯ) ವಾಹನಗಳಿಂದ ಸೆಸ್ ಸಂಗ್ರಹಿಸಿ, ಅದನ್ನು ಕಾರ್ಮಿಕ ಇಲಾಖೆ ಅಡಿ ಬರುವ ಕರ್ನಾಟಕ ಮೋಟಾರು ಸಾರಿಗೆ ಮತ್ತು ಇತರೆ ಸಂಬಂಧಿತ ಕಾರ್ಮಿಕರ ಸಾಮಾಜಿಕ ಭದ್ರತೆ ಹಾಗೂ ಕಲ್ಯಾಣ ಮಂಡಳಿಗೆ ನೀಡುತ್ತಿತ್ತು. ಮಂಡಳಿಯು ಸಾರಿಗೆ ಕಾರ್ಮಿಕರ ಕಲ್ಯಾಣ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತಿದೆ. ಈಗ ಆ ಮಂಡಳಿಯನ್ನು ಸಾರಿಗೆ ಇಲಾಖೆ ಅಧೀನಕ್ಕೆ ತರಲು ಅಗತ್ಯ ತಿದ್ದುಪಡಿ ತರಲಾಗಿದೆ.

ತಿದ್ದುಪಡಿಯಿಂದಾಗಿ ಇನ್ನು ಮುಂದೆ ಸಾರಿಗೆ ಇಲಾಖೆ ಸಂಗ್ರಹಿಸುವ ನಿಧಿಯಿಂದ ಸಾರಿಗೆ ಕಾರ್ಮಿಕರ ಕಲ್ಯಾಣಕ್ಕಾಗಿ ಸಾರಿಗೆ ಇಲಾಖೆಯೇ ಕಾರ್ಯಕ್ರಮಗಳನ್ನು ರೂಪಿಸಲಿದೆ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವ ಎಚ್.ಕೆ.ಪಾಟೀಲ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಪ್ರಸ್ತುತ ವಿಧೇಯಕದಡಿ ಸಾರಿಗೆಯೇತರ ವಾಹನಗಳಾದ ದ್ವಿಚಕ್ರ ಮತ್ತು ಕಾರುಗಳಿಗೆ ಕ್ರಮವಾಗಿ 500 ರು. ಹಾಗೂ ಸಾವಿರ ರು. ಸೆಸ್ ವಿಧಿಸಲಾಗುತ್ತಿದೆ. 2025ರ ಏಪ್ರಿಲ್‌ನಿಂದ ಡಿಸೆಂಬರ್‌ವರೆಗೆ ವಾಹನಗಳ ಮೇಲೆ ಶೇ.3ರಂತೆ ವಿಧಿಸಿದ ಹೆಚ್ಚುವರಿ ಸೆಸ್ ಹಾಗೂ ದ್ವಿಚಕ್ರ ಮತ್ತು ಕಾರುಗಳಿಗೆ ವಿಧಿಸಲಾದ ಸೆಸ್‌ನಿಂದ 92.25 ಕೋಟಿ ಸಂಗ್ರಹವಾಗಿದೆ ಎಂದು ತಿಳಿದುಬಂದಿದೆ.

ಮಮತಾಗೆ ಗೇಟ್‌ಪಾಸ್: ದೀದಿ ಈಗ ಬೀದಿಗೆ!

2ನೇ ಪುಟದಿಂದ

ಪರಿಣಾಮ ಅತ್ತ ಮುಖ್ಯಮಂತ್ರಿಯೂ ಅಲ್ಲದ, ಅತ್ತ ಶಾಸಕಿಯೂ ಅಲ್ಲದ ಮಮತಾ ಇನ್ನು ಬಿಜೆಪಿ ಸರ್ಕಾರದ ವಿರುದ್ಧ ಬೀದಿಯಿಂದಲೇ ಹೋರಾಡುವ ಸ್ಥಿತಿ ನಿರ್ಮಾಣವಾಗಿದೆ.

ವಿಸರ್ಜನೆ: ಇತ್ತೀಚಿನ ವಿಧಾನಸಭಾ ಚುನಾವಣಾ ಫಲಿತಾಂಶವನ್ನು ಅಕ್ರಮ, ರಾಜಕೀಯ ಪಿತೂರಿ ಎಂದು ಬಣ್ಣಿಸಿದ್ದ ಮಮತಾ ಬ್ಯಾನರ್ಜಿ ತಾವು ಸಿಎಂ ಹುದ್ದೆಗೆ ರಾಜೀನಾಮೆ ನೀಡುವುದಿಲ್ಲ ಎಂದು ಘೋಷಿಸಿದ್ದರು. ಅಲ್ಲದೆ 'ಅಧಿಕಾರವಿಲ್ಲವಾದ್ದರಿಂದ ನಾನೀಗ ಸ್ವತಂತ್ರ ಹಕ್ಕಿ. ಬೀದಿಗಿಳಿದು ಹೋರಾಟ ಮಾಡುತ್ತೇನೆ' ಎಂದು ಹೇಳಿದ್ದರು. ಹೀಗಾಗಿ ಅವರು ರಾಜೀನಾಮೆ ನೀಡದ ಹೊರತೂ ಅಥವಾ ರಾಜ್ಯ ವಿಧಾನಸಭೆಯನ್ನು ವಿಸರ್ಜಿಸದ ಹೊರತೂ ಮೇ 9ರಂದು ನಡೆಯಬೇಕಿರುವ ನೂತನ ಸರ್ಕಾರ ರಚನೆ ಸಾಧ್ಯವಿರಲಿಲ್ಲ. ಹೀಗಾಗಿ ರಾಜ್ಯಪಾಲರು ತಮ್ಮ ಅಧಿಕಾರ ಬಳಸಿ, ಅವಧಿ ಮುಗಿದ ವಿಧಾನಸಭೆಯನ್ನು ವಿಸರ್ಜಿಸಿ ಮುಂದಿನ ಸಾಂವಿಧಾನಿಕ ಪ್ರಕ್ರಿಯೆಗೆ ಹಾದಿ ಸುಗಮಗೊಳಿಸಿದ್ದಾರೆ.

ಈ ಬಾರಿಯ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ 207 ಸೀಟುಗಳನ್ನು ತನ್ನದಾಗಿಸಿಕೊಂಡಿದ್ದರೆ, ಟಿಎಂಸಿ 80 ಕ್ಷೇತ್ರಗಳಲ್ಲಷ್ಟೇ ಗೆದ್ದಿತ್ತು. ಸತತ 15 ವರ್ಷ ಮುಖ್ಯಮಂತ್ರಿಯಾಗಿದ್ದ ಮಮತಾ ಬಿಜೆಪಿಯ ಸುವೇಂದು ಅಧಿಕಾರಿ ವಿರುದ್ಧ ಭವಾನಿಪುರ ಕ್ಷೇತ್ರದಲ್ಲಿ ಸೋಲುಂಡಿದ್ದರು.

ಮಮತಾ ದೀದಿ ಮರಳಿ ವಕೀಲಿ ವೃತ್ತಿಗೆ?



2ನೇ ಪುಟದಿಂದ

ಇತ್ತೀಚೆಗೆ ನಡೆದ ಪಕ್ಷದ ನೂತನ ಶಾಸಕರ ಸಭೆಯಲ್ಲಿ ಮಮತಾ ತಾವು ವಕೀಲಿಕೆಗೆ ಮರಳುವ ಮಾತುಗಳನ್ನು ಆಡಿದ್ದಾರೆ. ಅಲ್ಲದೆ ಪಕ್ಷದಲ್ಲಿನ ಇತರೆ ಹಲವು ನಾಯಕರಿಗೂ ಮರಳಿ ವಕೀಲಿಕೆ ಪುನಾರಂಭಿಸುವಂತೆ ಸಲಹೆ ನೀಡಿದ್ದಾರೆ ಎನ್ನಲಾಗಿದೆ. ಕಳೆದ ಫೆಬ್ರವರಿಯಲ್ಲಿ, ಮತಪಟ್ಟಿ ವಿಶೇಷ ಪರಿಷ್ಕರಣೆಯನ್ನು ಪ್ರಶ್ನಿಸಿ ಸ್ವತಃ ಮಮತಾ ಸುಪ್ರೀಂಕೋರ್ಟ್‌ನಲ್ಲಿ ವಾದಿಸಿದ್ದರು. ಇದು ಭಾರತದಲ್ಲಿ ಸಿಎಂ ಒಬ್ಬರು ಸುಪ್ರೀಂನಲ್ಲಿ ವಾದಿಸಿದ ಮೊದಲ ಘಟನೆಯಾಗಿತ್ತು.

ಮಿನಿ ದಸರಾ ರೀತಿ ಇಂದು ಬಿಎಸ್‌ವೈ ಪುರಪ್ರವೇಶ!

2ನೇ ಪುಟದಿಂದ

'ಮಿನಿ ದಸರಾ' ರೀತಿ ಸಾಗಲಿರುವ ಈ ಮೆರವಣಿಗೆಯಲ್ಲಿ 2,000ಕ್ಕೂ ಹೆಚ್ಚಿನ ಸಂಖ್ಯೆಯ ರೈತರು ನೇಗಿಲು ಹಿಡಿದು ಶಿಸ್ತುಬದ್ಧವಾಗಿ ರೈತಘೋಷಣೆಯೊಂದಿಗೆ ನಡೆದು ಬರಲಿದ್ದಾರೆ. ಒನಕೆ ಓಬವ್ವನ ನೆಲದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ 'ನಾರಿ ಶಕ್ತಿ ವಂದನ್' ಕಾಯ್ದೆಗೆ ಗೌರವ ಸಲ್ಲಿಸಲು 200ಕ್ಕೂ ಹೆಚ್ಚು ಮಹಿಳೆಯರು ಒನಕೆ ಓಬವ್ವನ ಪಾತ್ರಧಾರಿಗಳಾಗಿ ಶಿಸ್ತುಬದ್ಧವಾಗಿ ಮೆರವಣಿಗೆಯಲ್ಲಿ ನಡೆದು ಬರಲಿದ್ದಾರೆ. 25ಕ್ಕೂ ಹೆಚ್ಚು ಸಾಂಸ್ಕೃತಿಕ ಹಾಗೂ ಜಾನಪದ ಕಲಾತಂಡಗಳು ಯಡಿಯೂರಪ್ಪನವರು ನಡೆದು ಬಂದ ಹಾದಿ, ಸಾಧನೆ ಹಾಗೂ ಅವರು ಮುಖ್ಯಮಂತ್ರಿಗಳಾಗಿದ್ದ ಅವಧಿಯಲ್ಲಿ ನೀಡಲಾದ ಜನಪ್ರಿಯ ಯೋಜನೆಗಳಾದ ಭಾಗ್ಯಲಕ್ಷ್ಮಿ, ಹೆಣ್ಣುಮಕ್ಕಳಿಗೆ ಸೈಕಲ್ ವಿತರಣೆ, ಕೃಷಿಬಜೆಟ್ ಮೊದಲಾದವುಗಳನ್ನು ಪ್ರತಿಬಿಂಬಿಸುವ ಸ್ತಬ್ಧ ಚಿತ್ರಗಳು ಮೆರವಣಿಗೆಯಲ್ಲಿ ಸಾಗಿ ಬರಲಿವೆ.



ಯಡಿಯೂರಪ್ಪನವರ ಹೋರಾಟದ ದಿನಗಳ ನೆನಪಾಗಿ ಉಳಿದಿರುವ ಅವರ ವಾಹನ (ಅಂಬಾಸಿಡರ್ ಕಾರು ಸಿಕೆಆರ್ 45) ಮೆರವಣಿಗೆಯ ಪ್ರಮುಖ ಆಕರ್ಷಣೆಯಾಗಲಿದೆ. ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಸ್ವಾಗತಸಮಿತಿಯ ಕಾರ್ಯಾಧ್ಯಕ್ಷ, ಮಾಜಿ ಸಚಿವ ಶ್ರೀರಾಮುಲು ಸೇರಿ ಜನಪ್ರತಿನಿಧಿಗಳು ಮೆರವಣಿಗೆಯಲ್ಲಿ ಭಾಗವಹಿಸಲಿದ್ದಾರೆ.

ಯಡಿಯೂರಪ್ಪ ಅವರ ಪುರಪ್ರವೇಶಕ್ಕೆ ಇಡೀ ಚಿತ್ರದುರ್ಗ ನಗರವನ್ನು ಸಿಂಗರಿಸಲಾಗಿದೆ. ಎಲ್ಲೆಡೆ ಕೇಸರಿ ಬಾವುಟಗಳು ಹಾರಾಡುತ್ತಿವೆ. ನಗರದ ತುಂಬೆಲ್ಲಾ ಯಡಿಯೂರಪ್ಪ ಅವರನ್ನು ಸ್ವಾಗತಿಸುವ, ಅಭಿನಂದಿಸುವ ಕಟೌಟ್‌ಗಳು ರಾರಾಜಿಸುತ್ತಿವೆ.

ಯಾರಿಗೆ ಒಲಿಯಲಿದೆ ಕೇರಳಂ ಮುಖ್ಯಮಂತ್ರಿ ಪಟ್ಟ?

2ನೇ ಪುಟದಿಂದ

ಹೀಗಾಗಿ ಮುಖ್ಯಮಂತ್ರಿ ಆಯ್ಕೆಯ ಹೊಣೆಯನ್ನು ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ವಹಿಸಲು ಸಭೆ ನಿರ್ಣಯ ಕೈಗೊಂಡಿದೆ.

ವೇಣು ಪರ ಬ್ಯಾಟಿಂಗ್: ಎಐಸಿಸಿ ವೀಕ್ಷಕರಾದ ಮುಕುಲ್ ವಾಸ್ನಿಕ್ ಮತ್ತು ಅಜಯ್ ಮಾಕನ್ ನೇತೃತ್ವದಲ್ಲಿ ನಡೆದ ಸಭೆ ವೇಳೆ ಬಹುತೇಕ ಶಾಸಕರು ವೇಣುಗೋಪಾಲ್ ಮುಖ್ಯಮಂತ್ರಿಯಾಗುವ ಬಗ್ಗೆ ಬೆಂಬಲ ವ್ಯಕ್ತಪಡಿಸಿದ್ದಾರೆ. ಇದು ಸಿಎಂ ಹುದ್ದೆ ಮೇಲೆ ಕಣ್ಣಿಟ್ಟ ಉಳಿದಿಬ್ಬರು ನಾಯಕರ ಕೆಂಗಣ್ಣಿಗೆ ಕಾರಣವಾಗಿದೆ.

ಈ ಬಾರಿ ಚುನಾವಣೆಯಲ್ಲಿ ಸಂಸದರನ್ನು ಕಣಕ್ಕೆ ಇಳಿಸುವುದಿಲ್ಲ ಎಂದು ಪಕ್ಷ ಮೊದಲೇ ನಿರ್ಧರಿಸಿತ್ತು. ಜೊತೆಗೆ ವೇಣುಗೋಪಾಲ್ ಶಾಸಕ ಕೂಡ ಅಲ್ಲ. ಹೀಗಾಗಿ ಅವರ ಆಯ್ಕೆ ಸೂಕ್ತವಲ್ಲ. ಜೊತೆಗೆ ರಾಜ್ಯದ ಹಲವು ಕಡೆ ವೇಣುಗೋಪಾಲ್ ಅವರು ಕೂಡ ಸಿಎಂ ಅಭ್ಯರ್ಥಿ ಎಂದು ಬಿಂಬಿಸುವ ಪೋಸ್ಟರ್‌ಗಳನ್ನು ಹಾಕಲಾಗಿದೆ. ಇದು ಪಕ್ಷದಲ್ಲಿ ಆಂತರಿಕ ಸಂಘರ್ಷಕ್ಕೆ ಮುನ್ನುಡಿ ಬರೆಯುತ್ತದೆ. ಇದಕ್ಕೆ ಕೂಡಲೇ ತಡೆ ಹಾಕಬೇಕು ಎಂದು ಚೆನ್ನಿತ್ತಲ ಹಾಗೂ ಸತೀಶನ್ ನೇರವಾಗಿ ವೀಕ್ಷಕರ ಬಳಿ ಧ್ವನಿ ಎತ್ತಿದ್ದಾರೆ ಎನ್ನಾಗಿದೆ.

ವೇಣು ಏಕೆ?: ಈ ಬಾರಿ ಚುನಾವಣೆಯಲ್ಲಿ ಅಭ್ಯರ್ಥಿಗಳ ಆಯ್ಕೆ, ಮೈತ್ರಿಕೂಟದ ನಡುವೆ ಹೊಂದಾಣಿಕೆ ಏರ್ಪಡಿಸುವಲ್ಲಿ ವೇಣು ಪ್ರಮುಖ ಪಾತ್ರ ವಹಿಸಿದ್ದಾರೆ. ಜೊತೆಗೆ ಎಲ್‌ಡಿಎಫ್ ಕೂಟದ ಅಭ್ಯರ್ಥಿಗಳ ಸೆಳೆದು ಕಾಂಗ್ರೆಸ್ ಬಲ ಹೆಚ್ಚಿಸಿದ್ದು ವೇಣುಗೋಪಾಲ್ ಪರ ಬಹುತೇಕ ಶಾಸಕರು ಒಲವು ತೋರಲು ಕಾರಣವಾಗಿದೆ. ಜೊತೆಗೆ ಹೈಕಮಾಂಡ್ ಬೆಂಬಲವೂ ಇದೆ. ಜೊತೆಗೆ ಮೈತ್ರಿಕೂಟ ಸರ್ಕಾರ ನಡೆಸಲು ದೆಹಲಿ ಮಟ್ಟದಲ್ಲಿ ಪ್ರಭಾವ ಹೊಂದಿರುವ ನಾಯಕರ ಅಗತ್ಯವಿದೆ ಎನ್ನುವ ಅಂಶವೂ ವೇಣುಗೋಪಾಲ್ ಪರವಾಗಿದೆ.

ಸತೀಶನ್‌ಗೆ ಜಾತಿ ಸಂಘ ವಿರೋಧ: ಸತೀಶನ್ ಕಳೆದ 5 ವರ್ಷಗಳಿಂದ ವಿಪಕ್ಷ ನಾಯಕನಾಗಿ ವಿಪಕ್ಷ ಕಟ್ಟಿ ಹಾಕುವಲ್ಲಿ ಯಶಸ್ವಿಯಾಗಿದ್ದರು. ಆದರೆ ಶಬರಿಮಲೆ ವಿಷಯದಲ್ಲಿ ಕೇರಳದ ಪ್ರಭಾವಿ ನಾಯರ್ ಸಮುದಾಯದ ವಿರೋಧ ಕಟ್ಟಿಕೊಂಡಿದ್ದಾರೆ. ಹೀಗಾಗಿ ಅವರ ಆಯ್ಕೆ ಬಗ್ಗೆ ಪಕ್ಷದ ಶಾಸಕರಲ್ಲೇ ವಿರೋಧವಿದೆ ಎನ್ನಲಾಗಿದೆ.

ಚೆನ್ನಿತ್ತಲಗೆ ಬೆಂಬಲವಿಲ್ಲ: ಪಕ್ಷದ ಹಿರಿಯ ನಾಯಕ. 4 ಬಾರಿ ಸಂಸದರಾದ ಹಿನ್ನೆಲೆ ಹೊಂದಿದ್ದಾರೆ. ಸಂಘಟನಾ ಚತುರ ಎಂಬ ಹಿರಿಮೆ ಇದೆ. ಆದರೆ ಈಗಾಗಲೇ 69 ವರ್ಷ ತುಂಬಿರುವ ನಾಯಕನ ಆಯ್ಕೆಗೆ ಪಕ್ಷದ ಶಾಸಕರು ಒಲವು ತೋರಿಲ್ಲ ಎನ್ನಲಾಗಿದೆ.

ಗ್ಲಾಮರ್ ಲೋಕದ ಕಲರ್‌ಫುಲ್ ಕಾಮನಬಿಲ್ಲು

ಚಿತ್ರಪ್ರಭ

ಜಗತ್ತು ಗೆಲ್ಲಲು ಹೊರಟ ಯಶ್



ಅಂತಾರಾಷ್ಟ್ರೀಯ ಮಟ್ಟದ ಖ್ಯಾತ ಸಿನಿಮಾ ಮ್ಯಾಗಜೇನ್ ಮುಖಪುಟದಲ್ಲಿ ಯಶ್

ಜಾಗತಿಕ ಮಟ್ಟದ ಪ್ರಚಾರ ತಂತ್ರ

ಹಾಲಿವುಡ್ ಮ್ಯಾಗಜಿನ್ ಕವರ್ ಪೇಜ್‌ನಲ್ಲಿ ಯಶ್

ಯಶ್ ಕನ್ನಡದ ಮಂದಿಗೆ ಸಿಗುವುದಿಲ್ಲ. ಭಾರತ ಮಟ್ಟದಲ್ಲೂ ಪತ್ರಕರ್ತರಿಗೆ ಮಾತಿಗೆ ಸಿಗುತ್ತಿಲ್ಲ. ಅವರು ಏನಿದ್ದರೂ ಈಗ ಗ್ಲೋಬಲ್ ಸ್ಟಾರ್ ಆಗುವತ್ತ ಚಿತ್ತ ನೆಟ್ಟಿದ್ದಾರೆ. ಅಂತಾರಾಷ್ಟ್ರೀಯ ಮಟ್ಟದ ಪಿಆರ್ ಏಜೆನ್ಸಿಯೊಂದು ಅವರ ಪ್ರಚಾರ ಕಾರ್ಯಗಳನ್ನು ನಡೆಸಿಕೊಡುತ್ತಿದೆ ಎನ್ನಲಾಗಿದೆ. ಅದಕ್ಕೆ ತಕ್ಕಂತೆ ಅಂತಾರಾಷ್ಟ್ರೀಯ ಮಟ್ಟದ ಸಿನಿಮಾ ಮ್ಯಾಗಜೀನ್ 'ವೆರೈಟಿ' ಮುಖಪುಟದಲ್ಲಿ ಕಾಣಿಸಿಕೊಂಡಿದ್ದಾರೆ. ಅವರ ಜಾಗತಿಕ ಪ್ರಚಾರ ತಂತ್ರದ ಕುರಿತ ವಿಶೇಷ ವಿವರಗಳು ಇಲ್ಲಿವೆ.

1. ಯಶ್ ಯೋಚನೆಗಳೇ ಬೇರೆ

ಯಶ್ ಏನಿದ್ದರೂ ಮೇಲಿನ ಹಂತಕ್ಕೆ ನೋಟ ನೆಟ್ಟಿರುತ್ತಾರೆ. ಮೇಲಿನ ಹಂತದಲ್ಲಿ ನಿಂತು ಏನೇ ಮಾಡಿದರೂ ಕೆಳ ಹಂತಕ್ಕೆ ತಲುಪುತ್ತದೆ ಅನ್ನುವುದು ಅವರ ನಂಬಿಕೆ. ಅದಕ್ಕೆ ಪೂರಕವಾಗಿ ಅವರು ಟಾಕ್ಸಿಕ್, ರಾಮಾಯಣ ಸಿನಿಮಾಗಳನ್ನು ಜಾಗತಿಕ ಮಟ್ಟದಲ್ಲಿಯೇ ಪ್ರಚಾರ ಮಾಡುತ್ತಿದ್ದಾರೆ.

2. ಪ್ರಾಯೋಜಿತ ಸಂದರ್ಶನ

ವಿಶೇಷ ಇರುವುದು ಇಲ್ಲೇ, ತಾನು ಅಂದುಕೊಂಡಿದ್ದು ಮಾಡದೇ ಬಿಡುವ ಜಾಯಮಾನ ಯಶ್ ಅವರದಲ್ಲ. ಒಂದು ನಿರ್ದಿಷ್ಟ ಗುರಿ ಇಟ್ಟರು ಎಂದರೆ ಆ ಗುರಿ ಸಾಧಿಸಬೇಕು ಎಂಬ ಮನಸ್ಥಿತಿ. ವೆರೈಟಿ ಪತ್ರಿಕೆಯಲ್ಲಿ ಕಾಣಿಸಿಕೊಳ್ಳಬೇಕು ಎಂಬ ನಿರ್ಧಾರ ಮಾಡಿದ ಬಳಿಕ ಪ್ರಾಯೋಜಿತವಾದರೂ ಸರಿ, ಅಲ್ಲಿ ಕಾಣಿಸಿಕೊಳ್ಳಬೇಕು. ಇದೀಗ ವೆರೈಟಿ ಪತ್ರಿಕೆಯ ಮುಖಪುಟದಲ್ಲಿ ಕಾಣಿಸಿಕೊಂಡಿದ್ದಾರೆ. ಅದು ಪ್ರಾಯೋಜಿತ ಅನ್ನುವುದು ಅವರ ಪ್ರಚಾರ ವೈಖರಿಯನ್ನು ಹೇಳುತ್ತದೆ. ಆ ಮುಖಪುಟ ಪ್ರಕಟವಾಗಿದೆ ಅನ್ನುವ ಸುದ್ದಿಯೇ ಈಗ ಭಾರತದಾದ್ಯಂತ ಓಡುತ್ತಿದೆ. ಅಲ್ಲಿಗೆ ಆ ಮುಖಪುಟ ಸುದ್ದಿ ಸಾರ್ಥಕವಾಗಿದೆ.

3. ದಿ ಯಶ್ ಎಫೆಕ್ಟ್ ಎಂಬ ಬ್ರಾಂಡಿಂಗ್

ಈ ಸಂದರ್ಶನದಲ್ಲಿ 'ದಿ ಯಶ್ ಎಫೆಕ್ಟ್' ಎಂಬ ಒಂದೇ ಸಾಲಿನಲ್ಲಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಯಶ್ ತನ್ನನ್ನು ಪ್ರಸ್ತುತಪಡಿಸಿದ್ದಾರೆ. ಪಾಶ್ಚಿಮಾತ್ಯ ಸಿನಿಮಾ ನಿರ್ಮಾಪಕರು ಹಾಗೂ ಹೂಡಿಕೆದಾರರ ಮುಂದೆ ತಾನು ಗ್ಲೋಬಲ್ ಮಟ್ಟದಲ್ಲಿ ದೊಡ್ಡ ಹೂಡಿಕೆಗೆ ಯೋಗ್ಯ ಮತ್ತು ಜಾಗತಿಕ ಸಿನಿಮಾ ಜಗತ್ತನ್ನು ಆಳುವ ಸಾಮರ್ಥ್ಯವಿರುವ ನಟ ಎಂದು ಮನವರಿಕೆ ಮಾಡುವ ಪ್ರಯತ್ನ ಇದರ ಹಿಂದಿದೆ.

4. ಗ್ಲೋಬಲ್ ಲೆವೆಲ್‌ಗೆ ತಕ್ಕಂಥಾ ಲುಕ್

ಕವರ್ ಪೇಜ್‌ನಲ್ಲಿರುವ ಯಶ್ ಫೋಟೋ 'ಗ್ಲೋಬರ್ ನೋಯರ್' ಸ್ಟೈಲ್‌ನಲ್ಲಿದೆ. ಕೆನೆ ಬಣ್ಣದ ಪ್ಯಾಟರ್ನ್ಡ್ ಸೂಟ್, ಹ್ಯಾಟ್, ಕ್ಲಾಸಿಕ್ ಕಾರು ಇವೆಲ್ಲವೂ ಜಾಗತಿಕ ಪ್ರೇಕ್ಷಕರನ್ನು ಸೆಳೆಯುವಂತಿದೆ.

5. ಸಿನಿಮಾ ನಿರ್ಮಾಣದಲ್ಲೂ ಹೊಸತನ

ಮಾನ್‌ಸ್ಟರ್ ಮೈಂಡ್ ಕ್ರಿಯೇಶನ್ಸ್ ಯಶ್ ಅವರ ನಿರ್ಮಾಣ ಸಂಸ್ಥೆ. ಈ ಬ್ಯಾನರ್‌ನಡಿ ಯಶ್ ತನ್ನ ಬ್ರಾಂಡ್ ಅನ್ನು ವಿಶ್ವಮಟ್ಟದಲ್ಲಿ ಬಹಳ ಕ್ರಿಯೇಟಿವ್ ಆಗಿ ನಿಯಂತ್ರಿಸುತ್ತಿದ್ದಾರೆ. ದುಡ್ಡು ಪೋಲಾಗಬಾರದು, ತಾನು ಹಾಕುವ ಪ್ರತೀ ಪೈಸೆಯೂ ತನಗೆ ಜಾಗತಿಕ ಮಟ್ಟದಲ್ಲಿ ಹೆಸರು, ಹಣ ತರುವಂತಿರಬೇಕು ಅನ್ನೋದನ್ನು ಕರೆಕ್ಟಾಗಿ ಪ್ಲಾನ್ ಮಾಡಿ ಕಾರ್ಯಗತಗೊಳಿಸುತ್ತಿದ್ದಾರೆ.

6. ಜಾಗತಿಕ ಪ್ರಚಾರ

ಏನೇ ಮಾಡಿದರೂ ಶ್ರೇಷ್ಠವಾದದ್ದೇ ಮಾಡಬೇಕು ಅನ್ನುವುದು ಅವರ ಹಂಬಲ. ಅದಕ್ಕೆ ತಕ್ಕಂತೆ ಅವರು ತನ್ನ ಪ್ರಚಾರಕ್ಕಾಗಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಸರುವಾಸಿಯಾಗಿರುವ ಪ್ರಚಾರ ಸಂಸ್ಥೆ ಡಬ್ಲ್ಯೂಎಂಎಫ್ ಏಜೆನ್ಸಿ ಜೊತೆ ಒಪ್ಪಂದ ಮಾಡಿಕೊಂಡಿದ್ದಾರೆ ಎನ್ನಲಾಗಿದೆ. ಈ ತಂತ್ರದ ಭಾಗವಾಗಿಯೇ ಅವರದೊಂದು ವಿಶೇಷ ಸಂದರ್ಶನ ಅಂತಾರಾಷ್ಟ್ರೀಯ ಮಟ್ಟದ ಖ್ಯಾತ ಸಿನಿಮಾ ಮ್ಯಾಗಜೀನ್ ವೆರೈಟಿಯಲ್ಲಿ ಪ್ರಕಟವಾಗಿದೆ.

7. ವಿಶ್ವಮಟ್ಟದಲ್ಲಿ ಟಾಕ್ಸಿಕ್ ಹವಾ

ಅಂತಾರಾಷ್ಟ್ರೀಯ ವೇದಿಕೆಯಲ್ಲಿ ಟಾಕ್ಸಿಕ್ ಅನ್ನು ಸಾಮಾನ್ಯ ಆ್ಯಕ್ಷನ್ ಸಿನಿಮಾವಾಗಿ ಬಿಂಬಿಸದೇ ಅದನ್ನೊಂದು ದೊಡ್ಡ ಮಟ್ಟದ ಮಹತ್ವಾಕಾಂಕ್ಷೆಯ ಪ್ರಾಜೆಕ್ಟ್, ಭಿನ್ನ ಬಗೆಯ ಪ್ರಯತ್ನ ಎಂದು ಬಿಂಬಿಸಲಾಗಿದೆ. ಇದು ಸಿನಿಮಾ ಬಗ್ಗೆ ಜಾಗತಿಕ ಮಟ್ಟದಲ್ಲಿ ಕುತೂಹಲ ಹೆಚ್ಚುವಂತೆ ಮಾಡಿದೆ.

8. ಟಾಕ್ಸಿಕ್, ರಾಮಾಯಣಕ್ಕೂ ಆದ್ಯತೆ


ಯಶ್ ನಟಿಸಿ ಸಹ ನಿರ್ಮಾಣ ಮಾಡುತ್ತಿರುವ 'ಟಾಕ್ಸಿಕ್' ಹಾಗೂ 'ರಾಮಾಯಣ' ಎರಡೂ ಸಂಪೂರ್ಣ ಭಿನ್ನ ನೆಲೆಯ ಕಥೆಗಳು. ಟಾಕ್ಸಿಕ್ ರಾಯನಾಗಿ ಯಶ್ ಆಧುನಿಕ ಲುಕ್‌ನಲ್ಲಿದ್ದರೆ, 'ರಾಮಾಯಣ'ದಲ್ಲಿ ಪ್ರಾಚೀನ ಕಾಲದ ರಾವಣನ ಪಾತ್ರ ನಿರ್ವಹಿಸಿದ್ದಾರೆ. ಇವೆರಡಕ್ಕೂ ಆದ್ಯತೆ ನೀಡಿ ತನ್ನ ಪ್ರತಿಭೆಯ ಭಿನ್ನ ಮುಖವನ್ನು ವಿಶ್ವಕ್ಕೆ ಪರಿಚಯಿಸಲು ಹೊರಟಿದ್ದಾರೆ.

9. ಮಾತು ಕಡಿಮೆ, ಕೆಲಸ ಹೆಚ್ಚು

ಯಶ್ ಖಚಿತ ತಂತ್ರಗಾರಿಕೆ ಅವರ ಕೆಲಸದಲ್ಲಿ ಎದ್ದುಕಾಣುತ್ತದೆ. ಮಾತಲ್ಲಿ ಹೇಳುವುದಕ್ಕಿಂತ ಸ್ಮಾರ್ಟ್ ವಿಧಾನದಲ್ಲಿ ಸಿನಿಮಾ ಪ್ರಚಾರಕ್ಕೆ ಮುಂದಾಗಿದ್ದಾರೆ. ಹಾಲಿವುಡ್ ಮ್ಯಾಗಜೀನ್‌ನಲ್ಲಿನ ಬರಹ ಸಿನಿಮಾದ ಹೆಚ್ಚುಗಾರಿಕೆಯನ್ನು ಪರಿಣಾಮಕಾರಿಯಾಗಿ ಜಗತ್ತಿನ ಮುಂದಿಡುವಂತಿದೆ.

10. ಇನ್ನು ಯಶ್ ಪ್ಯಾನ್ ಇಂಡಿಯಾ ಅಲ್ಲ, ಪ್ಯಾನ್ ವರ್ಲ್ಡ್ ಸ್ಟಾರ್

ತನ್ನ 'ಟಾಕ್ಸಿಕ್' ಹಾಗೂ 'ರಾಮಾಯಣ' ಸಿನಿಮಾಗಳ ಮೂಲಕ ಯಶ್ ತಾನು ಪ್ಯಾನ್ ಇಂಡಿಯಾ ಅಲ್ಲ, ಪ್ಯಾನ್ ವರ್ಲ್ಡ್ ಲೆವಲ್‌ನಲ್ಲಿ ಮಿಂಚುವ ಐಕಾನ್ ಅನ್ನುವುದನ್ನು ಸಾಬೀತು ಮಾಡಲು ಹೊರಟಂತಿದೆ.



ವಿನಯ್ ಹೊಸ ಚಿತ್ರ ಮಾಚಿಸ್

ವಿನಯ್ ರಾಜ್‌ಕುಮಾರ್ ನಟನೆಯ ಹೊಸ ಸಿನಿಮಾ ಸೆಟ್ಟೇರುತ್ತಿದೆ. ವಿನಯ್ ಹುಟ್ಟುಹಬ್ಬದ ಅಂಗವಾಗಿ ಘೋಷಣೆ ಆಗಿರುವ ಈ ಚಿತ್ರದ ಟೈಟಲ್ ಹಾಗೂ ಫಸ್ಟ್ ಲುಕ್ ಬಿಡುಗಡೆ ಆಗಿದೆ. 'ಮಾಚಿಸ್' ಎಂಬುದು ಚಿತ್ರದ ಹೆಸರು.

ಮಾಸ್ ಲುಕ್ಕಿನಲ್ಲಿರುವ ಈ ಚಿತ್ರದ ಪೋಸ್ಟರ್ ಸಾಕಷ್ಟು ಗಮನ ಸೆಳೆಯುತ್ತಿದೆ. ಮಾಸ್, ಆ್ಯಕ್ಷನ್, ಥ್ರಿಲ್ಲರ್ ನೆರಳಿನಲ್ಲಿ ಮೂಡಿ ಬರಲಿರುವ ಚಿತ್ರ ಇದಾಗಿದೆ. ಈ ಹಿಂದೆ 'ಮರ್ಫಿ' ಚಿತ್ರವನ್ನು ನಿರ್ದೇಶಿಸಿದ್ದ ಬಿ.ಎಸ್.ಪಿ. ವರ್ಮಾ ಈ ಚಿತ್ರ ನಿರ್ದೇಶನ ಮಾಡುತ್ತಿದ್ದಾರೆ. ಸುರೇಶ್ ಹೆಣ್ಣೂರು ಚಿತ್ರದ ನಿರ್ಮಾಪಕರು.

ಆಚೆ ಬಂದಾಗ ಮೋನಿಷಾ ಮಗಳು, ಸೆಟ್‌ನಲ್ಲಿ ಅವಳು ನಟಿಯಷ್ಟೇ: ದುನಿಯಾ ವಿಜಯ್

ಸಿಟಿಲೈಟ್ಸ್ ಚಿತ್ರದ ಹಾಡು ಬಿಡುಗಡೆ



ಮೋನಿಷಾ, ವಿಜಯ್, ವಿನಯ್

'ಸೆಟ್‌ನಿಂದ ಆಚೆ ಬಂದಾಗ ಮಾತ್ರ ಮಗಳು. ಸೆಟ್‌ನಲ್ಲಿ ಮೋನಿಷಾ ನಟಿ, ನಾನು ನಿರ್ದೇಶಕ'.

-ಇದು ದುನಿಯಾ ವಿಜಯ್ ಮಾತು.

ತನ್ನ ನಿರ್ದೇಶನದಲ್ಲಿ ಮಗಳು ಮೋನಿಷಾ ಹಾಗೂ ವಿನಯ್ ರಾಜ್ ಕುಮಾರ್ ನಟಿಸಿರುವ 'ಸಿಟಿಲೈಟ್ಸ್' ಸಿನಿಮಾದ ಹಾಡು ಬಿಡುಗಡೆಯಲ್ಲಿ ಮಾತನಾಡಿದ ಅವರು, 'ನಿರ್ದೇಶನ ಅನ್ನುವುದು ಪರೀಕ್ಷೆ ಬರೆದ ಹಾಗಿದೆ' ಎಂದರು.

'ಸಿಟಿಲೈಟ್ಸ್‌ನಲ್ಲಿ ಇರುವ ಕತ್ತಲ ಜಗತ್ತು ನನ್ನನ್ನು ಬಹಳ ಕಾಡಿದೆ. ಇದರಲ್ಲಿ ಬಹಳ ನೋವು ತರುವಂಥಾ ವಿಚಾರವನ್ನು ಹೇಳಲು ಹೊರಟಿದ್ದೇನೆ, ಈ ಕಥೆಗೆ ವಿನಯ್ ರಾಜ್‌ಕುಮಾರ್ ಅವರೇ ಬೇಕಿತ್ತು. ವೈಯಕ್ತಿಕವಾಗಿಯೂ ನನಗೆ ವಿನಯ್ ಬಹಳ ಇಷ್ಟವಾಗುವ ವ್ಯಕ್ತಿತ್ವ' ಎಂದರು.

ಮೋನಿಷಾ ವಿಜಯ್‌ಕುಮಾರ್, ವಿನಯ್ ರಾಜ್‌ಕುಮಾರ್ ಕಾರ್ಯಕ್ರಮದಲ್ಲಿದ್ದರು.

ಏಕ್ ದಿನ್ ಚಿತ್ರದ ಪಾತ್ರಕ್ಕೆ ನಾನು ಸೂಕ್ತವಲ್ಲ ಎಂದಿದ್ದೆ "ಸಾಯಿ ಪಲ್ಲವಿ"

'ನಾನು ಆ ಚಿತ್ರಕ್ಕೆ ಕರೆಕ್ಟ್ ಆಯ್ಕೆ ಅಲ್ಲ ಅನ್ನಿಸಿತ್ತು'.



- ಹೀಗೆ ಹೇಳಿದ್ದು ನಟಿ ಸಾಯಿ ಪಲ್ಲವಿ. ಅವರ ಈ ಮಾತು ಹಿಂದಿಯ 'ಏಕ್ ದಿನ್' ಚಿತ್ರದ ಬಗ್ಗೆ. ಅಮೀರ್ ಖಾನ್ ಪುತ್ರ ಜುನೈದ್ ಖಾನ್ ಜೊತೆಗೆ ಈ ಚಿತ್ರದಲ್ಲಿ ಸಾಯಿ ಪಲ್ಲವಿ ನಾಯಕಿಯಾಗಿ ನಟಿಸಿದ್ದರು.

'ನಾನು ಬೇರೆ ಬೇರೆ ರೀತಿಯ ಸಿನಿಮಾಗಳಲ್ಲಿ ನಟಿಸುತ್ತಿದ್ದೆ. ಆದರೆ, ಲೈಟ್ ಆಗಿರುವ ಹಾಗೂ ಹೆಚ್ಚು ಭಾವನಾತ್ಮಕವಾಗಿರುವ ಸಿನಿಮಾ ಮಾಡುವಾಸೆ ಇತ್ತು. 'ಏಕ್ ದಿನ್' ಸಿನಿಮಾ ತಂಡ ನನ್ನ ಭೇಟಿ ಮಾಡಿ ಕತೆ ಹೇಳಿದಾಗ ನಾನು ನಿರೀಕ್ಷೆ ಮಾಡಿದ್ದ ಕತೆಯೇ ಸಿಕ್ಕಿದೆ ಎಂದು ಖುಷಿಪಟ್ಟೆ. ಅಲ್ಲದೆ ಈ ಸಿನಿಮಾ ಕತೆ ಕೇಳಿದಾಗ ನನಗೆ ಹಾಲಿವುಡ್‌ನ 'ಬಿಫೋರ್ ಸನ್‌ರೈಸ್' ಸಿನಿಮಾ ನೆನಪಿಗೆ ಬಂತು. ಅದೇ ರೀತಿ ಈ ಸಿನಿಮಾ ಇರುತ್ತದೆ ಎಂದು 'ಏಕ್ ದಿನ್' ಚಿತ್ರದಲ್ಲಿ ನಟಿಸಲು ಒಪ್ಪಿಕೊಂಡೆ. ಆದರೆ, ಪ್ರೀಮಿಯರ್ ಶೋನಲ್ಲಿ ಸಿನಿಮಾ ನೋಡಿದ ಮೇಲೆ, 'ನಾನು ಸೂಕ್ತ ಆಯ್ಕೆ ಅಲ್ಲ. ನನ್ನ ಪಾತ್ರಕ್ಕೆ ಬೇರೆ ಹೊಸ ನಟಿಯನ್ನು ಸೆಲೆಕ್ಟ್ ಮಾಡಿಕೊಂಡಿದ್ದರೆ ಚೆನ್ನಾಗಿರುತ್ತಿತ್ತು ಅನಿಸಿತು. ಚಿತ್ರೀಕರಣದ ಸಮಯದಲ್ಲೇ ನಾನು ಸೂಕ್ತ ಆಯ್ಕೆ ಅಲ್ಲ ಎಂದು ಜುನೈದ್ ಖಾನ್‌ಗೂ ಹೇಳಿದ್ದೆ. ಅವರು ನನ್ನ ಮಾತು ಒಪ್ಪಲಿಲ್ಲ' ಎಂದು ಸಾಯಿ ಪಲ್ಲವಿ ಹೇಳಿಕೊಂಡಿದ್ದಾರೆ.

ಅಯೋಗ್ಯ 2 ಚಿತ್ರ ಆಡಿಯೋ ಹಕ್ಕು ರೂ.2 ಕೋಟಿಗೆ ಮಾರಾಟ

ದೊಡ್ಡ ಮೊತ್ತ ಕೊಟ್ಟು ಆಡಿಯೋ ಖರೀದಿಸಿದ ಆನಂದ್ ಆಡಿಯೋ

ಸತೀಶ್ ನೀನಾಸಂ, ರಚಿತಾ ರಾಮ್ ಜೋಡಿಯ 'ಅಯೋಗ್ಯ 2' ಚಿತ್ರದ ಆಡಿಯೋ ಹಕ್ಕನ್ನು ರೂ.2 ಕೋಟಿ ಕೊಟ್ಟು ಆನಂದ್ ಆಡಿಯೋ ಖರೀದಿಸಿದೆ. ಈ ಸುದ್ದಿಯನ್ನು ಚಿತ್ರತಂಡ ಅಧಿಕೃತವಾಗಿ ಘೋಷಿಸಿದೆ. ಮಹೇಶ್ ಕುಮಾರ್ ನಿರ್ದೇಶನದ ಈ ಚಿತ್ರದ ಚಿತ್ರೀಕರಣ ಪೂರ್ಣಗೊಂಡಿದ್ದು, ಆಡಿಯೋ ಮಾರಾಟವಾಗಿದ್ದ ಸುದ್ದಿ ಹಂಚಿಕೊಳ್ಳಲು ವಿಶೇಷ ವೀಡಿಯೋ ಬಿಡುಗಡೆ ಮಾಡಿದೆ. ಮೊದಲ ಭಾಗ 'ಅಯೋಗ್ಯ' ಚಿತ್ರದ ಆಡಿಯೋ ಹಕ್ಕು ರೂ.9 ಲಕ್ಷಕ್ಕೆ ಮಾರಾಟವಾಗಿತ್ತು ಎಂದು ಮಹೇಶ್ ತಿಳಿಸಿದ್ದು, ಎರಡನೇ ಭಾಗದ ಆಡಿಯೋ ಹಕ್ಕಿಗೆ ಭರ್ಜರಿ ಬೆಲೆ ದೊರಕಿದೆ. ಅರ್ಜುನ್ ಜನ್ಯ ಸಂಗೀತ ನಿರ್ದೇಶನದ ಈ ಚಿತ್ರವನ್ನು ಎಂ.ಮುನೇಗೌಡ ನಿರ್ಮಿಸಿದ್ದಾರೆ.



ಸತೀಶ್ ನೀನಾಸಂ, ರಚಿತಾ ರಾಮ್

ಶಿಖಂಡಿ ಚಿತ್ರದ ಟ್ರೇಲರ್ ಬಿಡುಗಡೆ

ಮೇ 15ಕ್ಕೆ ತೆರೆಗೆ ಬರಲು ಸಜ್ಜಾಗಿರುವ 'ಶಿಖಂಡಿ' ಚಿತ್ರದ ಟ್ರೇಲರ್ ಆಗಿದೆ. ಪೋಲಾ ಪ್ರವೀಣ್ ಕುಮಾರ್ ನಿರ್ಮಾಣದ ಈ ಚಿತ್ರವನ್ನು ಗುರುಮೂರ್ತಿ ವಿ ನಿರ್ದೇಶಿಸಿದ್ದಾರೆ. ಯುವರಾಜ್ ನಾಯಕನಾಗಿ, ಖ್ಯಾತಿ ನಾಯಕಿಯಾಗಿ ನಟಿಸಿದ್ದಾರೆ. ನಿರ್ದೇಶಕ ಗುರುಮೂರ್ತಿ, 'ಮಹಾಭಾರತದ ಪಾತ್ರವನ್ನು ಆಧರಿಸಿರುವ ಕತೆ ಇಲ್ಲಿದೆ' ಎಂದರು. ನಿಖಿತಾಸ್ವಾಮಿ, ಬಿಗ್ ಬಾಸ್ ಸ್ಪರ್ಧಿಯಾಗಿದ್ದ ನೀತು, ವೇದ, ಬಳ್ಳಾರಿಯ ಚಾಂದಿನಿ, ರಾಘವೇಂದ್ರ ಚಿತ್ರದಲ್ಲಿ ನಟಿಸಿದ್ದಾರೆ.

